# ಕುಂಬಾರಿಕೆ ವೃತ್ತಿ ಪದಕೋಶ

ಬಸವರಾಜ ಕುಂಚೂರು

ಕನ್ನಡ ಸಾಹಿತ್ಯ ಪರಿಷತ್ತು
ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-೧೮

ಶಿವಮೊಗ್ಗದಲ್ಲಿ ನಡೆದ ಅಖಿಲ ಭಾರತ ೭೩ನೇ ಕನ್ನಡ ಸಾಹಿತ್ಯ ಸಮ್ಮೇಳನದ ಪ್ರಕಟಣೆ

# ಕುಂಬಾರಿಕೆ ವೃತ್ತಿ ಪದಕೋಶ

ಬಸವರಾಜ ಕುಂಚೂರು

ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು – ೫೬೦೦೧೮

KUMBĀRIKE VRUTTI PADAKŌSHA
by : Sri Basavaraja Kunchuru
Published by : Kannada Sahitya Parishat
Pampa Mahakavi Road, Chamarajapet, Bangalore - 560018
Pages : viii + 178 Price : Rs. 50=00 : 2007

ಪ್ರಥಮ ಮುದ್ರಣ : ೨೦೦೭
ಪ್ರತಿಗಳು : ೧೦೦೦
ಬೆಲೆ : ಐವತ್ತು ರೂಪಾಯಿಗಳು



ಶಿವಮೊಗ್ಗದಲ್ಲಿ ನಡೆದ ಅಖಿಲ ಭಾರತ ೭೩ನೇ ಕನ್ನಡ ಸಾಹಿತ್ಯ ಸಮ್ಮೇಳನದ ಪ್ರಕಟಣೆ



ಮುದ್ರಣ : ಬಿ. ಎಂ. ಶ್ರೀ. ಅಚ್ಚುಕೂಟ ಆಫ್‌ಸೆಟ್
ಕನ್ನಡ ಸಾಹಿತ್ಯ ಪರಿಷತ್ತು,
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು - ೧೮

## ಅಖಿಲ ಭಾರತ ೭೩ನೆಯ ಕನ್ನಡ ಸಾಹಿತ್ಯ ಸಮ್ಮೇಳನ - ಶಿವಮೊಗ್ಗ
## ಸ್ವಾಗತ ಸಮಿತಿ

ಶ್ರೀ ಬಿ.ಎಸ್. ಯಡಿಯೂರಪ್ಪ, ಅಧ್ಯಕ್ಷರು
ಶ್ರೀ ಕೆ.ಎಸ್. ಈಶ್ವರಪ್ಪ, ಹಿರಿಯ ಉಪಾಧ್ಯಕ್ಷರು.
ಶ್ರೀ ಡಿ.ಹೆಚ್. ಶಂಕರಮೂರ್ತಿ, ಉನ್ನತ ಶಿಕ್ಷಣ ಸಚಿವರು
ಶ್ರೀ ಎಸ್. ಬಂಗಾರಪ್ಪ, ಲೋಕಸಭಾ ಸದಸ್ಯರು
ಪ್ರೊ. ಬಿ.ಎಸ್. ಶೇರಿಗಾರ್, ಕುಲಪತಿಗಳು, ಕುವೆಂಪು.ವಿ.ವಿ
ಶ್ರೀ ಟಿ.ಕೆ. ಅನಿಲ್‌ಕುಮಾರ್, ಕೋಶಾಧ್ಯಕ್ಷರು, ಜಿಲ್ಲಾಧಿಕಾರಿಗಳು
ಶ್ರೀ ಅರುಣ್ ಚಕ್ರವರ್ತಿ ಜೇಜಿ, ಜಿಲ್ಲಾ ರಕ್ಷಣಾಧಿಕಾರಿಗಳು
ಡಾ. ಬೋರೇಗೌಡರು, ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು
ಶ್ರೀ ಟಿ. ಮಹಾಬಲೇಶ್ವರಭಟ್ಟರು, ಹಿರಿಯ ಸಾಹಿತಿಗಳು
ಶ್ರೀ ಡಿ. ಮಂಜುನಾಥ್, ಅಧ್ಯಕ್ಷರು, ಕಸಾಪ, ಪ್ರಧಾನಕಾರ್ಯದರ್ಶಿ, ಶಿವಮೊಗ್ಗ

## ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕಾರಿ ಸಮಿತಿ ಸದಸ್ಯರು

ಪ್ರೊ. ಚಂದ್ರಶೇಖರ ಪಾಟೀಲ (ಚಂಪಾ), ಬೆಂಗಳೂರು
ಶ್ರೀ ಜರಗನಹಳ್ಳಿ ಶಿವಶಂಕರ್, ಬೆಂಗಳೂರು
ಡಾ. ಎಚ್. ಜಯಮ್ಮ ಕರಿಯಣ್ಣ, ಬೆಂಗಳೂರು
ಶ್ರೀ ಪುಂಡಲೀಕ ಹಾಲಂಬಿ, ಬೆಂಗಳೂರು
ಶ್ರೀ ಶ್ರ.ದೇ ಪಾರ್ಶ್ವನಾಥ, ಬೆಂಗಳೂರು
ಶ್ರೀ ಎಸ್. ರಾಮಲಿಂಗೇಶ್ವರ (ಸಿಸಿರಾ), ಬೆಂಗಳೂರು ಗ್ರಾಮಾಂತರ
ಶ್ರೀ ಎನ್.ಎಸ್. ರಾಮಪ್ರಸಾದ್, ಕೋಲಾರ
ಶ್ರೀ ಆರ್.ಎಸ್. ಸದಾನಂದ, ತುಮಕೂರು
ಶ್ರೀ ಕೆ.ಎಂ. ವೀರೇಶ್, ಚಿತ್ರದುರ್ಗ
ಶ್ರೀ ಎಸ್.ಎಚ್. ಹೂಗಾರ್, ದಾವಣಗೆರೆ
ಶ್ರೀ ಡಿ. ಮಂಜುನಾಥ, ಶಿವಮೊಗ್ಗ
ಶ್ರೀ ಮಾನಸ, ಮೈಸೂರು
ಶ್ರೀ ಮಲೆಯೂರು ಗುರುಸ್ವಾಮಿ, ಮೈಸೂರು
ಶ್ರೀ ಹೆಚ್.ವಿ. ಜಯರಾಂ, ಮಂಡ್ಯ
ಶ್ರೀ ಟಿ.ಪಿ. ರಮೇಶ್, ಕೊಡಗು
ಶ್ರೀ ಎಚ್.ಬಿ. ರಮೇಶ್, ಹಾಸನ

ಶ್ರೀ ಎಚ್. ವಿ. ಶ್ರೀವತ್ಸ ಹುಲಸೆ, ಚಿಕ್ಕಮಗಳೂರು
ಶ್ರೀ ಎಸ್. ಪ್ರದೀಪ ಕಲ್ಕೂರ, ದಕ್ಷಿಣ ಕನ್ನಡ
ಶ್ರೀ ಯು. ಚಂದ್ರಶೇಖರ ಹೊಳ್ಳ, ಉಡುಪಿ
ಶ್ರೀ ಮೋಹನ ಬಸವನಗೌಡ ಪಾಟೀಲ, ಬೆಳಗಾವಿ
ಶ್ರೀ ಬಿ.ಎಂ. ಪಾಟೀಲ, ಬಿಜಾಪುರ
ಶ್ರೀ ವಿಶ್ವನಾಥ ವಂಶಾಕೃತಮಠ, ಬಾಗಲಕೋಟೆ
ಡಾ. ಮಧು ವೆಂಕಾರೆಡ್ಡಿ, ಧಾರವಾಡ
ಶ್ರೀ ಅ.ಸಿ. ಹಿರೇಮಠ, ಹಾವೇರಿ
ಪ್ರೊ. ಕೆ.ಬಿ. ತಳಗೇರಿ, ಗದಗ
ಶ್ರೀ ರೋಹಿದಾಸ ನಾಯಕ, ಉತ್ತರಕನ್ನಡ
ಶ್ರೀ ವೀರಭದ್ರ ಸಿಂಪಿ, ಗುಲ್ಬರ್ಗ
ಡಾ. ಜಗನ್ನಾಥ ಹೆಬ್ಬಾಳೆ, ಬೀದರ
ಶ್ರೀ ಕ.ಮ. ಪುರದ, ರಾಯಚೂರು
ಶ್ರೀ ಶೇಖರಗೌಡ ಮಾಲಿಪಾಟೀಲ, ಕೊಪ್ಪಳ
ಶ್ರೀ ನಿಷ್ಠಿ ರುದ್ರಪ್ಪ, ಬಳ್ಳಾರಿ
Sri H.B.L. Rao, Navi Mumbai
Sri I.V. Bhatta, Kasaragod
Sri C. Ramaswamy, Chennai
Sri H. Ramachandrappa, Ananthpura
ಧರ್ಮದರ್ಶಿ ಹರಿಕೃಷ್ಣ ಪುನರೂರು, ದಕ್ಷಿಣ ಕನ್ನಡ
ಪ್ರೊ. ಕೆ.ಎಸ್. ನಿಸಾರ್ ಅಹಮದ್, ಬೆಂಗಳೂರು
ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು
ಶ್ರೀಮತಿ ಬಿ.ಟಿ. ಲಲಿತಾನಾಯಕ್, ಬೆಂಗಳೂರು
ಶ್ರೀ ಕೆ. ಪ್ರಭಾಕರ ರೆಡ್ಡಿ, ಬೆಂಗಳೂರು
ಡಾ. ಎಲ್. ಹನುಮಂತಯ್ಯ, ಬೆಂಗಳೂರು
ಡಾ. ಕರೀಗೌಡ ಬೀಚನಹಳ್ಳಿ, ಬಳ್ಳಾರಿ(ಹಂಪಿ ವಿ.ವಿ. ಪ್ರತಿನಿಧಿ)
ಡಾ. ಸಿದ್ಧಲಿಂಗಯ್ಯ, ಬೆಂಗಳೂರು (ಬೆಂಗಳೂರು ವಿ.ವಿ. ಪ್ರತಿನಿಧಿ)

# ಅಧ್ಯಕ್ಷರ ನುಡಿ

ಕಳೆದ ತೊಂಬತ್ತೊಂದು ವರ್ಷಗಳಿಂದ ನಾಡು-ನುಡಿ-ಸಂಸತಿಯ ರಕ್ಷಣೆ ಮತ್ತು ವಿಕಾಸಕ್ಕಾಗಿ ಬದ್ಧ ಕಂಕಣವಾಗಿರುವ ಸಂಸ್ಥೆ ಕನ್ನಡ ಸಾಹಿತ್ಯ ಪರಿಷತ್ತು. ಪಂಚಕೋಟಿ ಕನ್ನಡಿಗರ ಏಕೈಕ ಪ್ರಾತಿನಿಧಿಕ ಸಂಸ್ಥೆಯಾಗಿರುವ ಪರಿಷತ್ತು ಕನ್ನಡ ಬದುಕಿನ ಬಹುಮುಖೀ ಆಯಾಮಗಳಿಗೆ ಆಲೋಚನೆ - ಅಕ್ಷರ - ಕ್ರಿಯೆಗಳ ಮೂಲಕ ಸ್ಪಂದಿಸುತ್ತಲೇ ಬಂದಿದೆ.

ಪುಸ್ತಕ ಪ್ರಕಟನೆ, ಪರಿಷತ್ತು ನಿರಂತರವಾಗಿ ನಡೆಸಿಕೊಂಡು ಬಂದಿರುವ ಮುಖ್ಯ ಚಟುವಟಿಕೆಗಳಲ್ಲೊಂದು. ಸೃಜನಶೀಲ ಕೃತಿಗಳಲ್ಲದೆ ಸೃಜನೇತರ ವಲಯದ - (ಅಂದರೆ, ವ್ಯಾಕರಣ, ನಿಘಂಟು, ಚರಿತ್ರೆ, ಸಮಾಜ ವಿಜ್ಞಾನ, ಮನೋವಿಜ್ಞಾನ, ಪರಿಶೋಧನೆ, ತತ್ವವಿಚಾರ, ಶಾಸನಶಾಸ್ತ್ರ, ಮಾಹಿತಿ ತಂತ್ರಜ್ಞಾನ, ವಿಮರ್ಶೆ, ಜಾನಪದ, ಸಂಶೋಧನ, ಪತ್ರಿಕೋದ್ಯಮ... ಹೀಗೆ) ಹಲವಾರು ಜ್ಞಾನಕ್ಷೇತ್ರಗಳು ಸಾವಿರಾರು ಕೃತಿಗಳ ರೂಪದಲ್ಲಿ ಕನ್ನಡ ಕುಲಕೋಟಿಯನ್ನು ತಲಪುತ್ತಲೇ ಇವೆ. ಎಲ್ಲ ಬಗೆಯ ಅಭಿವ್ಯಕ್ತಿಗಳಿಗೂ ಕನ್ನಡ ಭಾಷೆಯನ್ನು ಸಿದ್ಧಗೊಳಿಸುವುದು ನಮ್ಮ ಪ್ರಮುಖ ಉದ್ದೇಶ.

ಡಿಸೆಂಬರ್ ೨೦೦೬ರಲ್ಲಿ ಶಿವಮೊಗ್ಗದಲ್ಲಿ ನಡೆಯಲಿರುವ ೭೩ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿ, ೭೩ ಪುಸ್ತಕಗಳನ್ನು ಮುದ್ರಿಸಿ ಪ್ರಕಟಿಸುವುದೆಂದು ನಮ್ಮ ಪ್ರಕಟನಾ ಸಮಿತಿ ತೀರ್ಮಾನಿಸಿತು. ಈ ಯೋಜನೆಯ ಅನುಷ್ಠಾನಕ್ಕೆ ವಿಶೇಷ ಆರ್ಥಿಕ ಅನುದಾನ ನೀಡಿದ ಕರ್ನಾಟಕ ಸರಕಾರಕ್ಕೆ ನಾವು ಕೃತಜ್ಞರು. ಈ ಕೃತಿಯ ಲೇಖಕರಿಗೆ ನಾವು ಆಭಾರಿ. ಅಚ್ಚುಕಟ್ಟಾಗಿ ಮುದ್ರಿಸಿದ ಮುದ್ರಣಾಲಯದವರಿಗೂ ಹಾಗೂ ಮುಖಪುಟ ವಿನ್ಯಾಸದ ಕಲಾವಿದರಿಗೆ ನಮ್ಮ ವಂದನೆಗಳು.

**ಚಂದ್ರಶೇಖರ ಪಾಟೀಲ (ಚಂಪಾ)**
**ಅಧ್ಯಕ್ಷರು**

## ನನ್ನ ನುಡಿ

ಕನ್ನಡ ಸಾಹಿತ್ಯಕ್ಕೆ ಕುಂಭಕಲೆ ಕುರಿತಂತೆ 'ಕುಂಬಾರಿಕೆ ವೃತ್ತಿ ಪದಕೋಶ' ನಾನು ಗೇಯ್ದಿಟ್ಟ ನಾಲ್ಕನೆಯ ಕುಂಭ. ನನ್ನ ಪ್ರಥಮ ಕೃತಿ ಕುಂಬಾರ ಜನಾಂಗದಲ್ಲಿಯೇ ಕುಂಬಾರಿಕೆಯ ಪದಕೋಶದ ಕುರಿತು ಒಂದು ಅಧ್ಯಾಯವನ್ನು ಅಳವಡಿಸಿದ್ದೆ ಅದು ಬಹಳಷ್ಟು ಜನ ವಿದ್ವಾಂಸರ ಗಮನ ಸೆಳೆಯಿತು. ಆ ಉತ್ತೇಜನವೆ ನನ್ನ ನಾಲ್ಕನೆಯ ಕುಂಭವನ್ನು ಗೇಯ್ದಿಡಲು ಕಾರಣವಾದದ್ದು.

ಈ ಮಣ್ಣಿನ ಬದುಕನ್ನು ಪ್ರಕಟಿಸಿ ಮಾರುವುದು ಅಷ್ಟು ಸುಲಭವಾಗಿರಲಿಲ್ಲ. ಅದು ತಲೆಯಲ್ಲಿ ತಿಗುರಿಯಂತೆ ತಿರುಗುತ್ತಲೆ ಇತ್ತು. ಈ ಸಂದರ್ಭದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಚಂದ್ರಶೇಖರ ಪಾಟೀಲರನ್ನು ನನ್ನ ಬಂಧು ಕೆ. ಈರಣ್ಣ, ಬೆಂಗಳೂರು ಇವರೊಡನೆ ಭೇಟಿಯಾಗಿ ಕುಂಬಾರಿಕೆ ವೃತ್ತಿಪದಗಳು ಅಳಿದು ಹೋಗುತ್ತಿರುವ ಕಹಿ ಪ್ರಸಂಗವನ್ನು ವಿವರಿಸಿ ಹೇಳಿದಾಗ, ಅದಕ್ಕೆ ಸ್ಪಂದಿಸಿದ ಪಾಟೀಲರು, "ಈ ಕುರಿತಂತೆ ಕನ್ನಡದಲ್ಲಿ ಬರಹಗಳಿಲ್ಲ ಬರೆದು ತನ್ನಿ" ಎಂದು ಪ್ರಕಟಣೆಯ ಆಶ್ವಾಸನೆ ನೀಡಿ ಸುವರ್ಣ ಕರ್ನಾಟಕ ವರ್ಷದ ಈ ಸಂದರ್ಭದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನಿಂದ ಪ್ರಕಟವಾಗಲು ನೆರವಾದರು. ಸದ್ದಡಗಿ ಹೋಗುತಲಿದ್ದ ಕುಂಬಾರಿಕೆ ವೃತ್ತಿಪದಗಳು ಅಕ್ಷರರೂಪ ಪಡೆಯಲು ಕಾರಣರಾದ ಚಂದ್ರಶೇಖರ ಪಾಟೀಲರಿಗೆ ನನ್ನ ಹೃತ್ಪೂರ್ವಕ ಕೃತಜ್ಞತೆಗಳು. ಪ್ರಕಟಣೆಯ ಕುರಿತು ಸಹಕರಿಸುತ್ತ ಬಂದಿರುವ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿ ಜರಗನಹಳ್ಳಿ ಶಿವಶಂಕರ್ ಹಾಗೂ ನಾಗವೇಣಿಯವರಿಗೆ ನನ್ನ ವಂದನೆಗಳು ಸಲ್ಲಬೇಕು.

ಈ ಕುಂಭ ಪದಕೋಶವನ್ನು ತುಂಬಲು ಹಲವಾರು ಮಹನೀಯರು ಸಹಕರಿಸಿದ್ದಾರೆ. ಬರೆಯುತ್ತಿರುವಾಗಲೆ ತಿದ್ದಿ ತೀಡಿ ಹಲವಾರು ಅಮೂಲ್ಯ ಸಲಹೆಗಳನ್ನು ನೀಡಿದ ಬೆಲ್ಲದ ಬಾಗೇವಾಡಿ ಪಿ.ಯು. ಕಾಲೇಜಿನ ಪ್ರಿನ್ಸಿಪಾಲರಾದ ಭೀಮರಾಯ ಕುಂಬಾರವರಿಗೆ, ಕುಂಬಾರಿಕೆಯ ತೆಲುಗು ಪದಗಳನ್ನು ಒದಗಿಸಿದ ಶ್ರೀ ಕೆ. ಈರಣ್ಣ, ಬೆಂಗಳೂರು, ಮರಾಠಿ ಪದಗಳನ್ನು ಒದಗಿಸಿದ ಶ್ರೀಮತಿ ವಿಜಯ ಅಶೋಕ ಧಾರವಾಡ, ತುಳುಪದಗಳನ್ನು ನೀಡಿದ ಮಿತ್ರರಾದ ಶಂಕರ್ ಬಾಳೆ ಹಿತ್ಲು ಕಾಸರಗೋಡ, ನನ್ನ ಕೃತಿಗಳ ರಚನೆಯಲ್ಲಿ ಹಲವು ಬಗೆಯಲ್ಲಿ ಸಹಕಾರ ನೀಡುತ್ತಿರುವ ಬಸವರಾಜ ಕುಂಬಾರ ಧಾರವಾಡ ಇವರುಗಳಿಗೆಲ್ಲ ನಾನು ಆಭಾರಿಯಾಗಿದ್ದೇನೆ. ಹಾಸನ, ದೊಡ್ಡಬಳ್ಳಾಪುರ ಭಾಗದ ಅನೇಕ ಕುಂಬಾರಿಕೆಯ ಪದಗಳನ್ನು ವಿವರಣೆ ಸಮೇತ ನೀಡಿದ ಶ್ರೀ ಶೇಖರಶೆಟ್ಟಿ ಉಪನ್ಯಾಸಕರು. ದೊಡ್ಡಬಳ್ಳಾಪುರ, ಬರವಣಿಗೆಯ ಕೊನೆಯ ಹಂತದಲ್ಲಿ, ದಾವಣಗೆರೆ–ಹರಿಹರ ಪ್ರದೇಶದ ಕುಂಬಾರಿಕೆ ಪದಗಳ ಗೊಂಚಲನ್ನೇ ನೀಡಿದ ಸಾಹಿತಿ ಮಿತ್ರ ಪರಮೇಶ್ವರ ಕತ್ತಿಗಿ ಹರಿಹರ, ಹಲವಾರು ಚಿತ್ರಗಳ ಹೊಳವು ಹಾಕಿಕೊಟ್ಟ ಸಾಹಿತಿಮಿತ್ರ ಹಿ.ಗೂ. ದುಂಡೆಪ್ಪ, ಹರಿಹರ, ಕರಡುಪ್ರತಿಯನ್ನು ತಿದ್ದಲು

ನೆರವಾದ ಶ್ರೀ ಕೆ.ಬಿ. ಚಂದ್ರಶೇಖರ್. ನಿ.ಇಂ, ದಾವಣಗೆರೆ, ಶ್ರೀ ಕೆ.ಸಿ. ಲೋಕೇಶ್ ಶಿಕ್ಷಕರು ದಾವಣಗೆರೆ, ಇವರೆಲ್ಲರಿಗೂ ನನ್ನ ಅನಂತ ಧನ್ಯವಾದಗಳು.

ಅಂದವಾದ ರೇಖಾ ಚಿತ್ರಗಳನ್ನು ಬರೆದುಕೊಟ್ಟ ಭದ್ರಾವತಿಯ ಖ್ಯಾತ ಕಲಾವಿದ ಮಿತ್ರ ಎಸ್.ಜಿ. ಶಂಕರಮೂರ್ತಿ ಶಾಂತಲಾ ಆರ್ಟ್ಸ್, ಭದ್ರಾವತಿ ಇಂಗ್ಲಿಷ್-ಇಂಗ್ಲಿಷ್ ಪದಕೋಶದ ಅಧ್ಯಾಯವನ್ನು ಅತ್ಯಂತ ಶ್ರದ್ಧೆಯಿಂದ ತಿದ್ದಿಕೊಟ್ಟ ಹಿರಿಯ ಮಿತ್ರ ಕಮಲಾಕ್ಷನಾಯ್ಕ ಸುರತ್ಕಲ್, ಪುಸ್ತಕಗಳ ನೆರವನ್ನು ನೀಡಿ ಸಹಕರಿಸಿದ ಐ.ಆರ್.ಹೆಚ್.ಸಿ. ಗ್ರಂಥಪಾಲರಾದ ಶ್ರೀ ಸಂಗಪ್ಪ, ಬೆಂಗಳೂರು, ದಾವಣಗೆರೆ ಎ.ವಿ.ಕೆ. ಕಾಲೇಜಿನ ಮುಖ್ಯ ಗ್ರಂಥಪಾಲಕರಾದ ಪಾಟೀಲ ಮತ್ತು ಅವರ ಸಿಬ್ಬಂದಿ ವರ್ಗಕ್ಕೆ ನನ್ನ ಹೃತ್ಪೂರ್ವಕ ವಂದನೆಗಳು.

ಒಂದಿಲ್ಲದೊಂದು ರೀತಿಯಲ್ಲಿ ಗ್ರಂಥ ಹೊರಬರಲು ಸಹಕರಿಸಿದ ಸಾಹಿತಿ ಕೆ.ಎಸ್. ಸ್ವಾಮಿ, ದಾವಣಗೆರೆ, ಸಹೋದರ ಕೆ. ಚೆನ್ನವೀರ ಇಂಜಿನಿಯರ್, ಬೆಂಗಳೂರು, ಮಗಳು ಗೀತಾಪ್ರಸಾದ, ಬೆಂಗಳೂರು, ಬಂಧುಗಳಾದ ಶ್ರೀ ಕಾಶೀನಾಥ ಹರಿಹರ, ಮಲ್ಲಿಕಾರ್ಜುನ ಬೆಂಗಳೂರು, ಮಂಜುನಾಥ ಭದ್ರಾವತಿ, ಅಮ್ಮೆಂಬಳ ಆನಂದ ಹಾಗೂ ನನ್ನ ಬರಹದ ಬಗೆಗೆ ಅತ್ಯಂತ ಕುತೂಹಲ ತಳೆದಿರುವ ಹಿರಿಯ ಬಂಧು ಪ್ರೊ. ನಾಡಗೌಡ ವಿಜಾಪುರ ಇವರಿಗೆಲ್ಲ ಲೇಖಕನ ವಂದನೆಗಳು.


ಕುಂಭ ಪದಕೋಶದ ರಚನೆಗೆ ಹಲವಾರು ರೀತಿಯಿಂದ ನೆರವಾದ ರಾಘವೇಂದ್ರ ಕುಂಬಾರ್ ದಾವಣಗೆರೆ ಹಾಗೂ ಸಹಕಾರವಿತ್ತ ಕುಮಾರಿ ನಂದಿನಿ ಮತ್ತು ಕುಮಾರಿ ಜ್ಯೋತಿ ಇವರಿಗೆ ನನ್ನ ಅಭಿನಂದನೆಗಳು.

ಈ ಶಬ್ದಕೋಶಕ್ಕೆ 'ಕುಂಬಾರಿಕೆ ವೃತ್ತಿ ಪದಕೋಶ' ಎನ್ನುವ ಹೆಸರನ್ನು ಸೂಚಿಸಿದ ಹಿರಿಯ ವಿದ್ವಾಂಸರಾದ ಜಿ. ವೆಂಕಟಸುಬ್ಬಯ್ಯನವರಿಗೆ ಲೇಖಕನ ಕೃತಜ್ಞತೆಗಳು.

ಈ ಗ್ರಂಥವನ್ನು ಅಲ್ಪ ಅವಧಿಯಲ್ಲಿ ಅಂದವಾಗಿ ಮುದ್ರಿಸಿ ಹೊರತಂದ ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರಿನ ಸಿಬ್ಬಂದಿ ವರ್ಗಕ್ಕೆ ನನ್ನ ಕೃತಜ್ಞತೆಗಳು ಸಲ್ಲುತ್ತವೆ.

**– ಬಸವರಾಜ ಕುಂಚೂರು**

# ಪರಿವಿಡಿ



ನಿನ್ನಾಳಿ ಕುಂಬಾರನ ಕೆಲಸದೋಪಾದೆ.

ಉದಕ ಶೈತ್ಯವನೆ ಕೊಟ್ಟು,

ನೂಲೆಳೆಯಲಿಗೋಣ ಕೊಯ್ದು,

ವಾಯುವಿನ ಶೈತ್ಯದಲಿ ಆರಿಸಿ,

ಅಗ್ನಿ ಮುಖದಲ್ಲಿ ಬೇರೆ ಬಾಂದವೆಂದನಿಸಿದಂತೆ

ಕೂಡಲ ಸಂಗಮದೇವ

ಬಸವಣ್ಣ

**Pottery is not poor art**
**It is Poor Man's art**

# ಅಧ್ಯಾಯ ಒಂದು

## ಪೀಠಿಕೆ

ಪ್ರತಿಯೊಂದು ಕುಲಕಸಬಿಗೂ ತನ್ನದೇ ಆದ ಪದಕೋಶವಿದೆ. ಕೃಷಿ, ಕಮ್ಮಾರಿಕೆ, ಚಮ್ಮಾರಿಕೆ, ಕ್ಷೌರಿಕೆ, ಕುಂಬಾರಿಕೆ, ಯಾವುದೇ ವೃತ್ತಿ ಇರಲಿ ಅವುಗಳಿಗೆಲ್ಲ ತನ್ನದೇ ಆದ ಪದಕೋಶವಿದೆ. ಇದೊಂದು ರೀತಿಯಲ್ಲಿ ಉಪಭಾಷೆ. ಗ್ರಾಮೀಣ ನೆಲೆಯಲ್ಲಿ ಬೆಳೆದು ಬಂದ ಕುಲಕಸುಬುಗಳ ಪದಕೋಶದಲ್ಲಿ ಆಡುನುಡಿಗಳೇ ಹೆಚ್ಚು. ಜನಪದ ಮೂಲದಿಂದ ಬಂದವುಗಳು. ಶುದ್ಧ ಕನ್ನಡದವುಗಳೆಂದು ಹೇಳಬಹುದು. ಈ ಉಪಭಾಷೆಯ ಪದಗಳು ಸಾಮಾನ್ಯ ನಿಘಂಟಿನಲ್ಲಿ ದೊರೆಯುವದು ಕಷ್ಟ.

ಕನ್ನಡ ನಿಘಂಟು ಶಾಸ್ತ್ರಕ್ಕೆ ಪಾಶ್ಚಿಮಾತ್ಯರ ಕೊಡುಗೆ ಅಪಾರ. ಇದಕ್ಕೆ ರೀವ್ಹರ್ ಮತ್ತು ಕಿಟೆಲ್ ತಕ್ಕ ಉದಾಹರಣೆ ವೃತ್ತಿಪದ ಕೋಶದ ಬೆಳವಣಿಗೆಗೆ ಕೂಡ ಪಾಶ್ಚಿಮಾತ್ಯರ ಸೇವೆ ಮಹತ್ತರವಾದುದು – ಆಧುನಿಕ ಭಾರತೀಯ ವೃತ್ತಿಪದಕೋಶದ ಚರಿತ್ರೆಯಲ್ಲಿ ಮೊತ್ತ ಮೊದಲು ಪ್ರಕಟವಾದ ವೃತ್ತಿ ಪದಕೋಶವೆಂದರೆ "Materials for a Rural and agricultural Glossory of North Western provinces and oudh" ಈ ಶಬ್ದಾವಳಿಯನ್ನು ೧೮೭೭ರಲ್ಲಿ ಅಲ್ಹಾಬಾದದಿಂದ ಕ್ರೂಕ್ ಅವರು ಸಂಕಲಿಸಿದ್ದಾರೆ. ಕನ್ನಡ ವೃತ್ತಿ ಪದಕೋಶ ಒಂದು ಶತಮಾನದಷ್ಟು ಹಳೆಯದಾದರೂ ಹೆಚ್ಚಿನ ಬೆಳವಣಿಗೆಯನ್ನು ಕಂಡಿಲ್ಲ. ಉಲ್ಲಾಳನರಸಿಂಗರಾವರು ಸಿದ್ಧಪಡಿಸಿದ ಬೇರೆ ಬೇರೆ ವೃತ್ತಿಗಳಿಗೆ ಸೇರಿದ H. Kisamwar Glossary of Kannada words (೧೮೯೧) ಕನ್ನಡದ ಮೊದಲ ವೃತ್ತಿಪದಕೋಶವೆಂದು ಅಭಿಪ್ರಾಯ ಪಡಲಾಗಿದೆ. ಈ ಮೊದಲಿನ ವೃತ್ತಿಪದಕೋಶಗಳು ಹೆಚ್ಚಾಗಿ ವೈದ್ಯವಿಜ್ಞಾನಕ್ಕೆ ಮಾತ್ರ ಸೀಮಿತವಾದಂತೆ ಕಂಡು ಬರುತ್ತದೆ. ಈ ಕುರಿತಂತೆ ಇನ್ನೂ ಹೆಚ್ಚಿನ ಶೋಧನೆ ಅಗತ್ಯ.

ದಕ್ಷಿಣ ಭಾರತದಲ್ಲಿ ಆಂಧ್ರಪ್ರದೇಶ ತೆಲುಗು ವೃತ್ತಿಪದಕೋಶ ರಚನೆಯಲ್ಲಿ ಉಳಿದ ದಕ್ಷಿಣ ಭಾರತದ ರಾಜ್ಯಗಳಿಗಿಂತ ಮುಂದಿದೆ. ಯಂತ್ರ ನಾಗರಿಕತೆಯಿಂದ ಗ್ರಾಮೀಣ

ವೃತ್ತಿಗಳು ಕಣ್ಮರೆಯಾಗುತ್ತಿರುವಾಗ ಸಹಜವಾಗಿಯೆ ಆಯಾ ವೃತ್ತಿವಲಯದ ಶಬ್ದಗಳು ಕಣ್ಮರೆಯಾಗುತ್ತಿವೆ. ಈ ಸಂದರ್ಭದಲ್ಲಿ ವೃತ್ತಿಪದಕೋಶಗಳ ಅಧ್ಯಯನ ಅಗತ್ಯವಿದೆ. ಜನಾಂಗೀಯ ಅಧ್ಯಯನಕ್ಕೆ ಜನಪದ ಶಾಸ್ತ್ರಜ್ಞರಿಗೆ, ಇದರಿಂದ ಹೆಚ್ಚಿನ ಪ್ರಯೋಜನವಿದೆ.

## ವೃತ್ತಿ ಪದಕೋಶದ ಕೆಲವು ಸಮಸ್ಯೆಗಳು:

ವೃತ್ತಿ ಪದಕೋಶಗಳು ವಸ್ತು ಪ್ರಧಾನವಾದುದರಿಂದ ತಾನು ಸಿದ್ಧಪಡಿಸಲು ಹೊರಟಿರುವ ಶಬ್ಧಕೋಶದ ಬಗೆಗೆ ಕೋಶಕಾರನಿಗೆ ಪರಿಪೂರ್ಣ ಜ್ಞಾನವಿರಬೇಕು, ಅವುಗಳ ತಾಂತ್ರಿಕ ವಿಷಯಗಳ ತಲಸ್ಪರ್ಶಜ್ಞಾನವಿದ್ದರೆ ಮಾತ್ರ ತಪ್ಪಿಲ್ಲದೆ ಉತ್ತಮ ವೃತ್ತಿಪದಕೋಶದ ರಚನೆ ಸಾಧ್ಯವಾಗುತ್ತದೆ. ಸಾಮಾನ್ಯ ನಿಘಂಟುಗಳಲ್ಲಿ ವೃತ್ತಿಪದಗಳು ದೊರೆಯದ ಕಾರಣ ವ್ಯಾಪಕವಾದ ಸಮೀಕ್ಷೆ, ಪೂರ್ವಭಾವಿ ಅಭ್ಯಾಸ, ವಿಷಯ ಸಂಗ್ರಹ, ಬಹಳ ಅಗತ್ಯ. ನಮ್ಮಲ್ಲಿ ವಸ್ತು ವಿಷಯ ವಿಜ್ಞಾನ ಸಾಹಿತ್ಯ ಹೆಚ್ಚಾಗಿ ಬೆಳೆಯದಿರುವುದು ವೃತ್ತಿ ಪದಕೋಶದ ರಚನೆಗೆ ಮತ್ತೊಂದು ಅಡಚಣೆ. ಸಮಗ್ರ ವೃತ್ತಿಪದಕೋಶದ ತಯಾರಿಕೆಯಲ್ಲಿ ಬೇರೆ, ಬೇರೆ ಪರಿಣಿತರ ಗುಂಪು ಅವಶ್ಯ. ಅದರಲ್ಲೂ ಆಯಾವೃತ್ತಿ ಮೂಲದ ಒಬ್ಬರಾದರು ಇರುವುದು ಬಹಳ ಅಗತ್ಯ. ವೃತ್ತಿಪದ ಕೋಶದ ರಚನಾಕಾರನಿಗೆ ಬರಿಯ ಭಾಷೆ, ವ್ಯಾಕರಣ ಶೈಲಿಯ ಮೇಲೆ ಹಿಡಿತವಿದ್ದರೆ ಸಾಲದು ವಸ್ತು ವಿಷಯದ ಜ್ಞಾನವೇ ಇಲ್ಲಿ ಮುಖ್ಯ. ಆದ್ದರಿಂದ ವೈದ್ಯಕೀಯ ವಿಜ್ಞಾನದ ಪದಕೋಶದ ರಚನೆಯನ್ನು ವೈದ್ಯರಾದವರು, ಸಿವಿಲ್ ಇಂಜನಿಯರಿಂಗ್ ಪದಕೋಶವನ್ನು ಸಿವಿಲ್ ಇಂಜನಿಯರಿಂಗ್‌ನಲ್ಲಿ ಪರಿಣಿತಿ ಹೊಂದಿದ ಇಂಜಿನಿಯರು, ರಚಿಸುವುದು ಒಳಿತು. ಭಾಷೆಯ ಮೇಲೆ ಪ್ರಭುತ್ವವಿದ್ದು ಆಯಾ ವೃತ್ತಿಯ ಪರಿಣಿತರು ವೃತ್ತಿ ಪದಕೋಶ ರಚಿಸಿದರೆ ತಾಂತ್ರಿಕ ದೋಷಗಳಿಲ್ಲದೆ ವಸ್ತು ನಿಷ್ಠವಾಗಿ ಸಂಕಲಿಸಬಹುದೆಂದು ನನ್ನ ಅಭಿಪ್ರಾಯ. ಕಾಮಶಾಸ್ತ್ರವನ್ನು ಋಷಿ-ಮುನಿಗಳು ಬರೆಯಲಿಲ್ಲವೆ? ಎನ್ನುವ ವಾದ ಈ ವಿಷಯ ಕುರಿತಂತೆ ಸಮಂಜಸವಾಗಲಾರದು.

ವೃತ್ತಿಪದಕೋಶದ ರಚನೆಯಲ್ಲಿ ಬರಬಹುದಾದ ಮತ್ತೊಂದು ತೊಂದರೆ ಎಂದರೆ ಒಂದು ಪದಕ್ಕೆ ಪರಿಚಿತವಲ್ಲದ ಮತ್ತೊಂದು ಅರ್ಥ ಇರುವುದು. ಉದಾ: ಕುಂಬಾರಿಕೆಯಲ್ಲಿ ಅಚ್ಚು ಎನ್ನುವ ಅರ್ಥ ತೆಗೆದುಕೊಳ್ಳೋಣ. ಅಚ್ಚು ಎಂದರೆ ಸಾಮಾನ್ಯ ಅರ್ಥದಲ್ಲಿ ಪಡಿಯಚ್ಚು ಮುದ್ರೆ ಎನ್ನುವುದು, ಮಣ್ಣಿನ ವಸ್ತುಗಳ ತಯಾರಿಕೆಯಲ್ಲಿ ಪಡಿಅಚ್ಚು ಕೂಡ ಬಳಕೆಯಲ್ಲಿದೆ. ಪಿಂಗಾಣಿಯ ಅನೇಕ ವಸ್ತುಗಳನ್ನು ಪಡಿಅಚ್ಚಿನಲ್ಲಿ ತಯಾರಿಸಲಾಗುತ್ತಿದೆ. ಇದು ಹೆಚ್ಚು ಜನರಿಗೆ ಸುಲಭವಾಗಿ ತಿಳಿವಂತಹುದು. ಕುಂಬಾರರ ವಲಯದಲ್ಲಿ ಮಾತ್ರ

ಪರಿಚಿತವಿರುವ ಇನ್ನೊಂದು ಅರ್ಥವೆಂದರೆ 'ತೀಡೋ ಅಚ್ಚು', 'ತೀಡುವ ಅಚ್ಚು' ಇದೊಂದು ಮುಚ್ಚಳ ಇದ್ದ ಹಾಗೆ ಇದ್ದು ತಳತಗ್ಗಾಗಿರುತ್ತದೆ. ಇದರಲ್ಲಿ ಕುಂಬಾರಗಿತ್ತಿಯರು ಮಣ್ಣಿನ ಸುರುಳಿಯ ತುಂಡನ್ನು ಜಜ್ಜುವ ಕಲ್ಲಿನಿಂದ ಜಜ್ಜಿ ಅಗಲಮಾಡಿ ಅಚ್ಚಿಗೆ ಹಾಕಿ, ಎಡಗೈಯಲ್ಲಿ ಅಚ್ಚನ್ನು ಹಿಡಿದುಕೊಂಡು ಬಲಗೈಯಿಂದ ಸಬಸರಬಿಯಿಂದ (ತೀಡುವ ಅರಿವೆ) ಮಣ್ಣನ್ನು ತೀಡಿ ಎತ್ತರಿಸುತ್ತ ಬೇಕಾದ ಆಕೃತಿಯ ಬೋಸಿಗಳನ್ನು ಮಾಡುವರು. ('ಬೋಸಿ' ಎಂದರೆ ಕಂಠವಿಲ್ಲದ ಮಣ್ಣಿನ ಬೋಳು ಆಕೃತಿ). ಬೋಸಿಯನ್ನು ತಿದ್ದಿ ತೀಡಿ, ಅದು ಅರೆ ಬಣಗಿದ ನಂತರ ಕಂಠಹಚ್ಚುವರು. ಮಾಡುವ ಮಡಕೆಗನುಗುಣವಾಗಿ ಅಚ್ಚುಗಳ ಗಾತ್ರ ಬೇರೆ, ಬೇರೆಯಾಗಿರುತ್ತದೆ. ಹೀಗೆ ಇಂತಹ ಪದಗಳು ಹೆಚ್ಚಿಲ್ಲದಿದ್ದರೂ ಕಡಿಮೆ ಸಂಖ್ಯೆಯಲ್ಲಾದರು ಇವೆ. ಈ ತರಹದ ಪದಗಳನ್ನು ಅರ್ಥ ಮಾಡಿಕೊಳ್ಳಬೇಕಾದರೆ ತಿಳಿದುಕೊಳ್ಳಬೇಕೆಂಬ ಕುತೂಹಲ, ತಾಳ್ಮೆ, ವೃತ್ತಿಗೆ ಸಂಬಂಧಿಸಿದವರ ಕೂಡ ಚರ್ಚೆ ಅಗತ್ಯ. ಸಾಮಾನ್ಯ ಸಮೀಕ್ಷೆಯಿಂದ ಇದೆಲ್ಲ ದೊರೆಯಲಾರದು.

ವೃತ್ತಿ ಪದಕೋಶಗಳಲ್ಲಿ ಕೂಡ ಪ್ರಾದೇಶಿಕ ಭಿನ್ನತೆ ಇರುವದರಿಂದ, ವ್ಯಾಪಕ ಸಮೀಕ್ಷೆ ಅಗತ್ಯ. ವೃತ್ತಿ ಪದಕೋಶದ ರಚನೆ, ಸುಮ್ಮನೆ ಮನೆಯಲ್ಲಿ ತಣ್ಣಗೆ ಕುಳಿತು ಅವಸರದಿಂದ ಮಾಡುವ ಕೆಲಸವಲ್ಲ, ಅಧ್ಯಯನ ಮತ್ತು ಅರ್ಥಪೂರ್ಣವಾದ ಸಮೀಕ್ಷೆ, ವೃತ್ತಿಯವರೊಡನೆ ಚರ್ಚೆ ವಿಷಯ ಸಂಗ್ರಹ, ರೇಖಾ ಚಿತ್ರಗಳ ತಿಳುವಳಿಕೆಬೇಕು. ಆಯಾವೃತ್ತಿ ಮೂಲ ಕುಲದ ಕಲಾವಿದರಿಂದಲೆ, ಚಿತ್ರಗಳನ್ನು ಬರೆಸುವುದು ಉತ್ತಮವೆಂದು ನನ್ನ ಅಭಿಪ್ರಾಯ.

### ಕುಂಬಾರಿಕೆ ಪದಕೋಶದ ಬೆಳವಣಿಗೆ:

ಕುಂಬಾರಿಕೆ ಪದಕೋಶದ ಬೆಳವಣಿಗೆ ತೀರಾ ಇತ್ತೀಚಿನ ಎರಡು ದಶಕಗಳ ಹಿಂದಿನದು. ೧೯೭೪ ಹರಿಹರದಲ್ಲಿ ಜರುಗಿದ ಅಖಿಲ ಕರ್ನಾಟಕ ಕುಂಬಾರ ಸಮ್ಮೇಳನದಲ್ಲಿ ಹೊರತಂದ ''ಕುಂಭಕಲೆ'' ಸ್ಮರಣ ಸಂಚಿಕೆಯಲ್ಲಿ ನಾನು ಬರೆದ ಲೇಖನ ''ಕುಂಭ ಪದಕೋಶವೆ'' ಕನ್ನಡದ ಮೊದಲ ಕುಂಬಾರಿಕೆಯ ಶಬ್ದಕೋಶದ ಕುರಿತಾದ ಬರಹವೆಂದು ನನ್ನ ತಿಳುವಳಿಕೆ. ಈ ಕುರಿತು ಬರಹಗಳಿದ್ದಲ್ಲಿ ನನಗೆ ತಿಳಿಸಿದರೆ ಸಂತೋಷ. ಸ್ಮರಣ ಸಂಚಿಕೆಯೊಂದರಲ್ಲಿ, ಅದರಲ್ಲೂ ಒಂದು ಕುಲಕ್ಕೆ ಸಂಬಂಧಿಸಿದ್ದಾಗಿದ್ದರಿಂದ ಆ ಬರಹ ಹೆಚ್ಚಿನ ಜನರ ಗಮನ ಸೆಳೆಯುವುದು ಒತ್ತಟ್ಟಿಗಿರಲಿ, ಕುಂಬಾರರೆ, ಅದನ್ನು ಕಣ್ಣೆತ್ತಿ ನೋಡಿರಲಾರರು. ಅದೊಂದು ನೀರಸವಾದ ವಿಷಯ ಬೇರೆ? ಕೇವಲ ೫೦ ಶಬ್ದಗಳನ್ನೊಳ ಗೊಂಡ ಕಿರುಲೇಖನ ಏನಿದ್ದರೂ ಅದು ಮೊದಲ ಬರಹವೆಂಬುದು ನನ್ನ ತಿಳುವಳಿಕೆ.

## ಕುಂಬಾರ ವೃತ್ತಿ ಪದಕೋಶ:

ಡಾ. ಎಸ್.ಎಸ್. ಅಂಗಡಿಯವರು ೧೯೯೮ರಲ್ಲಿ ಹೊರತಂದ 'ಕುಂಬಾರ ವೃತ್ತಿ ಪದಕೋಶ' ಕುಂಬಾರಿಕೆ ಕುರಿತಂತೆ ಪುಸ್ತಕ ರೂಪದಲ್ಲಿ ಹೊರಬಂದ ಕನ್ನಡದ ಮೊದಲ ವೃತ್ತಿ ಪದಕೋಶವೆಂದು ಹೇಳಬಹುದು. ಇದು ೭೦ ಪುಟಗಳ ಕಿರುಪುಸ್ತಕ ಅದರಲ್ಲಿ ೨೬ ಪುಟಗಳಷ್ಟು ಕುಂಭಕಲೆಯ ಕುರಿತಾದ ಬರಹವಿದೆ. ಚಿತ್ರಗಳನ್ನು ಪ್ರತ್ಯೇಕ ಪುಟಗಳಲ್ಲಿ ಕೊಡಲಾಗಿದೆ. ೩೨ ಪುಟಗಳಲ್ಲಿ ಮಾತ್ರ ಪದಕೋಶವಿದೆ.

ಈ ಪದಕೋಶವನ್ನು ಉಪಕರಣಗಳು, ವಿವಿಧ ನಮೂನೆಯ ಪಾತ್ರೆಗಳು, ಸಾಂಸ್ಕೃತಿಕ ಸಂದರ್ಭದಲ್ಲಿ ಮಾಡುವ ವಸ್ತುಗಳು, ಕ್ರಿಯಾಪದಗಳು ಸಂಕೀರ್ಣ ಹೀಗೆ ವರ್ಗೀಕರಿಸಲಾಗಿದೆ. ಇದು ಕನ್ನಡದಲ್ಲಿ ಕುಂಬಾರಿಕೆಯ ಮೊದಲ ವೃತ್ತಿ ಪದಕೋಶ ವಾದುದರಿಂದ ಅವರ ಶ್ರಮ ಮೆಚ್ಚುವಂತಹುದು. ಅವರೇ ಹೇಳಿಕೊಂಡಿರುವಂತೆ ಇಲ್ಲಿನ ಕುಂಬಾರಿಕೆ ಪದಗಳು ಬೆಳಗಾಂವ್ ಮತ್ತು ಬಳ್ಳಾರಿ ಜಿಲ್ಲೆಗೆ ಸೀಮಿತವಾಗಿರುವ ದರಿಂದ ಹೆಚ್ಚಿನದನ್ನು ಅಪೇಕ್ಷಿಸುವುದು ಸಾಧ್ಯವಿಲ್ಲ.

## ಗ್ರಾಮೀಣ ವೃತ್ತಿಗಳು:

ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು ಇವರಿಂದ ೨೦೦೦ರಲ್ಲಿ ಪ್ರಕಟವಾದ ಈ ಪುಸ್ತಕದಲ್ಲಿ ಆರು ಗ್ರಾಮೀಣ ವೃತ್ತಿಗಳ ಕುರಿತು ಬೇರೆ, ಬೇರೆ ಲೇಖಕರ ಲೇಖನಗಳಿವೆ. ಅದರಲ್ಲಿ ಕುಂಬಾರಿಕೆಯು ಒಂದು. ಡಾ. ದುಗ್ಗಪ್ಪ ಕಜೆಕಾರರು ಬರೆದ 'ಕುಂಬಾರಿಕೆ ದಕ್ಷಿಣ ಕನ್ನಡದ ವ್ಯಾಪ್ತಿ'ಯಲ್ಲಿನ ಲೇಖನದಲ್ಲಿ ಕುಂಬಾರಿಕೆಯ ಸುಮಾರು ೩೦ ತುಳು ಶಬ್ಧಗಳಿಗೆ ಕನ್ನಡದಲ್ಲಿ ಅರ್ಥ ವಿವರಣೆ ನೀಡಿದ್ದಾರೆ. ಭಾಷಾಧ್ಯಯನಕಾರರಿಗೆ ಇದೊಂದು ಉಪಯುಕ್ತ ಮಾಹಿತಿ ಎಂದು ಹೇಳಬಹುದು.

## ಗ್ರಾಮೀಣ ಗೃಹ ವಸ್ತುಗಳು:

ಡಾ. ಪಿ.ಆರ್. ತಿಪ್ಪೇಸ್ವಾಮಿಯವರು ಬರೆದ ಈ ಪುಟಾಣಿ ಪುಸ್ತಕ, ಮಕ್ಕಳಿಂದ ಮುದುಕರವರೆಗೆ ಓದಬಹುದಾದ ಸೊಗಸಾದ ಪುಸ್ತಕ. ಗ್ರಾಮೀಣ ಗೃಹ ವಸ್ತುಗಳ ಕುರಿತು ಅನೇಕ ರೋಚಕ ವಿಷಯಗಳು ಇದರಲ್ಲಿ ಅಡಕವಾಗಿವೆ. ಶ್ಯಾವಗಿ ಮಣಿ, ಒರಳು, ಒನಕೆಯಿಂದ ಮೊದಲು ಮಾಡಿ ಗೃಹೋಪಯೋಗಿ ಮಡಕೆಗಳಾದ ಕೊಡ, ಬಿಂದಿಗೆ ಬಾನಿ, ಹರಿವೆ, ಮೊದಲಾದ ಮಣ್ಣಿನ ವಸ್ತುಗಳ ನಿರೂಪಣೆಯನ್ನು ಗಾದೆ, ಕವಿಸೂಕ್ತಿಗಳ ಮೂಲಕ

ವಿವರಿಸಿರುವ ಅವರ ಶೈಲಿ ಮನಸೆಳೆಯುತ್ತಿದೆ. ವಸ್ತು ವಿಷಯ ವಿವರಣೆಯ ಈ ಕಿರುಪುಸ್ತಕ ಕುಂಭಕಲೆಯ ಮೇಲೆ ಬೆಳಕು ಚೆಲ್ಲುತ್ತದೆ. ನೇರವಾಗಿ ಕುಂಭಪದಕೋಶದ ಅರ್ಥಗಳಿಲ್ಲದಿದ್ದರೂ ಹಲವಾರು ಮಡಕೆಗಳ ವಿವರಣೆ, ಚಿತ್ರ ಸಮೇತವಿದೆ. ವಾಡೆ, ಅಳಗ, ಹಚ್ಚೆಕುಡಿಕೆ, ತುಪ್ಪದಕುಡಿಕೆ ಉತ್ತರಕನ್ನಡ ಜಿಲ್ಲೆಯಲ್ಲಿ ಕಾಕಂಬಿಯನ್ನು ತುಂಬಿಡುವ ಮಣ್ಣಿನ ಕೊಡ, ಬಳ್ಳಾರಿ ಪ್ರದೇಶದಲ್ಲಿ ದೊಡ್ಡಾಟದ ಸಮಯದಲ್ಲಿ ರಾತ್ರಿ ಬಳಸುತ್ತಿದ್ದ ಮಣ್ಣಿನ ದೀಪ ಹೀಗೆ ಹಲವಾರು ಮಡಕೆಗಳ ಪೂರ್ಣವಿವರ ಇದರಲ್ಲಿದೆ. ಸಮೀಕ್ಷೆ ಮಾಡಿ ಬರೆದ ವಸ್ತು ವಿಷಯ ವಿಜ್ಞಾನದ ಕಿರುಪುಸ್ತಕವಿದು.

ಲೇಖಕರು, ಗಡಿಗೆ ಮಡಿಕೆಯ ಕುರಿತು ಹೇಳಿರುವ ವ್ಯತ್ಯಾಸವನ್ನು ಮಾತ್ರ ಒಪ್ಪಲು ಸಾಧ್ಯವಿಲ್ಲ. ಬಹುಶಃ ಆ ಕುರಿತಂತೆ ಹೆಚ್ಚು ಆಳವಾಗಿ ವಿಚಾರಮಾಡಲು ಅವರು ಹೋದಂತಿಲ್ಲ. ಗಡಿಗಿ, ಮಡಕೆ, ಸ್ವಾರಿ ಈ ಮೂರು ಸಮಾನಾರ್ಥಪದಗಳು ಈ ಕುರಿತು ಮುಂದೆ ವಿವರಿಸಲಾಗಿದೆ.

**ಶಂಕರ ವ್ಹಿ. ಕುಂಬಾರವರ ಎಂ.ಫಿಲ್ ಪ್ರಬಂಧ:**

ಈ ಪ್ರಬಂಧದಲ್ಲಿ ಬೀದರ್ ಜಿಲ್ಲೆಯಲ್ಲಿನ ಗೂಂಜಿ ಕುಂಬಾರ, ಲಾಡಕುಂಬಾರ, ಲಿಂಗಾಯತ ಕುಂಬಾರರ ಬದುಕಿನ ವಿವರಗಳನ್ನು ನೀಡುವದರ ಜೊತೆಗೆ ಆ ಜಿಲ್ಲೆಯಲ್ಲಿನ ಕುಂಬಾರಿಕೆಯ ಪದಗಳಿಗೆ, ವಿವರಣಾತ್ಮಕ ಮಾಹಿತಿಯನ್ನು ಇಡೀ ಒಂದು ಅಧ್ಯಾಯದಲ್ಲಿ ವಿವರಿಸಿದ್ದಾರೆ. ಭಾಷಾವಿಜ್ಞಾನಿಗಳಿಗೆ ಜನಪದ ತಜ್ಞರಿಗೆ, ಅತ್ಯುಪಯುಕ್ತ ಮಾಹಿತಿ ಇಲ್ಲಿ ದೊರೆಯುತ್ತದೆ. ಇಲ್ಲಿನ ಶಬ್ದಗಳನ್ನು ಗಮನಿಸಿದಾಗ ಪ್ರಾದೇಶಿಕ ಭಿನ್ನತೆಯ ಅರಿವಾಗುತ್ತದೆ.

**ಕುಂಬಾರ ಜನಾಂಗ:**

೨೦೦೩.ರಲ್ಲಿ ನಾನೇ ಬರೆದು ಪ್ರಕಟಿಸಿದ ಕುಂಬಾರ ಜನಾಂಗ ೩.೭೬ ಪುಟಗಳ ಪುಸ್ತಕ. ಎರಡು ಮುದ್ರಣಗಳನ್ನು ಕಂಡು ಎರಡು ಪ್ರಶಸ್ತಿಗಳನ್ನು ಪಡೆದ ಕೃತಿ. ಕುಂಬಾರ ಜನಾಂಗದ ಕುರಿತಾಗಿ ಕನ್ನಡದ ಮೊದಲ ತಕ್ಕಮಟ್ಟಿನ ಸಮಗ್ರ ಗ್ರಂಥವು ಕೂಡ. ಕುಂಭ ಪದಕೋಶದ ಕುರಿತು ಪ್ರತ್ಯೇಕ ಅಧ್ಯಾಯವೆ ಇದರಲ್ಲಿದೆ. ಕುಂಬಾರಿಕೆಯ ಸುಮಾರು ೨೦೦ ಶಬ್ದಗಳಿಗೆ ಅರ್ಥವನ್ನು ಕೊಡಲಾಗಿದ್ದು, ಪ್ರತ್ಯೇಕವಾಗಿ ರೇಖಾ ಚಿತ್ರಗಳನ್ನು ಕೊಡಲಾಗಿದೆ. ಸಾಂಸ್ಕೃತಿಕ ಸಂದರ್ಭದ ಮಡಿಕೆಗಳು ಮತ್ತು ಮಣ್ಣಿನ ಮೂರುತಿಗಳ ಬಗೆಗೆ ಚಿತ್ರ ಸಮೇತವಾದ ವಿವರಣೆಗಳನ್ನೊಳಗೊಂಡ ಅಧ್ಯಾಯ ಕೂಡ ಇದೆ. ಕುಂಬಾರಿಕೆ ವೃತ್ತಿಪದ

ಕೋಶದ ಕುರಿತ ಹೆಚ್ಚು ಶಬ್ದಾರ್ಥಗಳನ್ನೊಳಗೊಂಡ ಈ ಪುಸ್ತಕ ವಿದ್ವಾಂಸರ ಗಮನ ಸೆಳೆಯಲು ಕಾರಣವಾಯಿತೆಂದು ಹೇಳಲು ಬಯಸುತ್ತೇನೆ.

**ಕುಂಭಕಲೆ ಮಣ್ಣಿನಲ್ಲಿ ಅರಳಿದ ಕಾವ್ಯ:**

ಇದು ೨೦೦೪ರಲ್ಲಿ ತುಮಕೂರು ಜಿಲ್ಲಾ ಕುಂಬಾರ ಸಂಘದಿಂದ ಪ್ರಕಟವಾದ ನಾನು ಬರೆದ ಸುಮಾರು ೧೯೫ ಪುಟಗಳ ಕುಂಭಕಲೆಯನ್ನು ಮಾತ್ರ ಉದ್ದೇಶವಾಗಿಟ್ಟು ಕೊಂಡು ಬರೆದ ಕೃತಿ. ಕುಂಬಾರಜನಾಂಗದ ಪುಸ್ತಕದಲ್ಲಿನ ಹಲವಾರು ವಿಷಯಗಳನ್ನು ವಿಸ್ತರಿಸಿ ಬರೆಯಲಾಗಿದೆ. ರಾಕುಪಾಟರಿ, ಸ್ಟುಡಿಯೋಪಾಟರಿ, ಗ್ಲೇಸಿಂಗ್, ಮಕ್ಕಳೂ ಕಲಿಯಬಹುದಾದ ಮಣ್ಣಿನ ಕಲೆ ಹೀಗೆ ಹಲವಾರು ಹೊಸ ಅಧ್ಯಾಯಗಳು ಇದರಲ್ಲಿ ಸೇರಿವೆ. ಇದರಲ್ಲಿ ನೇರವಾಗಿ ಕುಂಬಾರಿಕೆಯ ಪದಗಳಿಗೆ ಅರ್ಥ ಕೊಡದಿದ್ದರೂ ಬಗೆ ಬಗೆಯ ಮಡಕೆಗಳ ಕುರಿತು ಚಿತ್ರದೊಂದಿಗೆ ವಿವರಣೆ ಕೊಡಲಾಗಿದೆ.

**ಕುಂಬಾರನ ಹಾಡುಗಳು:**

ಇದು ಹರಿಹರದ ಓ.ಗೂ. ದುಂಡ್ಯೆಪ್ಪ ಕುಂಬಾರವರ 'ಕುಂಬಾರ'ನ ಕುರಿತಾದ ಮೊದಲ ಪದ್ಯಸಂಕಲನ. ಸಹಜವಾಗಿಯೆ ಇದರಲ್ಲಿನ ಎಲ್ಲಾ ಕವನಗಳು ಸಾಕಷ್ಟು ಕುಂಬಾರಿಕೆ ಪದಗಳನ್ನು ಒಳಗೊಂಡಿದೆ.

**ಕುಂಭದೊಳಗಣ ಬಿಂಬ:**

ಹರಿಹರದ ಪರಮೇಶ್ವರ ಕತ್ತಿಗಿಯವರ ಮೂರನೆಯ ಕವನ ಸಂಕಲನ, ಕುಂಬಾರನ ಬದುಕಿನ ಚಿತ್ರಣದ ಕವನಗುಚ್ಚವಿದು. ಕುಂಬಾರಿಕೆಯ ಪದಗಳ ಗೊಂಚಲೆ ಇಲ್ಲಿನ ಕವನಗಳಲ್ಲಿದೆ.

**ಕುಂಬಾರ ದರ್ಶನ:**

೨೦೦೪ರಲ್ಲಿ ಪ್ರಕಟವಾದ ರಾಮಗಿರಿ ಕರಿಸಿದ್ದಪ್ಪ ಕುಂಬಾರ ಅವರು ಬರೆದು ಪ್ರಕಟಿಸಿದ ಸುಮಾರು ೧೫೦ ಪುಟಗಳ ಪುಸ್ತಕ. ಲೇಖಕರೆ ಹೇಳಿಕೊಂಡಿರುವಂತೆ "ಕಾವ್ಯದ ಮೊರೆ ಹೊಕ್ಕು ಕಾವ್ಯಗಳಲ್ಲಿ ಬಳಸಿರಬಹುದಾದ ಕುಂಬಾರರ ನೆಲೆಗಳನ್ನು ಅರಿತುಕೊಂಡು" ಬರೆದ ಕೃತಿ. ಕುಂಬಾರಿಕೆ ಶಬ್ದಕೋಶದ ಕುರಿತಂತೆ ಪ್ರಸ್ತಾಪವಿಲ್ಲ, ದಿನನಿತ್ಯ ಬಳಸುವ ಸುಮಾರು ೧೮ ಕುಂಬಾರಿಕೆಯ ಶಬ್ದಗಳಿಗೆ ಮಾತ್ರ ಅರ್ಥವನ್ನು ಕೊಡಲಾಗಿದೆ.

**ಕುಂಬಾರಿಕೆ ಶಬ್ಧಕೋಶ:**

ನಾನು ಬರೆದಿರುವ ಈ ಶಬ್ಧಕೋಶ ಐದು ಅಧ್ಯಾಯಗಳನ್ನೊಳಗೊಂಡ ವಿವರಣಾತ್ಮಕ ಸಚಿತ್ರ ಕುಂಭ ಪದಕೋಶ. ಕನ್ನಡ-ಕನ್ನಡವಲ್ಲದೆ, ಇಂಗ್ಲೀಷ್-ಕನ್ನಡ ಹಾಗೂ ಇತರೆ ಭಾಷೆಗಳಾದ ತೆಲಗು, ತುಳು, ಮರಾಠಿ ಭಾಷೆಯ ಕುಂಬಾರಿಕೆಯ ಕೆಲವು ಮುಖ್ಯ ಪದಗಳ ಅರ್ಥ ಕೊಡಲಾಗಿದೆ. ಅನುಬಂಧದಲ್ಲಿ ಸಾಂಸ್ಕೃತಿಕ ಮಣ್ಣಿನ ಮೂರುತಿಗಳ ವಿವರ, ಪ್ರಾಚೀನ ಕಾಲದ ಕುಂಭಗಳ ಪರಿಚಯ, ಪವಿತ್ರ ಮಡಕೆಗಳ ಪಟ್ಟಿ, ಕುಂಭಕಲೆ ಕುರಿತಂತೆ ಹಲವಾರು ಉಪಯುಕ್ತ ಮಾಹಿತಿಗಳ ವಿವರ ಕುಂಬಾರನ ಕುರಿತಾದ ಗಾದೆಗಳು ಹಾಗೂ ಕುಂಭಕಲೆಗೆ ಪೂರಕವಾದ ಹಲವಾರು ವಿಷಯಗಳ ವಿವರವನ್ನು ಒಳಗೊಂಡಿದೆ.

ಕನ್ನಡ-ಕನ್ನಡ ಶಬ್ಧಕೋಶದ ಭಾಗದಲ್ಲಿ ಈಗಾಗಲೆ ಪ್ರಕಟವಾಗಿರುವ ಕುಂಭ ಪದ ಕೋಶದ ಬರಹಗಳನ್ನು ಗಮನದಲ್ಲಿಟ್ಟು ಕೊಂಡು ಪ್ರಾದೇಶಿಕ ಭಿನ್ನತೆಯನ್ನು ಗುರುತಿಸಿ, ಶಬ್ದಗಳನ್ನು ಅಕಾರಾದಿಯಾಗಿ ವಿಂಗಡಿಸಿ ಅವುಗಳನ್ನು ಅರ್ಥೈಸಲಾಗಿದೆ. ನಾಮಪದ, ಕ್ರಿಯಾಪದಗಳನ್ನು ಸೂಚಿಸಲಾಗಿದೆ. ಸಂದರ್ಭಾನುಸಾರ, ಕವಿಸೂಕ್ತಿ, ವಚನ, ಗಾದೆಯನ್ನು ಕೊಟ್ಟು ಚಿತ್ರಗಳೊಂದಿಗೆ ಅರ್ಥವನ್ನು ವಿವರಿಸಿರುವದರಿಂದ ಓದುಗರಿಗೆ ಇದು ಹಿಡಿಸಬಹುದೆಂದು ನನ್ನ ವಿಶ್ವಾಸ. ಚಿತ್ರಗಳೆ ಇಲ್ಲಿ ಅರ್ಥವನ್ನು ಬಿಚ್ಚಿಡುತ್ತವೆ. ಅದೆ, ಈ ಶಬ್ದಕೋಶದ ವೈಶಿಷ್ಟ್ಯ ಕೂಡ ಚಿತ್ರಗಳು ವೃತ್ತಿಪದಕೋಶದ ಕೈಗನ್ನಡಿ. ಮಣ್ಣಿನ ಕೊಡವನ್ನಾಗಲಿ, ಬಿಂದಿಗೆಯನ್ನಾಗಲಿ, ಅಥವಾ ಗಡಿಗೆಯನ್ನಾಗಲಿ, ಶಬ್ದಗಳಿಂದ ಎಷ್ಟು ವರ್ಣಿಸಿದರೂ ಚಿತ್ರ ನೋಡಿದಾಗ ಥಟ್ಟನೆ ಆಗುವ ಅನುಭವ ಆಗಲಾರದು ಗಡಿಗೆ, ದುಂಡಗೂ ಅಲ್ಲ, ಗೋಲವೂ ಅಲ್ಲ, ಚೌಕವೂ ಅಲ್ಲ, ಆಯತವೂ ಅಲ್ಲ, ಅದೊಂದು ವಿಶಿಷ್ಟ ಆಕೃತಿ. ಚಿತ್ರ ಮಾತ್ರ ಅದನ್ನು ಸ್ಪಷ್ಟಗೊಳಿಸಬಲ್ಲದು. ಅದು ಶಬ್ದಕ್ಕೆ ಮೀರಿದ್ದು. ವೃತ್ತಿ ಪದಕೋಶಕ್ಕೆ ಬೇಕಾದ ಇನ್ನೊಂದು ಮುಖ್ಯ ವಿಷಯವೆಂದರೆ, ವಸ್ತು ವಿಷಯ ಜ್ಞಾನ. ಈ ದಿಶೆಯಲ್ಲಿ ನಾನು ನ್ಯಾಯ ಒದಗಿಸಿರುವೆನೆಂದು ನನ್ನ ಭಾವನೆ.

ಕುಂಬಾರಿಕೆಯ ಪದಗಳನ್ನು ಸ್ಥೂಲವಾಗಿ ಎರಡು ವಿಧವಾಗಿ ವಿಂಗಡಿಸಬಹುದು:

೧. ಉತ್ಪಾದನ ಕ್ರಿಯೆಗೆ ಸಂಬಂಧಿಸಿದ ಪದಗಳು

೨. ಉತ್ಪಾದಿತ ವಸ್ತುಗಳ ಪದಗಳು

**ಉತ್ಪಾದನೆ ಕ್ರಿಯೆಗೆ ಸಂಬಂಧಿಸಿದವುಗಳು:**

ಮಡಕೆ ಗೇಯುವ ತಿಗುರಿ, ಮಡಕೆ ತಟ್ಟುವ ಕಲ್ಲು ಸೊಳ, ಮಡಕೆ ಸುಡುವ ಆವಿಗೆ ಮುಂತಾದ ಸಾಧನ ಸಲಕರಣೆಗಳು. ಈ ಪದಗಳು ಕುಂಬಾರರ ವಲಯದಲ್ಲಿ ಮಾತ್ರ ಹೆಚ್ಚು ಪರಿಚಿತವಾದವುಗಳು.

**ಉತ್ಪಾದಿತ ವಸ್ತುಗಳ ಪದಗಳು:**

ಮೇಲಿನದಕ್ಕಿಂತ ಇದರ ವಲಯ ದೊಡ್ಡದು. ಉತ್ಪಾದಿತ ವಸ್ತುಗಳು ಜನರ ಬಳಕೆಗೆ ಬೇಕಾಗಿರುವದರಿಂದ ಸಹಜವಾಗಿಯೆ, ಈ ಪದಗಳ ಚಲಾವಣೆಯ ವ್ಯಾಪ್ತಿಯು ಹೆಚ್ಚು. ಇದರಲ್ಲಿ ಎಲ್ಲಾ ಬಗೆಯ ಕುಂಭ ವಸ್ತುಗಳು ಒಳಗೊಂಡಿವೆ. ಉದಾ: ಕೊಡ, ಬಿಂದಿಗೆ, ಹರಿವೆ, ಕುಡಿಕೆ, ಪಣತಿ ಇತ್ಯಾದಿ.

**ಮಡಕೆಗಳ ಬಳಕೆಗನುಗುಣವಾದ ವರ್ಗೀಕರಣ:**

ಇದನ್ನು ಮುಖ್ಯವಾಗಿ ನಾಲ್ಕು ವಿಧವಾಗಿ ವಿಂಗಡಿಸಬಹುದು.

೧. ಘನ ಪದಾರ್ಥಗಳನ್ನು ತುಂಬಿಡುವ ಕುಂಭ ವಸ್ತುಗಳು

೨. ದ್ರವ ಪದಾರ್ಥಗಳನ್ನು ತುಂಬಿಡುವ ಕುಂಭ ವಸ್ತುಗಳು

೩. ಆಹಾರ ಬೇಯಿಸುವ ಪಾತ್ರೆಗಳು

೪. ಸಾಂಸ್ಕೃತಿಕ ಸಂದರ್ಭದ ಮಡಕೆಗಳು

**ಘನ ಪದಾರ್ಥಗಳನ್ನು ತುಂಬಿಡುವ ಕುಂಭ ವಸ್ತುಗಳು:**

ದವಸಧಾನ್ಯಗಳನ್ನು ತುಂಬಿಡುವ ವಾಡೆ, ಅಡುಗೆಮನೆಯಲ್ಲಿ ನಿತ್ಯದ ಉಪಯೋಗಕ್ಕೆ ದವಸ ಧಾನ್ಯ ತುಂಬಿಡುವ ಅಡಕಲುಗಡಿಗೆ, ಉಪ್ಪಿನ ಪಳ್ಳಿ, ಬೆಲ್ಲದ ಬಾನಿ, ಇತ್ಯಾದಿ.

**ದ್ರವ ಪದಾರ್ಥ ತುಂಬಿಡುವ ಕುಂಭ ವಸ್ತುಗಳು:**

ನೀರು ತುಂಬಿಡುವ ಹರಿವೆ, ನೀರು ಕಾಯಿಸುವ ಪಚೇಲಿ, ನೀರು ತರುವ ಕೊಡ, ಬಿಂದಿಗೆ, ಹಾಲಿನ ಮಗಿ, ತುಪ್ಪದ ಕುಡಿಕೆ, ಎಣ್ಣೆಯ ಕುಡಿಕೆ, ತತ್ರಾಣಿ ಇತ್ಯಾದಿ. ಈ ವರ್ಗದಲ್ಲಿ ಸೇರಲ್ಪಡುತ್ತವೆ.

ಕೆಲವು ಮಣ್ಣಿನ ಪಾತ್ರೆಗಳು ಹಲವು ಬಗೆಯ ಗೃಹೋಪಯೋಗಿ ಕೆಲಸಕ್ಕೆ ಬಳಸಲ್ಪಡುತ್ತವೆ. ಉದಾ: ಹರಿವೆ, ನೀರನ್ನು ತುಂಬಿಡಲು ಬಳಸುವರಲ್ಲದೆ ದವಸಧಾನ್ಯಗಳನ್ನು ಕೂಡಾ ತುಂಬಿಡಲು ಬಳಸುವರು. ಬಾನಿಯನ್ನು, ದನಕರುಗಳಿಗೆ ನೀರು ಕುಡಿಯಲು ಹಾಗೂ ಚಿಕ್ಕ ಬಾನಿಗಳನ್ನು ಮುಸುರಿ ಬಾನಿಯಾಗಿ, ಅಡುಗೆಮನೆಯಲ್ಲಿ ಉಪಯೋಗಿಸುವರು. ಅನೇಕ ಕಡೆ ಬೆಲ್ಲ ಹಾಕಿಡಲು, ಧಾನ್ಯಗಳನ್ನು ತುಂಬಿಡಲು ಕೂಡಾ ಬಾನಿಯನ್ನು ಬಳಸುವರು, ಗಡಿಗೆಯನ್ನು ಅದರ ಉಪಯೋಗಕ್ಕೆನುಗುಣವಾಗಿ ಬೇರೆ, ಬೇರೆ ಹೆಸರುಗಳಿಂದ ಕರೆಯಲಾಗುತ್ತದೆ. ಉದಾ: ಅನ್ನದ ಮಡಕೆ, ನೀರಿನಗಡಿಗೆ, ಸಾರಿನ ಗಡಿಗೆ, ಪಲ್ಯ ಚಟಿಗೆ, ಮಜ್ಜಿಗೆ ಸ್ವಾರೆ, ಮೊಸರಿನ ಚಟಗಿ, ಇತ್ಯಾದಿ.

**ಸಾಂಸ್ಕೃತಿಕ ಸಂದರ್ಭದ ಮಡಕೆಗಳು:**

ಇವುಗಳನ್ನು ಪವಿತ್ರ ಮಡಕೆಗಳೆಂದು ಹೆಸರಿಸಬಹುದು. ಮದುವೆಯ ಸಂದರ್ಭದ ಐರಾಣಿ ಗಡಿಗೆ, ಕೇಲು, ಗುಗ್ಗಳ ಕೊಡ, ಶುಭಕಾರ್ಯಗಳಲ್ಲಿ ಸ್ಥಾಪಿಸುವ ಮಂಗಳಘಟ, ಗೌರಿ ಹಬ್ಬದ ಗೌರಿ ಗಡಿಗೆ, ಊರದೇವರ ಜಾತ್ರೆ, ಉತ್ಸವದ ಸಂದರ್ಭದಲ್ಲಿ ಕುಂಬಾರನ ಮನೆಯಿಂದ ಒಯ್ಯುವ ಗಡಿಗೆ, ಸ್ವಾಮಿಗಳನ್ನು ಗಣ್ಯ ವ್ಯಕ್ತಿಗಳನ್ನು ಸ್ವಾಗತಿಸುವ ಸಂದರ್ಭದಲ್ಲಿ ಉಪಯೋಗಿಸುವ ಕುಂಭ, ಹೀಗೆ ಹಲವಾರು ಪವಿತ್ರ ಗಡಿಗೆಗಳಿವೆ. ಇದಲ್ಲದೆ ಸಾಂಸ್ಕೃತಿಕ ಸಂದರ್ಭದ ಮಣ್ಣಿನ ಮೂರುತಿಗಳು ಇವೆ. ಅವುಗಳಲ್ಲಿ ಮುಖ್ಯವಾಗಿ ಗಣೇಶ, ಮಣ್ಣೆತ್ತು, ಜೋಕುಮಾರ, ಗುಳ್ಳವ್ವ, ಗೊಗ್ಗವ್ವ ಇತ್ಯಾದಿ.

ಮೇಲಿನ ವರ್ಗೀಕರಣವಲ್ಲದೆ ವರ್ಣಕ್ಕನುಗುಣವಾಗಿ ಕಪ್ಪು, ಕೆಂಪು ಮತ್ತು ಬೂದು ಬಣ್ಣದ ಮಡಕೆಗಳೆಂದು ಕೂಡ ವಿಂಗಡಿಸಬಹುದಾಗಿದೆ. ಪ್ರಾಚ್ಯ ಶಾಸ್ತ್ರಜ್ಞರು ಮಡಕೆಗಳ ಬಣ್ಣದ ವರ್ಗೀಕರಣಕ್ಕೆ ಹೆಚ್ಚಿನ ಮಹತ್ವ ಕೊಟ್ಟಿರುವುದು ತಿಳಿದು ಬರುತ್ತದೆ. ಆಕೃತಿಗನುಗುಣವಾಗಿ ದುಂಡು ಗಡಿಗೆ, ಮೊಟ್ಟೆ ಆಕೃತಿಯ ಗಡಿಗೆ, ಮೊಗ್ಗಿನಾಕೃತಿಯ ಗಡಿಗೆ ಎಂತಲೂ ವಿಂಗಡಿಸಬಹುದಾಗಿದೆ. ಬಾಯಿ, ಕಂಠಕ್ಕನುಸಾರವಾಗಿ ಕೂಡ ವರ್ಗೀಕರಣ ಇದೆ. ಇವು ಹೆಚ್ಚಾಗಿ ಪ್ರಯೋಗದಲ್ಲಿಲ್ಲ. ವೃತ್ತಿ ಪದಕೋಶಗಳಲ್ಲಿ ಸಾಮಾನ್ಯವಾಗಿ ವರ್ಗೀಕರಣ ಮಾಡುವ ರೂಢಿ ಬೆಳೆದು ಬಂದಿದೆಯಾದರೂ, ನಾನು ಆ ರೀತಿ ಈ ಶಬ್ದಕೋಶದಲ್ಲಿ ವರ್ಗೀಕರಣ ಮಾಡಿಲ್ಲ, ಅದಕ್ಕೆ ಮುಖ್ಯ ಕಾರಣವೆಂದರೆ, ಸಾಮಾನ್ಯ ನಿಘಂಟಿನ ಸ್ವರೂಪ ಉಳಿಯಲೆಂಬುದು, ಕುಂಬಾರಿಕೆಯ ಪದಗಳ ಸಂಖ್ಯೆ ಕೂಡ ಕಡಿಮೆ, ಎಲ್ಲಾ ಸೇರಿದರೂ ಐದುನೂರರ ಗಡಿ ಕೂಡಾ ದಾಟಲಾರದು, ಹೀಗಾಗಿ ವರ್ಗೀಕರಣದ

ಅಗತ್ಯವಿಲ್ಲವೆಂಬುದು ನನ್ನ ಭಾವನೆ. ವರ್ಗೀಕರಣ ಮಾಡದಿರುವುದರಿಂದ ಈ ಪದಕೋಶಕ್ಕೆ ಯಾವುದೇ ಬಾಧೆಯಾಗಿಲ್ಲ. ವಿಸ್ತಾರವಾದ ಪೀಠಿಕೆ ವೃತ್ತಿ ಪದಕೋಶಗಳಿಗೆ ಬಹಳ ಅಗತ್ಯ ಅದನ್ನೇ ನಾನು ಇಲ್ಲಿ ಅನುಸರಿಸಿರುವೆ.

**ಗಡಗಿ, ಮಡಕೆ, ಸೋರೆ:**

ಅನೇಕರು ಗಡಗೆ, ಮಡಕೆ, ಸ್ವಾರಿಗೆ ವ್ಯತ್ಯಾಸವನ್ನು ಕಲ್ಪಿಸಿರುವದುಂಟು, ಗಡಗೆ ಬಾಯಿ ದೊಡ್ಡದು, ಮಡಕೆ ಬಾಯಿ ಸಣ್ಣದು ಎಂದು ಎನ್ನುವದು ಕೆಲವರ ಅಭಿಪ್ರಾಯ. ಇದರಲ್ಲಿ ಯಾವುದೇ ಹುರುಳಿಲ್ಲ. ಈ ಮೂರೂ ಸಮಾನಾರ್ಥ ಪದಗಳು, ಗಡಿಗೆ-ಮಡಿಕೆ ಜೋಡು ನುಡಿಯಾಗಿಯು ಬಳಕೆಯಲ್ಲಿದೆ. ಗಡಿಗೆ, ಮಡಕೆ ಇವೆರಡೂ ಪದಗಳು ಕರ್ನಾಟಕದಾದ್ಯಂತ ಪರಿಚಿತ ಪದಗಳು. ಆದರೆ ಗಡಿಗೆ ಎನ್ನುವುದು ಉತ್ತರ ಕರ್ನಾಟಕ, ಹೈದರಾಬಾದ ಕರ್ನಾಟಕದಲ್ಲಿ ಹೆಚ್ಚು ಬಳಕೆಯಲ್ಲಿರುವುದು ತಿಳಿದುಬರುತ್ತದೆ. ಸೋರೆ ಸ್ವಾರಿ, ಎನ್ನುವ ಪದ ಉತ್ತರ ಕರ್ನಾಟಕ ಬಳ್ಳಾರಿ, ಚಿತ್ರದುರ್ಗ, ದಾವಣಗೆರೆ, ಹಾವೇರಿ, ಗದಗ ಪ್ರದೇಶದಲ್ಲಿ ಬಳಕೆಯಲ್ಲಿದೆ.

ಗಡಿಗೆ, ಮಡಕೆ, ಸೋರೆ ಪದಗಳಲ್ಲದೆ, ಕುಂಭ, ಭಾಂಡೆ, ಪಾತ್ರೆ ಎನ್ನುವ ಹೆಸರುಗಳು ಕೂಡ ಬಳಕೆಯಲ್ಲಿವೆ. ಕುಂಭ ಎನ್ನುವುದು ಪವಿತ್ರ ಮಡಕೆಯಾಗಿ ಹೆಚ್ಚಿನ ಚಲಾವಣೆ ಯಲ್ಲಿದೆ. ಕುಂಬಾರರ ಮನೆಗೆ 'ಕುಂಭ ಕೊಡ್ರಿ' ಎಂದು ಕೇಳಲು ಜನರು ಬರುವುದು ಕೂಡ ಉಂಟು. ಪಾತ್ರೆ ಎನ್ನುವದು ಕೂಡ ಮಣ್ಣಿನ ಮಡಕೆಗಳಿಗೆ ಪರ್ಯಾಯವಾಗಿ ಚಲಾವಣೆ ಯಲ್ಲಿದೆಯಾದರೂ, ಬಹಳ ಕಡಿಮೆ ಎಂದು ಹೇಳಬಹುದು.

ಗಡಿಗೆ ಮತ್ತು ಮಡಕೆಗಳನ್ನು ಪ್ರಾಚೀನದಿಂದ ಅರ್ವಾಚೀನದವರೆಗಿನ ಅನೇಕ ಕವಿಗಳು, ವಚನಕಾರರು, ದಾಸರು, ತತ್ವ ಪದಕಾರರು ತಮ್ಮ ಸಾಹಿತ್ಯದಲ್ಲಿ ಉಪಮೆ, ರೂಪಕ, ಪ್ರತಿಮೆ, ಸಂಕೇತವಾಗಿ ವಿಪುಲವಾಗಿ ಬಳಸಿದ್ದಾರೆ. ಮಡಕೆ ಶಬ್ದ ಗಡಿಗೆಗಿಂತ ಹೆಚ್ಚು ಗ್ರಂಥಸ್ಥವಾಗಿರುವುದು ಕಂಡು ಬರುತ್ತದೆ. ಘಟ ಮತ್ತು ಕುಂಭ ಈ ಪದಗಳು ಕೂಡ ಹೆಚ್ಚು ಗ್ರಂಥಸ್ಥವಾಗಿರುವುದು ತೋರುತ್ತದೆ. ಸೋರೆ ಹೆಚ್ಚು ಗ್ರಂಥಸ್ಥವಾಗಿಲ್ಲ. ಇವು ಗಮನಿಸಬೇಕಾದ ಅಂಶಗಳು.

''ಅಡಕಿಲ ಮಡಕೆಗಳ ಸಯ್ತಿಡಲರುವುವೆ ನಾಯ್ಗಳೊಡೆವುವಲ್ಲವೆ?'' (ನಯಸೇನ)

''ಮಡಕೆ ಮಾಡುವಡೆ ಮಣ್ಣೆ ಮೊದಲು' (ಬಸವಣ್ಣ)

''ಮಡಕೆಯುಣ ಕಲಿತಾಡಾರು ಜೀವಿಪರು?'' (ರಾಘವಾಂಕ)

''ಒಡಕು ಮಡಕೆಯು ಹೊಲ್ಲ ಕುಡಕ ನೆರೆಹೊಳು ಹೊಲ್ಲ'' (ಸರ್ವಜ್ಞ)

''ಮರ್ಮವಿಲ್ಲದ ಮಾತು ಒಡ ಮಡಕೆಯ ತೂತು'' (ಕನಕದಾಸರು)

''ಗಡಿಗೆ ಗುಡವನ ನುಂಗಿತ್ತು
ಅಡಿಯ ಲಿರ್ದ ಕುಡಿಕೆ ಆ ಉಭಯವನುಂಗಿತ್ತು'' (ಗುಪ್ತ ಮಂಚಣ್ಣ)

''ತುಪ್ಪದ ಗಡಿಗೆಯಂತೆ ಇದು ಹಸನಲ್ಲ'' (ಮೋಳಿಗೆ ಮಾರಯ್ಯ)

''ನಮ್ಮ ನಾಗರಿಕತೆಯ ಕತೆ ಹಿರಿದು
ಒಡಕು ಮಡಕೆಗೆ ತುಂಬುತಿರುವಬಣ್ಣದನೀರು'' (ಗೋಪಾಲಕೃಷ್ಣ ಅಡಿಗ)

''ಚಟಿಗಿ ಮುಚುಳ ಬಾನದಗಡಿಗಿ ಬಾಳ ಜೋಕ್ರೆ'' (ಶಿಶುನಾಳ ಶರೀಫ)

''ಹಗಲು ಬೆಳಕಿನ ಗಡಿಗೆ
ಒಡೆದು ಚೂರಾಯಿತಿದೋ
ಪಶ್ಚಿಮಾದ್ರಿಯ ಶಿಖರಧರೆಯೊಂದರಲ್ಲಿ'' (ಜಿ.ಎಸ್. ಶಿವರುದ್ರಪ್ಪ)

ಅತ್ತೆ ಒಡದ ಮಡಕೆಗೆ ಮೂರೇಕಾಸು (ಗಾದೆ)

ಗಡಿಗೆ ಹೋಗಿದ್ದಕ್ಕೆ ಮಗೆಕೊಟ್ಟು ಶಾಸ್ತ್ರ ಕೇಳಿದಂತೆ (ಗಾದೆ)

ಅಟ್ಟ ಸ್ವಾರೆ ಅಚೀಕೆ ಬಿತ್ತು
ವಗ್ದಣ್ಣಿ ಸಾರು ಹೇಸ್ರೇಳ್ತು (ಗಾದೆ)

**ಇಂಗ್ಲಿಷ್-ಇಂಗ್ಲಿಷ್-ಕನ್ನಡ:**

ಕುಂಭ ಕಲೆ ಈಗ ಸೆರಾಮಿಕ್ ವಿಜ್ಞಾನದ ಒಂದು ಭಾಗವಾಗಿ ಹೊಸರೂಪವನ್ನು ಹೊತ್ತುಕೊಂಡು ಬೆಳೆಯ ತೊಡಗಿದೆ 'Ceramic is for all' ಎನ್ನುವುದು ಅದರ ವ್ಯಾಪ್ತಿಯನ್ನು ಬಿಂಬಿಸುತ್ತದೆ. ಅನೇಕಕಡೆ ಕುಂಬಾರಿಕೆ ತರಬೇತಿ ಕೇಂದ್ರಗಳು ಅಲ್ಪಾವಧಿ ಹಾಗೂ ದೀರ್ಘಾವಧಿ ಕೋರ್ಸುಗಳನ್ನು ನಡೆಸುತ್ತಿವೆ. ಗುಲ್ಬರ್ಗದ ಶರಣಬಸಪ್ಪ ಅಪ್ಪ ಇಂಜಿನಿಯರಿಂಗ್ ಕಾಲೇಜಿನಲ್ಲಿ ಪ್ರತ್ಯೇಕವಾದ ನಾಲ್ಕು ವರ್ಷ ಅವಧಿಯ ಸೆರಾಮಿಕ್ ಇಂಜಿನಿಯರಿಂಗ್ ಡಿಗ್ರಿ ಕೋರ್ಸಕೂಡಾ ಇದೆ. ಅವರಿಗೆಲ್ಲ ಇದು ನೆರವಾಗಲೆಂಬ ಕಾರಣದಿಂದ ಇಂಗ್ಲಿಷ್, ಇಂಗ್ಲಿಷ್-ಕನ್ನಡ ಶಬ್ದ ಕೋಶವನ್ನು ಕುಂಬಾರಿಕೆ ಶಬ್ದಕೋಶದ ಪುಸ್ತಕದ ಒಂದು ಮುಖ್ಯವಾದ ಭಾಗವಾಗಿ ಸೇರಿಸಲಾಗಿದೆ. ಸೆರಾಮಿಕ್ ವ್ಯಾಪ್ತಿ ದೊಡ್ಡದು,

ಮಣ್ಣಿನ ಮೂಲದ ಎಲ್ಲಾ ವಿಷಯಗಳನ್ನು ಒಳಗೊಂಡ ವಿಜ್ಞಾನವಿದು. ಬರೆದರೆ ಅದೇ ಒಂದು ಬೃಹತ್ತಾದ ನಿಘಂಟಾದೀತು. ನಾನು ಇಲ್ಲಿ ಕುಂಭವಸ್ತುಗಳಿಗೆ ಅಂದರೆ, ಮಡಕೆಗಳಿಗೆ ಮಾತ್ರ ಹೆಚ್ಚಿನ ಆದ್ಯತೆ ಕೊಟ್ಟಿರುವೆ. ಆದರೂ ಅನೇಕ ಶಬ್ದಗಳು ಬಿಟ್ಟು ಹೋಗಿರುವ ಸಾಧ್ಯತೆ ಕೂಡಾ ಇದೆ. ಇಂಗ್ಲಿಷಿನ ಸೆರಾಮಿಕ್ ಪುಸ್ತಕಗಳಲ್ಲಿನ ಗ್ಲಾಸರಿಯನ್ನು ಇದಕ್ಕೆ ಆಧಾರವಾಗಿಟ್ಟು ಕೊಂಡು ಪದಕೋಶವನ್ನು ರಚಿಸಲಾಗಿದೆ.

ತಾಂತ್ರಿಕ ಪದಗಳ ಭಾಷಾಂತರ ಅಷ್ಟು ಸುಲಭವಾದುದಲ್ಲ ಪುಸ್ತಕಗಳ ಕೊರತೆ ಬೇರೆ, ಆದಷ್ಟು ಜಾಗ್ರತೆ ವಹಿಸಿ, ತಾಂತ್ರಿಕ ದೋಷಕ್ಕೆ ಆಸ್ಪದ ಕೊಡದಂತೆ ಬರೆಯಲು ಪ್ರಯತ್ನಿಸಿರುವೆ. ಅನೇಕ ಶಬ್ದಗಳಿಗೆ ನೇರಭಾಷಾಂತರ ಮಾಡಿದರೆ ಒಂದೊಕ್ಕೊಂದು ಅಸ್ಪಷ್ಟತೆ ಆಗುವ ಸಂಭವ ಹೆಚ್ಚು ವಸ್ತು ವಿಷಯ ಜ್ಞಾನವಿಲ್ಲದಿದ್ದರೆ ಪ್ರಮಾಧಗಳಾಗುವ ಸಾಧ್ಯತೆಗಳು ಕೂಡ ಹೆಚ್ಚು

**ಇತರೆ ಭಾಷೆಗಳ ಪದಕೋಶ**

ಇದರಲ್ಲಿ ತುಳು, ತೆಲುಗು ಮತ್ತು ಮರಾಠಿಯ, ಮುಖ್ಯವಾದ ಕುಂಬಾರಿಕೆಯ ಕೆಲವು ಪದಗಳಿಗೆ ಮಾತ್ರ ಅರ್ಥಕೊಡಲಾಗಿದೆ. ಸಾಮಾನ್ಯ ಓದುಗರಿಗೂ ಉಪಯುಕ್ತವಾಗ ಬಹುದು.

ಅನುಬಂಧದಲ್ಲಿ ಕುಂಭ ಕಲೆಗೆ ಪೂರಕವಾದ ಅನೇಕ ಉಪಯುಕ್ತ ಮಾಹಿತಿಗಳನ್ನು ಒದಗಿಸಿದ್ದು ಅವು ಓದುಗರಿಗೆ ರುಚಿಸಬಹುದೆಂದು ನನ್ನ ವಿಶ್ವಾಸ. ಯಾಂತ್ರಿಕಯುಗ, ಇತ್ತೀಚೆಗೆ ಬಂದ ಜಾಗತೀಕರಣದಿಂದಾಗಿ ಒಂದು ಕಡೆ ಹೊಸ ಹೊಸ ಶಬ್ದಗಳು ದಂಡಿಕ್ಕಿರುವಂತೆ ಇನ್ನೊಂದು ಕಡೆ ಪರಂಪರಾನುಗತವಾದ ವೃತ್ತಿಗಳು ನೆಲ ಕಚ್ಚಿದ್ದರಿಂದ, ಸಹಜವಾಗಿಯೆ ಗ್ರಾಮೀಣ ವೃತ್ತಿ ಪದಗಳು ಮರೆಯಾಗ ತೊಡಗಿವೆ. ಹೊಸತು, ಹೊಸತು ಬರಲಿ, ಆದರೆ ಹಳತು ಅಳಿಯ ಬಾರದು ತಾನೆ? ಭಾಷಾ ಶಾಸ್ತ್ರಜ್ಞರ ವೃತ್ತಿಪದ ಕೋಶಕಾರರ ಜರೂರ ಚಿಂತನೆ ಈ ಕುರಿತು ಅಗತ್ಯ.

# ಅಧ್ಯಾಯ ಎರಡು

# ಕನ್ನಡ ಪದಕೋಶ

## ಅ


**ಅಂಬಲಿ ಗಡಿಗೆ (ನಾ)** ಅಂಬಲಿ ಸ್ವಾರಿ, ಅಂಬ್ಲಿ ಗಡಿಗೆ, ಗಂಜಿಗಡಿಗೆ, ಅಂಬ್ಲಿ ಮಡಿಕೆ, ಜೋಳ, ರಾಗಿ ಮತ್ತು ಹುರಳಿ ಅಂಬಲಿ ಮಾಡಲು ಬಳಸುವ ಗಡಿಗೆ. ಉತ್ತರ ಕರ್ನಾಟಕದಲ್ಲಿ ಇದನ್ನು ಹೆಚ್ಚಾಗಿ ಬಳಸುವರು.



"ಅಂಬ್ಲಿ ಮಡಿಕೆ, ಅಮಟೆಕಾಯಿ
ಹಾಲಕ್ಕಿ ಊಟ" (ಹಾಲಕ್ಕಿ ಜನರು ಮಾಡುವ ಊಟ)
(ವಿಷ್ಣು ನಾಯ್ಕ)

ಗಂಜಿಗಡಿಗೆ ಇಳಿಸುವಾಗ ಪಲ್ಯಚಟಿಗೆ ತಯ್ಯಾರ (ತುಳುಗಾದೆ)

**ಅಗ್ಗಿಷ್ಟಿಗೆ (ನಾ)** ಅಗ್ಗಿಟಿಕೆ, ಅಗ್ಗಿಷ್ಟಿ ಕುಮಟಿ, ಅಗ್ನಿ ಕುಂಡ, ಅಂಗಾರದಾನಿಕೆ ಬೆಂಕಿಯನ್ನು ಹೊತ್ತಿಸುವ ಒಂದು ಬಗೆಯ ಒಲೆ.



ಗಡಿಗೆಯ ತಳಭಾಗವನ್ನು ದುಂಡಾಗಿ ಒಡೆದು, ಅದನ್ನು ಬೋರಲಾಗಿಟ್ಟು, ಅದರ ಬಾಯಿಗೆ ಒಂದು ಮುಚ್ಚಳವನ್ನು ಹಾಕಿ, ಅದರ ತುಂಬಾ ಇದ್ದಿಲು ಹಾಕಿ ಕೆಂಡವನ್ನು ಮಾಡುವ ಸಾಧನ. ಪ್ರತ್ಯೇಕವಾಗಿ ಕೂಡ ಅಗ್ಗಿಷ್ಟಿಕೆ ಮಾಡುವರು. ಇದಕ್ಕೆ ಕಾಶ್ಮೀರದಲ್ಲಿ ಕಂಗರ್ ಎಂದೂ ಬೀದರ ಜಿಲ್ಲೆಯಲ್ಲಿ 'ಥಾಳಿ' ಎಂದು ಕರೆಯುವರು. ಇದನ್ನು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಕೊಂಡೊಯ್ಯಬಹುದು. ಚಳಿ ಪ್ರದೇಶದಲ್ಲಿ ಮಲಗುವ ಮಂಚದ ಕೆಳಗೆ ಇದನ್ನು ಇಡುವರು. ಬಾಣಂತಿಯರು, ದಮ್ಮು ಕಾಯಿಲೆಯವರು ಅಗ್ಗಿಷ್ಟಿಗೆ ಕೆಂಡವನ್ನು ಕಾಯಿಸುವರು.


ಅಕ್ಕಸಾಲಿಗರು ಬೆಳ್ಳಿ- ಬಂಗಾರದ ಸಾಮಾನುಗಳನ್ನು ತಯಾರಿಸಲು ಬಳಸುವರು.

''ಅಗ್ಗಿಷ್ಟಿಕೆಯಲ್ಲಿ ಹೊಗೆ ಯಾಡಿದಂತೆ
ಹೆಡೆಯಾಡುವುದು ಕಿರುಕುಳ'' (ರಾಗೌ)

ಅಕ್ಕಸಾಲಿ ಮಾಡಿದ್ದು ಅಗ್ಗಿಷ್ಟಿಕೆಗೆ
ಅಗಸ ಮಾಡಿದ್ದು ಬಟ್ಟೆಗೆ. (ಗಾದೆ)

**ಅಗೋಳಿ (ನಾ)** ಅನ್ನ ಬೇಯಿಸಲು ಬಳಸುವ ಅಗಲ ಬಾಯಿಯ ಗಡಿಗೆ. ದಕ್ಷಿಣ ಕನ್ನಡದಲ್ಲಿ ಈ ಪದ ವಿಶೇಷವಾಗಿ ಪ್ರಯೋಗದಲ್ಲಿದೆ.


**ಅಚ್ಚು (ನಾ, ಕ್ರಿ)** ಮುದ್ರೆ, ಪಡಿಅಚ್ಚು (a seal, a mark) ಅಚ್ಚೊತ್ತು ಮಣ್ಣಿನಲ್ಲಿ, ಮರದಲ್ಲಿ, ಲೋಹದಲ್ಲಿ ಮತ್ತು ಪ್ಲಾಸ್ಟಿಕ್ ಆಫ್ ಪ್ಯಾರಿಸ್‌ನಲ್ಲಿ ತಮಗೆ ಬೇಕಾದ ಆಕಾರವನ್ನು ಕೊರೆದುಕೊಂಡು ಪಡಿಯಚ್ಚನ್ನು ತಯಾರಿಸುವರು. ಮಧ್ಯಭಾಗದಲ್ಲಿ ಸ್ವಲ್ಪ ತಗ್ಗಾಗಿರುವ ಮುಚ್ಚಳದಂತಹ ಒಂದು ಅಚ್ಚನ್ನು ತಯಾರಿಸಿ ಕೊಂಡು ವಿಶೇಷವಾಗಿ ಕುಂಬಾರ ಹೆಣ್ಣು ಮಕ್ಕಳು ವಿವಿಧ ಪ್ರಕಾರದ ಮಡಿಕೆ ಮತ್ತು ಮುಚ್ಚಳಗಳನ್ನು ತಯಾರಿಸುವರು. ವಿವಿಧ ವಿಗ್ರಹ, ಆಟಿಕೆ ಸಾಮಾನುಗಳನ್ನು ತಯಾರಿಸಲು ಅಚ್ಚುಗಳನ್ನು ಬಳಸುವರು. ಅಚ್ಚಿಗೂ, ಮುಚ್ಚಳಕ್ಕು ಹೆಚ್ಚಿನ ವ್ಯತ್ಯಾಸವಿಲ್ಲ, ಅಚ್ಚಿನ ಒಳತಳ ಮುಚ್ಚಳಕ್ಕಿಂತ ಆಳವಾಗಿರುತ್ತದೆ. ಅಚ್ಚಿಗೆ ದಿಂಡು ಇರುವದಿಲ್ಲ, ಬೋಳಾಗಿರುತ್ತದೆ. ಕುಂಬಾರರು ಮಡಕೆಗಳಿಗೆ ಅಲಂಕರಣ ಮಾಡಲು ಎತ್ತಿನ ಕೊಂಬಿನ ಚಿಕ್ಕ ತುಂಡಿನಲ್ಲಿ ಇಲ್ಲವೆ ಮಣ್ಣಿನ ತುಂಡಿನಲ್ಲಿ ಎಲೆ, ಹೂ ಮೊದಲಾದ ಅಚ್ಚುಗಳಿಂದ ಮಡಕೆ ಹಸಿ ಇದ್ದಾಗ ಈ ಅಚ್ಚುಗಳನ್ನು ಒತ್ತಿ ಅಲಂಕಾರ ಮಾಡುವರು. ಸೊಳದಲ್ಲಿ ರಂಧ್ರ ಕೊರೆದು ಅಚ್ಚು ಸಿಕ್ಕಿಸಿ ಮಡಕೆಯ ಮೇಲೆ ಒತ್ತುವದು ಹೆಚ್ಚು ಬಳಕೆಯಲ್ಲಿದೆ. ಪ್ರಾಚ್ಯ ಶಾಸ್ತ್ರಜ್ಞರಾದ ಅ. ಸುಂದರ ಅವರು ನಡೆಸಿದ ಬೆಳಗಾವಿ ಜಿಲ್ಲೆಯ ವಡಗಾಂವ್ ಮತ್ತು ಮಾಧವಪುರ ಉತ್ಖನನದಲ್ಲಿ ಸಣ್ಣ ನಾಣ್ಯಗಳನ್ನು ತಯಾರಿಸುತಿದ್ದ ಸುಟ್ಟ ಮಣ್ಣಿನ ಚಪ್ಪಟೆಯ ದುಂಡು ಅಚ್ಚುಗಳು ದೊರೆತಿವೆ.



ಕೊಂಬಿನ ಅಚ್ಚು

ತೀಡೊ ಅಚ್ಚು

**ಅಡಕಲು ಗಡಿಗೆ (ನಾ)** ಒಂದರಮೇಲೊಂದು ಏರಿಸಿಟ್ಟ ಗಡಿಗೆಗಳು. ಗ್ರಾಮೀಣ ಜನರು ಕಾಳು-ಕಡಿ ಹಣ ಮತ್ತು ಆಹಾರ ಪದಾರ್ಥಗಳನ್ನು ಹಾಕಿಡಲು



ಗಡಿಗೆಗಳನ್ನು ಒಂದರ ಮೇಲೊಂದು ಏರಿಸಿಡುವರು. ಈ ಅಡಕಲು ೫-೬ ಅಡಿ ಎತ್ತರದವರೆಗೆ ಏರಿಸುವುದರಿಂದ ಅದು ಬೀಳಬಾರದೆಂದು ನೆಲದ ಮೇಲೆ ಸಿಂಬೆಯಾಕಾರದಲ್ಲಿ ಸ್ವಲ್ಪ ತಗ್ಗು ಮಾಡುವರು. ತಳಭಾಗದಲ್ಲಿ ಮೊದಲು ದೊಡ್ಡಗಡಿಗೆ ಗಳನ್ನಿಟ್ಟು ನಂತರ ಗಡಿಗೆಗಳನ್ನು ಏರಿಸುವರು. ಅಡಕಲು ಗಡಿಗೆಯನ್ನು ಅಡುಗೆ ಮನೆ ಇಲ್ಲವೆ ಅಡುಗೆ ಮನೆ ಸಮೀಪದ ಕೋಣೆಯಲ್ಲಿ ಇಡುವರು.

''ಅಡಕಿಲ ಮಡಕೆಗಳಂ ಸಯ್ತಿಡಲರೆವುದೆ ನಾಯ್ಗಳೊಡೆ ವುದಲ್ಲದೆ?'' (ನಯಸೇನ)

ಅಡಕಲಾಗ ಆರು ಕಾಸು ಸೊಂಟದಾಗ ಮೂರು ಕಾಸು (ಗಾದೆ)

ಅಡಿಗಾರ್ (ನಾ) ಅನ್ನ ಬೆಯಿಸುವ ಗಡಿಗೆ, ಇದು ತುಳುಪದ ದಕ್ಷಿಣ ಕನ್ನಡದಲ್ಲಿ ಬಳಕೆಯಲ್ಲಿದೆ.

ಅಡುಮಡಕೆ (ನಾ) ಅಡುಗೆ ಮಾಡುವ ಪಾತ್ರೆ, ಬೆಂಕಿಯಿಂದ ಅಡುಗೆ ಮಾಡುವದಕ್ಕೆ ಅನುಕೂಲವಾದ ವಿಶಿಷ್ಟ ರಚನೆಯ ಮಣ್ಣಿನ ಪಾಕ ಪಾತ್ರೆ. ಕುಕ್ಕ್‌ರ್ (cooker)

ಅಮ್ಮನಗುಳ್ಳಿ (ನಾ) ಗ್ರಾಮ ದೇವತೆಯ ಉತ್ಸವದ ದಿನ ದೇವಾಲಯಕ್ಕೆ ತೆಗೆದುಕೊಂಡು ಹೋಗುವ ಕುಳ್ಳಿ, ಕುಡಿಕೆ, ಕುಡಿಕೆಯ ಕಂಠದ ಕೆಳಗೆ ಪಾದವನ್ನು ಮಾಡುವರು.



ಅರ್ಲು (ನಾ) ಅರಲು, ಜಿಗುಟಾದ ಮಣ್ಣು ನೀರು ಹಾಕಿ ತುಳಿದು ಹದಮಾಡಿಟ್ಟ ಕೆಸರು.

''ಬೆರಳ ಸ್ಪರುಶದಿಂದ ಅರಲು
ಕುಂಭ ಕುಂಭವಾಗುತಿರಲು''
(ಶಂಕರ ಮೋಕಾಶಿ ಪುಣೇಕರ್)

ಅಲ್ಪಿ (ನಾ) ಸುಣ್ಣ, ಹತ್ತಿ, ಆಡಿನ ಹಾಲು ಸೇರಿಸಿ ಮಿಶ್ರಮಾಡಿ ಅರೆದ ಕಣಕ. ಇದನ್ನು ಬಿರುಕು ಬಿಟ್ಟ, ತೂತು ಬಿದ್ದ ಮಡಕೆಗಳಿಗೆ ಹಚ್ಚುವರು. ಮಡಿಕೆ ಒಡೆದರು ಅದು ಕಳಚಿ ಬೀಳುವದಿಲ್ಲ, ಅಷ್ಟು

ಗಟ್ಟಿಯಾಗಿರುತ್ತದೆ. ಈ ಶಬ್ದ ಧಾರವಾಡ, ಹಾವೇರಿ, ದಾವಣಗೆರೆ, ಬಳ್ಳಾರಿ ಜಿಲ್ಲೆಗಳಲ್ಲಿ ಪ್ರಯೋಗದಲ್ಲಿದೆ. ನೋಡಿ-ಕಿಟ್ಟ

ಅವಳಿಗಡಿಗೆ (ನಾ) ದ್ವಿಪಾತ್ರೆ. ಗಡಿಗೆ ಒಂದೆ ಇದ್ದು ಬಾಯಿ ಮಾತ್ರ ಎರಡು, ಇದರಿಂದ ಉರುವಲಿನ ಉಳಿತಾಯವಾಗುವುದು. ಇದರ ಬಳಕೆ ಅಷ್ಟಾಗಿ ಇಲ್ಲ.



ಅಳಗೆ (ನಾ) ದೊಡ್ಡ ಮಡಿಕೆ, ಅಳ್ಗೆ ಈ ಪದ ಮೈಸೂರು ಭಾಗದಲ್ಲಿ ಹೆಚ್ಚಾಗಿ ಬಳಕೆಯಲ್ಲಿದೆ.

## ಆ

ಆಕೃತಿ (ನಾ) ಆಕಾರ, ರೂಪ, ಒಂದು ಆಕೃತಿಯನ್ನು ಅನೇಕ ಬಗೆಯ ವಸ್ತುಗಳಿಂದ ರೂಪಿಸಬಹುದು. ಜೇಡಿಮಣ್ಣಿನಿಂದ ಆಕೃತಿ ರಚಿಸುವರು. ಉದಾ: ಮಣ್ಣಿನಗೊಂಬೆ, ಆಟಿಕೆ ಸಾಮಾನುಗಳು ಇತ್ಯಾದಿ.


ಆಯ (ನಾ) ಆದಾಯ, ವರಮಾನ, ಹುಟ್ಟುವಳಿ, ಹಳ್ಳಿಗಳಲ್ಲಿ ವಂಶ ಪರಂಪರೆಯಿಂದ ಸೇವೆ ಸಲ್ಲಿಸಿಕೊಂಡು ಬಂದಿರುವವರಿಗೆ ಕಣದಲ್ಲಿ ರಾಶಿ ಮಾಡುವಾಗ ನಿರ್ದಿಷ್ಟ ಪ್ರಮಾಣದಲ್ಲಿ ಕೊಡಲ್ಪಡುವ ಧಾನ್ಯ-ವರ್ಷಾಶನ. ಗ್ರಾಮೀಣ ಸಮುದಾಯದ ಒಂದು ಭಾಗವಾಗಿದ್ದ ಕುಂಬಾರನು, ದೈನಂದಿನ ಅವಶ್ಯಕತೆಗೆ ಬೇಕಾದ ಮಡಿಕೆ ಕುಡಿಕೆಗಳನ್ನು ಪೂರೈಸುತ್ತಿದ್ದುದರಿಂದ ಇತರೆ ಕಸಬುದಾರರಂತೆ ಆಯ ಪದ್ಧತಿಗೆ ಒಳಗಾಗಿದ್ದ, ಸುಗ್ಗಿಯ ಕಾಲದಲ್ಲಿ ರೈತರು ಕುಂಬಾರನ ಸೇವೆಗೆ ಪ್ರತಿಯಾಗಿ ತಾವು ಬೆಳೆದ ದವಸ ಧಾನ್ಯಗಳನ್ನು ಆಯ ರೂಪದಲ್ಲಿ ಕೊಡುತ್ತಿದ್ದರು. ಈಗಲೂ ಈ ಪದ್ಧತಿ ಹಳ್ಳಿಗಳಲ್ಲಿ ಇದೆ. ಆಯ ಪದ್ಧತಿ ಹಳ್ಳಿಯ ಕಂಬಾರ, ಬಡಿಗ, ಮುಂತಾದ ಕಸಬುದಾರರಿಗೆ ಹೆಚ್ಚಿನ ಆದಾಯವನ್ನು ಒದಗಿಸುತ್ತಿದ್ದರಿಂದ ಇದು ಬಡ ಕಸಬುದಾರರಿಗೆ ನೆಮ್ಮದಿಯ ಜೀವನ ಸಾಗಿಸಲು ಅನುಕೂಲವಾದ

ಪದ್ಧತಿಯಾಗಿತ್ತು. ಈ ಆಯ ಪದ್ಧತಿ ಪ್ರಪಂಚದ ಎಲ್ಲ ಭಾಗಗಳಲ್ಲಿಯೂ ಇದ್ದುದು ತಿಳಿದುಬರುತ್ತದೆ.

ಆಯಾ ಹಾಕುವಾಗಲೇ ನ್ಯಾಯ ಬಂತು (ಗಾದೆ)

**ಆಲುಕ (ನಾ)** ನೀರನ್ನು ಹಾಕಿಡುವ ಸಣ್ಣ ಪಾತ್ರೆ, ಹೂಜಿ

**ಆವಿಗೆ (ನಾ)** ಆವುಗೆ, ಆವಿ, ಕುಂಬಾರನ ಆವಿಗೆ, ಕುಂಬಾರನು ಮಡಿಕೆಗಳನ್ನು ಸುಡಲು ಉಪಯೋಗಿಸುವ ಒಲೆ-ಭಟ್ಟಿ ಕುಂಬಾರಿಕೆಯ ಮೂಲಭೂತ ಅವಶ್ಯಕತೆಗಳಲ್ಲಿ ಆವಿಗೆಯು ಮುಖ್ಯ. ಆವಿಗೆಯನ್ನು ಕಲ್ಲು ಮಣ್ಣುಗಳಿಂದ ಇಲ್ಲವೆ ಇಟ್ಟಿಗೆಗಳಿಂದ ಕಟ್ಟುವರು. ಆವಿಗೆಯ ಗಾತ್ರಕ್ಕನುಗುಣವಾಗಿ ಅದರ ಬಾಯಿಗಳಿರುತ್ತವೆ. ಆವಿಗೆ ಚಿಕ್ಕದಾಗಿದ್ದರೆ ಒಂದು ಬಾಯಿ ಮಧ್ಯಮವಾಗಿದ್ದರೆ ಎರಡು ಬಾಯಿಗಳು ಮತ್ತೂ ದೊಡ್ಡದಾಗಿದ್ದರೆ ಮೂರು ಬಾಯಿಗಳಿರುತ್ತವೆ. ಆವಿಗೆಗಳನ್ನು ಸಾಮಾನ್ಯವಾಗಿ ಆಯತಾಕಾರದಲ್ಲಿ ಮತ್ತು ವೃತ್ತಾಕಾರದಲ್ಲಿ ಕಟ್ಟುವರು.



೧. ಆಯತಾಕಾರದ ಆವಿಗೆ ಸಾಮಾನ್ಯವಾಗಿ ೪-೫ ಮೀಟರ್ ಉದ್ದವಾಗಿರುವುದು. ಮುಂಭಾಗದಲ್ಲಿ ಕಡಿಮೆ ಅಗಲವೂ ಹಿಂಭಾಗದಲ್ಲಿ ಹೆಚ್ಚು ಅಗಲವೂ ಆಗಿರುವುದು. ಅಂದರೆ ಮುಂಭಾಗದಲ್ಲಿ ಸುಮಾರು ೨.೫ ಮೀಟರ್ ಅಗಲವಿರುವುದು. ಹಿಂಭಾಗದಲ್ಲಿ ೪ ಮೀಟರ್ ಅಗಲ ಇರುವುದು. ಮುಂಭಾಗದ ಬಾಯಿಯ ಹತ್ತಿರದ ಗೋಡೆ ೨ ಮೀ ರಿಂದ ೧.೫ ಮೀಟರ್ ಎತ್ತರವಾಗಿದ್ದರೆ ಹಿಂಭಾಗಕ್ಕೆ ಎತ್ತರ ಕಡಿಮೆಯಾಗುತ್ತ ಹೋಗಿ ೦.೭೫ ಮೀಟರ್‌ಗೆ ನಿಲ್ಲುತ್ತದೆ.

೨. ವೃತ್ತಾಕಾರದ ಆವಿಗೆ ವರ್ತುಲಾಕಾರದಲ್ಲಿ ಇದ್ದು ಸುಮಾರು ೨ ಮೀಟರ್ ಎತ್ತರವಾಗಿರುವುದು.

೩. ವಿದ್ಯುತ್ ಆವಿಷ್ಕಾರವಾದಾಗಿನಿಂದ ವಿದ್ಯುತ್ ಆವಿಗೆಗಳು ಬಳಕೆಗೆ ಬಂದಿವೆ.

೪. ಇತ್ತೀಚಿನ ದಿನಗಳಲ್ಲಿ ಫೈಬರ್ ಕವಚದ ಒಲೆಗಳೂ ಬಂದಿವೆ, ಇವುಗಳನ್ನು ಒಂದು ಸ್ಥಳದಿಂದ ಇನ್ನೊಂದು

ಸ್ಥಳಕ್ಕೆ ಸುಲಭವಾಗಿ ಸಾಗಿಸಬಹುದು. ಅಲ್ಲದೆ ಕೇವಲ ೩-೪ ಗಂಟೆಗಳಲ್ಲಿ ಮಡಕೆಗಳನ್ನು ಸುಡಬಹುದು. ಕ್ರಿ.ಶ. ಪೂರ್ವ ಸುಮಾರು ಒಂದು ಸಾವಿರ ವರ್ಷಗಳ ಪೂರ್ವದಲ್ಲಿ ಕೋರಿಯಾ, ಚೀನಾ, ಜಪಾನ್ ದೇಶಗಳಲ್ಲಿ ಕುಂಬಾರರು ಮಡಕೆಗಳನ್ನು ಸುಡಲು ಆವಿಗೆಯನ್ನು ಬಳಸುತ್ತಿದ್ದರೆಂದು ತಿಳಿದು ಬರುತ್ತದೆ.

೧. ''ಆವಿಗೆಯ ಕಿಚ್ಚಿನಂತೆ ಸುಳಿ ಸುಳಿದು ಬೆಂದೆ'' (ಅಕ್ಕಮಹಾದೇವಿ)

೨. ''ಆವಗೆಯೊಳಗೆ ತಂಪುಗಳುಂಟೆ'' (ಭೀಮ ಕವಿ)

೩. ''ಆವಿಗೆಯ ಬಲು ಗಿಚ್ಚಿನುರಿಯೊಳು ಬೇವ ಮಡಕೆಗಳಂತೆ'' (ಮಹಲಿಂಗರಂಗ)

ಕುಂಬಾರನ ಆವಿಗೆಯಲ್ಲಿ ಚೆಂಬು ಹುಡುಕಿದ ಹಾಗೆ. (ಗಾದೆ)

ಆವಿಗೆ ಇಡು (ಕ್ರಿ) ಆವಿಗೆ ಕಟ್ಟು, ಮಡಿಕೆಗಳನ್ನು ಆವಿಗೆಯಲ್ಲಿಟ್ಟು ಸುಡುವುದು. ಆವಿಗೆ ಕಟ್ಟುವಾಗ ಮೊದಲು ದೊಡ್ಡ ದೊಡ್ಡ ಗಡಿಗೆ, ಹರಿವಾಣ, ಪಚೇಲಿ, ಕೊಡ ಇತ್ಯಾದಿಗಳನ್ನು ಕೆಳಭಾಗದಲ್ಲಿ ಜೋಡಿಸುವರು. ಆನಂತರ ಚಿಕ್ಕ, ಚಿಕ್ಕ, ಗಡಿಗೆ, ಚಟಿಕೆ ಮುಂತಾದವುಗಳನ್ನು ಬೋರಲಾಗಿ ಹೊಂದಿಸುವರು. ಹೀಗೆ ಹೊಂದಿಸುವಾಗ ಉರಿ ಎಲ್ಲಡೆ ಹರಡಲು ಅನುಕೂಲವಾಗಲೆಂದು ಅಲ್ಲಲ್ಲಿ ಒಡೆದ ಮಡಿಕೆ ಚೂರು, ಬೋಕಿಗಳನ್ನು ಆನಿಕೆಯಾಗಿ ಹಚ್ಚವರು. ಎಲ್ಲ ಮಡಿಕೆ-ಕುಡಿಕೆಗಳನ್ನು ಜೋಡಿಸಿಯಾದ ಮೇಲೆ ಕೊನೆಯಲ್ಲಿ ಮುಚ್ಚಳಗಳನ್ನು ಬೋರಲಾಗಿ ಹೊಂದಿಸುವರು ಆಮೇಲೆ ಆವಿಗೆಯ ಮೇಲ್ಭಾಗದಲ್ಲಿ ಸೊಪ್ಪು, ಹುಲ್ಲು, ಸೆದೆಯನ್ನು ಹರಡಿ ಅದರ ಮೇಲೆ ಹಸಿಯಾದ ಬೂದಿಯನ್ನು ಮೇಲು ಹೊದಿಕೆಯಾಗಿ ಮುಚ್ಚುವರು. ಆವಿಗೆ ಕಟ್ಟುವಾಗ ತಳದಲ್ಲಿ ಉರುವಲು ಕಿಚ್ಚು ಎಲ್ಲಡೆ ಪಸರಿಸಲು ಅನುಕೂಲವಾಗುವಂತೆ ಅಲ್ಲಲ್ಲಿ ಮರದ ತುಂಡುಗಳನ್ನು ಇಟ್ಟು, ಆವಿಗೆಯ ಹಿಂಭಾಗದಲ್ಲಿ ಹೊಗೆ ಹೋಗಲು ಕಿಂಡಿಗಳನ್ನು ಬಿಡುವರು. ಆಮೇಲೆ ಆವಿಗೆಯ ಬಾಯಿಯ ಮೂಲಕ ಬೆಂಕಿಯನ್ನು ಹಾಕಿ

ಉರುವಲನ್ನು ಮೆಲ್ಲಕೆ ಒಳಕ್ಕೆ ಚಾಚುತ್ತ ಆವಿಗೆ ಸುಡಲು ಆರಂಭಿಸುವರು.

ಆವಿಗೆ ಕಾಯಿಸು (ಕ್ರಿ) ಆವಿಗೆ ಬಿಸಿ ಮಾಡುವುದು, ಆವಿಗೆಯಲ್ಲಿ ಮಡಕೆಗಳನ್ನು ಸುಡಲು ಇಟ್ಟ ನಂತರ ಆರಂಭದಲ್ಲಿ ಆವಿಗೆಯ ಬಾಯಿಯ ಮುಂದುಗಡೆ ಸಗಣಿಯ ಕುಳ್ಳು ಚಿಕ್ಕ, ಚಿಕ್ಕ, ಕಟ್ಟಿಗೆಯ ತುಂಡುಗಳನ್ನಿಟ್ಟು ಬೆಂಕಿ ಹೊತ್ತಿಸುವುದು. ನಿಧಾನವಾಗಿ ಒಂದೆರಡು ಗಂಟೆ ಆವಿಗೆ ಕಾಯಿಸುವರು. ಒಂದೇ ಬಾರಿಗೆ ಹೆಚ್ಚು ಉರಿ ಹಾಕಿದಲ್ಲಿ ಹಸಿ ಮಡಕೆಗಳು ಸೀಳು ಬಿಡುವ ಸಂಭವ ಹೆಚ್ಚು. ಆವಿಗೆ ಪೂರ್ಣವಾಗಿ ಬಿಸಿಯಾದ ಮೇಲೆ ಉರಿಯನ್ನು ಮೆಲ್ಲ ಮೆಲ್ಲನೆ ಚಾಚುಗೋಲಿನಿಂದ ಆವಿಗೆ ಒಳಕ್ಕೆ ತಳ್ಳುವರು.

ಆವಿಗೆ ಕಿಚ್ಚು (ನಾ) ಆವಿಗೆಯ ಬೆಂಕಿ, ಜ್ವಾಲೆ, ಉರಿ, ಮಣ್ಣಿನ ಮಡಿಕೆಗಳು ಚನ್ನಾಗಿ ಸುಟ್ಟು ಗಟ್ಟಿಯಾಗಬೇಕಾದರೆ ಅದಕ್ಕೆ ಹೆಚ್ಚು ಉಷ್ಣತೆ ಅಗತ್ಯ ಆದ್ದರಿಂದ ಆವಿಗೆಯಲ್ಲಿ ಕಿಚ್ಚು ಪ್ರಬಲವಾಗಿ ಎಲ್ಲೆಡೆ ಹರಡಿಕೊಳ್ಳುವಂತೆ ಉರುವಲಿಗಾಗಿ ಮುಳ್ಳಿನ ಕಂಟಿ, ಕಟ್ಟಿಗೆ, ಸ್ಥಳೀಯವಾಗಿ ದೊರೆಯುವ ಸೌದೆಗಳನ್ನು ಬಳಸುವರು. ಆವಿಗೆಯ ಕಿಚ್ಚು ಹೆಚ್ಚಾಗುತ್ತ ಹೋದಂತೆ ಮಡಿಕೆಗಳೆಲ್ಲವು ಕಾದ-ಕಬ್ಬಿಣದಂತೆ ಕೆಂಪಗಾಗುತ್ತ ಹೋಗುತ್ತವೆ. ಆಗಾಗ ಬ್ಯಾಕೋಲಿನಿಂದ ಕಿಚ್ಚನ್ನು ಹಿಂದೆ ಸರಿಸುವರು. ಹೀಗೆ ಇಡೀ ಆವಿಗೆ ಕೆಂಡಮಯವಾಗಿ ಕಂಡಾಗ ಮಡಿಕೆಗಳೆಲ್ಲವೂ ಚೆನ್ನಾಗಿ ಸುಟ್ಟಿವೆ ಎಂದು ಖಚಿತವಾಗುವುದು.

ಆವಿಗೆ ಕಿಡಿ (ನಾ) ಕಿಡಿ, ಬೆಂಕಿ, ಆವಿಗೆಯಲ್ಲಿ ಮಡಕೆಗಳನ್ನಿಟ್ಟು ಸುಡುತ್ತಿರುವಾಗ ಆವಿಗೆ ಬಿಸಿಯಾಗಿ ಬೆಂಕಿಯ ಕಿಡಿಗಳು ಆವಿಗೆಯ ಹಿಂದೆ ಇಟ್ಟಿರುವ ಕಿಂಡಿಗಳ ಮೂಲಕ ಹೊರಬರುತ್ತವೆ. ಆವಿಗೆ ಕಾಯುತ್ತಿರುವುದಕ್ಕೆ ಇದು ಸೂಚನೆ.

ಆವಿಗೆ ಕಿಂಡಿ (ನಾ) ಆವಿಗೆಯ ಹಿಂಭಾಗದಲ್ಲಿ ಮಾಡಿದ ಕಿಂಡಿ. ಒಡೆದ ಗಡಿಗೆಗಳ ಕಂಠಗಳನ್ನು ಇಟ್ಟು ಈ ಕಿಂಡಿಗಳನ್ನು ಬಿಡುವರು. ಈ ಕಿಂಡಿಯ ಮೂಲಕ ಆವಿಗೆಯ ಹೊಗೆ ಹೊರಕ್ಕೆ ಹೋಗಲು ಅನುಕೂಲ ವಾಗುವುದು. ಆವಿಗೆಯ ಹಿಂಭಾಗದಲ್ಲಿ ಸುಮಾರು ೪-೫

ಇಂಥ ಕಿಂಡಿಗಳನ್ನು ಬಿಡುವರು, ಆವಿಗೆ ಸುಡುತ್ತ ಹೋದಂತೆ ಹೊಗೆ ಕಡಿಮೆಯಾಗಿ ಈ ಕಿಂಡಿಗಳ ಮೂಲಕ ಉರಿ-ಜ್ವಾಲೆ ಹೊರಬರಲಾರಂಭಿಸುವುದು. ಇದು ಆವಿಗೆಯಲ್ಲಿನ ಮಡಿಕೆಗಳೆಲ್ಲವೂ ಚೆನ್ನಾಗಿ ಸುಟ್ಟಿವೆ ಎಂಬುದನ್ನು ಸೂಚಿಸುವುದು.

**ಆವಿಗೆ ಬಾಯಿ (ನಾ)** ಆವಿಗೆಯ ತಳದಲ್ಲಿ ಉರಿ ಹಚ್ಚಿ ಮಡಕೆ ಸುಡಲು ಆವಿಗೆಯ ಮುಂಭಾಗದ ಗೋಡೆಯಲ್ಲಿ ಮಾಡಿರುವ ಸುಮಾರು ೭೫ ಸೆಂ.ಮೀ. ಅಗಲ ೭೫ ಸೆ.ಮೀ. ಎತ್ತರದ ಕಿಂಡಿ. ಕಮಾನಾಕೃತಿಯಲ್ಲಿ ಕೂಡ ಬಾಯಿಯನ್ನು ಮಾಡುವರು. ಸಾಮಾನ್ಯವಾಗಿ ಒಂದು ಇಲ್ಲವೆ ಎರಡು ಬಾಯಿಗಳನ್ನು ಮಾಡುವ ರೂಢಿ ಇದೆ.

**ಆವಿಗೆ ಮುಚ್ಚು (ಕ್ರಿ)** ಆವಿಗೆ ಮುಚ್ಚುವುದು, ಆವಿಗೆಯಲ್ಲಿನ ಮಡಿಕೆಗಳೆಲ್ಲವೂ ಸುಟ್ಟ ಮೇಲೆ, ಅದರ ಬಾಯಿ ಮತ್ತು ಕಿಂಡಿಗಳನ್ನು ಮುಚ್ಚುವ ಕ್ರಿಯೆ. ಆವಿಗೆಯಲ್ಲಿನ ಮಡಿಕೆಗಳೆಲ್ಲವೂ ಸುಟ್ಟು, ಹಿಂಭಾಗದ ಕಿಂಡಿಗಳಿಂದ ಉರಿ ಉಗಳಲು ಆರಂಭವಾಗುತ್ತದೆ. ಆಗ ಬೆಂದ ಮಡಿಕೆಗಳೆಲ್ಲ ಕೆಂಪಗೆ ಕೆಂಡದಂತೆ ಕಾಣುವವು ಅದು ಮಡಿಕೆಗಳೆಲ್ಲವೂ ಚನ್ನಾಗಿ ಸುಟ್ಟಿವೆ ಎಂಬುದರ ಸೂಚನೆ. ಈ ಸೂಚನೆ ಬಂದ ಮೇಲೆ ಮೊದಲು ಆವಿಗೆಯ ಬಾಯಿಯನ್ನು ಬೂದಿಯಿಂದ ಚನ್ನಾಗಿ ಮುಚ್ಚುವರು. ಅನಂತರ ಹಿಂಭಾಗದ ಕಿಂಡಿಗಳನ್ನು ಮುಚ್ಚಳಗಳನ್ನಿಟ್ಟು ಹಸಿಬೂದಿಯಿಂದ ಮುಚ್ಚುವರು. ಆಮೇಲೆ ಮತ್ತೊಮ್ಮೆ ಆವಿಗೆಯ ಮೇಲ್ಭಾಗದ ತುಂಬ ಬೂದಿಯನ್ನು ತೆಳುವಾಗಿ ಹರಡಿ ಮೆತ್ತಗೆ ಕೈಯಿಂದ ಒತ್ತುವರು. ನಂತರ ಅದರ ಮೇಲೆ ಸ್ವಲ್ಪ ನೀರನ್ನು ಸಿಂಪಡಿಸುವರು. ಹೀಗೆ ಆವಿಗೆಯನ್ನು ೮ರಿಂದ ೧೦ ತಾಸು ಮುಚ್ಚಿರುವುದರಿಂದ, ಒಳಗಿನ ಕೆಂಡದಿಂದ ಮಡಿಕೆಗಳೆಲ್ಲವೂ ಸಂಪೂರ್ಣವಾಗಿ ಬೆಂದು ಗಟ್ಟಿಯಾಗುವವು.

**ಆವಿಗೆ ತೆಗೆ (ಕ್ರಿ)** ಆವಿಗೆ ಕೆದರು, ಸುಟ್ಟ ಮಡಿಕೆಗಳನ್ನು ಆವಿಗೆಯಿಂದ ಹೊರ ತೆಗೆಯುವ ಕ್ರಿಯೆ. ಆವಿಗೆ ಮುಚ್ಚಿದ ಮರುದಿವಸ, ಅಂದರೆ ೮-೧೦ ತಾಸುಗಳ ನಂತರ ಈ ಕಾರ್ಯ ನಡೆಯುವುದು. ಆವಿಗೆಯ ಮೇಲ್ಭಾಗದಲ್ಲಿ ಹೊದಿಸಿದ್ದ ಬೂದಿಯನ್ನು

ಸಲಕಿಯಿಂದ ನಿಧಾನವಾಗಿ ಎಳೆದು ತೆಗೆಯುವರು. ಅಲ್ಲಲ್ಲಿ ಉಳಿದ ಬೂದಿಯನ್ನು ಬೋಕಿ ಒಡೆದ ಮಡಿಕೆ ಚೂರುಗಳಿಂದ ಬಳೆಯುವರು. ಅನಂತರ ಕೈಯಲ್ಲಿ ಬಟ್ಟೆಯನ್ನು ಹಿಡಿದುಕೊಂಡು ಗಡಿಗೆಗಳನ್ನು ಹೊರಗೆ ತೆಗೆದಿಡುವರು. ಗಂಡಸರು, ಹೆಂಗಸರು, ಮಕ್ಕಳು ಹೀಗೆ ಎಲ್ಲಾ ಸದಸ್ಯರು ಪಾಲುಗೊಳ್ಳುವರು. ಮಡಿಕೆಗಳೆಲ್ಲವೂ ಆರಿದ ಮೇಲೆ ಆಯಾ ಆಕಾರದ ಮಡಿಕೆಗಳನ್ನು ಪ್ರತ್ಯೇಕಿಸಿ ಇಡುವರು. ಆಗ ಅವು ಮಾರಾಟಕ್ಕೆ ಸಿದ್ಧಗೊಂಡ ಮಡಿಕೆಗಳು.


ಆವಿಗೆ ಮನೆ (ನಾ) ಒಣಗಿದ ಹಸಿ ಮಡಕೆಗಳನ್ನು ಸುಡುವ ಆವಿಗೆ ಇರುವ ಕೊಟ್ಟಿಗೆ. ಗಾಳಿ, ಮಳೆ ಬಿಸಿಲಿನಿಂದ ಇದು ರಕ್ಷಣೆ ಒದಗಿಸುತ್ತದೆ. ಸಾಮಾನ್ಯವಾಗಿ ಕುಂಬಾರರು ವಾಸದ ಮನೆಯ ಹಿಂದೆ ನಾಡ ಹಂಚನ್ನು ಮಾಡಿಗೆ ಹೊದಿಸಿ ಕೊಟ್ಟಿಗೆ ರೂಪದಲ್ಲಿ ಆವಿಗೆ ಮನೆ ನಿರ್ಮಿಸುವರು. ಬಯಲು ಸೀಮೆಯಲ್ಲಿ ಕುಂಬಾರರು ಬಯಲು ಆವಿಗೆಯಲ್ಲೇ ಮಡಿಕೆ ಸುಡವರು.

## ಇ

ಇಲಕಿ (ನಾ) ಇಲ, ಕಂಠ ತಟ್ಟಿದ ಹಸಿಮಡಕೆಗಳನ್ನು ಒಣಗಿಸಲು ಇಡಲು ಬಳಸುವ ಒಂದು ಸಾಧನ. ಗಡಿಗೆಯನ್ನು ನಡುವೆ ದುಂಡಾಗಿ ಒಡೆದು, ಅದರ ಕಂಠವನ್ನು ಕೆಳಮುಖವಾಗಿ ಇಟ್ಟು, ಅದರ ಒಳಗಡೆ ಹಸಿ-ಮಡಿಕೆಯನ್ನು ಇಟ್ಟು ಮತ್ತು ಆನಿಕೆಗಾಗಿ ಅಲ್ಲಲ್ಲಿ ಒಡೆದ ಮಡಿಕೆ ಚೂರುಗಳನ್ನು ಇಡುವರು. ಮಡಕೆ ಸುಡುವಾಗ ಆವಿಗೆಯ ಹಿಂದೆ ಹೊಗೆ ಹೋಗಲು ಕೂಡ ಇಲಕಿಯನ್ನು ಬಳಸುವರು.



ಇಸಾಳಿ (ನಾ) ಮಣ್ಣಿನಿಂದ ಮಾಡಿದ ಕೊಳವೆ, ಪೈಪು ಇದು ಸುಮಾರು ಒಂದು ಮೀಟರ್ ಉದ್ದವಿದ್ದು, ಅಗಲಕ್ಕೆ ಬೇಕಾದ ಸೈಜಿನಲ್ಲಿ ತಯಾರಿಸುವರು. ಇವುಗಳನ್ನು ಪೈಪುಗಳಂತೆ ಒಂದಕ್ಕೊಂದು ಜೋಡಿಸುವ ರೀತಿಯಲ್ಲಿ ತಯಾರಿಸುವುದೂ ಉಂಟು.




ಇದರಿಂದ ಎಷ್ಟು ಉದ್ದಬೇಕೋ ಅಷ್ಟು ಉದ್ದ ಜೋಡಿಸಿ ಕೊಳ್ಳಬಹುದು. ಇವುಗಳನ್ನು ಅಡುಗೆ ಮನೆಯ ಹೊಗೆ ಹೊರಗೆ ಹೋಗಲು, ಬೆಳಕಿಂಡಿ ಬಿಡಲು, ಮಾಳಿಗೆ ನೀರು ಹರಿ ಬಿಡಲು ಉಪಯೋಗಿಸುವರು.

## ಈ

ಈಸುಕೋಲು (ನಾ) ಒಂದು ಬಗೆಯ ತಂತಿಯ ಪೊರಕೆ. ಮಣ್ಣನ್ನು ಹದ ಮಾಡುವ ಮುನ್ನ ಅದರಲ್ಲಿನ ಕಸ ಕಡ್ಡಿಗಳನ್ನು ಬೇರ್ಪಡಿಸಲು ಮಣ್ಣನ್ನು ಎಳೆಯಲು ಉಪಯೋಗಿಸುವರು. ಈ ಪದ ದಕ್ಷಿಣ ಕನ್ನಡದಲ್ಲಿ ಹೆಚ್ಚಾಗಿ ಬಳಕೆಯಲ್ಲಿದೆ.


## ಉ

ಉಜ್ಜು (ಕ್ರಿ) ಸವರು, ತೀಡು, ಮಣಿಸರ, ಗಜ್ಜುಗದಿಂದ, ಉಜ್ಜುಕಲ್ಲಿನಿಂದ ಅರೆ ಒಣಗಿದ ಮಡಕೆಗಳನ್ನು ಉಜ್ಜಿ ನುಣುಪುಗೊಳಿಸುವುದು.


ಉಜ್ಜು ಸರ

ಉದಾನಿ (ನಾ) ಅಗಲ ಬಾಯಿಯ ಪಂಚಾರತಿ. ಇದಕ್ಕೆ ಹಿಡಿಕೆ ಇರುತ್ತದೆ. ಲೋಬಾನಾ ಹಾಕಿಡಲು ಇದನ್ನು ಬಳಸುವರು.

ಉರುವಲಿ (ನಾ) ಉರುವಲು, ಆವಿಗೆ ಸುಡಲು ಬಳಸುವ ಸೌದೆ, ಮುಳ್ಳು, ಕಟ್ಟಿಗೆ, ಬಿದಿರು, ತೊಗರೆ ಕಟ್ಟಿಗೆ, ಸೊಪ್ಪು-ಸೆದೆ ಮುಂತಾದದ್ದು.



ದುಂಡಾದ ಮಣ್ಣಿನ ಪಾತ್ರೆ. ಪಕ್ಷಿಗಳು ನೀರು ಕುಡಿಯಲು, ನೀರಾಟ-ಆಡಲು ಮನೆಯ ಮುಂದೆ ಇಡುವ ಅಗಲ ಬಾಯಿಯ ಮಣ್ಣಿನ ಪಾತ್ರೆ, ದಾರಕಟ್ಟಿ ಇದನ್ನು ತೂಗು ಕೂಡ ಬಿಡುವರು.

## ಊ

ಊರಗರಿ (ನಾ) ಆಯದ ಒಂದು ವಿಧಾನ, ಸುಗ್ಗಿಯ ಸಮಯದಲ್ಲಿ ರೈತರಿಗೆ ಕೊಡುವ ದವಸ ಧಾನ್ಯದ ಕಾಣಿಕೆ. ಬೀದರ ಜಿಲ್ಲೆಯಲ್ಲಿ ಈ ಪದ ಬಳಕೆಯಲ್ಲಿದೆ.


ಊಳ್ಗ (ನಾ) ಧಾನ್ಯಗಳನ್ನು ತುಂಬಿಡಲು ಬಳಸುವ ದೊಡ್ಡ ಆಕಾರದ ಮಣ್ಣಿನ ಸಾಧನ, ದೊಡ್ಡ ಗಡಿಗೆ

## ಎ

ಎಣ್ಣೆ ಗುಂಡಿಗೆ (ನಾ) ಎಣ್ಣೆ ಸಂಗ್ರಹಿಸಿ ಇಡುವ ಮಣ್ಣಿನ ದುಂಡಗಿನ ಪಾತ್ರೆ, ಎಣ್ಣೆ ಕುಡಿಕೆ, ಎಣ್ಣೆಮಗಿ, ಎಣ್ಣೆಗಡಿಗೆ

ಎತ್ತೊಲೆ (ನಾ) ಸ್ಥಳದಿಂದ ಸ್ಥಳಕ್ಕೆ ಸಾಗಿಸಬಹುದಾದ ಮಣ್ಣಿನ ಒಲೆ

ಎರಡು ಸುತ್ತಿನ ಸ್ವಾರಿ (ನಾ) ದೊಡ್ಡ ಕೈಚಟಿಗೆ ಕುಂಬಾರಗಿತ್ತಿಯರು ಬೋಸಿಗೆ ಕೈಯಿಂದ ಎರಡು ಸುತ್ತು ಹಚ್ಚಿ ಮಾಡಿದ ಸ್ವಾರಿ ಮೊಸರು ಕಡೆದು ಮಜ್ಜಿಗೆ ಮಾಡಲು ಇದನ್ನು ಉಪಯೋಗಿಸುವರು.



ಎರೆಮಣ್ಣು (ನಾ) ಮಡಿಕೆ ತಯಾರಿಸಲು ಬಳಸುವ ಮಣ್ಣು, ಹಾಸನ, ತುಮಕೂರು ಪ್ರದೇಶಗಳಲ್ಲಿ ಕೆರೆ-ಕುಂಟೆಗಳಿಂದ ಈ ಮಣ್ಣನ್ನು ಕುಂಬಾರರು ತರುವರು.


## ಏ

ಏಣು (ನಾ) ಗಡಿಗೆಯ ಅಂಚು, ತುದಿ.

# ಐ

ಐರಣಿ (ನಾ) ಮಣ್ಣಿನ ಪಂಚಕಲಶ, ಈ ಪದ ದಕ್ಷಿಣ ಕರ್ನಾಟಕದಲ್ಲಿ ಬಳಕೆಯಲ್ಲಿದೆ.

ಐರಾಣಿ (ನಾ) ಮದುವೆ ಸಂದರ್ಭದಲ್ಲಿ ಕುಂಬಾರನ ಮನೆಯಿಂದ ತರುವ ಬಣ್ಣ ಹಚ್ಚಿದ ಪವಿತ್ರ ಮಡಕೆಗಳು, ಐರಾಣಿಗಡಗೆಗಳಲ್ಲಿ ಒಂದು ಅಂಬ್ಲಿ ಗಡಿಗೆ, ಎರಡು ಕೊಡ, ಐದು ಮಗಿ, ಒಂದು ಬಿಂದಿಗೆ, ಐದು ಮುಚ್ಚಳ, ಎರಡು ದೀಪದ ಪಣತಿ ಇತ್ಯಾದಿಗಳು ಇರುತ್ತವೆ. ಐರಾಣಿಗೆ ಐರಣಿ, ಆಮ್ರಾಣಿ, ಅರಣಿ, ಐರಣಿ, ಆರಿವೇಣಿ, ಕೇಲು ಎಂಬ ಹೆಸರುಗಳಿಂದ ಕರೆಯುವರು. ಮದುವೆ ಹಿಂದಿನ ದಿನ ಮದುವೆ ಮನೆಯವರು ಮುತ್ತೈದೆಯರನ್ನು ಕರೆದುಕೊಂಡು ಬಾಜಬಜಂತ್ರಿ ಸಮೇತ ಐರಾಣಿ ತರಲು ಕುಂಬಾರನ ಮನೆಗೆ ಬೆಳಗಿನ ಜಾವದಲ್ಲಿ ಹೋಗುವರು. ಕುಂಬಾರನ ಮನೆಯ ಅಂಗಳದಲ್ಲಿ ಕಂಬಳಿ ಹಾಸಿ, ಅದರ ಮೇಲೆ ಸುಣ್ಣ-ಬಣ್ಣ ಹಚ್ಚಿದ ಐರಾಣಿಗಳನ್ನು ಇಟ್ಟು ವಾದ್ಯವೃಂದದವರೊಂದಿಗೆ ಪೂಜೆ ಮಾಡುವರು. ನಂತರ ಮುತ್ತೈದೆಯರು ಐರಾಣಿ ಹೊತ್ತು ಮದುವೆ ಮನೆಗೆ ಹೋಗುವರು. ನಾಡಿನ ಎಲ್ಲ ಭಾಗಗಳಲ್ಲಿ ಈ ಪದ್ಧತಿ ಇದೆ. ಆದರೆ ಇತ್ತೀಚಿನ ದಿನಗಳಲ್ಲಿ ಮದುವೆಯ ದಿನದಂದು ಐರಣಿಯನ್ನು ಚಿತ್ರದಲ್ಲಿ ಬಿಡಿಸಿ ಅದನ್ನು ಪೂಜಿಸುವರು. ಪಂಚ ಕಲಶಗಳನ್ನು ಪಂಚ ಮಠಾಧೀಶರ ಸಂಕೇತವೆಂದು ಭಾವಿಸುವರು.



''ಐರಾಣಿ ತರಲ್ಹೊಂಟಾರ ಐದೆಯರು ಬಾಜಾ ಬಜಂತ್ರಿ ಮುಂದೆ ಮುಂದೆ । ಜಾಣ ಕುಂಬಾರಣ್ಣ ಐರಾಣಿ ಕೊಟ್ಟಾನು''

(ಜಾನಪದ)

ಐರಣಿ ಊಟ (ನಾ) ಐರಾಣಿ ಗಡಿಗೆಗಳನ್ನು ಕುಂಬಾರನ ಮನೆಯಿಂದ ತಂದು ಪೂಜಿಸುವಾಗ ಕೊಡುವ ಊಟ. ಮಲೆನಾಡಿನಲ್ಲಿ ಈ ಸಂಪ್ರದಾಯವಿದೆ.

# ಓ


ಒಡಕ (ವಿ) ಒಡಕುಗಡಿಗೆ, ಒಡಕು ಮಡಿಕೆ, ದದ್ದುಮಡಿಕೆ
ಮುರುಕ ಮನೆಗೆ ಒಡಕು ಗಡಿಗೆ (ಗಾದೆ)
ಮರ್ಮವಿಲ್ಲದ ಮಾತು ಒಡಮಡಕೆಯತೂತು (ದಾಸರ ಪದ)

ಒಡಹುಟ್ಟಿದ ಗಡಿಗೆ (ನಾ) ಗಂಡಿನ ಸೋದರಿ ಹಿಡಿದುಕೊಳ್ಳುವ ಸಣ್ಣಗಡಿಗೆ (ಕರೆಗಡಿಗೆ) ಕೆಲವೊಂದು ಜನಾಂಗದ ಮದುವೆ ಸಂದರ್ಭದಲ್ಲಿ ಈ ಕ್ರಿಯೆ ನಡೆಯುತ್ತದೆ.

ಒಡ್ಲು (ನಾ) ಒಡಲು, ಗಡಿಗೆಯ ಹೊಟ್ಟೆ ಗಡಿಗೆಯ ಸೊಂಟದ ಭಾಗ
'ದೊಡ್ಡ ಒಡ್ಲಿಂದ ಹರವಿಕೊಡ್ರಿ' (ಆಡು ಮಾತು)

ಒಣಮಸಿ (ನಾ) ಆವಿಗೆಯ ಮೇಲ್ಭಾಗಕ್ಕೆ ಸೊಪ್ಪು ಸೆದೆ ಹಾಕಿದ ಮೇಲೆ ಅದರ ಮೇಲ್ಭಾಗಕ್ಕೆ ಮುಚ್ಚುವ ಬೂದಿ, ಅದಕ್ಕೆ ನೀರು ಹಾಕಿರುವುದಿಲ್ಲ.

ಒಲೆ (ನಾ) ಬೆಂಕಿ ಹೊತ್ತಿಸುವ ಸ್ಥಳ. ಒಣ್ಣಲೆ, ಜೋಡು ಕೋಡೂಲೆ, ಕೋಡೋಲೆ, ಅಡುಗೆ ಮಾಡಲು, ನೀರು ಕಾಯಿಸಲು, ಬೆಂಕಿಯನ್ನು ಉರಿಸಲು ಉಪಯೋಗಿಸುವ ಸಲಕರಣೆ ಒಲೆಗಳಲ್ಲಿ ಬೇರೆ-ಬೇರೆ ನಮೂನೆಗಳಿವೆ. ಉರುವಲಿನ ಉಳಿತಾಯ ಮಾಡಲು ಜೋಡು ಒಲೆಗಳನ್ನು ತಯಾರಿಸುವರು. ಒಲೆಗಳನ್ನು ಮಣ್ಣಿನಿಂದ ತಯಾರಿಸಲಾಗುವುದಾದರೂ ಇತ್ತೀಚಿನ ದಿನಗಳಲ್ಲಿ ಸಿಮೆಂಟಿನಿಂದಲೂ ತಯಾರಿಸುವರು.



ಒಲೆ ಸೊಟ್ಟಾದ್ರೆ ಬದ್ನೆಕಾಯಿ ಬೇಯದಿಲ್ವೆ (ಗಾದೆ)
ಒಂದ್ಹೊತ್ತಿನ ಅನ್ನ ಅದೆ ಅಂತ ಒಲ್ಲೆ ಕಿತ್ತು ಮಡಿಗೆದ್ಹಂಗೆ (ಗಾದೆ)

ಒಲೆಗುಂಡು (ನಾ) ಮಣ್ಣಿನ ಒಲೆಯ ಮೇಲೆ ಪಾತ್ರೆಗಳು ಸರಿಯಾಗಿ ಕೂಡ್ರಲು ಅನುಕೂಲವಾಗುವಂತೆ ಒಲೆಯ ಮೇಲೆ ದುಂಡಗೆ ಮಾಡಿದ ಮೂರು ಗುಂಡುಗಳು. ಅಲೆಮಾರಿ ಜನರು ಮೂರು ದುಂಡಗಿನ ಕಲ್ಲುಗಳನ್ನು ಹೂಡಿ ಒಲೆಮಾಡಿ ಅಡಿಗೆ ಮಾಡಿ ಕೊಳ್ಳುವರು ಇದಕ್ಕೂ ಕೂಡ ''ಒಲೆಗುಂಡ'' ಎಂದು ಕರೆಯಲಾಗುವುದು.

"ಅಡಿಸತ್ತ ಮಡಕೆಗೆ ಜೋಡಿಸಿ ಒಲೆಗುಂಡ ಹೂಡಬಾರದು ಬಹು ಬಡತನ ಬಂದಾಗ ನೆಂಟರ ಬಾಗಿಲ ಸೇರಬಾರದು" (ಕನಕದಾಸರು)

ಒಳ್ಳೆ (ನಾ) ಒಳಲೆ, ಮಕ್ಕಳಿಗೆ ಹಾಲು ಕುಡಿಸುವ ಬಟ್ಟಲು, ಹಾಲು ಕುಡಿಯಲು ಅನುಕೂಲವಾಗುವಂತೆ ಮುಂಭಾಗದಲ್ಲಿ ಮೂತಿ ಮಾಡಲಾಗಿರುವುದು.

## ಓ

ಓಡಾರಿ (ನಾ) ಕುಂಬಾರ, ತುಳುಶಬ್ದ

ಓಡು (ನಾ) ಹಂಚು, ಮಡಿಕೆಚೂರು-ಬೋಕಿ, ಮಡಕೆ, ಕಾವಲಿ ಹಂಚು, ಮಾಳಿಗೆ ಹಂಚು, ನಾಡಹಂಚು, ಮಳೆ ಹೆಚ್ಚಾಗಿ ಬೀಳುವ ಪ್ರದೇಶದಲ್ಲಿ ಮನೆಯ ಮಾಳಿಗೆಯನ್ನು ಓಡು-ಹಂಚುಗಳಿಂದ ಹೊದಿಸುವರು ಗ್ರಾಮೀಣ ಭಾಗಗಳಲ್ಲಿ ಜನರು ಹೆಚ್ಚಾಗಿ ನಾಡ ಹಂಚುಗಳನ್ನು ಬಳಸುವರು. ಇವುಗಳನ್ನು ಕುಂಬಾರರು ಚಕ್ರದ ಮೇಲೆ ತಯಾರಿಸಿ ಚೆನ್ನಾಗಿ ಸುಟ್ಟಿರುವರು. ಇವು ಹೆಚ್ಚಾಗಿ ಕಪ್ಪು ಬಣ್ಣದವು ಇರುತ್ತವೆ. ಕಾರ್ಖಾನೆಗಳಲ್ಲೂ ಹಂಚುಗಳನ್ನು ತಯಾರಿಸಲಾಗುತ್ತಿದ್ದು, ಇವಕ್ಕೆ ಮಂಗಳೂರು ಹಂಚು ಎಂದು ಕರೆಯುವ ರೂಢಿ ಇದೆ. ಹಂಚಿನ ಮನೆ ಬೇಸಿಗೆಯ ಕಾಲದಲ್ಲಿ ತಂಪಾದ ಗಾಳಿಯನ್ನು ನೀಡುವುದರಿಂದ ಆರೋಗ್ಯಕ್ಕೆ ಹಿತ. ರೊಟ್ಟಿ ಬೇಯಿಸುವ ತವೆಗೆ ಹಂಚು ಎಂದೂ ಹೆಸರು. ಕೆಲವರು ಮಣ್ಣಿನ ಹಂಚಿನಲ್ಲಿ ರೊಟ್ಟಿ ಸುಡುವರು.

೧. "ಓಡಂ ಪಿಡಿದೊಡೆ ಕೈ ಮಸಿ" (ನಯಸೇನ)
೨. "ಓಡಿನೊಳಗುಂಟೆ ಕನ್ನಡಿಯ ನೋಟ" (ಅಲ್ಲಮ)
೩. "ಓಡಿನಲಿ ಉಂಬವಗೆ ಹರಿವಾಣವೇಕೆ?" (ಪುರಂದರದಾಸರು)
೪. ಓಡುಮಣ್ಣಲಿ ಹುಟ್ಟಿಕೂಡುವುದೆ ಜಾತಿಯನು (ಸರ್ವಜ್ಞ)
೫. ಓಡಿನಿಂದ ಸಿಡಿದು ಬಾಣಲೆಗೆ ಬಿದ್ದಹಾಗೆ (ಗಾದೆ)

## ಔ

ಔಗಿನ ಮಡಕೆ (ನಾ) — ಅಕ್ಕಿ-ಬೆಲ್ಲ ರುಬ್ಬಿ ಒಂದು ಪ್ರಕಾರದ ಸಿಹಿತಿಂಡಿಯನ್ನು ತಯಾರಿಸಲು ಉಪಯೋಗಿಸುವ ಮಡಿಕೆ ಹೆಚ್ಚಾಗಿ ಮಲೆನಾಡಿನಲ್ಲಿ ಕಂಡು ಬರುವುದು, ಇದು ಈಗ ಕಣ್ಮರೆಯಾಗ ತೊಡಗಿದೆ.

## ಕ

ಕಂಗಜ (ನಾ) — ಬಟ್ಟೆ ಹಾಕಿಡಲು ಬಳಸುತ್ತಿದ್ದ ಹರವಿ ಆಕಾರದ ತುಸು ಚಿಕ್ಕ ಬಾಯಿಯ ಮಡಕೆ. ಮಲೆನಾಡಿನ ಶೈವ ಒಕ್ಕಲಿಗರು ಇದನ್ನು ಬಳಸುತ್ತಿದ್ದರು.

ಕಂಠ (ನಾ) — ಗಡಿಗೆಯ ಕುತ್ತಿಗೆ, ಹರವಿಯ ಕಂಠ, ಕೊರಳು

ಕಂಠಕಟ್ಟು (ಕ್ರಿ) — ಕುಂಬಾರ ಗಿತ್ತಿಯರು ಬೋಸಿ ತೀಡಿ ಅದು ಸ್ವಲ್ಪ ಒಣಗಿದ ನಂತರ ಮಣ್ಣಿನ ಸುರಳಿ ಮಾಡಿ ಬಾಯಿಗೆ ಕಂಠ ಕಟ್ಟುವರು ಇದನ್ನೇ ಕಂಠ ಹಚ್ಚುವದು ಎನ್ನುವರು.

ಕಂದಲು (ನಾ) — ಮಣ್ಣಿನ ಚಿಕ್ಕ ಪಾತ್ರೆ, ಗಿಂಡಿ, ಬಟ್ಟಲು
''ಹಾಲು ಕಂದಲು ತುಪ್ಪದ ಮಡಿಕೆಯ-ಬೊಡು ಮುಕ್ಕಿನ ಬೇಡ'' - ಬಸವಣ್ಣ

ಕಂಬಿ (ನಾ) — ಕೋಲು, ಟೊಳ್ಳಾದ ದಪ್ಪನೆಯ ಬಿದಿರು, ತಿಗರಿಯ ಮೇಲೆ ಹರವಿ, ಕೊಡ, ಗಡಿಗೆ ಮಾಡುವಾಗ ಅವುಗಳ ಕಂಠಗಳನ್ನು ನುಣುಪು ಮಾಡಲು ಉಪಯೋಗಿಸುವ ಸಾಧನ.


ಕಚ್ಚಣಿ (ನಾ) — ಮುಚ್ಚಳ

ಕಚ್ಚುಹೊಡೆ (ಕ್ರಿ) — ಕಚ್ಚು ಹಾಕು, ಅಚ್ಚು ಹಾಕುವುದು ಮಡಕೆ, ಕೊಡ, ಬಿಂದಿಗೆ, ಹರವಿ, ಮೊದಲಾದ ಪಾತ್ರೆಗಳು ಅಂದವಾಗಿ ಕಾಣಲೆಂದು ಅವುಗಳ ಕಂಠ ಮತ್ತು ಮಧ್ಯಭಾಗದ ಸುತ್ತಲೂ ಕಚ್ಚುಸೂಳದಿಂದ ಕಚ್ಚುಹೊಡೆಯುವರು. ಮಡಿಕೆಗಳು ಹಸಿ ಇರುವಾಗ, ಕಚ್ಚು ಮತ್ತು ಮುದ್ರೆಗಳನ್ನು ಒತ್ತುವರು.

**ಕರ್ಜನ (ನಾ)** ಬಟ್ಟೆ ಇಡಲು ಬಳಸುತ್ತಿದ್ದ ಮಣ್ಣಿನ ಪಾತ್ರೆ. ಹಿಂದಿನ ಕಾಲದಲ್ಲಿ ಇಂಥ ಅಪೂರ್ವ ಪಾತ್ರೆಗಳನ್ನು ಬಳಸುತ್ತಿದ್ದರು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸೂಳ್ಯ ತಾಲ್ಲೂಕಿನಲ್ಲಿ ಒಂದು ಕರ್ಜನ್ ಪಾತ್ರ ದೊರೆತಿದ್ದು, ಅದನ್ನು ಮೈಸೂರು ವಿಶ್ವವಿದ್ಯಾನಿಲಯದ ಜಾನಪದ ವಸ್ತು ಸಂಗ್ರಾಹಲಯದ ಕ್ಯುರೇಟರರಾದ ಯು.ಎಸ್. ರಾಮಣ್ಣ ಅವರು ಸಂಗ್ರಹಿಸಿದ್ದಾರೆ.

**ಕಟಕಿ (ನಾ)** ಕುಡಕಿ, ಚಿಕ್ಕ ಗಡಿಗೆ, ಕುಡಿಕೆ

**ಕಟ್ಟಿಗೆ ಹಣಗಿ (ನಾ)** ಹಸಿಮಡಿಕೆಗಳ ಮೇಲೆ ವಿವಿಧ ಗೆರೆಗಳನ್ನು ಹಾಕಲು ಬಳಸುವ ಸಾಧನ. ತಲೆ ಹಿಕ್ಕುವ ಕಟ್ಟಿಗೆ ಹಣಿಗೆಯ ತುಂಡನ್ನಾಗಲಿ, ಇಲ್ಲವೆ ಐದಾರು, ಸೂಜಿಗಳನ್ನು ಹಣಿಗೆಯಂತೆ ಜೋಡಿಸಿ ಕಟ್ಟಿ ಮಡಿಕೆಗಳ ಕಂಠ ಮತ್ತು ಬದಿಗಳ ಸುತ್ತಲೂಗೆರೆ ಹಾಕಲು ಇದನ್ನು ಉಪಯೋಗಿಸುವರು.



**ಕಠೋರಿ (ನಾ)** ಕಠೋರೆ, ಮೊಹರಂ ಹಬ್ಬದಲ್ಲಿ ಮುಸ್ಲಿಂ ಜನಾಂಗದವರು ಮಡಿಕೆಯಲ್ಲಿ ಪಾನಕ ಒಯ್ಯುವಾಗ ಅದಕ್ಕೆ ಮುಚ್ಚುವ ಮಣ್ಣಿನ ಮುಚ್ಚಳ.

**ಕಡಬಿನ ಪಾಸಾಲೆ (ನಾ)** ಮುಚ್ಚಳ, ಕಡಬು ಬೇಯಿಸುವ ಪಾತ್ರೆಗೆ ಮುಚ್ಚಲು ಬಳಸುವ ಮುಚ್ಚುಳ. ದಕ್ಷಿಣ ಕರ್ನಾಟಕದಲ್ಲಿ ಬಳಕೆಯಲ್ಲಿದೆ.

**ಕಡ್ಲೆಕಾಯಿ ಬೇಯಿಸುವ ಪಾತ್ರೆ (ನಾ)** ಕಡ್ಲೆಕಾಯಿ ಬೇಯಿಸುವ ಮಡಕೆ. ಅಗಲ ಬಾಯಿಯುಳ್ಳ ಚಟಿಗೆ ಇದರ ಸೊಂಟದ ಭಾಗದಲ್ಲಿ ಚಿಕ್ಕ-ಚಿಕ್ಕ ರಂಧ್ರಗಳನ್ನು ಮಾಡಿರುವರು. ಬೆಂಗಳೂರು ಮತ್ತು ಕೋಲಾರ ಜಿಲ್ಲೆಗಳಲ್ಲಿ ಹೆಚ್ಚಾಗಿ ಇದರ ಬಳಕೆ ಇದೆ.



**ಕತ್ತ (ನಾ)** ನಾರಿನ ಹುರಿಹಗ್ಗ

**ಕತ್ತಬಳೆ (ನಾ)** ಈಸುಕೋಲು-ನೋಡಿ

**ಕತ್ತಿ (ನಾ)** ಕಾಡಿನಿಂದ ಗಿಡಗಂಟಿ ಕೊಯ್ದು ತರಲು ಬಳಸುವ ಉದ್ದನೆಯ ಕತ್ತಿ ಆವಿಗೆಯನ್ನು ತೆಗೆಯುವಾಗ ಬಿಸಿ ಮಡಕೆಗಳನ್ನು ಎತ್ತಿ ಹೊರಗೆ ತೆಗೆಯಲು ಕೂಡ ಬಳಸುವರು.



ಕನ್ನಕೊರೆ (ಕ್ರಿ) — ಕಿಂಡಿ ಮಾಡುವುದು. ಹರವಿ ಮುಂತಾದ ದೊಡ್ಡ ದೊಡ್ಡ ಪಾತ್ರೆಗಳನ್ನು ತಯಾರಿಸುವಾಗ ಸೊಳಕಲ್ಲಿನಿಂದ ತಟ್ಟಲು ಕೈಗೆ ನಿಲುಕದು. ಆಗ ಮಡಿಕೆಯಲ್ಲಿ ಕೈ ಹೋಗುವಷ್ಟು ಕಿಂಡಿ ಕೊರೆದು ರಂಧ್ರಮಾಡುವ ಕ್ರಿಯೆ. ಆ ರಂಧ್ರದಲ್ಲಿ ಕೈಹಾಕಿ ಅದನ್ನು ತಟ್ಟುವರು. ಕೆಲಸ ಮುಗಿದ ಮೇಲೆ ಆ ರಂಧ್ರವನ್ನು ಮುಚ್ಚುವರು.

ಕರ್ಪರ (ನಾ) — ಗಡಿಗೆ, ಭಿಕ್ಷೆ ಬೇಡುವ ಮಣ್ಣಿನ ಪಾತ್ರೆ

ಕಪ್ಪಾಲ (ನಾ) — ಭತ್ತ ನೆನೆ ಹಾಕುವ ಮಣ್ಣಿನ ಪಾತ್ರೆ, ದಕ್ಷಿಣ ಕನ್ನಡದಲ್ಲಿ ಬಳಕೆಯಲ್ಲಿದೆ.

ಕಪ್ಪು-ಬಸಿ (ನಾ) — ಚಹ ಕುಡಿಯುವ ಬಟ್ಟಲು ಮತ್ತು ಲೋಟ, ಜೇಡಿ ಮಣ್ಣಿನಲ್ಲಿ ಇವುಗಳನ್ನು ತಯಾರಿಸುವರು. ಜಪಾನಿಯರು ಅಂದವಾದ ಕಪ್ಪು-ಬಸಿಗಳನ್ನು ತಯಾರಿಸುವರು. ಪಿಂಗಾಣಿ ಕಪ್ಪು ಬಸಿ ಬಹಳ ಬಳಕೆಯಲ್ಲಿದೆ.



ಕಮಂಡಲ (ನಾ) — ಋಷಿಗಳು ಉಪಯೋಗಿಸುವ ಮಣ್ಣಿನ ನೀರಿನ ಪಾತ್ರೆ. ಇದಕ್ಕೆ ಒಡಲಲ್ಲಿ ಸೊಂಡಿಲುರುತ್ತದೆ.



ಕಮ್ಟಿ (ನಾ) — ಚಿಕ್ಕ ಅಗ್ಗಿಷ್ಟಿಗೆ

ಕರಗ (ನಾ) — ನೀರಿನ ಪಾತ್ರೆ, ಪವಿತ್ರಪಾತ್ರೆ, ಕರ್ನಾಟಕ ಮತ್ತು ತಮಿಳುನಾಡಿನಲ್ಲಿ ಕರಗ ಉತ್ಸವ ಆಚರಿಸುವರು. ಕರಗವು ಅತ್ಯಂತ ಶಕ್ತಿಯುತ ದೇವತೆಯ ಉತ್ಸವ. ಕರ್ನಾಟಕದಲ್ಲಿ ಬೆಂಗಳೂರು ಮತ್ತು ಕೋಲಾರ ಜಿಲ್ಲೆಗಳಲ್ಲಿ ಕರಗದ ಉತ್ಸವ ನಡೆಯುವುದು.

ಕರಗದ ಕುಡಿಕಿ (ನಾ) — ಹಾಲು-ತುಪ್ಪ ಹಾಕಿ ಇಡುವ ಪಾತ್ರೆ. ಇದರ ತಳ ದಪ್ಪವಾಗಿರುವುದು. ಬೆಳಗಾಂವ ಜಿಲ್ಲೆಯಲ್ಲಿ ಈ ಪದ ಬಳಕೆಯಲ್ಲಿದೆ.

ಕರೆ (ನಾ) — ಹಾಲು ಕಾಯಿಸಿಡಲು ಬಳಸುವ ಗಡಿಗೆ, ಕರೆಗಡಿಗೆ.

**ಕಲಶ (ನಾ)** ಕಲಸ, ಕಳಸ, ಮಂಗಲ ಘಟ, ಶುಭಕಾರ್ಯಗಳಲ್ಲಿ ಮಂಗಲ ಕಲಶವನ್ನು ಪೂಜಿಸುವವರು ನೋಡಿ – ಕಳಸ

**ಕಲಶ ಪೂಜೆ** ಕುಂಭ ಪೂಜೆ

**ಕಲಶಾಂಬು (ನಾ)** ಕೊಡದಲ್ಲಿನ ನೀರು

**ಕಲಗಚ್ಚು (ನಾ)** ಕಲಗಂಚು, ಮಣ್ಣಿನಿಂದ ಮಾಡಿದ ಅಗಲಬಾಯಿಯ ಪಾತ್ರೆ. ಬಾನಿ, ನೀರನ್ನು ಮತ್ತು ಮುಸರೆ ನೀರನ್ನು ಸಂಗ್ರಹಿಸಲು ಉಪಯೋಗಿಸುವರು. ಸೋಡಾ ಬಾಟಲಿಗಳನ್ನು ತಂಪಾಗಿಡಲು ಕಲ್ಗಂಚನ್ನು ಬಳಸುವರು.

**ಕಲಸು (ಕ್ರಿ)** ಮಣ್ಣನ್ನು ಕಲಸು, ಕುಂಬಾರರು ಮಡಕೆ ಮಾಡುವ ಮಣ್ಣಿಗೆ ನೀರು ಹಾಕಿ ಕಲಸುವರು.

**ಕಲ್ಲಿ (ನಾ)** ಜಾಳಿಗೆ, ನಾರಿನಿಂದ ತಯಾರಿಸುವರು. ಕುಂಬಾರರು ಇದರಲ್ಲಿ ಗಡಿಗೆಗಳನ್ನು ಕಟ್ಟಿಕೊಂಡು ತಲೆಮೇಲೆ ಹೊತ್ತು ಮಾರಾಟಕ್ಕೆ ಹೋಗುವರು ಮತ್ತು ಉರುವಲು ಸೊಪ್ಪು ತರಲು ಕೂಡ ಬಳಸುವರು.

"ಗಾಳೀಯ ಹಿಡಿದು ಗಡಿಗ್ಯಾಗ ತುಂಬಿ ಕಲ್ಲೀಗ ಹೇರಲೇನ"

(ಸೋಮಶೇಖರ ಇಮ್ರಾಪುರ)

**ಕಲ್ಗುಂಡು (ನಾ)** ಹಿಡಗುಂಡು, ಹರಿಗಲ್ಲು, ತಟ್ಟುವ ಕಲ್ಲು, ಲಿಂಗಾಕಾರದ ಕಲ್ಲು ಹಸಿ ಮಡಿಕೆಗಳನ್ನು ತಟ್ಟಲು ಇದನ್ನು ಬಳಸುವರು. ಕಲ್ಗುಂಡೆಗಳಲ್ಲಿ ಚಿಕ್ಕ, ಮಧ್ಯ ಮತ್ತು ದೊಡ್ಡ ಗಾತ್ರದವು ಇರುತ್ತವೆ.




**ಕಲ್ಲುಗಡಗಿ (ನಾ)** ತಳದಪ್ಪವಿರುವ ಮಧ್ಯಮ ಗಾತ್ರದ ಗಡಿಗೆ. ಉಪ್ಪು, ಎಣ್ಣೆ ಇತ್ಯಾದಿ ವಸ್ತುಗಳನ್ನು ಹಾಕಿಡಲು ಇದನ್ನು ಬಳಸುವರು.




**ಕವಳಿ (ನಾ)** ಬೆಣ್ಣೆಯಂತೆ ತಿಳಿಯಾಗಿರುವ ಮಣ್ಣು, ಚಕ್ರದ ಮೇಲೆ ಮಡಿಕೆ ಮಾಡುವಾಗ ಕೈಯಲ್ಲಿ ಸಂಗ್ರಹವಾಗುವ ತಿಳು ಮಣ್ಣು.

ಕವಳಿ ಗಡಿಗೆ (ನಾ) ಕೆಸರಿನ ಗಡಿಗೆ, ಮಡಿಕೆ ತಯಾರಿಸುವಾಗ ಕೈಯಲ್ಲಿ ಸಂಗ್ರಹವಾಗುವ ತೆಳುವಾದ ಹೆಚ್ಚುವರಿಯಾಗಿ ಬಂದ ಈ ಕವಳಿ ಮಣ್ಣನ್ನು ಚಕ್ರದ ಪಕ್ಕದಲ್ಲಿರುವ ಕವಳಿ ಗಡಿಗೆಗೆ ತೆಗೆದು ಹಾಕುವರು.



ಕವಳಿದಾರ (ನಾ) ತಿಗುರಿಯಮೇಲೆ ತಯಾರಿಸಿದ ಗಡಿಗೆಯನ್ನು ಕೊರೆದು ಚಕ್ರದಿಂದ ಬೇರ್ಪಡಿಸಲು ಬಳಸುವ ದಾರ, ಇದಕ್ಕೆ ಕೊರೆದಾರ, ಚಟಿದಾರ ಎಂದು ಕರೆಯುವರು. ಕವಳಿ ಚಟಿಗೆಯಲ್ಲಿ ಕವಳಿದಾರ ಇರುವುದನ್ನು ಚಿತ್ರದಲ್ಲಿ ಕಾಣಬಹುದು.

ಕವೆಗೋಲು (ನಾ) ಆವಿಗೆಯಲ್ಲಿ ಗಡಿಗೆಗಳನ್ನು ಸುಡುವಾಗ ಕಿಚ್ಚನ್ನು ಉರುವಲನ್ನು ಆವಿಗೆ ಒಳಕ್ಕೆ ಚಾಚಲು ಬಳಸುವ ಕೋಲು. ಇದಕ್ಕೆ ಬ್ಯಾಕೋಲು ಎಂದು ಕೂಡ ಕರೆಯುವರು. ಕಬ್ಬಿಣದ ಸಲಾಕೆಯನ್ನು ಕೂಡ ಇದಕ್ಕೆ ಉಪಯೋಗಿಸುವರು.



ಕಳಸ (ನಾ) ಕಲಶ, ಕುಂಭ, ಕೊಡ, ಧಾರ್ಮಿಕ ಆಚರಣೆಯ ಸಂದರ್ಭಗಳಲ್ಲಿ ಬಳಸುವ ಒಂದು ಬಗೆಯ ಪವಿತ್ರ ಕುಂಭ. ಶುಭ ಕಾರ್ಯಗಳನ್ನು ಆರಂಭಿಸುವಾಗ ಕಲಶ ಪೂಜೆ ಮಾಡುವ ಸಂಪ್ರದಾಯವಿದೆ ಉತ್ತರ ಕನ್ನಡದಲ್ಲಿ ಬಂಡಿ ಹಬ್ಬದಂದು ಕಲಶವನ್ನು ಕೂಡ್ರಿಸಿ ವಿಜೃಂಭಣೆಯಿಂದ ಪೂಜಿಸುವರು. ಕಲಶ ಪೂಜೆಯನ್ನು ಶೈವ, ವೈಷ್ಣವ, ಜೈನ ಎಲ್ಲ ಧರ್ಮದವರು ಪೂಜಿಸುವರು.

ಗಂಡು ಹುಟ್ಟಿದರೆ ಚಿನ್ನದ ಕಳಸ ಹೆಣ್ಣು ಹುಟ್ಟಿದರೆ ಮಣ್ಣಿನ ಕಳಸ (ಗಾದೆ)



ಕಳಸದ ಚಂಬು (ನಾ) ನೋಡಿ – ಕಳಸ

ಕಳಸಿಗೆ (ನಾ) ಧಾನ್ಯ ಮತ್ತು ನೀರನ್ನು ತುಂಬಿ ಇಡಲು ಬಳಸುವ ದೊಡ್ಡ ಗಾತ್ರದ ಮಣ್ಣಿನ ಗುಡಾಣ

ಕಾವಲಿ (ನಾ) ಹಂಚು, ಪದಾರ್ಥಗಳನ್ನು ಎಣ್ಣೆಯಲ್ಲಿ ಕಾಯಿಸಲು ಉಪಯೋಗಿಸುವ ಮಣ್ಣಿನ ಬಾಳ್ಳಿ, ಲೋಹದ ಕಾವಲಿಗಳ ಬಳಕೆಯೆ ಈಗ ಹೆಚ್ಚು

ಎಲ್ಲರ ಮನೆಯಲ್ಲಿ ದೋಸೆಗೆ ತೂತು ನಮ್ಮಲ್ಲಿ ಕಾವಲಿಗೆ ತೂತು (ಗಾದೆ)

ಕಾವುಪೆಂಡಿ (ನಾ) ಆವಿಗೆ ಕಾದ ನಂತರ ಅದರ ಬಾಯಿ ಮುಚ್ಚುವ ಮುನ್ನ ಉದ್ದಕ್ಕೆ ಕಟ್ಟಿಗೆಯ ತುಂಡುಗಳನ್ನು ಬಾಯಲ್ಲಿಟ್ಟು ಬೂದಿಯಿಂದ ಬಾಯನ್ನು ಮುಚ್ಚುವರು.

ಕಾಸುಕಟ್ಟಿಗೆ (ನಾ) ಕಾಸುವ ಕಟ್ಟಿಗೆ, ಆವಿಗೆಯನ್ನು ಕಾಯಿಸುವ ಆರಂಭದಲ್ಲಿ ಉಪಯೋಗಿಸುವ ಚಿಕ್ಕ ಚಿಕ್ಕ ಕಟ್ಟಿಗೆಯ ತುಂಡುಗಳು, ಕೆಲವೆಡೆ ಸಗಣಿಯ ಬೆರಣಿಯನ್ನು ಉಪಯೋಗಿಸುವರು.

ಕಿಟ್ಟ (ನಾ) ಬೂದಿಗೆ ಕೀಲೆಣ್ಣೆ ಸೇರಿಸಿ ಮಾಡಿದ ಕಣಕ. ಸುಟ್ಟ ಮಡಿಕೆಗಳಲ್ಲಿ ಎಲ್ಲಿಯಾದರೂ ಚಿಕ್ಕ ಬಿರುಕು, ರಂಧ್ರ ಆಗಿದ್ದರೆ ಅದಕ್ಕೆ ಈ ಕಿಟ್ಟವನ್ನು ಒತ್ತುವರು. ಇದು ಸಿಮೆಂಟಿನಂತೆ ಗಟ್ಟಿಯಾಗಿ ಅಂಟಿಕೊಳ್ಳುವದರಿಂದ ರಂಧ್ರ ಮತ್ತು ಬಿರುಕು ಕಾಣದು. ಮಡಕೆ ಸೋರುವುದು ನಿಲ್ಲುತ್ತದೆ.

ಕಿಲ್ಲೆ (ನಾ) ಹಾಲು, ಚಹ, ಕಾಫಿ ದ್ರವ ಪದಾರ್ಥಗಳನ್ನು ತುಂಬಿ ಸುರಿಯಲು ಉಪಯೋಗಿಸುವ ಮಣ್ಣಿನ ಚಿಕ್ಕ ಪಾತ್ರೆ. ಈ ಪದ ದಾವಣಗೆರೆ, ಚಿತ್ರದುರ್ಗ ಜಿಲ್ಲೆಯಲ್ಲಿ ಪ್ರಗಯೋಗದಲ್ಲಿದೆ.

ಕಿವುಚು (ಕ್ರಿ) ಹಿಚುಕು, ಕುಂಬಾರಿಕೆಯ ಮಣ್ಣನ್ನು ಕಾಲಿನಿಂದ ತುಳಿದು ಹದ ಮಾಡುವಂತೆ ಕೈಯಿಂದ ಹಿಚುಕಿ ಹದ ಮಾಡುವುದು.
'ಸಂಗಪ್ಪ ಮಣ್ಣ ಕಿವಚಕ ಹತ್ಯಾನ' (ಆಡು ಮಾತು)

ಕಿವಿ ಹಚ್ಚು (ಕ್ರಿ) ಮಡಿಕೆ ಹಿಡಿದುಕೊಳ್ಳಲು ಅನುಕೂಲವಾಗಲೆಂದು ಅಗಲ ಬಾಯಿಯ ಮಡಿಕೆಗಳ ಹೊರಭಾಗದಲ್ಲಿ ಕಿವಿ ಹಚ್ಚುವುದು, ಹೊರಚಾಚು, ಕಿವಿಹಚ್ಚಿದ ಚಟಿಗೆ.



ಕುಂಡ (ನಾ)



೧. ಬಟ್ಟಲಿನಂಥ ಪಾತ್ರೆ, ಹೂದಾನಿ, ಹೂವಿನ ಕುಂಡ, ಕುಂಡಾಲಿ ಇದರಲ್ಲಿ ಹೂವಿನಗಿಡ, ಸಸಿ ಇತ್ಯಾದಿಗಳನ್ನು ನೆಟ್ಟು ಮನೆಮುಂದೆ ಅಂದಕ್ಕಾಗಿ ಇಡುವರು.

೨. ಕುಂಡವನ್ನು ಶ್ರೋತ್ರಿಯವರ ಮನೆಯಲ್ಲಿ ಅಗ್ನಿಯನ್ನು ಇರಿಸಿಕೊಳ್ಳಲು ಬಳಸುತ್ತಿದ್ದರು.

''ಕುಂಡದಲ್ಲಿ ಕಾವ್ಯ
ಅಃ ಎನಿತು ಶ್ರಾವ್ಯ'' (ಕುವೆಂಪು)

ಕುಂದ (ನಾ) ಮಣ್ಣಿನ ಬೋಗುಣಿ, ಹಸಿ ಇದ್ದಾಗ, ಇದರ ತಳದಲ್ಲಿ ಚಿಕ್ಕ ಚಿಕ್ಕ ಚೂಪಾದ ಬೆಣಚು ಕಲ್ಲುಗಳನ್ನು ನೆಟ್ಟು ತಯಾರಿಸಿದ ಪಾತ್ರೆ. ಅಲೆಮಾರಿ ಜನ ಮೆಣಸಿನಕಾಯಿ ಪುಡಿ, ಹಿಂಡಿ ಇತ್ಯಾದಿ ತಯಾರಿಸಲು ಬಳಸುವರು. ಕೊಡಗು ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಈ ಕುಂದದ ಬಳಕೆ ಕಂಡು ಬರುವುದು. ಅಲೆಮಾರಿಗಳು ಇದನ್ನು ಹೆಚ್ಚಾಗಿ ಉಪಯೋಗಿಸುವರು.

ಕುಕ್ಕುಮಣಿ (ನಾ) ಅಚ್ಚು ಕುಕ್ಕುವ ಸೊಳ, ಅದರ ಮುಂಭಾಗದ ಹಲಗೆಯಲ್ಲಿ ಅಚ್ಚನ್ನು ಕೂರಿಸಲು ರಂಧ್ರ ಮಾಡಿರುತ್ತಾರೆ. ಮಡಕೆಗಳನ್ನು ಅಲಂಕಾರ ಮಾಡಲು ಅವು ಸ್ವಲ್ಪ ಹಸಿ ಇರುವಾಗಲೆ ಕುಕ್ಕು ಸೂಳದಿಂದ ಕಂಠದ ಬದಿ, ಸೊಂಟಕ್ಕೆ ಅಚ್ಚನ್ನು ಒತ್ತುವರು.



ಕುದುರು (ಕ್ರಿ) ಆವಿಗೆಯಲ್ಲಿ ಹಸಿಮಡಕೆಯನ್ನು ಸುಡಲು ಕ್ರಮವಾಗಿ ಜೋಡಿಸುವುದು. ಹಸಿಮಡಕೆಗಳನ್ನು ಜೋಡಿಸಲು ತಳದಲ್ಲಿ ದೊಡ್ಡ ಗಾತ್ರದ ಸುಟ್ಟ ಮಡಕೆಯ ಕಂಠಗಳನ್ನು ಬಳಸಿ ಅದರ ಮೇಲೆ ಹಸಿ ಮಡಕೆಗಳನ್ನು ಜೋಡಿಸುವುದು. ಇದರಿಂದಾಗಿ ಹಸಿ ಮಡಿಕೆಗಳಿಗೆ ಯಾವ ಹಾನಿಯು ಆಗುವದಿಲ್ಲ ಬೇಯುವವರೆಗೆ ಸುರಕ್ಷಿತವಾಗಿರುತ್ತವೆ. ಈ ಪದ ದಕ್ಷಿಣ ಕರ್ನಾಟಕದಲ್ಲಿ ಹೆಚ್ಚಾಗಿ ಬಳಕೆಯಲ್ಲಿದೆ.

ಕುಂದಾಲಗಡಿಗೆ (ನಾ) ಕಂದಲುಗಡಿಗೆ ಅರಣಿಗಡಿಗೆ ದಕ್ಷಿಣ ಕರ್ನಾಟಕದಲ್ಲಿ ಬಳಕೆಯಲ್ಲಿದೆ.

ಕುಂಬರಗೋಲ್ (ನಾ) ತಿಗುರಿಕೋಲು, ಚಕ್ರವನ್ನು ತಿರುಗಿಸುವ ಕೋಲು, ತಿಗರಿ ಬಡಿಗೆ

ಕುಂಬಾರ (ನಾ) ಕುಂಬಿಗ, ಬಾಂಬಕೋವ, ಮಣ್ಣಿನಿಂದ ಮಡಿಕೆ ಮಾಡುವವ. ಕುಂಭಕಾರ ಕುಂಭಾರ, ಕುಮ್ಮಾರ, ಕುಬೇರ, ಕುಂಬಾರ ಕುಂಭರ ಖುಂಭಾರ, ಸಜ್ಜನಕುಂಬಾರ ಇವೇ ಮೊದಲಾದ ಹೆಸರಿನಿಂದ ಕುಂಬಾರರು ಕರೆಯಲ್ಪಡುವರು. ''ಕುಂಭಂ ಕರೋತಿ ಇತಿಃ'' ''ಕುಂಭಕಾರ'' ತಮಿಳಿನಲ್ಲಿ ಕುಶವನ್, ತೆಲುಗಿನಲ್ಲಿ ಕುಮ್ಮರ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕುಲಾಲ, ಉತ್ತರ ಕನ್ನಡ ಕರಾವಳಿ ಪ್ರದೇಶದಲ್ಲಿ ಗುನಗ, ಧಾರವಾಡ, ಹಾವೇರಿ, ದಾವಣಗೆರೆ,



ಬಳ್ಳಾರಿ, ಜಿಲ್ಲೆಗಳಲ್ಲಿ ಚಕ್ರಸಾಲಿ, ಮೈಸೂರು ಪ್ರದೇಶದಲ್ಲಿ ಗುಂಡಾಭಕ್ತ ಎಂದು, ತುಳುವಿನಲ್ಲಿ ಮೂಲ್ಯ, ಒಡಾರಿ ಎಂದು ಕರೆಯಲ್ಪಡುವರು. ಜೈನ, ವೀರಶೈವ, ವೈಷ್ಣವ, ಬೌದ್ಧ ಜೈನ, ಸಿಕ್, ಮುಸ್ಲಿಮ್, ಕ್ರಿಶ್ಚಿಯನ್, ಧರ್ಮಗಳಲ್ಲೂ ಕುಂಬಾರರಿದ್ದಾರೆ ಕರ್ನಾಟಕದಲ್ಲಿ ಲಿಂಗಾಯತ ಕುಂಬಾರರು, ಮರಾಠಿ ಕುಂಬಾರರು, ತೆಲಗು ಕುಂಬಾರರು, ತಮಿಳು ಕುಂಬಾರರು, ಮಲೆಯಾಳಿ ಕುಂಬಾರರು, ಕೊಂಕಣಿ ಕುಂಬಾರರು ಇದ್ದಾರೆ. ದೇಶದ ಕೆಲಭಾಗಗಳಲ್ಲಿ ಕೇವಲ ಕುಂಬಾರರೇ ಇರುವ ಹಳ್ಳಿಗಳಿವೆ ಅವಕ್ಕೆ ಕುಂಬಾರಹಳ್ಳಿ, ಕುಂಬಾರಹಟ್ಟಿ, ಕುಂಬಾರ ಕೊಪ್ಪಲು ಎಂದು ಕರೆಯುವರು.

೧. ''ಕುಂಬಾರ ಗುಂಡಯ್ಯ ಮಾಡುವ ಭಕ್ತಿ ಊರೆಲ್ಲ ಮಾಡುವಧಯ್ಯ'' (ಅಂಬಿಗರ ಚೌಡಯ್ಯ)
೨. ''ಊರಿಂಗೆ ಕುಂಬಾರ ಲೇಸು'' (ಸರ್ವಜ್ಞ)
೩. ಊರಿಗೊಬ್ಬ ಕುಂಬಾರ ಬೇಕು (ಗಾದೆ)
೪. ಕುಂಬಾರನಿಗೆ ವರುಷ ದೊಣ್ಣೆಗೆ ನಿಮಿಷ (ಗಾದೆ)
೫. ಕುಂಬಾರ ಮಾಡದ ಮಡಿಕೆ ಇಲ್ಲ, ಬಡಿಗ ಮಾಡದ ಚಕ್ರವಿಲ್ಲ (ಗಾದೆ)
೬. ಕುಂಬಾರನ ಸಿಟ್ಟು ಕುಡ್ಕಿ ಮುಂದೆ. (ಗಾದೆ)

ಕುಂಬಾರ ಗಿತ್ತಿ (ನಾ)



ಕುಂಬಾರತಿ, ಕುಂಬಾರಿಕೆ ಮಾಡುವವಳು ಕುಂಬಾರ ಹೆಣ್ಣು ಮಕ್ಕಳು ಗಂಡಸರೊಂದಿಗೆ ಮಡಕೆ ಮಾಡುವಲ್ಲಿ ನೆರವಾಗುವರು. ಮತ್ತು ಸ್ವತಃ ಹಣತಿ, ಮುಚ್ಚಳ, ಹಂಚು ಚಿಕ್ಕ ಚಿಕ್ಕ ಮಡಿಕೆ ಮೊದಲಾದವುಗಳನ್ನು ಕೈಯಿಂದ ಮಾಡುವರು. ಮಡಿಕೆ ಮಾಡುವುದರಿಂದ ಮೊದಲುಗೊಂಡು, ಮಡಿಕೆಗಳನ್ನು ತಲೆಯಲ್ಲಿ ಹೊತ್ತು ಊರೂರಿಗೆ ಹೋಗಿ ಮಾರುವ ಕಾರ್ಯದಲ್ಲಿ ಇವರು ನೆರವಾಗುವರು.

ಗಾಣಗಿತ್ತಿಗಸಿಗೂ ಕುಂಬಾರಗಿತ್ತಿ ಮಸಿಗೂ ಸರಿಹೋಯ್ತು (ಗಾದೆ)
ಕುಂಬಾರತಿಗುಣವೋ ಅವಳ ಕುಡ್ಕಿ ಗುಣವೋ (ಗಾದೆ)

ಕುಂಬಾರ ತೆರಿಗೆ (ವಿ) ಕುಂಬಾರಕಾಣಿ Tax to be paid by potters

ಕುಂಬಾರ ಬೂದಿ (ನಾ) ಆವಿಗೆಯ ಬೂದಿ

ಕುಂಬಾರಿಕೆ (ನಾ) ಕುಂಬೋದ್ಯಮ, ಮಣ್ಣಿನ ಪರಿಕರಗಳನ್ನು ತಯಾರಿಸುವ ಉದ್ಯೋಗ

ಕುಂಬಾರ ಗುಂಡಿ (ನಾ) ಮಡಿಕೆಗಳನ್ನು ಮಾಡಲು ಮಣ್ಣು ತರುವ ಸ್ಥಳ, ಮಡಿಕೆ ಮಾಡಲು ಯೋಗ್ಯವಾದ ಮಣ್ಣು ತರಲು, ಕೆರೆ, ಹೊಂಡ ಹಳ್ಳ, ಹೊಲಗಳಲ್ಲಿ ನಿರ್ದಿಷ್ಟವಾದ ಸ್ಥಳ ಇರುವುದು. ಅದಕ್ಕೆ ಕುಂಬಾರ ಗುಂಡಿ ಎಂದು ಹೆಸರು. ಮಡಿಕೆ ಮಾಡಲು ತಂದ ಮಣ್ಣನ್ನು ಒಂದು ಸ್ಥಳದಲ್ಲಿ ಶೇಖರಿಸಿ ಇಡುವ ಸ್ಥಳಕ್ಕೂ ಮಣ್ಣುಗುಂಡಿ ಎನ್ನುವುದುಂಟು.

ಕುಂಬಾರ ಗೇಣಿ (ನಾ) ಕುಂಬಾರರಿಗೆ ಕೊಡುವ ಆಯ

ಕುಂಬಾರ ಶೆಟ್ಟಿ (ನಾ) ಕುಂಬಾರಶೆಟ್ರು, ಮಡಿಕೆ ವ್ಯಾಪಾರಿ, ಗಡಿಗೆಗಳ ವ್ಯಾಪಾರ ಮಾಡುವ ಕುಂಬಾರರು ತಮ್ಮ ಹೆಸರಿನ ಮುಂದೆ 'ಶೆಟ್ರು' ಎಂಬ ಪದವನ್ನು ಸೇರಿಸಿಕೊಳ್ಳುವ ವಾಡಿಕೆಯುಂಟು. ಉದಾ: ಬಸಪ್ಪ ಶೆಟ್ಟಿ, ಸಿದ್ದನಂಜ ಶೆಟ್ಟಿ ತುಮಕೂರು ಚಿಕ್ಕಮಂಗಳೂರು, ಹಾಸನ ಕಡೆಗಳಲ್ಲಿ ಈ ಪದ ಬಳಕೆಯಲ್ಲಿದೆ.

ಕುಂಬಾರ ಸಾಲೆ (ನಾ) ಮಡಕೆಗಳನ್ನು ಮಾಡುವ ಮನೆ. ಕುಂಭ ಶಾಲಾ, ಮಡಕೆಗಳನ್ನು ತಯಾರಿಸುವ ಕಾರ್ಯಾಗಾರ.


ಕುಂಬಾರ ಹಸಕ (ನಾ) ಕುಂಬಾರ ಅಂಗಡಿ Potter's shop.

ಕುಂಭ (ನಾ) ಘಟಗುಂಭ, ನೀರಿನಗಡಿಗೆ, ಕೊಡ, ಕಲಶ, ಮಡಿಕೆ, ಬಾವಿಯಿಂದ ನೀರನ್ನು ತರುವ ಮಡಿಕೆಗೆ ಕುಂಭ ಎನ್ನುವರು. ಕುಂಭಗಳಲ್ಲಿ ವಿವಿಧ ಪ್ರಕಾರಗಳಿವೆ ಶಿಲಾಶಾಸನಗಳಲ್ಲಿ ಮತ್ತು ಗ್ರಂಥಗಳಲ್ಲಿ ಮಂಗಳ ಕುಂಭ, ಪೂರ್ಣಕುಂಭ ಮಂಗಳ ಘಟ ಎಂಬ ಹೆಸರಿನಿಂದ ಉಲ್ಲೇಖಿಸಿದ್ದಾರೆ.



'ತೋಯವಿಲ್ಲದ ಕುಂಭ ಜ್ಞಾನವಿಲ್ಲದ ಘಟ ದೇವರಿಲ್ಲದ ಗುಡಿ ಇವು ಹಾಳು ದೇಗುಲಕ್ಕೆ ಸಮವು.' (ಅಂಬಿಗರ ಚೌಡಯ್ಯ)

'ಕೊಟ್ಟಿಗೆ, ತುಂಬ ಕರುಗಳ ಅಂಬಾ ಆಕಳ ಕೆಚ್ಚಲು ಅಮೃತ ಕುಂಭ'. (ಕೆ.ಎಸ್. ನಿಸಾರ್ ಅಹಮದ್)

| | |
|---|---|
| ಕುಂಭ ಶಾಖ (ನಾ) | ಕಾದ ಮಡಿಕೆಯಿಂದ ಕೊಡುವ ಶಾಖ |
| ಕುಂಭಾಲಂಕರಣ (ವಿ) | ಮಡಕೆ ಕುಡಿಕೆಗಳನ್ನು ಮಣಿಸರ ಗಜ್ಜುಗದಿಂದ ಉಜ್ಜಿ ಇಲ್ಲವೆ ಮೆರುಗೆಣ್ಣೆ ಬಳಿದು ಬಣ್ಣ ಹಾಕಿ ಅಂದಗೊಳಿಸುವುದು. ಅರೆಹಸಿ ಇದ್ದಾಗ ಮಡಕೆಗಳ ಮೈಮೇಲೆ, ಬಗೆ ಬಗೆಯ ಹೂ ಬಳ್ಳಿ ಚಿತ್ರಗಳನ್ನು ಅಚ್ಚಿನಿಂದ ಒತ್ತಿ ಅಲಂಕಾರ ಮಾಡುವರು. ಕುಂಭಾಲಂಕರಣದಲ್ಲಿ ಬೇರೆ, ಬೇರೆ ವಿಧಾನಗಳಿವೆ. |
| ಕುಂಭೇಶ್ವರ | ಕುಂಬಾರ ಜನಾಂಗದ ದೇವರು. ಕೋಲಾರ ಜಿಲ್ಲೆಯ ಹಲವಾರು ಕಡೆ ಕುಂಭೇಶ್ವರ ದೇವಸ್ಥಾನಗಳಿವೆ ಕಾರ್ತೀಕ ಮಾಸದಲ್ಲಿ ವಿಶೇಷವಾದ ಪೂಜೆ ನಡೆಯುತ್ತದೆ. |
| ಕುಡಕಿ (ನಾ)  | ಚಿಕ್ಕ ಗಡಿಗೆ ಮಡಿಕೆ-ಕುಡಿಕೆ ಜೋಡುಪದ, ಪಲ್ಯ, ಅನ್ನ ಸಾರು, ಅಂಬ್ಲಿ ಮೊದಲಾದ ಆಹಾರ ಪದಾರ್ಥಗಳನ್ನು ತಯಾರಿಸಲು ಇದನ್ನು ಬಳಸುವರು. ಮತ್ತು ಹಾಲು, ಮೊಸರು, ತುಪ್ಪ, ಎಣ್ಣೆ ಬೆಣ್ಣೆ, ಹಣ ಹಾಕಿಡಲು ಇದನ್ನು ಬಳಸುವರು.<br>'ಮಾತಿನಲ್ಲಿ ಆಗದವನ ಮನದಲ್ಲಿ ತೂತಿನ ಕುಡಿಕೆಯ ಆಸೆ' (ನಗೆ ಮಾರಿತಂದೆ)<br>ಕೂತು ಉಂಡರೆ ಕುಡಿಕೆ ಹೊನ್ನು ಸಾಲದು (ಗಾದೆ)<br>ಮಡಕೆ ಲಾಭಕುಡಿಕೇಲೆ ಹೋಯ್ತು (ಗಾದೆ) |
| ಕುಡಕಿ ಬಿರುಸು (ನಾ) | ಮಸಿ ಗಡಿಗೆ, ಮದ್ದಿನ ಕುಡಕಿ |
| ಕುದುಬಿನ ಸೊಳ (ನಾ) | ಗಡಿಗೆಗಳನ್ನು ತಟ್ಟಲು ಮೊದಲ ಹಂತದಲ್ಲಿ ಉಪಯೋಗಿಸುವ ಸೊಳ. |
| ಕುದುರು (ನಾ) | ಮಡಿಕೆಗಳ ಕಂಠ |
| ಕುದುಪೆ (ನಾ) | ಹಾಲು ಕಾಯಿಸಲು ಮತ್ತು ಮೊಸರು ಹೆಪ್ಪು ಹಾಕಲು ಬಳಸುವ ಗಡಿಗೆ, ತುಳುಪದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಳಕೆಯಲ್ಲಿದೆ. |
| ಕುದುಮು (ಕ್ರಿ) | ತಟ್ಟು, ಬಡಿ, ಸೊಳದಿಂದ ಮಡಿಕೆಗಳನ್ನು ತಟ್ಟುವುದು. |
| ಕುರುಪಿ (ನಾ) | ಮಣ್ಣನ್ನು ಅಗೆದು ತರಲು ಬಳಸುವ ಸಾಧನ |
| ಕುಲುವಲಿಗೆ (ನಾ) | ಸೊಳ, ಮಡಿಕೆ ತಟ್ಟಲು ಬಳಸುವ ಸಲಕರಣೆ ಇದನ್ನು ಕಟ್ಟಿಗೆಯಿಂದ ತಯಾರಿಸುವರು ಕಲ್ಲಿನ ತೆಳುವಾದ ಹಲಗೆ ಯಿಂದಲೂ ಮಾಡುವರು. |

ಕುಲಾಲ (ನಾ) ಕುಂಬಾರ, ಕುಲಾಲ ಎಂಬ ಮಾತು ವೈದಿಕ ವಾಙ್ಮಯದಲ್ಲಿಯೂ ಮಧ್ಯಕಾಲೀನ ಗ್ರಂಥಗಳಲ್ಲಿ ಹೆಚ್ಚು ಬಳಕೆಯಲ್ಲಿದೆ. ದಕ್ಷಿಣ ಕನ್ನಡದಲ್ಲಿ ಈ ಪದ ವ್ಯಾಪಕವಾಗಿ ಬಳಕೆಯಲ್ಲಿದೆ.

ಕುಲಾಲಕರಣ (ಕ್ರಿ) ಕುಂಬಾರಿಕೆ. Doing the work of potter


ಕುಲಾಲ ಚಕ್ರ (ನಾ) ಕುಂಬಾರನ ತಿಗುರಿ, ಚಕ್ರ, ಮಡಕೆ ಮಾಡುವ ಚಕ್ರ..

ಕುಲಾಲಿ (ನಾ) ಕುಂಬಾರತಿ, ಕುಂಬಾರಗಿತ್ತಿ The wife of a potter

ಕುಳ್ಳಿ (ನಾ) ಮಿಳ್ಳಿ, ಗಿಂಡಿ, ಚಿಕ್ಕಗಡಿಗೆ ಮೊಸರು ಮಜ್ಜಿಗೆ ಗಹಾಕಿಡಲು ಬಳಸುವರು, ಮಸಿದೌತಿ


ಕೂನಿ (ನಾ) ಮುಸರಿಗಡಗಿ

ಕೆಂಡ ಎತ್ತುವ ಜಾಲರಿ (ನಾ) ಆವಿಗೆ ಸುಡುವಾಗ ಕುಂಬಾರರು ಬಳಸುವ ಸಾಧನ



ಕೇಲು (ನಾ) ಸಣ್ಣ ಕೊಡ, ಕಲಶ, ಐರಾಣಿಗಳಲ್ಲಿ ಒಂದು, ಧಾರ್ಮಿಕ ಕಾರ್ಯಕ್ರಮಗಳಲ್ಲಿ ಇದರಲ್ಲಿ ನೀರು ತುಂಬಿ, ಕಂಠದ ಸುತ್ತಲು ಮಾವಿನ ಎಲೆಗಳನ್ನಿಟ್ಟು ಅವುಗಳ ಮೇಲೆ ತೆಂಗಿನ ಕಾಯಿ ಇಟ್ಟು ಅರಿಶಿಣ ಕುಂಕುಮ ಹಚ್ಚಿ ಪೂಜಿಸುವರು ಗ್ರಾಮದೇವತೆಗಳ ಉತ್ಸವದಲ್ಲಿ ಕುಂಬಾರರ ಮನೆಯಿಂದ ಕೇಲನ್ನು ಭಕ್ತಿಯಿಂದ ಒಯ್ಯುವ ಪದ್ಧತಿ ಕೆಲವು ಕಡೆ ಇದೆ.

ಕೈ (ನಾ) ಪಾತ್ರೆ ಆಕಾರದ ಮಡಕೆ. ಮದುವೆ, ಮೊದಲಾದ ಸಮಾರಂಭಗಳಲ್ಲಿ ಸಾರು ಬಡಿಸಲು ಇದನ್ನು ಉಪಯೋಗಿಸುವರು ಅದಕ್ಕೆ ಮುಂದುಗಡೆ ಮೂತಿ ಇರುತ್ತದೆ. ಕೆಲವೆಡೆ ಕೈ ಒಳಲೆ ಎಂದು ಕರೆಯುವರು.



ಕೈಗಡಿಗೆ (ನಾ) ಕೈಯಿಂದ ತಯಾರಿಸುವ ಮಡಕೆ, ಕುಂಬಾರ ಹೆಣ್ಣು ಮಕ್ಕಳು ಕೈಯಿಂದ ತಯಾರಿಸುವ ಪಾತ್ರೆಗಳು.

ಕೈಪಣತಿ (ನಾ) ಕೈದೀಪ, ಬೇಕಾದಾಗ ಮನೆಯೊಳಗೆ ಹಿಡಿದುಕೊಂಡು ಓಡಾಡಲು ಅನುಕೂಲವಾದ ಮಣ್ಣಿನ ಪಣತಿ.

ಕೈಪಾಳಿ (ನಾ) ಮುಚ್ಚುಳ

ಕೈಸಾಮಾನು (ನಾ) ಕೈಯಿಂದ ಮಾಡಿದ ಕುಡಿಕಿ, ಚಟಕಿ, ಬೋಗುಣಿ ಮುಂತಾದ ಮಣ್ಣಿನ ವಸ್ತುಗಳು.

ಕೊರ್ಕೆ (ನಾ) ಬಟ್ಟಲದಂತಹ ಮಣ್ಣಿನ ಪಾತ್ರೆ.

ಕೊಡ (ನಾ) ಹೊಳೆ, ಹಳ್ಳ, ಬಾವಿಯಿಂದ ನೀರು ತರುವ ಕುಂಭ. ಕೆಲ ಭಾಗಗಳಲ್ಲಿ ಕೊಡ ಎತ್ತುವ ಸ್ಪರ್ಧೆ ಇದೆ, ಶಿವಮೊಗ್ಗಾ ಜಿಲ್ಲೆಯಲ್ಲಿ ಜೂಜಿನ ಕೊಡದ ಸ್ಪರ್ಧೆ ನಡೆಸುವರು. ಎಣ್ಣೆ, ತುಪ್ಪ ಮುಂತಾದವುಗಳನ್ನು ತುಂಬಿಡಲು ಕೊಡವನ್ನು ಬಳಸುತ್ತಿದ್ದರು. ಎಣ್ಣೆಯನ್ನು ಅಳೆಯುವ ಪ್ರಮಾಣವಾಗಿ ಕೂಡ ಬಳಕೆಯಲ್ಲಿ ತ್ತೆಂಬುದಕ್ಕೆ ಶಾಸನಗಳಲ್ಲಿ ಉಲ್ಲೇಖವಿದೆ.



'ಕೊಡವಾಲ ಕೆಡಿಸುವೊಡಾಮ್ಲ ವೆನಿತಾಗಬೇಕು' (ರಾಘವಾಂಕ)

'ಹುಳಿಹಿಂಡಿ ಕೊಡ ಹಾಲು ಬೀದಿಪಾಲ್ಮಾಡದಿರು' (ಕೆ.ಸಿ. ಶಿವಪ್ಪ)

ತುಂಬಿದ ಕೊಡ ತುಳುಕುವದಿಲ್ಲ। (ಗಾದೆ)

ಧನಿಮನಿಗೆ ದೌಲತ್ತ ಬಂದ್ರ ತೊತ್ತಿಗೆ ಮೂರ ಕೊಡಜಾಸ್ತಿ (ಗಾದೆ)

ಕೊಡತಿ (ನಾ) ಮಣ್ಣಿನ ಗಟ್ಟಿ ಹೆಂಟೆಯನ್ನು ಒಡೆಯುವ ಕೊಡತಿ, ಸುತ್ತಿಗೆ

ಕೊಣಮಿಗೆ (ನಾ) ರೊಟ್ಟಿ ಮಾಡುವ ಮಣ್ಣಿನ ಪರಾತ, ಬಡವರು ಇದನ್ನು ಹೆಚ್ಚಾಗಿ ಬಳಸುವರು.

ಕೊಪ್ಪರಿಗೆ (ನಾ) ಅಗಲ ಬಾಯಿಯ ದೊಡ್ಡ ಪಾತ್ರೆ. ಹಿಂದಿನ ಕಾಲದಲ್ಲಿ ಮದುವೆ ಸಮಾರಂಭಗಳಲ್ಲಿ ಹುಗ್ಗಿ, ಅನ್ನ, ಸಾರು ಮಾಡಲು ಬಳಸುತ್ತಿದ್ದ ಮಣ್ಣಿನ ಪಾತ್ರೆ.

ಕೊಮ್ಮೆ (ನಾ) 'ಧಾನ್ಯ ಸಂಗ್ರಹಿಸಿಡುವ ಗುಡಾಣ, ವಾಡೆ ೧-೨ ಮೀಟರ್ ಎತ್ತರವಿರುವುದು. ತಳದಲ್ಲಿ ಹಲ್ತಿ ಇದ್ದು, ನಡು ಡುಮ್ಮ ಇದ್ದು ಕಂಠದಲ್ಲಿ ಮತ್ತು ಹಲ್ತಿ ಇರುವುದು.

ಎಮ್ಮೆ ಹಾಲು ಚೆಂದ ಕೊಮ್ಮೆ ರಾಗಿ ಚೆಂದ (ಗಾದೆ)

ನಿಮ್ಮನೆ ಎಮ್ಮೆ ಇದ್ದರೆ ನಮ್ಮನೇ ಕೊಮ್ಮೆ ಇದೆ (ಗಾದೆ)

ಕೊರೆ (ಕ್ರಿ) ತಿಗುರಿಯ ಮೇಲೆ ಗೇಯ್ದ ಟೊಳ್ಳಾದ ಲಳಿಗೆಯನ್ನು ಕವಳಿ ದಾರದಿಂದ ಬೇರ್ಪಡಿಸುವುದು.

ಕೊರೆದಾರ (ನಾ) ಕವಳಿ ದಾರ - ನೋಡಿ

ಕೊಳಗ (ನಾ) ಹಿಂದಿನಕಾಲದಲ್ಲಿ ಧಾನ್ಯಗಳನ್ನು ಅಳೆಯಲು ಬಳಸುತ್ತಿದ್ದ ಮಣ್ಣಿನ ಅಳತೆ
೧. ಪ್ರಮಾಣ – ೪ ಮಾನ = ೧ ಬಳ್ಳ; ೪ ಬಳ್ಳ = ೧ ಕೊಳಗ
'ಅಳೆಯುತ್ತ ಅಳೆಯುತ್ತ ಬಳಲುವರಲ್ಲದೆ ಕೊಳಗ ಬಳಲದು'
(ಬಸವಣ್ಣ)
'ಮಾನದ ತೋರಿಹ ಆವಿಂಗೆ ಕೊಳಗದ ತೋರಿಹ ಕೆಚ್ಚಲು'
(ಅಲ್ಲಮ)

ಕೊಳೆಮುಚ್ಚು (ಕ್ರಿ) ಗಡಿಗೆ ತಳದಲ್ಲಿನ ತೆರೆದಭಾಗವನ್ನು ಸೊಳದಿಂದ ತಟ್ಟುವ ಕ್ರಿಯೆ. ಗಡಿಗೆ ಕುಂಡಿ ಮುಚ್ಚುವುದು.

ಕೋವ (ನಾ) ಕೋವರ, ಕುಂಬಾರ
ಕೋವರ ಚಕ್ರಂ ತಿರಿವ ತೆರದೆ ತಿರಿದೆತ್ತೆನಸುಂ (ರನ್ನ)

ಕೋಳಿಫಾರ್ಮಗಡಿಗೆ (ನಾ) ಕೋಳಿ ಫಾರ್ಮಗಳಲ್ಲಿ ಕೋಳಿಗಳಿಗೆ ಕಾವು ಕೊಡಲು ಬಳಸುವ ಮಡಿಕೆ ಈ ಗಡಿಗೆಗಳ ಸೊಂಟದ ಭಾಗದಲ್ಲಿ ಸುತ್ತಲೂ ಎರಡು ಸಾಲು ಚಿಕ್ಕ ಚಿಕ್ಕ ರಂಧ್ರಗಳನ್ನು ಮಾಡಿ, ಅದರಲ್ಲಿ ಬೆಂಕಿ ಕೆಂಡಗಳನ್ನು ಹಾಕಿ ಫಾರ್ಮಗಳಲ್ಲಿ ಇಡುವರು.

ಕೌಳಿ (ನಾ) ತಿಗುರಿಯಿಂದ ಮಡಕೆಗೇಯುವಾಗ ಹಾಗೂ ಕುಂಬಾರ ಗಿತ್ತಿಯರು ಕೈಗಡಿಗೆ ತೀಡುವಾಗ ಬಟ್ಟೆಯಿಂದ ಆಕೃತಿಯನ್ನು ತೀಡುವ ಸಂದರ್ಭದಲ್ಲಿ ಬರುವ ಅತಿ ತೆಳುವಾದ ಮಣ್ಣು
ನೋಡಿ–ಕವಳಿಗಡಿಗೆ

## ಖ

ಖಣೆಕುಳ್ಳಿ (ನಾ) ಖಣೆಗಡಿಗೆ ಕುದರೆಲದ್ದಿ ಮಿಶ್ರಣ ಮಾಡದೆ ತಯಾರಿಸುವ ಮಡಕೆ

ಖಪ್ಪರ (ನಾ) ಒಡೆದ ಮಡಕೆ ಚೂರು, ಬೋಕಿ, ಬೀದರ ಜಿಲ್ಲೆಯಲ್ಲಿ ಈ ಪದ ಬಳಕೆಯಲ್ಲಿದೆ.

ಖಫರೋಳಿಗೆ (ನಾ) ಮನೆಮಾಳಿಗೆ ಹಂಚು, ಬೀದರ ಜಿಲ್ಲೆಯಲ್ಲಿ ಈ ಪದ ಬಳಕೆಯಲ್ಲಿದೆ.

ಖಾಸದಾನ (ನಾ) ಪಾನಪಟ್ಟಿ ಇಡುವ ಮಣ್ಣಿನ ಪಾತ್ರೆ ಬೇಸಿಗೆ, ಕಾಲದಲ್ಲಿ ಎಲೆಗಳು ಬಾಡದಂತೆ ಇಡಲು [illegible]ದವಾಗಿ ತಯಾರಿಸಿದ ಪಾತ್ರೆ. ಲಖೌನದ ಖಾಸ ದಾನಗಳು ತುಂಬಾ ಪ್ರಸಿದ್ಧವಾಗಿವೆ.

ಖುದಬಾಡ (ನಾ) ಸೊಳಗಳಲ್ಲಿ ಒಂದು ವಿಧ. ಬೀದರ ಜಿಲ್ಲೆಯಲ್ಲಿ ಈ ಪದ ಬಳಕೆಯಲ್ಲಿದೆ.

## ಗ

ಗಗರಿ (ನಾ) ಮಣ್ಣಿನ ಕೊಡ, ಹಿಂದಿ ಶಬ್ದ.

ಗಟಗಡ್ಲೆ (ನಾ) ದೀಪ ಹಚ್ಚಲು ಬಳಸುವ ಮಣ್ಣಿನ ಪಾತ್ರೆ, ಪಣತಿ.

ಗಟ್ಟಿಸು (ಕ್ರಿ) ಮಡಿಕೆಗಳನ್ನು ಸೊಳದಿಂದ ತಟ್ಟುವ ಕೊನೆಹಂತ.

ಗಡಿಗೆ (ನಾ) ಮಡಕೆ ಗಡುಗೆ, ಸ್ವಾರೆ, ಭಾಂಡಿ, ಮಣ್ಣಿನ ಪಾತ್ರೆ ಸಾಮಾನ್ಯವಾಗಿ ಮಣ್ಣಿನಿಂದ ತಯಾರಿಸಿದ ವಿವಿಧ ಪಾತ್ರೆಗಳಿಗೆ ''ಗಡಿಗೆ'' ಎಂದು ಕರೆಯುವರು ಗಡಿಗೆ ಮಡಕೆ ಪದಗಳಲ್ಲಿ ವ್ಯತ್ಯಾಸವಿಲ್ಲ, ಗಡಿಗೆ-ಮಡಿಕೆ ಇದು ಜೋಡುನುಡಿ ಸರ್ವಜ್ಞನ ವಚನದಲ್ಲಿ ಈ ಪದ ಪ್ರಯೋಗವಾಗಿದೆ. ಉತ್ತರ ಕರ್ನಾಟಕ ದಲ್ಲಿ ಗಡಿಗೆ, ದಕ್ಷಿಣ ಕರ್ನಾಟಕದಲ್ಲಿ ಮಡಕೆ ಎಂಬ ಪದಗಳು ಹೆಚ್ಚಾಗಿ ಬಳಕೆಯಲ್ಲಿದೆ. ಗಡಿಗೆಯ ಬಣ್ಣ ಸಾಮಾನ್ಯವಾಗಿ ಕಪ್ಪು ಆದರೂ ಕೆಲ ಪ್ರದೇಶಗಳಲ್ಲಿ ಬೂದುಗಪ್ಪು, ಕೆಂಪು ಮತ್ತು ಕಂದು ಬಣ್ಣದ ಗಡಿಗೆಗಳನ್ನು ತಯಾರಿಸುವರು. ಇವುಗಳನ್ನು ಸಾಮಾನ್ಯ ವಾಗಿ ಅಡಿಗೆ ಮಾಡಲು ಹಾಗೂ ನೀರು ತರಲು ಮತ್ತು ಧಾನ್ಯ ಸಂಗ್ರಹಿಸಿ ಇಡಲು ತಯಾರಿಸಿದವು.

'ತುಪ್ಪದ ಗಡಿಗೆಯಂತೆ ಇದು ಹಸನಲ್ಲ' (ಮೋಳಿಗೆ ಮಾರಯ್ಯ)

'ಗಡಿಗೆಯ ತುಪ್ಪ ಹೆಡಿಗೆಯ ಮೃಷ್ಟಾನ್ನ ತುಡುಗಣಿಯಂತೆ ತಿಂಬವಂಗೆ ಮತ್ತೊಡೆಯರ ಕಟ್ಟಳೆಯೆ.' (ರೇವಮ್ಮ)

'ಗಡಿಗೆಯೊಳು ಕಡಲುದವ ಮೊಗೆಮೊಗೆದು ತಹೆನೆಂಬ ಸಾಹಸಿ ಕಡಲ ಕಂಡವನಲ್ಲ' (ಎಸ್.ವಿ. ಪರಮೇಶ್ವರಭಟ್ಟ)

ಗಂಡಾಗುಂಡಿ ಮಾಡಿ ಗಡ್ಗಿ ತುಪ್ಪ ನುಂಗಿದಾಂಗ (ಗಾದೆ)

ಕುರಡಿ ಮದುವೆ ಆದರೆ ಮನೆ ಗಡಿಗೆಗೆ ಮೂಲ (ಗಾದೆ)
ಅತ್ತೆ ಒಡೆದ ಗಡಿಗೆಗೆ ಬೆಲೆ ಇಲ್ಲ (ಗಾದೆ)
ಕತ್ತಲ್ದಾಗ ಕರಿಯಪ್ಪಕುಂತಾನ (ಒಗಟು)

ಗಡಿಗೆಈಡ (ನಾ) ಗಡಿಗೆ, ಆಹಾರ ಬೇಯಿಸುವ ಪಾತ್ರೆ, ದಕ್ಷಿಣ ಕರ್ನಾಟಕದಲ್ಲಿ ಈ ಪದ ಬಳಕೆಯಲ್ಲಿದೆ.

ಗಡಿಗೆ ಚಿಕ್ಕ (ನಾ) ಜಾಳಿಗೆ, ಕಲ್ಲಿ, ನಾರಿನಿಂದ ತಯಾರಿಸಿದ ಬಲೆ ಗಡಿಗೆ ಮಾರಲು ಹೋಗುವಾಗ ಇದರಲ್ಲಿ ಕಟ್ಟಿಕೊಂಡು ಹೋಗುವರು.


ಗಡಿಗೆ ಬಡಿ (ಕ್ರಿ) ಹಸಿ ಗಡಿಗೆಯನ್ನು ಸೊಳದಿಂದ ತಟ್ಟುವುದು. ಈ ಪದ ಉತ್ತರ ಕರ್ನಾಟಕದ ಕುಂಬಾರರಲ್ಲಿ ಹೆಚ್ಚು ಬಳಕೆಯಲ್ಲಿದೆ.

ಗಡಿಗೆಮ್ಮ (ನಾ) ಕ್ಷುದ್ರದೇವತೆ

ಗಡಿಗೆ ಸರ (ನಾ) ಹಗ್ಗ, ಹುರಿ, ಗಡಿಗೆಗಳನ್ನು ಬಂಡಿಮೇಲೆ ಇಲ್ಲವೆ ಪ್ರಾಣಿಗಳ ಮೇಲೆ ಹೇರಿಕೊಂಡು ದೂರ ದೂರದ ಊರುಗಳಿಗೆ ಹೋಗುವಾಗ ಗಡಿಗೆಗಳನ್ನು ಕಟ್ಟಲು ಬಳಸುವ ಹಗ್ಗಕ್ಕೆ ಗಡಿಗೆ ಸರ ಎನ್ನುವರು.


ಗಡಿಗೆ ಮನೆ (ನಾ) ಕುಂಬಾರ ಸಾಲೆ, ಕುಂಬಾರನ ಕಾರ್ಯಾಗಾರ ದೊಡ್ಡ ಕುಟುಂಬದ ಕುಂಬಾರರ ಮನೆಗಳಲ್ಲಿ ವಾಸದ ಮನೆಯಿಂದ ಪ್ರತ್ಯೇಕವಾಗಿ ಗಡಿಗೆ ಮನೆ ಇರುತ್ತದೆ. ಅಲ್ಲಿಯೆ ಕುಂಬಾರರು ಹದಮಾಡಿದ ಮಣ್ಣನ್ನು ಒಟ್ಟುವರು. ತಿಗುರಿ ಹೂಡಿ ಮಡಕೆ ಗೇಯುವರು ಒಣಗಿದ ಹಸಿ ಮಡಕೆಗಳನ್ನು ಕೂಡ ಗಡಿಗೆ ಮನೆಯಲ್ಲಿ ಒಟ್ಟುವರು.

ಗಮಟೆ (ನಾ) ಮಣ್ಣಿನಿಂದ ತಯಾರಿಸಿದ ಒಂದು ವಿಧವಾದ ವಾದ್ಯ, ಇದು ಸುಮಾರು ೭೫-೯೦ ಸೆ.ಮೀ. ಉದ್ದವಾಗಿದ್ದು, ಇದನ್ನು ಉತ್ತರ ಕನ್ನಡ ಸಿದ್ದಿ ಜನಾಂಗದವರು ಉತ್ಸವಗಳಲ್ಲಿ ಉಪಯೋಗಿಸುವರು.



ಗವಲುಗಡಿಗೆ (ನಾ) ಗಡಿಗೆ, ಹಸಲ ಜನಾಂಗದವರು ಇದನ್ನು ಮಾಂಸ ಬೇಯಿಸಲು ಬಳಸುವರು.

**ಗ್ವಾದಲಿ (ನಾ)** ಗೋದಲಿ, ಗೊದಲು, ದನಕರುಗಳಿಗೆ ಮೇವು ಹಾಕುವ ಕಟ್ಟೆ, ಸ್ಥಳ, ಮಣ್ಣೆತ್ತಿನ ಅನುವಾಸ್ಯಯೆಂದು ಮಣ್ಣಿನ ಎತ್ತುಗಳನ್ನು ಪೂಜಿಸುವರು. ಎತ್ತುಗಳ ಜೊತೆಯಲ್ಲಿ ಅದರ ಗ್ವಾದಲಿಯನ್ನು ಕುಂಬಾರರು ಮಣ್ಣಿನಿಂದ ತಯಾರಿಸಿಕೊಡುವರು.




**ಗ್ವಾರಿ (ನಾ)** ಗೋರಿ, ಸಲಿಕೆ, ಆವಿಗೆ ಹಾಕುವಾಗ ಮತ್ತು ತೆಗೆಯುವಾಗ ಇದನ್ನು ಬಳಸುವರು.

**ಗಿಲ್ಲೋದು (ನಾ)** ಹಸಿ ಮಡಿಕೆಗಳ ಮೇಲೆ ಗೀರು ಹಾಕಿ ಅಂದಗೊಳಿಸಲು ಉಪಯೋಗಿಸುವ ಕಬ್ಬಿಣದ ಪಟ್ಟಿ, ದಕ್ಷಿಣ ಕರ್ನಾಟಕದ ಕುಂಬಾರರಲ್ಲಿ ಈ ಪದ ಹೆಚ್ಚು ಬಳಕೆಯಲ್ಲಿದೆ.

**ಗುಂಡಾಲಿ (ನಾ)** ಗುಂಡಾಳಿ, ಬಟ್ಟಲಿನಂತಹ ಮಣ್ಣಿನ ಪಾತ್ರೆ, ದೊಡ್ಡ ಗುಂಡಾಲು, ಸಣ್ಣ ಗುಂಡಾಲು ಎಂದು ಎರಡು ವಿಧಗಳಿವೆ.

**ಗುಂಭ (ನಾ)** ಕುಂಭ, ಕೊಡ

**ಗುಗ್ಗಳ ಕೊಡ (ನಾ)** ವೀರಭದ್ರ ದೇವರ ಭಕ್ತರು ಗುಗ್ಗಳ ಹೋರಟಾಗ ಗುಗ್ಗಳ ತೆಗೆಯಲು ಬಳಸುವ ಕೊಡ, ಇದೊಂದು ಪವಿತ್ರ ಮಡಕೆ, ಅರ್ಧ ಕುಂಭದಲ್ಲಿ ಕಂಠಕೆಳಗೆ ಮಾಡಿ ಬುಡ ಮೇಲೆ ಮಾಡಿದ ಅರೆ ಕುಂಭ.



**ಗುಡಾಣ (ನಾ)** ಹರವಿ, ರಂಜಣಗಿ, ಪಡಗ, ಆಕಾರದಲ್ಲಿ ದುಂಡಾಗಿದ್ದು ಸುಮಾರು ಒಂದು ಮೀಟರ್ ಎತ್ತರ ಇರುತ್ತದೆ. ರೈತರು ಇದನ್ನು ನೀರು ತುಂಬಿಡಲು, ಕಾಳುಕಡಿ ಹಾಕಿಡಲು ಬಳಸುವರು. ಸೂಜಿಯಷ್ಟು ಬಾಯಿ ಗುಡಾಣದಷ್ಟು ಹೊಟ್ಟೆ (ಗಾದೆ)

**ಗುದ್ಲಿ (ನಾ)** ಕೈಗುದ್ಲಿ, ನೆಲವನ್ನು ಅಗೆಯಲು ಬಳಸುವ ಕಬ್ಬಿಣದ ಉಪಕರಣ, ಅದಕ್ಕೆ ಕಟ್ಟಿಗೆ ಹಿಡಿ ಇರುತ್ತದೆ.



**ಗುಬ್ಬಕಲ್ಲು (ನಾ)** ಹಣೆಗಲ್ಲು, ತಿಗುರಿಯ ಮಧ್ಯದಲ್ಲಿ ಕುಳಿ ಮಾಡಿದ ಬೆಣಚು ಕಲ್ಲು ಸುಮಾರು ಅಂಗೈ ಅಗಲದಷ್ಟು ಈ ಕಲ್ಲು ಇದ್ದು ಇದನ್ನು ತಿಗುರಿಯ ಮಧ್ಯಭಾಗದ ಹಣೆಯಲ್ಲಿ ಭದ್ರವಾಗಿ ಹಾಕಿರುವರು. ತಿಗುರಿಯನ್ನು ಗೂಟ (ಶೂಲ)ಕ್ಕೆ ಹಾಕುವಾಗ,

ಈ ಗುಬ್ಬಿಕಲ್ಲಿನ ಗುಣಿಯಲ್ಲಿ ತಿಗುರಿಗೂಟ ಕೊಡುವಂತೆ. ಹಾಕುವರು.

ಗುಳ್ಳಿ (ನಾ) ಕುಳ್ಳಿ, ಚಿಕ್ಕ ಗಡಿಗೆ.

ಗೇಯುವುದು (ಕ್ರಿ) ಚಕ್ರದಿಂದ ಮಡಕೆ ಮಾಡುವುದು.

ಗೇರು ಹಚ್ಚು (ಕ್ರಿ) ಸುಟ್ಟಾಗ ಬಿರಿಬಿಟ್ಟ ಮಡಕೆಗಳಿಗೆ, ಗೇರು ಹಾಲು, ಸುಣ್ಣ, ಬೂದಿ ಸೇರಿಸಿ ಕಣಕದ ಹಾಗೆ ಮಾಡಿ ಬಿರಿಬಿಟ್ಟ ಭಾಗಕ್ಕೆ ಹಚ್ಚುವುದು.

ಗ್ಲೇಸಿಂಗ್ (ಕ್ರಿ) ಗಾಜು ಮೈಭರಿಸುವುದು, ಹೊಳಪುಮಾಡುವುದು, 'ಗ್ಲೇಸಿಂಗ್' ಕನ್ನಡದ ಧ್ವನಿಗೆ ಒಗ್ಗುವುದರಿಂದ 'ಗ್ಲೇಸಿಂಗ್' ಇಂಗ್ಲಿಷ್ ಪದ ಉಳಿಸಿಕೊಳ್ಳುವುದು ಉತ್ತಮ. ಗ್ಲೇಸಿಂಗ್ ಮಣ್ಣಿನ ವಸ್ತುಗಳಿಗೆ ಒಂದು ರೀತಿಯ ಅಲಂಕರಣವೆಂದು ಹೇಳಬಹುದು. ನಾವು ನಿತ್ಯ ಬಳಸುವ ಆಹಾರ ಬೇಯಿಸುವ ಮಣ್ಣಿನ ಮಡಕೆ, ಚಟಿಗೆಯನ್ನು ಗ್ಲೇಸಿಂಗ್ ಮಾಡುವದಿಲ್ಲ. ಚಹ ಕುಡಿಯುವ ಕಪ್ಪು ಬಸಿ, ಹೂಜೆ, ಉಪ್ಪಿನಕಾಯಿ ಭರಣಿ ಆಟಿಕೆ ಸಾಮಾನು, ಇತ್ಯಾದಿ ವಸ್ತುಗಳನ್ನು ಗ್ಲೇಸಿಂಗ್ ಮಾಡುವರು. ಗ್ಲೇಸಿಂಗ್ ಕುಂಭ ವಸ್ತುಗಳನ್ನು ಅಂದಗೊಳಿಸುವುದರ ಜೊತೆಗೆ ಅದು ಒಂದು ಕವಚವಾಗಿ ಕುಂಭದ ಬಲವನ್ನು ಹೆಚ್ಚಿಸುತ್ತದೆ. ಸಚ್ಛಿದ್ರತೆ ಮುಚ್ಚಿ ಹೋಗುತ್ತದೆ. ಸಮತಟ್ಟಾದ, ನುಣುಪಾದ ಮೈ ಉಂಟಾಗುವುದು. ಇದರಿಂದ ಕುಂಭ ವಸ್ತುಗಳನ್ನು ಸ್ವಚ್ಛ ಮಾಡಲು ಅನುಕೂಲವಾಗುವದು. ಗ್ಲೇಸಿಂಗ್ ಮಾಡಲು ಉಪಯೋಗಿಸುವ ಲೋಹ ಮತ್ತು ಅಕ್ಸೈಡುಗಳಿಗೆ ಅನುಗುಣ ವಾಗಿ ಅನೇಕ ವಿಧಗಳಿವೆ.

ಗೊಂದಳ ಕೊಡ (ನಾ) ಲಕ್ಷ್ಮಿ ಪೂಜೆಯಲ್ಲಿ ಬಳಸುವ ಕೊಡ, ಬೀದರ ಜಿಲ್ಲೆಯಲ್ಲಿ ಬಳಕೆಯಲ್ಲಿದೆ.


ಗೊಂಬೆ (ನಾ) ಬೊಂಬೆ, ಮಣ್ಣಿನ ಗೊಂಬೆ, ಆಟಿಕೆ ಗೊಂಬೆ, ಮಣ್ಣಿನಿಂದ ಕುಂಬಾರರು ವಿವಿಧ ಬಗೆಯ ಗೊಂಬೆ ಮಾಡುವರು. ಮಂತ್ರದ ಗೊಂಬೆ, ದೃಷ್ಟಿ ಗೊಂಬೆ. ಬೀದರ್ ಜಿಲ್ಲೆಯಲ್ಲಿ ಮಣ್ಣಿನ ಗೊಂಬೆಯನ್ನು ಮಾಡುವ ಕುಂಬಾರರ ಪಂಗಡ ಒಂದಿದೆ ಅವರನ್ನು ಗೊಂಬಿ ಕುಂಬಾರರು ಎಂದು ಕರೆಯಲಾಗುತ್ತದೆ.

ಬಂಗಾಲದ ಕೃಷ್ಣನಗರದ ಮಣ್ಣಿನ ಗೊಂಬೆಗಳು ಲೋಕ ಪ್ರಸಿದ್ಧವಾದವು. ಹಾಗೆಯೆ ಪಾಂಡೆಚೇರಿ ಮಣ್ಣಿನ ಗೊಂಬೆಗಳು ಪ್ರಸಿದ್ಧವಾಗಿವೆ. ಹರಪ್ಪ ಮೊಹಂಜೊದಾರ ಉತ್ಖನನದಲ್ಲಿ ಅನೇಕ ಪ್ರಾಣಿ, ಪಕ್ಷಿ, ಮಕ್ಕಳಾಟಿಕೆಯ ಗೊಂಬೆಗಳು ದೊರೆತಿವೆ.

ಗೆರೆ ಎಳೆಯುವ ಮೊಳೆ (ನಾ) ಮಡಕೆ ಇನ್ನೂ ಸ್ವಲ್ಪ ಹಸಿ ಇರುವಾಗ ಮಡಕೆಯ ಕಂಠದ ಕೆಳಗೆ, ಸೊಂಟದ ಭಾಗಕ್ಕೆ ಗೆರೆ ಎಳೆದು ಅಂದಗೊಳಿಸಲು ಉಪಯೋಗಿಸುವ ಕಬ್ಬಿಣದ ಚಿಕ್ಕ ಮೊಳೆ.

ಗೊಬ್ಬಿ (ನಾ) ಗೊಬ್ಬೆ, ಹೆಂಡದ ಮಡಿಕೆ, ಈಚಲ ಮರದಿಂದ ಕಳ್ಳು ತಗೆಯಲು ಕಟ್ಟುವ ಗಡಿಗೆ. ದಕ್ಷಿಣ ಕನ್ನಡದಲ್ಲಿ ಹೆಂಡ ತಗೆಯಲು ತಾಳೆ ಮರಕ್ಕೆ ಗಡಿಗೆ ಕಟ್ಟುವರು.

ಸುಟ್ಟು ಏಡಿ ಮರ ಹತ್ತೈತಿ (ಒಗಟು)



## ಘ

ಘಟ (ನಾ) ಘಟಕೆ, ಗಡಿಗೆ, ಮಣ್ಣಿನ ಪಾತ್ರೆ, ಬಾವಿಯಿಂದ ನೀರು ತರಲು ಬಳಸುತ್ತಿದ್ದರೆಂದು ಮಹಾಭಾಷ್ಯದಲ್ಲಿ ಅನೇಕ ಕಡೆ ಹೇಳಲಾಗಿದೆ. ಘಟ ಪದವನ್ನು ದೇಹಕ್ಕೆ ಹೋಲಿಸುವರು.

''ಘಟವ ಮಾಡಿದವ ಘಟದಲ್ಲಿರದಂತೆ''

(ನಗೆಯ ಮಾರಿತಂದೆ)

''ಧಾನ್ಯ ಹೊಯಿದಿದ್ದ ಘಟ ಆಳತೆಗೆ ಬಪ್ಪುದೆ?''

(ಮೋಳಿಗೆ ಮಾರಯ್ಯ)

ಘಟಂ (ನಾ) ಗಡಿಗೆ, ಇದನ್ನು ವಾದ್ಯವಾಗಿ ಬಳಸುವರು. ಇದರ ಬಾಯಿ ಸ್ವಲ್ಪ ಅಗಲವಾಗಿದ್ದು, ಅದನ್ನು ಬೋರಲಾಗಿ ಇಟ್ಟು, ಇಲ್ಲವೆ ಹೊಟ್ಟೆಗೆ ಅನಿಸಿಕೊಂಡು ಎರಡೂ ಕೈ ಬೆರಳುಗಳಿಂದ ಬಡಿಯುತ್ತಾ ಹೋದಂತೆಲ್ಲಾ ಶುಶ್ರಾವ್ಯವಾದ ನಾದ ಹೊರಹೊಮ್ಮುತ್ತದೆ. ದಕ್ಷಿಣ ಭಾರತದ ಸಂಗೀತ ಕಛೇರಿಗಳಲ್ಲಿ ''ಘಟಂ ವಾದ್ಯ'' ಪ್ರಸಿದ್ಧವಾಗಿದೆ. ಪಾಲ್ಘಾಟ್ ಸುಬ್ರಹ್ಮಣ್ಯ ಅಯ್ಯರ್ ಘಟ ನುಡಿಸುವುದರಲ್ಲಿ ಪ್ರಸಿದ್ಧರಾಗಿದ್ದಾರೆ.

ಘಟ ಸ್ಥಾಪನೆ (ಕ್ರಿ) — ದಸರಾ ಹಬ್ಬದಲ್ಲಿ ಮಣ್ಣಿನ ತಟ್ಟೆಯಲ್ಲಿ ಮಣ್ಣು ತುಂಬಿ ವಿವಿಧ ಧಾನ್ಯಗಳನ್ನು ಹಾಕಿ ಜಗುಲಿಯ ಮೇಲಿಟ್ಟು ಹತ್ತು ದಿನಗಳ ಕಾಲ ಅದಕ್ಕೆ ನೀರು ಹಾಕಿ ಪೂಜಿಸುವ ವಿಧಾನ.

ಘಟಾಗ್ನಿ (ನಾ) — ಕೊಡದೊಳಗಿನ ಬೆಂಕಿ

ಘಳಿಗೆ ಬಟ್ಟಲು (ನಾ) — ಗಳಿಗೆ ಬಟ್ಟಲು, ಮಣ್ಣು ಇಲ್ಲವೆ ಗಾಜಿನಿಂದ ತಯಾರಿಸಿದ ಬಟ್ಟಲು ಪ್ರಾಚೀನ ಕಾಲದಲ್ಲಿ ವೇಳೆಯನ್ನು ತಿಳಿಯಲು ಮಾಡಿದ ಸಾಧನ. ಒಂದು ಬಟ್ಟಲಿನ ತಳದಲ್ಲಿ ಸಣ್ಣ ರಂಧ್ರ ಮಾಡಿ ಅದನ್ನು ನೀರಿನಲ್ಲಿ ತೇಲಿ ಬಿಡುತ್ತಿದ್ದರು. ಅದರಲ್ಲಿ ನೀರು ತುಂಬಿಕೊಂಡು ಮುಳಗುವಷ್ಟು ಸಮಯಕ್ಕೆ ಒಂದು ಗಳಿಗೆ ಎಂದು ಕರೆಯುತ್ತಿದ್ದರು.

## ಚ

ಚಕ್ರ (ನಾ) — ನೋಡಿ – ತಿಗುರಿ

ಚಕ್ರ ಕಾಣಿಕೆ (ನಾ) — ತಿಗುರಿಯ ಮೇಲೆ ವಿಧಿಸುತ್ತಿದ್ದ ಕರ ಹಳೆಯ ಕಾಲದಲ್ಲಿ ಕುಂಬಾರಿಕೆ ವೃತ್ತಿಯ ಮೇಲೆ ತೆರಿಗೆ ವಿಧಿಸುತ್ತಿದ್ದ ಬಗೆಗೆ ಚರಿತ್ರೆಯಲ್ಲಿ ಸಾಕಷ್ಟು ದಾಖಲೆಗಳಿವೆ.

ಚಟಗಿ (ನಾ) — ಚಟಿಗೆ, ಚಟಿಕೆ, ಚಿಕ್ಕ ಗಡಿಗೆ ಇದರ ಬಾಯಿ ಸ್ವಲ್ಪ ಅಗಲ ವಿರುವುದು ಇದನ್ನು ಪಲ್ಯ, ಸಾರು, ಅನ್ನ ಮಾಡಲು, ಹಾಲು, ಮೊಸರು, ಬೆಣ್ಣೆ ಹಾಕಿ ಇಡಲು ಬಳಸುವರು. ಗ್ರಾಮೀಣ ಪ್ರದೇಶದ ರೈತರು ಮನೆಯಲ್ಲಿ ಬೆಕ್ಕಿಗೆ ಸಿಗದಿರಲೆಂದು ಹಾಲು, ಮೊಸರು, ಬೆಣ್ಣೆಯನ್ನು ಚಟಿಗೆಗಳಲ್ಲಿ ಹಾಕಿ ನಿಲುವಿನಲ್ಲಿಟ್ಟು ತೂಗಿಬಿಡುವದನ್ನು ಈಗಲೂ ಕಾಣಬಹುದು. ಧಾರವಾಡ, ಹಾವೇರಿ, ವಿಜಾಪುರ, ಬೆಳಗಾವಿ ಜಿಲ್ಲೆಗಳಲ್ಲಿ ಕೆನೆಮೊಸರನ್ನು ಚಟಿಗೆಯಲ್ಲಿ ತುಂಬಿಟ್ಟು ಚಟಿಗೆಯನ್ನೆ ಮಾರುವರು.
ಸುಣ್ಣದ ಚಟಿಗ್ಯಾಗ ತಣ್ಣೀರ ಹೊಯ್ದಾಂಗ (ಗಾದೆ)

ಚಟ್ಟಿ (ನಾ) — ಮಡಿಕೆ, ತಟ್ಟೆ ಆಕಾರದ ಮಣ್ಣಿನ ಪಾತ್ರೆ, ಹೂ ಕುಂಡಕ್ಕೆ ಚಟ್ಟಿ ಎನ್ನುವ ಪದ ದಕ್ಷಿಣ ಕನ್ನಡದಲ್ಲಿ ಬಳಕೆಯಲ್ಲಿದೆ.


ಚಡೆ (ನಾ) ಆವಿಗೆಯ ಅಕ್ಕಪಕ್ಕದ ಗೋಡೆಯ ಮೇಲ್ಭಾಗ

ಚಪ್ಪಣಿ (ನಾ) ಮಣ್ಣಿನ ಪಾತ್ರೆ, ಹಬ್ಬದ ಸಮಯದಲ್ಲಿ ಮುಸ್ಲಿಮ್ ಜನಾಂಗದವರು ಬಳಸುವ ಪಾತ್ರೆ ಬೀದರ ಜಿಲ್ಲೆಯಲ್ಲಿ ಹೆಚ್ಚಾಗಿ ಬಳಕೆಯಲ್ಲಿದೆ.

ಚರಗದ ಗಡಿಗೆ (ನಾ) ಚರಗದ ಸೋರೆ, ಹೊಲ-ಗದ್ದೆಗಳಲ್ಲಿ ಪೈರು ಕಾಳು ತುಂಬಿ ನಿಂತಾಗ ರೈತರು ಭೂತಾಯಿಗೆ ನೈವೇದ್ಯ ಅರ್ಪಿಸುವಾಗ ಹೊಸ ಗಡಿಗೆಯಲ್ಲಿ ಆಹಾರ ಪದಾರ್ಥಗಳನ್ನು ಇಟ್ಟುಕೊಂಡು ಹೋಗಲು ಬಳಸುವ ಗಡಿಗೆಗೆ ಚರಗದ ಗಡಿಗೆ ಎನ್ನುವರು.

ಚಾಚು ಕೋಲು (ನಾ) ಆವಿಗೆಯಲ್ಲಿ ಮಡಿಕೆಗಳನ್ನು ಸುಡುವಾಗ ಕಿಚ್ಚನ್ನು ಒಳಕ್ಕೆ ತಳ್ಳಲು ಬಳಸುವ ಉದ್ದವಾದ ಕವಲು – ಕಟ್ಟಿಗೆ. ಕೆಲವು ಪ್ರದೇಶದಲ್ಲಿ ಕುಂಬಾರರು ಇದರ ಹಿಂಭಾಗದಲ್ಲಿ ತಟ್ಟು ಕಟ್ಟಿ ಅದು ಸುಡದಿರಲೆಂದು ಮಣ್ಣು ಮೆತ್ತಿ ಕಿಚ್ಚನ್ನು ತಳ್ಳುವರು.

ಚೂರಿ (ನಾ) ಹೆರಿಗತ್ತಿ, ಗುಪ್ಪೆ ಮಾಡಿಟ್ಟ ಮಣ್ಣನ್ನು ಕತ್ತರಿಸಿ ತಗೆಯಲು ಉಪಯೋಗಿಸುವರು.



ಚಾಣಿಗೆ (ನಾ) ಜರಡಿ, ಸಾಣಿಗೆ, ಬೂದಿ ಮತ್ತು ಮಣ್ಣನ್ನು ಜಾಣಿಸಲು ಇದನ್ನು ಬಳಸುವರು. ಬೀದರ್ ಜಿಲ್ಲೆಯಲ್ಲಿ ಇದಕ್ಕೆ ಝುಲೋಡಿ ಎನ್ನುವರು.

ಚಿಂಪಲು (ನಾ) ಆವಿಗೆಯಲ್ಲಿ ಮಡಕೆಗಳನ್ನು ಸುಡಲು ಜೋಡಿಸಿ ಇಟ್ಟಮೇಲೆ ಅದರ ಮೇಲ್ಗಡೆ ಒಡೆದ ಹಂಚಿನ ಚೂರುಗಳಿಂದ ಮುಚ್ಚುವರು. ನಂತರ ಅದರ ಮೇಲೆ ಒಣಗಿದ ಸೊಪ್ಪುಸೆದೆ ಮುಚ್ಚುವರು.

ಚಿಟಗಿ ಮೊಳೆ (ನಾ) ಕೊಡ ಪಡಗ ಮೊದಲಾದವುಗಳನ್ನು ಗೆರೆ ಹಾಕಿ ಅಲಂಕಾರ ಮಾಡಲು ಉಪಯೋಗಿಸುವ ಮೊಳೆ.

ಚಿಪ್ಪು (ನಾ) ನೋಡಿ – ಪಲ್ಲಿ

ಚಿಲುಮೆ (ನಾ) — ತಂಬಾಕು ಸೇದಲು ಬಳಸುವ ಸಾಧನ. ಹುಕ್ಕ ಭಂಗಿ ಕೊಳವೆ ಆರರಿಂದ ಹತ್ತು ಸೆ.ಮೀ. ಉದ್ದದ ನಳಿಕೆ, ಇದರಲ್ಲಿ ತಂಬಾಕು ಮತ್ತು ಗಾಂಜಾ ತುಂಬಿ ಸೇದುವರು, ಕರ್ನಾಟಕದಲ್ಲಿ ಬಾಗಲಕೋಟೆಯ ಚಿಲುಮೆಗಳು ಪ್ರಸಿದ್ಧ, ಲಖನೌದ ಚಿಲುಮೆ, ಹುಕ್ಕಾಗಳು ಜಗತ್ ಪ್ರಸಿದ್ಧವಾಗಿವೆ. ಬಳಪುಕಲ್ಲಿನಲ್ಲಿ ಮತ್ತು ಲೋಹಗಳಲ್ಲು ಚಿಲುಮೆಗಳನ್ನು ತಯಾರಿಸುವರು ಆದರೆ ಮಣ್ಣಿನ ಚಿಲುಮೆಗಳಿಗೆ ಬೆಲೆ ಕಡಿಮೆ ಮತ್ತು ಹಗುರಾಗಿರುವುದರಿಂದ ಇವನ್ನೇ ಹೆಚ್ಚಾಗಿ ಬಳಸುವರು.



'ಚಿಲುಮಿ ತುಂಬಬೇಕೋ
ಕಿಲಮನರಿಯಬೇಕೋ' (ತತ್ವಪದ – ಕೊಳ್ಳೂರ ಹಸನಸಾಹೇಬ)

## ಜ

ಜಂಗಿನ ಕೊಡ (ನಾ) — ದೊಡ್ಡ ಕೊಡ, ಅಡ್ಡೆಯ ನಿಲುವುಗಳಲ್ಲಿ ಇಡುತ್ತಿದ್ದ ಕೊಡಗಳು.


ಜಗುಲಿಗುಳ್ಳ (ನಾ) — ಎಣ್ಣೆ ಕುಳ್ಳಿ, ದೇವರೆ ಮುಂದೆ ದೀಪ ಹಚ್ಚಲು ಉಪಯೋಗಿಸಲು ಎಣ್ಣೆ ತುಂಬಿ ಜಗುಲಿಯ ಮೇಲೆ ಇದನ್ನು ಇಡುವರು.

ಜಜ್ಜುಕಲ್ಲು (ನಾ) — ತದುಗಲ್ಲು, ಜಜ್ಜುವಕಲ್ಲು ಮಣ್ಣಿನ ಉಳ್ಳೆಗಳನ್ನು ಜಜ್ಜಿ ಅಗಲವಾದ ಹಲ್ಲೆಗಳನ್ನು ಮಾಡಲು ಬಳಸುವ ಕಲ್ಲು, ಹೆಣ್ಣು ಮಕ್ಕಳು ಕೈಯಿಂದ ಮಡಿಕೆ ಮಾಡುವಾಗ ಇದನ್ನು ಬಳಸುವರು. ಗಂಡಸರು ಗಡಿಗೆ ತಟ್ಟುವ ಕಲ್ಲಿನ ಹಾಗೆಯೇ ಇದರ ಆಕೃತಿ, ಗಾತ್ರದಲ್ಲಿ ದೊಡ್ಡದು.

ಜರಡಿ (ನಾ) — ಸಾಣಿಗೆ – ನೋಡಿ

ಜಾಜಾ (ನಾ) — ಕೆಂಪು ಬಣ್ಣದ ಮಣ್ಣು ಕುಂಬಾರರು ಐರಾಣಿಗಡಿಗೆಗಳಿಗೆ ಜಾಜಾದಿಂದ ಬಣ್ಣ ಬಳಿಯುವರು.

ಜಾಪಣಿ (ನಾ) — ಮುಚ್ಚಳ, ಇದು ಸ್ವಲ್ಪ ದೊಡ್ಡ ಗಾತ್ರದಲ್ಲಿರುವುದು, ಲಂಬಾಣಿ ಜನಾಂಗದಲ್ಲಿ ಈ ಪದ ಹೆಚ್ಚು ಬಳಕೆಯಲ್ಲಿದೆ.



ಜಿಗುಟು ಮಣ್ಣು(ನಾ) ಅಂಟಾದ ಮಿದು ಮಣ್ಣು ಮಡಕೆ ಮಾಡಲು ಯೋಗ್ಯವಾದ ಮಣ್ಣು

ಜೆಲ್ಲಿ(ನಾ) ದೊಡ್ಡ ಬಿದುರಿನ ಬುಟ್ಟಿ-ಪುಟ್ಟಿ, ಕುಂಬಾರರು ಮಡಿಕೆಗಳನ್ನು ಮಾರಾಟಕ್ಕೆ ಒಯ್ಯುವಾಗ ಇದರಲ್ಲಿ ಇಟ್ಟುಕೊಂಡು ಹೋಗುವರು.

ಜೇಡಿಮಣ್ಣು(ನಾ) ಮಡಕೆ ಮಾಡುವ ಕುಂಬಾರ ಮಣ್ಣು ಜೇಡಿಮಣ್ಣಿನ ಸಾಮಾನ್ಯ ಬಣ್ಣಕ್ಕೆ ಕಬ್ಬಿಣಾಂಶವೇ ಕಾರಣ – ನೋಡಿ ಮಣ್ಣು
ಜೇಡಿಮಣ್ಣು ಜಡಿದರೆ ಸಕ್ಕರೆ ಆಗುವುದೋ (ಗಾದೆ)

## ಟ

ಟೆರ್ರಾಕೊಟಾ (ನಾ) ಕುಂಭ ಕಲೆಯ ಒಂದು ಪ್ರಭೇದ (clay sculpture) ವಿವಿಧ ಬಗೆಯ ಅಲಂಕಾರಿಕ ವಸ್ತುಗಳನ್ನು, ಗೊಂಬೆಗಳನ್ನು ಮತ್ತು ಆಟಿಗೆ ಸಾಮಾನುಗಳನ್ನು ಸುಡಾವೆ ಮಣ್ಣಿನಿಂದ ತಯಾರಿಸಲಾಗುವುದು. ಈ ಮಣ್ಣಿನಿಂದ ತಯಾರಿಸಿದ ವಸ್ತುಗಳು ಸಾಮಾನ್ಯ ಮಡಿಕೆಗಳಿಗಿಂತ ಹೆಚ್ಚಿನ ಉಷ್ಣತೆಯಲ್ಲಿ ಸುಡಲಾಗುವುದು. ಟೆರ್ರಾಕೊಟಾ ವಸ್ತುಗಳು ಸಾಮಾನ್ಯವಾಗಿ ನಸುಗೆಂಪು ಬಣ್ಣದವಾಗಿರುತ್ತವೆ. ಗೃಹಬಳಕೆ ವಸ್ತುಗಳಿಗಿಂತ ಅಲಂಕಾರಿಕ ವಸ್ತುಗಳನ್ನು ಹೆಚ್ಚಾಗಿ ಇದರಿಂದ ತಯಾರಿಸುವರು ಭಾರತದಲ್ಲಿ ಪ್ರಾಚೀನ ಕಾಲದಿಂದಲೂ ಟೆರ್ರಾಕೊಟ ಮಣ್ಣಿನ ವಸ್ತುಗಳು ಬಳಕೆಯಲ್ಲಿವೆ. ಮೌರ್ಯರ ಕಾಲದಲ್ಲಿ ಟೆರ್ರಾಕೊಟ ಶಿಲ್ಪ ಬಹಳ ಪ್ರಸಿದ್ಧಿ ಪಡೆದಿತ್ತು ಉತ್ತರ ಪ್ರದೇಶದಲ್ಲಿ ಟೆರ್ರಾಕೊಟ ಶಿಲ್ಪ ಹೆಚ್ಚಾಗಿ ಬೆಳೆದು ಬಂದಿದೆ ದಕ್ಷಿಣದಲ್ಲಿ ಶಾತವಾಹನರ ಕಾಲದಲ್ಲಿ ಈ ಕಲೆಗೆ ಹೆಚ್ಚು ಪ್ರೋತ್ಸಾಹ ದೊರೆತಿದೆ ಭಾರತದ ಮೂರ್ತಿಶಿಲ್ಪಕಲೆಯಲ್ಲಿ ಅಖನೂರಿನ ಟೆರ್ರಾಕೊಟ ಶಿಲ್ಪ ತನ್ನದೆ ಆದ ವೈಶಿಷ್ಟ್ಯ ಪಡೆದಿದೆ. ಬಂಗಾಳದ ಬಿರ್‌ಬುಹಮ್ ಟೆರ್ರಾಕೊಟಾ ಶಿಲ್ಪ ಕೂಡ ಹೆಸರು ಪಡೆದಿತ್ತು. ಮಣ್ಣಿನ ಫಲಕಗಳಲ್ಲಿ ಅರಳಿದ ಟೆರ್ರಾಕೊಟ ಶಿಲ್ಪದಲ್ಲಿ ಕುಂಬಾರನ ಕಲಾ ಪ್ರತಿಭೆ – ಕೌಶಲ್ಯ ಎಲ್ಲವೂ ಅಪ್ರತಿಮವಾಗಿದೆ.




# ತ

ತಂದೂರಿ ಒಲೆ (ನಾ) — ಪರಾಟ ಬೇಯಿಸುವ ಒಲೆ, ವಾಡೆ ಆಕೃತಿಯಲ್ಲಿದ್ದು ಸುಮಾರು ಒಂದು ಮೀಟರ್ ಎತ್ತರವಿರುತ್ತದೆ. ಇಟ್ಟಿಗೆಯಿಂದಲೂ ಕೂಡ ಮಾಡುವರು ಹುಬ್ಬಳ್ಳಿ, ಶಿವಮೊಗ್ಗ ಜಿಲ್ಲೆಯ ಕುಂಬಾರರು ತಂದೂರಿ ಒಲೆ ಮಾಡುವರು. ತಂದೂರಿ ರೋಟಿ ಮಾಡಲು ಡಾಬಾಗಳಲ್ಲಿ ತಂದೂರಿ ಒಲೆ ಬಳಸುವರು.

ತಟ್ಟು (ಕ್ರಿ) — ಬಡಿ, ಸೊಳದಿಂದ ಹಸಿಮಡಿಕೆಗಳನ್ನು ಬಡಿದು ರೂಪ ಗೊಳಿಸುವುದು

ತತ್ರಾಣಿ (ನಾ) — ನೀರು ಕುಡಿಯಲು ಬಳಸುವ ಚಪ್ಪಟೆಯಾದ ಮಣ್ಣಿನ ಪಾತ್ರೆ ಇದಕ್ಕೆ ಎರಡೂ ಕಡೆ ಹೊಟ್ಟೆ ಉಬ್ಬಿದ್ದು, ಕುತ್ತಿಗೆ ಸಣ್ಣದಾಗಿರುತ್ತದೆ ಬಯಲು ಸೀಮೆಯ ರೈತರು ಹೊಲಕ್ಕೆ ಹೋಗುವಾಗ ತತ್ರಾಣಿಯ ತುಂಬ ನೀರನ್ನು ತುಂಬಿಕೊಂಡು ಬಗಲಿಗೆ ಹಾಕಿಕೊಂಡು ಹೋಗುವರು. ತತ್ರಾಣಿಯನ್ನು ಮಧ್ಯದಲ್ಲಿ ಹಗ್ಗ ಕಟ್ಟಲು ಅನುಕೂಲವಾಗಲೆಂದು ಸುಮಾರು ಐದು ಸೆಂ.ಮೀ. ಅಗಲಕ್ಕೆ ಏಣು ಮಾಡಿ ಜಾಗ ಮಾಡಿರುತ್ತಾರೆ. ತತ್ರಾಣಿಯ ನೀರು ತಂಪಾಗಿರುವುದು.




'ಬನ್ನಿಗಿಡದಡಿಯಲಿ ತತ್ರಾಣಿ ತಣ್ಣೀರ
ಕುಡಿದು ಬುತ್ತಿಯನುಂಡು ಸೊಂಪಾಗಿರೆ' (ಚೆನ್ನವೀರಕಣವಿ)
ಹೊಲಕ ಹೊಂಟಾನ ಹೊಟ್ಟೆಡುಮ್ಮ (ಒಗಟು)

ತಲೆಬೋಳಮಗಿ (ನಾ) — ಬಾಯಿಗೆ ಕಂಠವಿಲ್ಲದ ಬೋಳು ಗಡಿಗೆ, ಶವ ಸಂಸ್ಕಾರದ ಸಮಯದಲ್ಲಿ ಈ ಗಡಿಗೆಯ ತುಂಬ ನೀರು ತುಂಬಿ ಮೃತರ ಹಿರಿಯಮಗ ಇದನ್ನು ಹೆಗಲಲ್ಲಿ ಹೊತ್ತುಕೊಂಡು ಸಿದಗಿಯ ಗೋರಿಯ ಸುತ್ತಲೂ ಮೂರು ಸುತ್ತು ಹಾಕಿ ಹಿಂದಕ್ಕೆ ಚೆಲ್ಲುವನು ಈ ಪದ ಉತ್ತರ ಕರ್ನಾಟಕದಲ್ಲಿ ಬಳಕೆಯಲ್ಲಿದೆ.

ತಸ್ತಿ (ನಾ) — ಪಚೇಲಿ, ನೀರು ಕಾಯಿಸುವ ಗಡಿಗೆ, ಇದರಬಾಯಿ ಅಗಲವಿದ್ದು, ತಳದಪ್ಪವಿರುತ್ತದೆ. ನೋಡಿ – ಪಚೇಲಿ

ತಿಗುರಿ (ನಾ) ತಿಹುರಿ, ತಿಗರಿ, ತಿರುಗುಣಿ ಕುಂಬಾರನ ಚಕ್ರ, ಕುಂಬಾರನ ಗಾಲಿ ಕುಂಬಾರಿಕೆಯ ಸಾಧನ ಸಲಕರಣೆಗಳಲ್ಲಿ ತಿಗುರಿ ಮುಖ್ಯ. ತಿಗರಿಯ ಹಣೆ ಮತ್ತು ಕೈಗಳನ್ನು ಕಟ್ಟಿಗೆಯಿಂದ ಮಾಡಿಸಿ, ತಮಗೆ ಬೇಕಾದ ಅಳತೆಗೆ ಕುಂಬಾರರು ಮಣ್ಣಿನಿಂದ ತಿಗರಿಯನ್ನು ಮಾಡಿಕೊಳ್ಳುವರು. ಉತ್ತರ ಪ್ರದೇಶ್, ಬಿಹಾರ್, ರಾಜಾಸ್ಥಾನ, ಪಂಜಾಬದ ಕೆಲಭಾಗಗಳಲ್ಲಿ ಕಲ್ಲಿನ ಚಕ್ರದ ಬಳಕೆ ಕೂಡ ಇದೆ. ಪ್ರಾಚ್ಯ ವಿದ್ವಾಂಸರ ಪ್ರಕಾರ ವಿಶ್ವಕ್ಕೆ ಮೊದಲು ತಿಗುರಿಯನ್ನು ಪರಿಚಯಿಸಿದವರು ಸುಮೇರಿಯನ್‌ರು. ಈಜಿಪ್ಟಿಯನ್ನರು ತಮ್ಮ ಜನಾಂಗದ ಆರಾಧ್ಯದೇವರಾದ ಶನುಮ್‌ನು ತಿಗರಿಯನ್ನು ಕುಂಬಾರನಿಗೆ ಕೊಟ್ಟನೆಂದು ನಂಬುವರು




'ದಂಡಬ್ರಹ್ಮಂ ಕುಲಾಲ ಚಕ್ರದೊಳ್' (ಅಗ್ಗಳದೇವ)

'ತಿರುಗತದ ತಿಗರಿ
ಹರವಿ, ಗಡಗಿ ಮಡಕಿ ಹಡೀತದ
ಕುಂಬಾರನ ತಿಗುರಿ' (ಬೇಂದ್ರೆ)

ತಿಗುರಿ ಕಣ್ಣು (ನಾ) ತಿಗುರಿಯ ಹಣೆಯಲ್ಲಿ ಕೂಡಿಸಲಾದ ಬೆಣಚುಕಲ್ಲಿನಲ್ಲಿ ಗೋಲಾಕಾರವಾಗಿ ಮಾಡಲಾದ ತಗ್ಗು ಗುಬ್ಬಕಲ್ಲು ನೋಡಿ.


ತಿಗುರಿ ಗುಳಿ ತಿಗುರಿಯ ಸುತ್ತಿನಲ್ಲಿ ಮಾಡಿರುವ ಒಂದು ಒಂದುವರೆ ಸೆ.ಮೀ. ಅಗಲದ ಒಂದು ಸೆ.ಮಿ. ಆಳದ ಗುಳಿ ಅದರಲ್ಲಿ ಕೋಲನ್ನು ಇಟ್ಟು ತಿರುಗಿಸಿ ತಿಗುರಿಯನ್ನು ಚಾಲು ಮಾಡುವರು.

ತಿಗುರಿ ಕೋಲು (ನಾ) ಕುಂಬಾರಗೋಲು, ತಿಗರಿ ಬಡಿಗೆ, ತಿಗುರಿಯನ್ನು ತಿರುಗಿಸಲು ಬಳಸುವ ಬಿದರಿನ ಕೋಲು. ಇದು ಸುಮಾರು ಒಂದುವರೆಯಿಂದ ಎರಡು ಮೀಟರ್ ಉದ್ದವಿರುವುದು.



'ಪಂದಿ ತಿರುಗುವ ಪದದೊಳ್ ಕೇ ಲಂ
ಮಾಡುವ ತಿಗುರಿಯ ಕೋಲಂತೆ (ಮಲ್ಲಿಕಾರ್ಜುನ)

**ತಿಗುರಿ ಗೂಟ (ನಾ)** ಶೂಲ, ತಿಗರಿ ತಿರುಗಿಸಲು, ನೆಲದಲ್ಲಿ ಹುಗಿದ ಕಟ್ಟಿಗೆಯ ಗೂಟ. ಇದನ್ನು ಕಟ್ಟಿಗೆಯಿಂದ ಮಾಡಿದ್ದು, ಇದರ ತುದಿ ಭಾಗದಲ್ಲಿ ಮೊನಚಾಗಿದ್ದು, ತಳ ಭಾಗದಲ್ಲಿ ದಪ್ಪಾಗಿ ಇರುವುದು. ಇದು ಸುಮಾರು ಒಂದು ಮೀಟರ್ ಉದ್ದವಾಗಿದ್ದು, ೪೫ ಸೆಂ.ಮೀ. ನಷ್ಟು ನೆಲದ ಮೇಲ್ಗಡೆ ಇರುವಂತೆ ನೆಲದಲ್ಲಿ ತಗ್ಗುತೆಗೆದು ಬದ್ರ ಪಡಿಸುವರು, ತಿಗರಿ ಹಾಕುವಾಗ ಗೂಟದ ಮೊನಚಾದ ತುದಿಯನ್ನು ತಿಗರಿ ಕಲ್ಲಿನಲ್ಲಿ ಇಟ್ಟು ತಿಗರಿ ತಿರುಗಿಸುವರು.



**ತಿಗುರಿ ತಗಡು (ನಾ)** ತಿಗುರಿಯ ಹಣೆಯ ಪೀಠದ ಮೇಲೆ ಅರಲನ್ನು ಬಡಿದು, ಅದ್ದನು ದುಂಡಗೆ ಮಾಡಲು ಆಚೆ ಈಚೆ ಅರಲನ್ನು ಸವಲ ತೆಗೆಯಲು ಬಳಸುವ ತಗಡಿನ ತುಂಡು.

**ತಿಗುರಿ ಹಣೆ (ನಾ)** ತಿಗರಿಯ ಮಧ್ಯಭಾಗದಲ್ಲಿ ಗೋಲಾಕಾರವಾಗಿರುವ ಕಟ್ಟಿಗೆಯ ಪೀಠ. ಇದರ ಮೇಲೆ ಹದ ಮಾಡಿದ ಮಣ್ಣನ್ನು (ಅರಲನ್ನು) ಬಡಿದು ಮಡಕೆಗಳನ್ನು ಮಾಡುವರು.

**ತಿಗುರಿ ಹೂಡು (ಕ್ರಿ)** ತಿಗುರಿಯನ್ನು ಗೂಟಕ್ಕೆ ಹಾಕಿ ಅದನ್ನು ತಿರುಗಿಸಲು ಆರಂಭಿಸುವುದು.

**ತೀಡು (ಕ್ರಿ)** ಕೈಯಿಂದ ಮಡಕೆಗಳನ್ನು ಮಾಡುವ ಕ್ರಿಯೆ, ಹದಮಾಡಿದ ಅರಲನ್ನು ಸುರುಳಿ ಮಾಡಿ, ಜಜ್ಜುವ ಕಲ್ಲಿನಿಂದ ಜಜ್ಜಿ ನಂತರ ಅಚ್ಚಿನಲ್ಲಿಟ್ಟು ಒಂದು ಅರಿವೆ ಪಕಡಿಯಿಂದ ತಯಾರಿಸ ಬೇಕಾದ ಪಾತ್ರೆ ಸಿದ್ಧವಾಗುವವರಿಗೆ ತೀಡುವ ಕ್ರಿಯೆಗೆ ತೀಡುವುದು ಎನ್ನುವರು. ಹೀಗೆ ತೀಡಿದ ಪಾತ್ರೆಗೆ ಬೋಸಿ ಎನ್ನುವರು. ಇದಕ್ಕೆ ಕಂಠ ಇರುವುದಿಲ್ಲ, ಸಾಮಾನ್ಯವಾಗಿ ಕುಂಬಾರಗಿತ್ತಿಯರು ಚಿಕ್ಕ, ಚಿಕ್ಕ ಮಣ್ಣಿನ ಪಾತ್ರೆಗಳನ್ನು ಕೈಯಿಂದ ತೀಡಿ ಸಿದ್ಧಗೊಳಿಸುವರು.

**ತುಳಿ (ಕ್ರಿ)** ಸ್ವಚ್ಛ ಮಾಡಿದ ಮಣ್ಣಿಗೆ ನೀರನ್ನು ಹಾಕಿ ಕೆಲ ಘಂಟೆಗಳವರೆಗೆ ನೆನೆಯಲು ಬಿಟ್ಟು ಅದು ನೆನೆದ ಮೇಲೆ ಅದನ್ನು ಕಾಲಿನಿಂದ ತುಳಿದು ಹದ ಮಾಡಿ ಒಂದೆಡೆ ಒಟ್ಟುವರು.

**ತೆರೆ ಎತ್ತು (ಕ್ರಿ)** ತಿಗುರಿಯ ಹಣೆಗೆ ಹಾಕಿದ ಮಣ್ಣನ್ನು ಮಡಿಕೆ ಮಾಡಲು ಮೇಲೆತ್ತುವ ಕ್ರಿಯೆ.

ತೆರೆಬಡಿ (ಕ್ರಿ) — ತಿಗುರಿಯ ಹಣೆಯ ಮೇಲೆ ಅರಲನ್ನು ಒಟ್ಟುವುದು. ತಿಗುರಿಯನ್ನು ಹೂಡಿದ ಮೇಲೆ ಅದನ್ನು ನಿದಾನಕ್ಕೆ ಕೈಯಿಂದ ತಿರುಗಿಸುತ್ತ. ಹಿಡಿ, ಹಿಡಿ, ಅರಲನ್ನು ತೆಗೆದುಕೊಂಡು ಅದರ ಹಣೆಯ ಮೇಲೆ ಬಡಿದು ಅರಲನ್ನು ಒಟ್ಟುವ ಕ್ರಿಯೆಗೆ ತೆರೆ ಬಡೆಯುವುದು ಎನ್ನುವರು.

ತೋಯಿಸಿದ ಅರಿವೆ ಕೊರಡು (ನಾ) — ಹಸಿಬಟ್ಟೆಯುಳ್ಳ ಮರದ ಹಲಗೆ, ಸೊಳದಿಂದ ಮಡಕೆ ತಟ್ಟುವಾಗ ಆಗಾಗ್ಗೆ ಸೊಳವನ್ನು ಹಸಿಮಾಡಿಕೊಳ್ಳಲು ಪಕ್ಕದಲ್ಲಿ ಇಟ್ಟುಕೊಳ್ಳುವ ಹಸಿಬಟ್ಟೆಯುಳ್ಳ ಮರದ ಹಲಗೆ. ಇದು ಸುಮಾರು ೧೫ ಸೆಂ.ಮೀ. ಉದ್ದ ೧೦ ಸೆಂ.ಮೀ. ಅಗಲ ೮ ಸೆಂ.ಮೀ. ದಪ್ಪವಿರುತ್ತದೆ. ಅದರ ಮೇಲೆ ಎರಡು ಮೂರು ಮಡಿಕೆ ಮಾಡಿ ತೋಯಿಸಿದ ಬಟ್ಟೆಯನ್ನು ಇಟ್ಟಿರುತ್ತಾರೆ.


## ಥ

ಥಾಲಿ (ನಾ) — ಗಿಂಡಿ, ಸಣ್ಣ ಮಕ್ಕಳು ನೀರು ಕುಡಿಯಲು ಬಳಸುವ ಚಿಕ್ಕ ಪಾತ್ರೆ, ಹಾಲು ಮೊಸರು ಹಾಕಿ ಇಡಲು ಉಪಯೋಗಿಸುವರು.

## ದ

ದದ್ದು (ನಾ) — ಗಡಿಗೆಯಲ್ಲಿ ಸಣ್ಣಗೆ ಬಿಡುವ ಬಿರುಕು
'ಕೃಷ್ಣ ದದ್ದು ಮಡಿಕೆಯಲ್ಲಿ
ಮೋಟುಮರಕ್ಕೆ ನೀರೊತ್ತ ರೀತಿ'' (ಕಾ.ತ. ಚಿಕ್ಕಣ್ಣ)

ದಬ್ಬಿಗಡಿಗೆ (ನಾ) — ರೊಕ್ಕದ ಗಡಿಗೆ, ಹುಂಡಿ ಗಡಿಗೆ, ಬಾಯಿ ಮುಚ್ಚಿಮಾಡಿದ ಗಡಿಗೆ ಅದರ ನೆತ್ತಿಯ ಮೇಲೆ ನಾಣ್ಯ ಹೋಗುವಷ್ಟು ರಂಧ್ರ ಮಾಡಲಾಗಿರುವುದು. ಮನೆಯಲ್ಲಿ ಮಕ್ಕಳು ಮತ್ತು ಹೆಂಗಸರು ದುಡ್ಡನ್ನು ಉಳಿತಾಯ ಮಾಡಲು ದಬ್ಬಿಗಡಿಗೆಯಲ್ಲಿ ಹಾಕುವರು. ಅದು ಪೂರ್ತಿ ತುಂಬಿದ ಮೇಲೆ ಇಲ್ಲವೆ ಹಣದ ಅವಶ್ಯಕತೆ ಬಿದ್ದಾಗ ಅದನ್ನು ಒಡೆಯುವರು.




ದರಗ (ನಾ) ಗಂಡಸರು ಹಸಿ ಮಡಕೆಗಳನ್ನು ತಟ್ಟುವ ಸ್ಥಳ, ಕೆಳಗಡೆ ಗೋಣಿತಟ್ಟು ಹಾಕಿಕೊಂಡು, ತಟ್ಟಲು ಅನುಕೂಲವಾಗುವ ಹಾಗೆ ಮಾಡಿಕೊಳ್ಳುವರು.

## ಧ

ಧಾರಾಕುಡಿಕೆ (ನಾ) ನಳಿಕೆ-ಜೋಡಿಸಿದ ಮಡಿಕೆ, ಐರಾಣಿಗಡಿಗೆಗಳಲ್ಲಿ ಕೊಡುವ ಮಡಕೆಗಳಲ್ಲಿ ಇದೂ ಒಂದು. ಮದುವೆ ಸಮಾರಂಭಗಳಲ್ಲಿ ಇದರಲ್ಲಿ ಹಾಲನ್ನು ಹಾಕಿಕೊಂಡು ಎರೆಯಲು ಉಪಯೋಗಿಸುವರು. ಇದು ದಕ್ಷಿಣ ಕರ್ನಾಟಕ ಹಾಗೂ ಮಧ್ಯ ಕರ್ನಾಟಕದಲ್ಲಿ ಬಳಕೆಯಲ್ಲಿದೆ.

ಧಾರಾ ಪಾತ್ರೆ (ನಾ) ಚಿಕ್ಕ ಗಡಿಗೆ, ಈಶ್ವರ ಲಿಂಗಕ್ಕೆ ಜಲಾಭಿಷೇಕ ಮಾಡಲು ಇದನ್ನು ಬಳಸುವರು. ಈ ಮಡಿಕೆಯಲ್ಲಿ ನೀರು ತುಂಬಿ ಈಶ್ವರ ಲಿಂಗದ ಮೇಲೆ ಸ್ವಲ್ಪ ಅಂತರದಲ್ಲಿ ತೂಗುಬಿಡುವರು. ಮಡಿಕೆಯ ತಳದಲ್ಲಿ ಒಂದು ಚಿಕ್ಕ ರಂಧ್ರಮಾಡಿರುವುದರಿಂದ ನೀರು ಲಿಂಗದ ಮೇಲೆ ಧಾರೆಯಾಗಿ ನಿರಂತರ ಬೀಳುವುದು.

ಧೂಪದಾರತಿ (ನಾ) ಧೂಪಾರತಿ ದೂಪುಂಡಿಗೆ, ದೇವರ ಪೂಜೆ ಮಾಡುವಾಗು ಧೂಪ ಲೋಬಾನ ಹಾಕಲು ಮಾಡಿದ ಸಾಧನ.



ಧೂಪುಂಡಿಗೆ (ನಾ) ಧೂಪ ಹಾಕುವ ಬಟ್ಟಲು ಇದನ್ನು ಮಣ್ಣಿನಿಂದ ಮಾಡಿರುತ್ತಾರೆ. ನೆಲದ ಮೇಲೆ ಸರಿಯಾಗಿ ನಿಲ್ಲಲು ತಳಭಾಗದಲ್ಲಿ ವೃತ್ತಾಕಾರದ ಕಂಠ ಇರುತ್ತದೆ. ಈ ಬಟ್ಟಲಿಗೆ ಅಗಲವಾದ ಬಾಯಿ ಇರುತ್ತದೆ. ಇದರಲ್ಲಿ ಗಂಧ, ಪಚ್ಚೆ ಕರ್ಪೂರಗಳನ್ನು ಹಾಕಿ ಅದರ ಮೇಲೆ ಬೆಂಕಿ ಕೆಂಡಗಳನ್ನು ಇಡುವರು.



## ನ


| | |
|---|---|
| ನಾದು (ಕ್ರಿ) | ಉಜ್ಜುವುದು, ಮಡಿಕೆ ಮಾಡಲು ಹದಮಾಡಿಟ್ಟ ಮಣ್ಣನ್ನು ಚೆನ್ನಾಗಿ ಮಿದಿಯುವುದು. ಕಲಸುವುದು. |
| ನೀರಹರವಿ (ನಾ) | ನೀರು ತುಂಬಿದ ಹರವಿ, ಗ್ರಾಮದೇವತೆಯ ಹಬ್ಬದ ಸಂದರ್ಭದಲ್ಲಿ ಕುಂಬಾರನ ಮನೆಯಿಂದ ಹಾಲ ಹರವಿ ಜೊತೆಗೆ ನೀರಹರವಿಯನ್ನು ಒಯ್ದು ಹಾಲಹರವಿಯ ಜೊತೆ ಸ್ಥಾಪಿಸುವರು. |
| ನೀಲಗಾರ ಕುಂಬಾರ (ನಾ) | ಸೀರಿಗೆ ನೀಲಿಬಣ್ಣ ಹಾಕುವ, ನೀಲಗಾರ ಕುಂಬಾರರಿದ್ದರು. ಅದೇ ಅವರ ಉದ್ಯೋಗವಾಗಿತ್ತು. |
| ನೀವಿ (ಕ್ರಿ) | ತೀಡು, ಬೋಸಿತೀಡುವುದು. |
| ನುಣಿಸು (ಕ್ರಿ) | ನುಣುಪು ಮಾಡುವುದು. ಮಡಿಕೆಯನ್ನು ತಯಾರಿಸಿದ ಮೇಲೆ ಕೊನೆಯ ಹಂತದಲ್ಲಿ ತೆಳುವಾದ ಸೊಳದಿಂದ ಗಟ್ಟಿಸುವ ಕ್ರಿಯೆಗೆ ನುಣಿಸುವುದು ಎನ್ನುವರು. |
| ನುಚ್ಚಿನಗಡಿಗಿ (ನಾ) | ಜೋಳದ ನುಚ್ಚನ್ನು ಮಾಡಲು ಬಳಸುವ ಮಡಕೆ, ಅಂಬ್ಲಿಗಡಿಗೆ, ಗಂಜಿಮಡಕೆ<br>''ನುಚ್ಚಿನ ಗಡಗಿ ಸ್ವಚ್ಛ ತೊಳಿಯಮ್ಮ<br>ಎಚ್ಚರದಿಂದ ನಿಗಾ ಇಡಮ್ಮ'' ತತ್ವಪದ – ನಿಂಬೋಳಿ ತಿಪ್ಪಣ್ಣ |

## ಪ

| | |
|---|---|
| ಪಚೇಲಿ (ನಾ) | ಪಚೇಲಿ, ನೀರನ್ನು ಕಾಯಿಸುವ ಗಡಿಗೆ, ನೀರಿನ ತಪ್ಪಲೆ ಆಚಾರ ಹೇಳೋದು ಪಚೇಲ್ಯಾಗ ಉಚ್ಚಿ ಹೊಯ್ಯೋದು. (ಗಾದೆ) |



ಪಡ್ಡಿನ ಹಂಚು (ನಾ) ಗುಳಿ ಇರುವ ಮಣ್ಣಿನ ಹೆಂಚು. ಪಡ್ಡನ್ನು ಮಾಡಲು ಇದನ್ನು ಬಳಸುವರು. ಇದು ಹೆಚ್ಚು ದಪ್ಪವಾಗಿದ್ದು ಅದರಲ್ಲಿ ಆರರಿಂದ ಹನ್ನೆರಡು ಗುಳಿಗಳುಳ್ಳ ಹಂಚನ್ನು ತಯಾರಿಸುವರು. ಗ್ರಾಮೀಣ ಪ್ರದೇಶಗಳಲ್ಲಿ ಅಕ್ಕಿಹಿಟ್ಟಿನಿಂದ ಪಡ್ಡನ್ನು ತಯಾರಿಸಲು ಈ ಹಂಚನ್ನು ಬಳಸುವರು.




ಪಣತಿ (ನಾ) ಹಣತೆ, ಪ್ರಣತಿ ದೀಪದ ಬಟ್ಟಲು. ದೇವರ ಗುಡಿಗಳಲ್ಲಿ ದೀಪ ಹಚ್ಚಲು ತಯಾರಿಸಿದ ಮಣ್ಣಿನ ಹಣತೆ. ಸಾಮಾನ್ಯವಾಗಿ ದೀಪಾವಳಿ, ಕಾರ್ತೀಕ ಮಾಸ ಮತ್ತು ದೀಪೋತ್ಸವ ಸಂದರ್ಭಗಳಲ್ಲಿ ಪಣತಿಗಳಲ್ಲಿ ಎಣ್ಣೆ ಹಾಕಿ ದೀಪ ಹಚ್ಚುವರು.



'ಎನಿತು ಹಾರಿದರು ಚಟಾಕಿಗಳ ಮದ್ದು
ಹಣತೆ ಮಾಡುವದಿಲ್ಲ ಕಿಂಚಿತ್ತು ಸದ್ದು' (ದಿನಕರ ದೇಸಾಯಿ)
'ಅಮ್ಮ ಹಚ್ಚಿಟ್ಟ ಹಣತೆಗೆ
ನೂರು 'ಹೂ' ಕುಡಿಕೆಗಳ ನಾಚಿಸುವ ಬೆಳಕು' (ಎಂ.ಆರ್. ಕಮಲ)
'ಆರತೀ – ಆರತೀ – ಆರತೀ
ಇದು ಮಣ್ಣಿನದಲ್ಲಾ ಪ್ರಣತಿ' (ಬೇಂದ್ರೆ)
ಪಣತಿಗೆ ಎಣ್ಣಿಲ್ಲ ಉರಿಲಾಕ ಬತ್ತಿಲ್ಲ (ಗಾದೆ)
ಅಂಗೈ ಅಗಲಗದ್ದೆ ಗದ್ದೆಗಿಷ್ಟು ನೀರು ನೀರಾಗಿಷ್ಟು ಬೇರು (ಒಗಟು)

ಪರ್‍ಯಾಣ (ನಾ) ಅಗಲವಾದ ಮಣ್ಣಿನ ತಟ್ಟೆ, ಹರಿವಾಣ, ಇದನ್ನು ತಾಟಿನಂತೆ ಊಟಕ್ಕೆ ಬಳಸಲಾಗುತ್ತಿತ್ತು.

ಪಲ್ಟಿ (ನಾ) ಕುಂಡಾಳಿ, ಪರಟೆ, ಮಣ್ಣಿನ ಚಿಕ್ಕ ಬೋಗುಣಿ, ಚಿಪ್ಪು, ಟೆಂಗಿನ ಪರಟೆ, ಆಕಾರದಲ್ಲಿ ಇದು ಪರಟೆಯಂತಿರುವುದು ಜನರಾಡುವ ಭಾಷೆಯಲ್ಲಿ ಪಲ್ಟಿ ಆಗಿರುವಂತೆ ತೋರುತ್ತದೆ. ಇದನ್ನು ಚಟ್ನಿ ಮೆಣಸಿನ ಹಿಂಡಿ ಹಾಕಿಡಲು ಬಳಸುವರು.



ಪಳತ (ನಾ) ರಾಗಿ, ಭತ್ತ ಮೊದಲಾದ ಧಾನ್ಯಗಳನ್ನು ತುಂಬಿಡುವ ದೊಡ್ಡ ಗಾತ್ರದ ಮಣ್ಣಿನ ವಾಡೆ.

| | |
|---|---|
| ಪಾತ್ರೆ | ಪಾತ್ರಿ, ಮಡಕೆ, ನೀರಿನಗಡಿಗೆ, ಪಾತ್ರೆ ವೇದಕಾಲದ ಸಾಹಿತ್ಯದಲ್ಲಿ ಉಲ್ಲೇಖವಾಗಿದೆ.<br>'ಮಣ್ಣು ಪಾತ್ರೆಯಂಥಾ ಮಾಯಾಶರೀರ' (ತತ್ವಪದ)<br>ಪಾತ್ರೆ ಇದ್ದಷ್ಟೇ ನೀರು ಸಿಕ್ಕೀತು (ಗಾದೆ) |
| ಪಾಸಾಲೆ (ನಾ) | ಬಾನಿ, ತೆರೆದ ಬಾಯಿಯ ಪಾತ್ರೆ ನೋಡಿ - ಬಾನಿ.<br>'ಮಣ್ಣ ಪಾಸಾಲೆಯಲಿ ಜೀವ ಅಂಕುರಗೊಳ್ಳುವ ಗುಟ್ಟು' (ವೀಚಿ) |
| ಪಿಂಗಾಣಿ (ನಾ) | ಬಿಳಿಯ ಜೇಡಿಮಣ್ಣಿನಿಂದ ಮಾಡಿದ ಪಾತ್ರೆ. ಪಿಂಗಾಣಿ ಪಾತ್ರೆಗಳು ಮೊತ್ತಮೊದಲು ಚೀನಾ ದೇಶದಲ್ಲಿ ಹುಟ್ಟಿಕೊಂಡವು. ಈಗ ಪ್ರಪಂಚದಾದ್ಯಾಂತ ಪಿಂಗಾಣಿ ವಸ್ತುಗಳು ಬಳಕೆಯಲ್ಲಿವೆ, ಬಾಂಕಾಕಿನ ಕೆಲಡಿನ್ (Celadon) ಎಂಬ ಹೆಸರಿನ ಕಂಪನಿ ಪಿಂಗಾಣಿ ವಸ್ತುಗಳನ್ನು ತಯಾರಿಸ ತೊಡಗಿದ್ದರಿಂದ ಇಂಗ್ಲಿಷ್‌ನಲ್ಲಿ ಇದಕ್ಕೆ ಕೆಲಡಿನ್ ಎಂಬ ಹೆಸರು ಬಂದಿತೆಂದು ಕೆಲವರು ಹೇಳುವರು. ಚೈನಾ ಮಣ್ಣಿನಿಂದ ಮಾಡಿದ ಪಿಂಗಾಣಿಗಳು ಸುಟ್ಟಮೇಲೆ ಬಿಳಿ ಆಗುತ್ತವೆ ಗೃಹೋಪಯೋಗಿ ವಸ್ತುಗಳಿಂದ ಮೊದಲ್ಗೊಂಡು ಅಲಂಕಾರದ ವಿವಿಧ ಬಗೆಯ ವಸ್ತುಗಳನ್ನು ತಯಾರಿಸುವರು. ಪಿಂಗಾಣಿಯನ್ನು 'ಮಣ್ಣಿನ ಮುತ್ತು' ಎಂದು ಕರೆಯಲಾಗುತ್ತದೆ. |
| ಪಿಸುಗು ಮಣ್ಣು (ನಾ) | ಜಿಗುಟಿಲ್ಲದ ಮಣ್ಣು ಮಡಕೆ ಮಾಡಲು ಯೋಗ್ಯವಲ್ಲದ ಮಣ್ಣು |
| ಪೀಕದಾನಿ (ನಾ) | ಉಗಳುವ ಪಾತ್ರೆ, ಪಡಿಗ, ಎಲೆ-ಅಡಿಕೆ ಜಗಿದು ಉಗುಳಲು ಬಳಸುವ ಪಾತ್ರೆ. ಲಖನೌ ಪೀಕದಾನಿ ತಯಾರಿಕೆಯಲ್ಲಿ ಪ್ರಸಿದ್ಧಿ ಪಡೆದಿದೆ ವಿವಿಧ ಪಶು - ಪಕ್ಷಿಗಳ ರೂಪವಿರುವ ಮಣ್ಣಿನ ಪೀಕದಾನಿಗಳನ್ನು ತಯಾರಿಸುವರು. |

## ಫ

ಫಿಲ್ಟರ್ (ನಾ) ಇದು ಇಂಗ್ಲಿಷ್ ಪದ. ನೀರನ್ನು ಸೋಸಿ ಕುಡಿಯಲು ಬಳಸುವ ಪಾತ್ರೆ, ನಗರಗಳಲ್ಲಿ ಬೇಸಿಗೆಯಲ್ಲಿ ಕುಡಿಯಲು ತಂಪಾದ ನೀರನ್ನು ಪಡೆಯಲು ಮಣ್ಣಿನಿಂದ ತಯಾರಿಸಿದ ಫಿಲ್ಟರ್‌ಗಳನ್ನು ಬಳಸುವರು.

ಫೆಲ್ಡಸ್ಪಾರ್ (ನಾ) ಫೆಲ್ಡಸ್ಪಾರ್ ಖನಿಜವು ಕುಂಭವಸ್ತುಗಳ ತಯಾರಿಕೆಗೂ ಮತ್ತು ಅವುಗಳಿಗೆ ಮೆರಗು ಕೊಡುವದಕ್ಕಾಗಿ ಸಹ, ಹೀಗೆ ಎರಡು ರೀತಿಯಲ್ಲಿ ಉಪಯೋಗಿಸುವರು. ಹೊಳೆನರಸೀಪುರ, ಅರಸಿಕೆರೆ ಕೋಲಾರ ಜಿಲ್ಲೆಯ ತೊಂಡೇ ಬಾವಿಯಲ್ಲಿ ಫೆಲ್ಡಸ್ಪಾರ್ ಹೆಚ್ಚಿನ ಪ್ರಮಾಣದಲ್ಲಿ ದೊರೆಯುತ್ತದೆ.

ಫೊಗಲು (ನಾ) ಪಾತ್ರೆಯ ಬದಿ, ಮೈ


ಫೊಡಗು (ನಾ) ನೋಡಿ - ಹರವಿ

## ಬ

ಬಂಗರಿ (ನಾ) ಬಂಗ್ರಿ, ಸಿಹಿ ಅಡಿಗೆ ಮಾಡುವ ಪಾತ್ರೆ, ಕಡುಬು, ಗಿಣ್ಣು, ಕುಚ್ಚ ಕಡುಬು ಮೊದಲಾದ ಅಡುಗೆ ಮಾಡಲು ಬಳಸುವ ಮುಚ್ಚಳವಿರುವ ದುಂಡು ಪಾತ್ರೆ.

ಬಂಗ್ಲ (ನಾ) ದೊಡ್ಡ ಗಾತ್ರದ ಗಡಿಗೆ ಉತ್ತರ ಕನ್ನಡ ಜಿಲ್ಲೆಯ ಅಗೇರರು ಬಳಸುವ ಭಾಷೆ.

ಬಂಡಿ ಕುಡಗೋಲು (ನಾ) ಆವಿಗೆಗೆ ಬೇಕಾದ ಉರುವಲು, ಕಂಟಿ, ಮುಳ್ಳು, ಪೊದೆಗಳನ್ನು ಕೊಯ್ಯಲು ಉಪಯೋಗಿಸುವ ದೊಡ್ಡ ಗಾತ್ರದ ಕುಡಗೋಲು.



ಬಂದ್ಲ (ನಾ) ತಿಗುರಿಯ ಮೇಲೆ ತಯಾರಿಸಿದ ನೀರು ಕಾಯಿಸುವ ಪಚೇಲಿ ಹತ್ತರಿಂದ ಐವತ್ತು ಲೀಟರ್ ನೀರು ಹಿಡಿಯ ಬಲ್ಲದು ಇದರ ವಿಶೇಷವೆಂದರೆ ಇದರ ತಳವನ್ನು ಬಹಳ ತೆಳುವಾಗಿ ಮಾಡುವರು. ಇದರಿಂದಾಗಿ ನೀರು ಬೇಗನೆ ಕಾಯುತ್ತದೆ.



ಬಟ್ವಲು (ಕ್ರಿ) ದುಂಡಾದ ಮಣ್ಣಿನ ಪಾತ್ರೆ

ಬಡಿ (ನಾ) ತಟ್ಟು


ಬಡಿಗಲ್ಲು (ನಾ) ತಟ್ಟುವ ಕಲ್ಲು, ಕುಂಬಾರರು ಹಸಿ ಮಡಿಕೆಗಳಿಗೆ ರೂಪ ಕೊಡಲು ಕಲ್ಲು ಮತ್ತು ಸೊಳದಿಂದ ತಟ್ಟುವರು.

ಬತ್ತಿಸ್ಥಾಪಕ (ನಾ) ಊದಬತ್ತಿ, ಮೇಣದಬತ್ತಿ ಹಚ್ಚಿ ಇಡಲು ಮಾಡಿದ ಸಾಧನ, ಪಿಂಗಾಣಿ ವಸ್ತುಗಳಲ್ಲಿ ಇದನ್ನು ಕಾಣಬಹುದು.

ಬಲಿಗೊಂಬಿ (ನಾ) ಮಣ್ಣಿನ ಗೊಂಬೆ, ಅರಿಶಿಣ – ಕುಂಕುಮ ಸವರಿ ನಿವಾಳಿಸಿ ಊರ ಹೊರಗೆ ಒಗೆಯುವ ನಿವಾರಣೆ ಗೊಂಬಿ, ಮಾಂತ್ರಿಕರು ಬಳಸುವರು.

ಬಸಿಪೈಪು (ನಾ) ಮಣ್ಣಿನ ಪೈಪು, ಸುಮಾರು ಮೂವತ್ತು ಸೆಂ.ಮೀ.ನಿಂದ ಎರಡು ಮೀ. ಉದ್ದದವರೆಗೂ ಇದನ್ನು ತಯಾರಿಸುವರು, ರೈತರು ಭೂಮಿಯಲ್ಲಿ ಜವಳು ಹತ್ತಿದಾಗ ನೀರನ್ನು ಹರಿಬಿಡಲು ಬಳಸುವರು, ದಾವಣಗೆರೆ, ಶಿವಮೊಗ್ಗಾ, ರಾಯಚೂರ ಜಿಲ್ಲೆಗಳ ರೈತರು ತಮ್ಮ ಗದ್ದೆಗಳಲ್ಲಿ ಬಸಿ ಪೈಪನ್ನು ಹೆಚ್ಚಾಗಿ ಬಳಸುವರು.

ಬಾಣಲಿ (ನಾ) ಬಾಳ್ಗಿ, ಬಾಂಡಲೆ, ತಟ್ಟೆ ಕಬ್ಬಿಣ ಬುಟ್ಟಿ ಆಕಾರದಲ್ಲಿರುವ ಮಣ್ಣಿನ ಪಾತ್ರೆ, ಆಹಾರ ಪದಾರ್ಥಗಳನ್ನು ಕರಿಯಲು ಬಳಸುತ್ತಿದ್ದು ಈ ಪಾತ್ರೆ ಕ್ರಮೇಣವಾಗಿ ಕಣ್ಮರೆಯಾಗುತ್ತಲಿದೆ.



ಬ್ಯಾಕೋಲು (ನಾ) ಆವಿಗೆ ಸುಡುವಾಗ ಉರುವಲನ್ನು ಒಳಗೆ ತಳ್ಳಲು ಮತ್ತು ಕಿಚ್ಚನ್ನು ತಳ್ಳಲು ಬಳಸುವ ಕಟ್ಟಿಗೆಯ ಕೋಲು. ನೋಡಿ – ಕವೆಗೋಲು

ಬಾದಾಳ (ನಾ) ಬಯಲು ಸೀಮೆಯಲ್ಲಿ ಮಣ್ಣಿನ ಮಾಳಿಗೆಯ ಮನೆಗಳು ಒತ್ತೊತ್ತಾಗಿರುತ್ತವೆ. ಕಿಟಕಿಗಳೇ ಇರುವುದಿಲ್ಲ, ಗಾಳಿ ಬೆಳಕು ಮಾಳಿಗೆಯಲ್ಲಿಟ್ಟ ಬಾದಾಳಿದಿಂದಲೇ ಬರಬೇಕು. ನೋಡಿ – ಬೆಳಕಿಂಡಿ.
'ಬಲುಗಜಕ್ಕೆ ಬಾದಾಳದಲ್ಲಿ ಹಾದಿಯುಂಟೆ?' (ಬಿಬ್ಬಿ ಬಾಚಯ್ಯ)




**ಬಾದಾಳ ಹಂಚು (ನಾ)** ಬಾದಾಳಕ್ಕೆ ಮುಚ್ಚುವ ಹಂಚು ಮಳೆ ಬರುವಾಗ ನೀರು ಒಳಗೆ ಬೀಳದಿರಲೆಂದು ಮಡಕೆಯ ಒಡೆದ ಬೋಕಿಗಳನ್ನು ಬಾದಾಳದ ಬಾಯಿಗೆ ಮುಚ್ಚುವರು.

**ಬಾನ (ನಾ)** ಗಾತ್ರಕ್ಕೆ ತಕ್ಕಂತೆ ಒಂದರ ಮೇಲೊಂದು ಓತಿಟ್ಟ ಪಾತ್ರೆ ಸಾಲು ಅಡಕಲು ಗಡಿಗೆ.

**ಬಾನಿ (ನಾ)** ಬಾನೆ, ಕಲಗಂಚು, ಅಗಲ ಬಾಯಿಯ ಪಾತ್ರೆ, ಮಣ್ಣಿನ ಬಾನಿಯನ್ನು ಹಳ್ಳಿಗಳಲ್ಲಿ ಮುಸುರಿ ಬಾನಿಯಾಗಿ ದನಕರುಗಳಿಗೆ ನೀರು ಕುಡಿಯಲು, ಹೀಗೆ ಬೇರೆ ಕೆಲಸಗಳಿಗೆ ಬಳಸುವರು. ಬಾನಿಯನ್ನು ದುಂಡಾಕೃತಿ ಚೌಕಾಕತಿ, ಆಯತ, ಬಕೆಟ್ ಆಕೃತಿಯಲ್ಲಿ ಕೈಯಿಂದಲೆ ತೀಡಿ ಮಾಡುವರು.



**ಬಿಂದಿಗೆ (ನಾ)** ಮಣ್ಣಿನ ಚಿಕ್ಕ ಕೊಡ, ಹಳ್ಳಿಗಳಲ್ಲಿ ಕೆರೆ – ಬಾವಿಗಳಿಂದ ನೀರು ತರಲು ಸಾಮಾನ್ಯವಾಗಿ ಬಡವರು, ಬಿಂದಿಗೆ ಮಣ್ಣಿನ ಕೊಡಗಳನ್ನು ಬಳಸುವರು. ಮಣ್ಣಿನ ಕೊಡಗಳಲ್ಲಿ ಚಿಕ್ಕ ಕೊಡಕ್ಕೆ ಬಿಂದಿಗೆ ಎಂದು ಹೆಸರು. ಇತ್ತೀಚಿನ ದಿನಗಳಲ್ಲಿ ತಾಮ್ರದ, ತಗಡಿನ ಮತ್ತು ಪ್ಲಾಸ್ಟಿಕ್ ಬಿಂದಿಗೆಗಳು ಹೆಚ್ಚು ಬಳಕೆಯಲ್ಲಿವೆ.
'ತಾರಕ್ಕ ಬಿಂದಿಗೆ ನೀರಿಗೆ ಹೋಗುವೆ ತಾರೆ ಬಿಂದಿಗೆಯ'
(ಪುರಂದರದಾಸರು)
'ಬಿಂದಿಗೆ ತೆಗೆದಾಳೋ ಬಾವಿ ನೀರಿಗೆ ಹೊಂಟಾಳೋ' (ಜಾನಪದ)
ಬಿಂದಿಗೆ ಒಡೆದರೆ ಹಂದಿಗೆ ನೀರು ಎಲ್ಲಿ? (ಗಾದೆ)
ಹೋಗ್ತಾ ಬಾಣಂತಿ ಬರತಾ ಬಸುರಿ (ಒಗಟು)



**ಬಿಳಿಮಣ್ಣು (ನಾ)** ಮಡಿಕೆ ಮಾಡಲು ಬಳಸುವ ಬಿಳಿಮಣ್ಣು ಚೈನಾಕ್ಲೇ – ಬಿಳಿ ಮಣ್ಣನ್ನು ಪಿಂಗಾಣಿ ಪಾತ್ರೆಗಳನ್ನು ತಯಾರಿಸಲು ಬಳಸುವರು. ಈ ಮಣ್ಣಿನಿಂದ ತಯಾರಿಸಿದ ವಸ್ತುಗಳು ಹೆಚ್ಚು ಗಟ್ಟಿಯಾಗಿರುವವು – ವಿದ್ಯುತ್ ನಿರೋಧಕ ವಸ್ತುಗಳನ್ನು ತಯಾರಿಸಲು ಈ ಮಣ್ಣನ್ನು ಬಳಸುವರು.

**ಬೆಚ್ಚಗಡಿಗೆ (ನಾ)** ಹೊಲಗದ್ದೆಗಳಲ್ಲಿ ಹಕ್ಕಿಗಳನ್ನು ಓಡಿಸಲು ಮತ್ತು ಪಕ್ಷಿಗಳು ಬರದಂತೆ ನಿವಾರಣೆಗಾಗಿ ನಿಲ್ಲಿಸುವ ಮನುಷ್ಯಮುಖದ ಮಣ್ಣಿನ ಗಡಿಗೆ, ಸಾಮಾನ್ಯವಾಗಿ ಹುಲ್ಲು ತುಂಬಿದ ಮನುಷ್ಯ ಆಕಾರದ

ಬೊಂಬೆಯನ್ನು ಮಾಡಿ ಅದಕ್ಕೆ ಬೆಚ್ಚ ಗಡಿಗೆಯನ್ನು ಹಾಕುವರು. ಮತ್ತು ನೋಡಿದವರು ಹೆದರುವಂತೆ ಅದರ ಮುಖಕ್ಕೆ ಸುಣ್ಣ ಮತ್ತು ಕಾವಿ ಮಣ್ಣನ್ನು ಬಳೆಯುವರು. ನೋಡಿ - ಬೆದರು ಗೊಂಬೆ.

**ಬೆಡಗಿನ ಹಂಚು (ನಾ)** ದಬ್ಬೆ ಹಂಚು, ದಂಬೆ ಹಂಚು (Ridge Tile) ಮಾಳಿಗೆಗೆ ಹೊದಿಸಲು ಬಳಸುವ ಹಂಚು. ಈ ಹಂಚುಗಳು ೨-೩ ಸೆ.ಮಿ. ದಪ್ಪ ಮತ್ತು ಸುಮಾರು ೪೫ ಸೆಂ. ಉದ್ದ ಇರುತ್ತವೆ.



**ಬೆಣ್ಣೆಪಚೇಲಿ (ನಾ)** ಬೆಣ್ಣೆ ಗಡಿಗೆ, ಮಜ್ಜಿಗೆ ಕಡೆಯುವಾಗ ಅದರಲ್ಲಿಯ ಬೆಣ್ಣೆಯನ್ನು ತಗೆದಿಡಲು ಬಳಸುವ ಅಗಲ ಬಾಯಿಯ ಗಡಿಗೆ.

'ಬೆಣ್ಣೆಯ ಮಡಕೆಯಲ್ಲಿ ಕಿಚ್ಚು ತುಂಬಿ ಉರಿವು ತಿದ್ದುದ ಕಂಡೆ ಕಿಚ್ಚುಕ್ಕರಗಿ ಬೆಣ್ಣೆ ಉಳಿಯಿತ್ತು' (ಮೋಳಗಿ ಮಾರಯ್ಯ)

**ಬೆಣ್ಣೆಯ ಬೋಗುಣಿ (ನಾ)** ಬೆಣ್ಣೆಯನ್ನು ಶೇಖರಿಸಿಡಲು ಮಾಡಿದ ವಿಶೇಷ ಪಾತ್ರೆ. ಬಾಯಿ ಅಗಲವಾಗಿರುತ್ತದೆ.




**ಬೆದರುಗೊಂಬೆ (ನಾ)** ಬೆಚ್ಚಗಡಿಗೆ, ರೈತರು ಪಶು - ಪಕ್ಷಿಗಳನ್ನು ಓಡಿಸಲು ಹೊಲದಲ್ಲಿ ಒಂದು ಕೋಲಿಗೆ ಗಡಿಗೆಯನ್ನು ಬೋರಲಾಗಿ ಸಿಕ್ಕಿಸಿ ಅದಕ್ಕೆ ಸುಣ್ಣ ಬಳಿದು ಕಣ್ಣು - ಮೂಗು ರೂಪಿಸುವರು ಮತ್ತು ಅದಕ್ಕೆ ಅಂಗಿ ತೊಡಿಸಿ ಮನುಷ್ಯನ ಆಕಾರ ಕೊಡುವರು.



**ಬೆಳಕಿಂಡಿ (ನಾ)** ಬಾದಾಳ, ಗವಾಕ್ಷ, ಕಿಟಕಿ, ಬೆಳಕು ಮತ್ತು ಗಾಳಿ ಬರಲು ಮಾಳಿಗೆಯ ಮೇಲೆ ಮಾಡಿದ ಕಿಂಡಿ ಮಣ್ಣಿನ ಮಾಳಿಗೆಯ ಮೇಲೆ ಒಡೆದ ಮಡಿಕೆಯ ಕಂಠಗಳನ್ನು ಬೆಳಕಿಂಡಿಗಾಗಿ ಬಳಸುವರು.

**ಬೇಲ್ ಪಟ್ಟಿ (ನಾ)** ಮಡಿಕೆಗಳನ್ನು ಅಂದಗೊಳಿಸಲು ಬಳಸುವ ಬಿದುರಿನ ಚಿಕ್ಕ ತುಂಡು. ಇದಕ್ಕೆ ರೇಖಾಪಟ್ಟಿ ಎಂದೂ ಕರೆಯುವರು.




**ಬೇವಿನಕುಳ್ಳಿ (ನಾ)** ಮಣ್ಣಿನ ಪಾತ್ರೆ ಯುಗಾದಿ ಹಬ್ಬದಂದು ಬೇವನ್ನು ಕುಡಿಯಲು ಬಳಸುವರು.


**ಬೇವಿನಸ್ವಾದಿ (ನಾ)** ವತ್ತಲ-ಗಡಿಗೆ, ಯುಗಾದಿ ಹಬ್ಬದ ದಿನ ರೈತರು ನೀರು ಕಾಯಿಸುವ ಗಡಿಗೆಯನ್ನು ತಂದು ಅದರಲ್ಲಿ ನೀರು ತುಂಬಿ, ಬೇವಿನ ಎಲೆಗಳನ್ನು ಹಾಕಿ, ನೀರನ್ನು ಕಾಯಿಸಿ ಸ್ನಾನ ಮಾಡಲು ಬಳಸುವ ಗಡಿಗೆಗೆ ಬೇವಿನ ಸ್ವಾರಿ ಎನ್ನುವರು. ಬೆಳಗಾವಿ ಜಿಲ್ಲೆಯಲ್ಲಿ ಈ ಪದ ಹೆಚ್ಚು ಬಳಕೆಯಲ್ಲಿದೆ.

**ಬೋಕಿ (ನಾ)** ಒಡಕ ಗಡಿಗೆಗಳ ತುಂಡು ಹಂಚು (Potsherd)
ಕೈಯಾಗ ಇದ್ರ ಗಡ್ಗಿ ಕೆಳಗ ಬಿದ್ರ ಬೋಕಿ (ಗಾದೆ)
ನೂಕುವವನ ಮನೆ ಊಟಕ್ಕಿಂತ ಬೋಕಿಯ ಊಟಲೇಸು (ಗಾದೆ)
ನಿನ್ನ ಬಾಯಾಗ ಬೋಕಿ (ಬೈಗುಳ)


**ಬೋಗುಣಿ (ನಾ)** ಬೋಗಣಿ (Bowl) ಅಗಲ ಬಾಯಿಯ ಪಾತ್ರೆ, ಅಡಿಗೆ ಪದಾರ್ಥಗಳನ್ನು ಹಾಕಿಡಲು ಬಳಸುವ ಮಣ್ಣಿನ ಪಾತ್ರೆ, ಬೋಗುಣಿಗಳಲ್ಲಿ ಊಟದ ಪದಾರ್ಥಗಳನ್ನು ಹಾಕಿ, ಊಟದ ಟೇಬಲ್ ಮೇಲೆ ಇಡುವರು.



**ಬೋನ್ಸಾಯಿ ಪಾಟ್ (ನಾ)** ಕುಂಡ, ಕುಬ್ಜ ಗಿಡಗಳನ್ನು ಬೆಳಸಲು ತಯಾರಿಸಿದ ಕುಂಡ, ಮನೆ ಮತ್ತು ಅಫೀಸುಗಳ ಮುಂದೆ ಅಂದಕ್ಕಾಗಿ ಈ ಕುಂಡಗಳನ್ನು ಇಡುವರು.




**ಬೋಸಿ (ನಾ)** ಕಂಠವಿಲ್ಲದ ಮಣ್ಣಿನ ಬೋಳು ಆಕೃತಿ ಕುಂಬಾರಗಿತ್ತಿಯರು ಚಟಿಗೆ, ಮಡಕೆ ಮೊದಲಾದವುಗಳನ್ನು ಕೈಯಿಂದ ಮಾಡುವಾಗ ಮೊದಲು ಬೋಸಿ ಮಾಡಿ ಅದು ಸ್ವಲ್ಪ ಒಣಗಿದ ನಂತರ ಕಂಠ ಹಚ್ಚುವರು.



# ಭ

ಭರಣಿ (ನಾ) ಬರಣಿ, ಕರಡಿಗೆ, ಇದನ್ನು ಉಪ್ಪಿನಕಾಯಿ ಹಾಕಿಡಲು ಬಳಸುವರು. ಪಿಂಗಾಣಿ ಭರಣಿಗಳು ಹೆಚ್ಚು ಜನಪ್ರಿಯವಾಗಿವೆ 'ಭರಣಿ' ಎಂಬುದು, ಜಾರಹ್ ಎಂಬ ಅರಬ್ಬಿ ಪದದಿಂದ ಬಂದಿದೆ ಇಂಗ್ಲಿಷ್‌ನಲ್ಲಿ 'ಜಾರ್' ಎನ್ನುವರು. ತೆಲಗು ಭಾಷೆಯಲ್ಲಿ ಜಾಡಿ ಎನ್ನುವರು. ನೆಲದಲ್ಲಿ ಹೂತಿಡಲು ಅನುಕೂಲವಾಗುವಂತೆ ತಳ ಚೂಪಾದ ಭರಣಿಯನ್ನು ಕೆಲವೆಡೆ ಮಾಡುವರು.



ಭಾಂಡಾರೋ (ನಾ) ಕುಂಭಕ್ಕೆ ಭಾಂಡವೆಂದು ಹೆಸರು, ಇದರಿಂದ ಭಾಂಡಾರೋ (ಭಾಂಡಕಾರ) ಭಾಂಡಿಯೋ, ಭಾಂಡೇ ಎನ್ನುವ ಹೆಸರುಗಳು ಬಂದಿವೆ.

ಕುಂಬಾರರನ್ನು ಕೆಲವು ಪ್ರದೇಶಗಳಲ್ಲಿ ಭಾಂಡಾರೋ ಎಂದು ಕರೆಯುವರು.

ಭಾಂಡೆ (ನಾ) ಪಾತ್ರೆ, ಭಾಂಡೆ, ಲೋಹದ ಪಾತ್ರೆಗಳಿಗೆ ಭಾಂಡ, ಭಾಂಡೆ ಎಂದು ಕರೆಯುವರಾದರೂ ಮಣ್ಣಿನ ಪಾತ್ರೆಗಳಿಗೂ ಕೂಡ ಭಾಂಡೆ ಎಂದು ಕರೆಯುವ ರೂಢಿ ಇದೆ.

''ಮೃತ್ತಿಕೆಯೊಂದರಲಾದ ಭಾಂಡದಂತೆ'' (ಸಕಲೇಶಮಾದರಸ)

''ಭಾಂಡ ತತಿಗೊಂದು ಗದುಗೆಯ ಪೆಟ್ಟು ಸಾಲದೆ''

(ವಿರೂಪಾಕ್ಷ ಪಂಡಿತ)

ಭೂತಿಮರಿಗೆ (ನಾ) ಮಣ್ಣಿನಿಂದ ಮಾಡಿದ ವಿಭೂತಿ ಇಡುವ ಸಾಧನ, ಬಿದಿರು ಮತ್ತು ಕಟ್ಟಿಗೆಯಲ್ಲಿ ಮಾಡಿದ ಕೈಬುಟ್ಟಿಯಂತೆ ಇದು ಇರುವುದು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹೆಚ್ಚಾಗಿ ಬಳಕೆಯಲ್ಲಿದೆ.

# ಮ

ಮಂಕರಿ (ನಾ) ಬಂಕ್ರಿ, ದೋಸೆಬೇಯಿಸುವ ಹಂಚಿಗೆ ಮುಚ್ಚುವ ಮುಚ್ಚಳ

ಮಂಡೆ (ನಾ) ವತ್ತಲ, ನೀರು ಕಾಯಿಸಲು ಬಳಸುವ ಗಡಗಿ, ಪಚೇಲಿ, ಈ ಪದ ದಕ್ಷಿಣ ಕನ್ನಡದಲ್ಲಿ ಪ್ರಯೋಗದಲ್ಲಿದೆ.

ಮಗ್ಗಲು ತಟ್ಟು (ಕ್ರಿ) ಮಡಿಕೆಗಳನ್ನು ದರಗದಲ್ಲಿಟ್ಟು ಕಲ್ಲು ಮತ್ತು ಸೊಳದಿಂದ – ಕೆಳ ಭಾಗದಿಂದ ತಟ್ಟುತ್ತ ಹೆಚ್ಚಿನ ಮಣ್ಣನ್ನು ಮಧ್ಯಭಾಗಕ್ಕೆ ತಂದು, ಮಡಕೆ ಹಿಗ್ಗಿಸುವ ಕ್ರಿಯೆ.

ಮಗಿ (ನಾ) ಮಗೆ, ಮೊಗೆ, ಮಣ್ಣಿನ ತಂಬಿಗೆ, ಚೆಂಬು, ನೀರು ಹಾಕುವ ಘಗೆ, ನೀರು ತುಂಬುವ ಮಗೆ, ಐರಾಣಿ ಗಡಿಗೆಗಳಲ್ಲಿ ಐದು ಮಗಿ ಇಡುವ ಪದ್ಧತಿ ಇದೆ. ಕುರುಬರು ಕುರಿಹಾಲನ್ನು ಮಗೆಯಲ್ಲಿ ಹಾಕಿಡುವರು. ರೈತರು ಹೊಲ–ಗದ್ದೆಗಳಲ್ಲಿ ನೀರು ಕುಡಿಯಲು ಮಗಿಗಳನ್ನು ಬಳಸುವರು.



ಗಡಿಗೆ ಹೋಗಿದ್ದಕ್ಕೆ ಮಗಿ ಕೊಟ್ಟು ಶಾಸ್ತ್ರ ಕೇಳಿದರಂತೆ (ಗಾದೆ)
ಮಗೆ ಮಾಡದ ಕುಂಬಾರ ಗುಡಾಣ ಮಾಡ್ಯಾನೇನು (ಗಾದೆ)

ಮಜ್ಜಿಗೆ ಗಡಿಗೆ (ನಾ) ಮೊಸರು ಕಡೆದು ಮಜ್ಜಿಗೆ ಮಾಡುವ ಗಡಿಗೆ ಹಳ್ಳಿಗಳಲ್ಲಿ ರೈತರ ಮನೆಗಳಲ್ಲಿ ಮಜ್ಜಿಗೆ ಕಂಬದ ಪಕ್ಕದಲ್ಲಿ ಒಂದು ಸಿಂಬೆ ಇಟ್ಟು ಅದರ ಮೇಲೆ ಮಜ್ಜಿಗೆ ಗಡಿಗೆಯನ್ನು ಇಟ್ಟು ಕಡಗೋಲಿಂದ ಮೊಸರನ್ನು ಕಡೆದು, ಮಜ್ಜಿಗೆ ಮಾಡಿ ಬೆಣ್ಣೆ ತೆಗೆಯುವರು.

ಮಡಕೆ (ನಾ) ಗಡಿಗೆ, ಸ್ವಾರಿ, ಮೃಣ್ಮಯ ಪಾತ್ರೆ, ನೋಡಿ – ಗಡಿಗೆ

ಮಡಕೆಕೊಯ್ಯೋಮುಳ್ಳು (ನಾ) ತಿಗರಿಯ ಮೇಲೆ ಗಡಿಗೆಗಳನ್ನು ತಯಾರಿಸಿದನಂತರ ಅದನ್ನು ಬೇರ್ಪಡಿಸಲು ಉಪಯೋಗಿಸುವ ತಂತಿ ನೋಡಿ – ಚಟೇದಾರ.

ಮಣ್ಣಾವಿಗೆ (ನಾ) ಬರಿಮಣ್ಣಿನಿಂದಲೆ ನಿರ್ಮಿಸಿದ ಆವಿಗೆ, ಕುಂಬಾರರ ಭಟ್ಟಿ


ಮಣ್ಣಿನ ಕುರ್ಕಿ (ನಾ) ಮಣ್ಣಿನ ಪಾತ್ರೆ, ಕಾಡು ಕುರುಬರು ಹೆಚ್ಚಾಗಿ ಬಳಸುವರು.

ಮಣ್ಣಿನ ಕೊರಳಸರ (ನಾ) ಹೆಣ್ಣುಮಕ್ಕಳು ಕೊರಳಲ್ಲಿ ಹಾಕಿಕ್ಕೊಲು ಮಣ್ಣಿನಿಂದ ಮಾಡಿದ ಮಣಿಗಳ ಸರ, ಬೆಂಗಳೂರಿನಲ್ಲಿ ಈಗಲೂ ಮಣ್ಣಿನಿಂದ ಸುಂದರವಾದ ಸರಗಳನ್ನು ತಯಾರಿಸುವರು. ಮೊಹಂಜೋದಾರು ಹರಪ್ಪ ನಗರಗಳ ಉತ್ಖನದಲ್ಲಿ ಸುಂದರವಾದ ಮಣ್ಣಿನ



ಕಂಠಸರಗಳು ದೊರೆತಿವೆ. ಕೇರಳದಲ್ಲಿ ಟೆರ್ರಾಕೂಟಾ ವಸ್ತುಗಳ ಜೊತೆಯಲ್ಲಿ, ಮಣಿ ಸರಗಳನ್ನು ತಯಾರಿಸುವರು. ಈಗಲೂ ಕೂಡ ಎನಾಮಲ್ ಮಾಡಿದ ಮಣ್ಣಿನ ಸರಗಳಿಗೆ ಬೇಡಿಕೆ ಇದೆ.

ಮಣ್ಣಿನ ಬಂಡಿ



ಸಿಂಧೂ ಸಂಸ್ಕೃತಿಯ ಉತ್ಖನನದಲ್ಲಿ ದೊರೆತ ಮಣ್ಣಿನ ಆಟಿಕೆ ಸಾಮಾನುಗಳಲ್ಲಿ ಮಣ್ಣಿನ ಬಂಡಿ ಮುಖ್ಯವಾದುದು (ಕಾಲಮಾನ ಕ್ರಿ.ಪೂ. ೨೦೦೦) ಗ್ರಾಮಗಳಲ್ಲಿ ಮಕ್ಕಳು ಮಣ್ಣಿನ ಬಂಡಿ ಮಾಡಿಕೊಂಡು ಆಡುವುದನ್ನು ಈಗಲೂ ಕಾಣಬಹುದು. ಇದು ಬಡ ಮಕ್ಕಳ ಆಟಿಕೆ ಸಾಮಾನು.

ಮಣ್ಣು(ನಾ)

ಗಡಿಗೆಯನ್ನು ಮಾಡುವ ಯೋಗ್ಯವಾದ ಮಣ್ಣು (ಕುಂಬಾರ ಮಣ್ಣು) ಕೆರೆ, ಹಳ್ಳ, ಹೊಳೆಗಳ ದಂಡೆಗಳಲ್ಲಿ ದೊರೆಯುವುದು. ಬೇರೆ-ಬೇರೆ ಪ್ರದೇಶದಲ್ಲಿ ದೊರೆಯುವ ಈ ಮಣ್ಣು ಅಲ್ಲಿಯ ಭೂಗುಣಕ್ಕನುಗುಣವಾಗಿ ಬಣ್ಣದಲ್ಲಿ ಮತ್ತು ಗುಣಮಟ್ಟದಲ್ಲಿ ವ್ಯತ್ಯಾಸವಾಗಿರುವುದು.

ಕುಂಭವಸ್ತುಗಳ ತಯಾರಿಕೆಯಲ್ಲಿ ಜೇಡಿಮಣ್ಣನ್ನು ಬಳಸುವರು ಇದು ಅಂಟಾಗಿದ್ದು ಬೇಕಾದ ಆಕೃತಿ ಮಾಡಲು ಸುಲಭ. ಮಣ್ಣು ಅಲ್ಯೂಮಿನಿಯಮ್ ಮತ್ತು ಸಿಲಿಕಾನ್ ಆಕ್ಸೈಡುಗಳನ್ನು ಒಳಗೊಂಡಿರುತ್ತದೆ. ಮಣ್ಣಿಗಿರುವ ಅತ್ಯಂತ ಮುಖ್ಯವಾದ ಗುಣವೆಂದರೆ ಮಿದುಣತ್ವ. ಇತಿಹಾಸ ಪೂರ್ವದಿಂದಲೂ ಮಣ್ಣಿನ ಮಡಕೆ ತಯಾರಿಕೆ ನಡೆದು ಬಂದಿದೆ.

''ಹದಮಣ್ಣಲ್ಲದೆ ಮಡಕೆಯ ಮಾಡಲಾಗದು'' (ಕೇತಲದೇವಿ)

''ದೇವರು ಗುಡಿ ಮನೆ ಮಠವೆಲ್ಲ ಮಣ್ಣು
ಆವಾಗ ಆಡುವ ಮಡಕೆ ತಾಮಣ್ಣು'' (ಶ್ರೀನಿವಾಸ ದಾಸರು)

''ಕಾಲಲ್ಲಿ ತುಳಿದ ಮಣ್ಣು
ಗಡಿಗೆಯಾಗಿ ಏರುತ್ತದೆ
ತಲೆಯನ್ನು'' (ಜರಗನಹಳ್ಳಿ ಶಿವಶಂಕರ)

ಮಣ್ಣು ಬಿಟ್ಟು ಮಡಕೆ ಇಲ್ಲ ತನ್ನ ಬಿಟ್ಟು ದೇವರಿಲ್ಲ (ಗಾದೆ)

ಮಣ್ಣಿನ ಬೆಕ್ಕಾದರೇನು ಇಲಿ ಹಿಡಿದರೆ ಸಹಿ (ಗಾದೆ)

ಮಣ್ಣು ಮಾಡುವುದು (ಕ್ರಿ) ಕುಂಬಾರಗಿತ್ತಿಯರು ಮಡಕೆ ಮಾಡಲು ತೊಡಗುವುದನ್ನು ಮಣ್ಣು ಮಾಡುವುದು ಎನ್ನುವರು. ಉದಾ: ''ಗಂಗಮ್ಮ ಮಣ್ಣು ಮಾಡಾಕಹತ್ಯಾಳಾ'' ''ಮಣ್ಣು ಮಾಡಕ ಕುಂದ್ರಬೇಕ್ರಿ'' ಈ ಪದ ದಾವಣಗೆರೆ, ಬಳ್ಳಾರಿ, ಧಾರವಾಡ ಜಿಲ್ಲೆಗಳಲ್ಲಿ ಬಳಕೆಯಲ್ಲಿದೆ.

ಮಣ್ಣೆತ್ತು (ನಾ) ಮಣ್ಣಿನಿಂದ ಮಾಡಿದ ಎತ್ತು, ಮಣ್ಣೆತ್ತಿನ ಅಮವಾಸೆಯಲ್ಲಿ ರೈತರು, ಕುಂಬಾರರ ಮನೆಯಿಂದ ಮಣ್ಣಿನಿಂದ ತಯಾರಿಸಿದ ಎತ್ತುಗಳನ್ನು ತಂದು ಜಗಲಿಯ ಮೇಲಿಟ್ಟು ಪೂಜಿಸುವರು, 'ಶೃಂಗೇರಿ' ಭಾಗದಲ್ಲಿ ಕಾರ್ತೀಕ ಶುದ್ಧ ಅಷ್ಟಮಿಯನ್ನು 'ಬಸವನ ಅಷ್ಟಮಿ' ಎಂಬ ಹೆಸರಿನಲ್ಲಿ ಮಣ್ಣೆತ್ತುಗಳನ್ನು ಪೂಜಿಸುವರು.

ಮರಗಲು ಗಡಿಗೆ (ನಾ) ಆನಿಕೆ ಗಡಿಗೆ, ಹಸಿ ಮಡಿಕೆಗಳನ್ನು ಆವಿಗೆಯಲ್ಲಿ ಕ್ರಮವಾಗಿ ಇಟ್ಟು ಸುಡಲು ಸಿದ್ದಗೊಳಿಸುವಾಗ ಮೊದಲಿಗೆ ದೊಡ್ಡ-ದೊಡ್ಡ ಗುಡಾಣ, ಪಚೇಲಿ, ಕೊಡ ಮುಂತಾದ ಹಳೆಯ ಸುಟ್ಟ ಗಡಿಗೆಗಳನ್ನು ಹಸಿ ಮಡಕೆಳ ಆನಿಕೆಗಾಗಿ ಸಾಲಾಗಿ ಇಟ್ಟು ಜೋಡಿಸುವರು. ಆನಿಕೆಯಾಗಿ ಇಟ್ಟ ಹಳೆಯ ಸುಟ್ಟ ಮಡಿಕೆಗಳನ್ನು ಮರಗಲು ಗಡಿಗೆ ಎನ್ನುವರು. ಹಾವೇರಿ, ಬಳ್ಳಾರಿ ಜಿಲ್ಲೆ ಪ್ರದೇಶದಲ್ಲಿ ಈ ಪದ ಪ್ರಯೋಗದಲ್ಲಿದೆ. ಮರಗಲು ಗಡಿಗೆಯಾಗಿ ಕುಂಬಾರರು ಸಾಮಾನ್ಯವಾಗಿ ಒಡೆದ ಅರೆಒಡೆದ, ಮುಕ್ಕಾದ ಗಡಿಗೆಗಳನ್ನು ಉಪಯೋಗಿಸುವರು.

ಮರದಬ್ಬೆ (ನಾ) ತಿಗುರಿಯಿಂದ ಗೇಯುವಾಗ ಆಕೃತಿಗಳನ್ನು ನುಣ್ಣಗೆ ಮಾಡಲು ಉಪಯೋಗಿಸುವ ಮರದ ದಬ್ಬೆ.

ಮರಳು (ನಾ) ಉಸುಕು, ಹೊಯಿಗೆ, ಮರಳನ್ನು ಮಡಿಕೆ ಮಾಡುವ ಮಣ್ಣಿಗೆ ಬೆರೆಸುವರು ಇದರಿಂದ ಮಣ್ಣಿಗೆ ಬಿಗಿ ಬರುತ್ತದೆ. ಹಸಿ ಮಡಕೆಗಳು ಬೀಳುವದಿಲ್ಲ.

ಮರಿಗೆ (ನಾ) ಚಿಕ್ಕ ಮಣ್ಣಿನ ಪಾತ್ರೆ, ಆಹಾರ ಬೇಯಿಸಲು ಬಳಸುವರು. ದಕ್ಷಿಣ ಕರ್ನಾಟಕದಲ್ಲಿ ಈ ಪದ ಹೆಚ್ಚು ಬಳಕೆಯಲ್ಲಿದೆ. ಕಟ್ಟಿಗೆಯಲ್ಲಿ ಕೂಡ ಮರಿಗೆ ಮಾಡುವರು.

ಎಲ್ಲರೂ ಹೆಣ್ಣು ಹೆತ್ತರೆ ಮಾರೆಮ್ಮ ಮರಿಗೆ ಹೆತ್ತಳು (ಗಾದೆ)

ಮಸಿ (ನಾ) ಆವಿಗೆಯ ಬೂದಿಯನ್ನು ಸೋಸಿದಾಗ ಹಿಟ್ಟಿನಂತೆ ಬೀಳುವ ಬೂದಿಗೆ ಮಸಿ ಎನ್ನುವರು. ಮಡಿಕೆ ತಟ್ಟುವಾಗ ಮಣ್ಣು ದರಗ ಇಲ್ಲವೆ ನೆಲಕ್ಕೆ ಮಡಿಕೆಗೆ ಅಂಟಿಕೊಳ್ಳದಿರಲೆಂದು ಅದನ್ನು ಕೆಳಗೆ ಹರಡುವರು.

ಗಾಣಗೇರ ಗಸಿ ಕುಂಬಾರಮಸಿ (ಗಾದೆ)

ಮಸಿಬಟ್ಟೆ (ನಾ) ಆವಿಗೆಯಿಂದ ಮಡಕೆಗಳನ್ನು ಹೊರತೆಗೆಯುವಾಗ ಅವು ಬಿಸಿ ಇರುವದರಿಂದ ಕೈಯಲ್ಲಿ ಬಟ್ಟೆ ಹಿಡಿದುಕೊಂಡು ಮಡಿಕೆಗಳನ್ನು ಹೊರತೆಗೆಯುವರು ಆಗ ಕೈಯಲ್ಲಿ ಹಿಡಿದ ಬಟ್ಟೆಗಳಲಿ ಮಸಿ ತಾಗುವದು ಅದನ್ನೆ ಮಸಿ ಬಟ್ಟೆ ಎಂದು ಕರೆಯುವರು.

ಮಾಸಿನ ಕುಳ್ಳಿ (ನಾ) ಗಡಿಗೆ, ಚಿಕ್ಕಮಡಕೆ, ಹೆರಿಗೆಯಾದ ಮೇಲೆ ತಾಯಿಯ ಮಾಸವನ್ನು ಒಂದು ಮಡಿಕೆಯಲ್ಲಿ ಹಾಕಿ ನೆಲದಲ್ಲಿ ಹುಗಿಯಲು ಬಳಸುವ ಗಡಿಗೆಗೆ ಮಾಸಿನ ಕುಳ್ಳಿ ಎನ್ನುವರು.

ಮುಕ್ಕ (ನಾ) ಸ್ವಲ್ಪ ಭಾಗ ಒಡೆದ ಗಡಿಗೆ.

ಮುಚ್ಚಳ (ನಾ) ಗಡಿಗೆ, ಪಾತ್ರೆಗಳನ್ನು ಮುಚ್ಚಲು ಬಳಸುವ ವಿವಿಧ ಗಾತ್ರದ ಮಣ್ಣಿನ ಪಾತ್ರೆಗಳ ಮೇಲೆ ಮುಚ್ಚಲು ಅನುವಾಗುವಂತೆ ತಯಾರಿಸಿದ ಮಣ್ಣಿನ ಮುಚ್ಚಳ. ಮುಚ್ಚಳಗಳನ್ನು ಸಾಮಾನ್ಯವಾಗಿ ಕೈಯಿಂದ ತೀಡಿ ಮಾಡುವರು. ಅಲ್ಯೂಮಿನಿಯಮ್ ಬಳಕೆಗೆ ಬರುವ ಮುನ್ನ ಬಡವರು ಮತ್ತು ಜೈಲುಗಳಲ್ಲಿ ಖೈದಿಗಳಿಗೆ ಊಟಕ್ಕೆ ಕೊಡಲು ಮುಚ್ಚಳಗಳನ್ನು ಬಳಸುತ್ತಿದ್ದರು.

ಮುಚ್ಚಳದಲ್ಲಿ ತಿಂದು ಮೊಗೇಲೆ ಕೈ ಅದ್ದಿದಂಗೆ (ಗಾದೆ)

ಗಡಿಗೆ ಉಸಿರು ಕಟ್ಟಿಸುವಾಕಿ (ಒಗಟು)

ಮುಟ್ಟಿ (ನಾ) ಮಣ್ಣಿನ ಪಾತ್ರೆ, ತುಳುಪದ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಶೇಂದಿ ಅಂಗಡಿಗಳಲ್ಲಿ ಬಳಸುವರು.

ಮುಡಪಿನ ಕುಳ್ಳಿ (ನಾ) ದೇವರ ಮುಡುಪಾಗಿ ಹಣ ಸಂಗ್ರಹಿಸಿ ಇಡುವ ಚಿಕ್ಕ ಗಡಿಗೆ.

ಮೃತ್ ಶಿಲ್ಪ (ನಾ) ಮಣ್ಣಿನಲ್ಲಿ ಮಾಡಿದ ಕೊರೆದ ಶಿಲ್ಪ. ಮಾತೃದೇವತೆಯ ಸುಂದರ ವಾದ ಅನೇಕ ಮಣ್ಣಿನ ಮೂರ್ತಿಗಳು ಹರಪ್ಪ ಉತ್ಖನನದಲ್ಲಿ ದೊರೆತಿವೆ. ಗುಪ್ತರ ಕಾಲದಲ್ಲಿ ಮೃತ್ ಶಿಲ್ಪ ಬಹಳಷ್ಟು ಉನ್ನತಿಯನ್ನು ಪಡೆಯಿತು.

''Shilpa denotes both sculpture in stone and in clay''

ಮೃತ್ತಿಕೆ (ನಾ) — ಮಣ್ಣು, ಕುಂಬಾರಿಕೆಯ ಮಣ್ಣು ಮಣ್ಣಿನಿಂದ ಮಾಡಿದ ಮೃಣ್ಮಯ ವಸ್ತುಗಳು
''ಚಕ್ರಿಯ ಕುಲವಾಸದ ಮೃತ್ತಿಕೆಯಂತೆ'' (ಮಾದಾರ ಚೆನ್ನಯ್ಯ)
ಮೃತ್ತಿಕೆಯ ಹರಿಗೋಲನೇರಿ ನದಿಯ ತಪ್ಪಲಿಗೆ ಹೋಗ ಬಹುದೆ? (ಕೂಗಿನ ಮಾರಯ್ಯ)

ಮುದ್ದೆ ಕೈಪಳ (ನಾ) — ಮುದ್ದೆ ಮಾಡಲು ಬಳಸುವ ತಳದಿಂದ ತುದಿಯವರೆಗೆ ಒಂದೇ ಆಕಾರದ ಉದ್ದನೆಯ ಚಟಗಿ.



ಮೂಸೆ (ನಾ) — ಅಕ್ಕಸಾಲಿಗರು - ಪತ್ತಾರರು ಬಂಗಾರವನ್ನು ಕರಗಿಸಲು ಬಳಸುವ ಮಣ್ಣಿನ ಸಾಧನ.

## ರ

ರಂಜಣಿಗೆ (ನಾ) — ಕೊಪ್ಪರಿಗೆ, ದೊಡ್ಡ ಪಾತ್ರೆ, ವಾಡೆ, ನೀರು ಮತ್ತು ಕಾಳುಕಡಿ ಹಾಕಿಡಲು ಬಳಸುವ ಸಾಧನ, ರಂಜಣಿಗೆ ಎನ್ನುವ ಪದ ವಾಡೆಗೆ ಬದಲಾಗಿ ವಿಜಾಪುರ ಜಿಲ್ಲೆಯಲ್ಲಿ ಹೆಚ್ಚು ಬಳಕೆಯಲ್ಲಿದೆ ನೋಡಿ - ವಾಡೆ

ರಜ (ನಾ) — ಕಸ, ಆವಿಗೆ ಸುಡುವಾಗ ಉಪಯೋಗಿಸುವ ಸೆದೆ.

ರಾಡಿ (ನಾ) — ಕೌಳಿ, ಕೆಸರು, ಕುಂಬಾರಗಿತ್ತಿ ಕೈಯಿಂದ ಮಡಕೆ ಮಾಡುವಾಗ, ಕುಂಬಾರ ತಿಗುರಿಯಿಂದ ಮಡಕೆ ಗೇಯುವಾಗ ಕೈಗೆ ಅಂಟಿ ಕೊಳ್ಳುವ ತೆಳುವಾದ ಮಣ್ಣು. ''ಕೈಯಾನ ರಾಡಿ ತೊಕ್ಕೋಳೋ'' ಆಡು ಮಾತು.

ರೊಟ್ಟಿ ಕೈಪಳ — ಹಂಚಿನಲ್ಲಿ ಸುಟ್ಟ ರೊಟ್ಟಿಯನ್ನು ತೆಗೆದು ಹಾಕಿಡುವ ಅಗಲ ಬಾಯಿಯ ಕಿವಿಯುಳ್ಳ ಪಾತ್ರೆ.

ರೊಟ್ಟಿಹಂಚು (ನಾ) ಮಣ್ಣಿನ ತವೆ, ದಪ್ಪ ತಳವುಳ್ಳ ಮಣ್ಣಿನ ತವೆ. ಕೈ ರೊಟ್ಟಿಗಳನ್ನು ಮಾಡಲು ಹಳ್ಳಿಗಳಲ್ಲಿ ಇಂದಿಗೂ ಈ ಹಂಚನ್ನು ಬಳಸುವರು. 'ನನ್ನ ಕವಿತೆ ಸುಡುವ ಹಂಚಿನರೊಟ್ಟಿ' (ಆನಂದ ಝುಂಜರವಾಡ) ಹಂಚಿಗೆ ರೊಟ್ಟಿ ಚೆಂದ, ಹಚ್ಚಿ ಹಣೇಗ ಚೆಂದ (ಒಡಪು)




## ಲ

ಲದ್ದಿಗಡಿಗೆ (ನಾ) ಕುದುರೆ ಲದ್ದಿ ಬೆರಸಿ ತಯಾರಿಸಿದ ಮಣ್ಣಿನ ಗಡಿಗೆ ಅಡುಗೆ ಪಾತ್ರೆಗಳನ್ನು ತಯಾರಿಸುವ ಗಡಿಗೆಗಳಿಗೆ ಲದ್ದಿ ಬೆರೆಸುವದಿಲ್ಲ. ಉತ್ತರ ಕರ್ನಾಟಕ, ಹೈದರಬಾದ ಕರ್ನಾಟಕದ ಕುಂಬಾರರು ಮಣ್ಣಿಗೆ ಲದ್ದಿ ಬಳಸುವ ರೂಢಿ ಇದೆ.

ಲಳಿಗೆ (ನಾ) ಕೊಳವೆ, ಕುಂಬಾರರು ತಿಗುರಿಯ ಮೇಲೆ ಮಣ್ಣು ಹಾಕಿ ಬೇಕಾದ ಆಕೃತಿಯ ಟೊಳ್ಳಾದ ಲಳಿಗೆ ಗೇಯುವರು.

ಲೋಟೆ (ನಾ) ಪಿಂಗಾಣಿ ಲೋಟೆಯ ಹಾಗೆ ಇರುವ ಮಣ್ಣಿನ ಕಪ್ಪು, ನೀರಿನ ಲೋಟ, ಚಹ ಲೋಟ, ಹಿಡಿಮುಕೊಳ್ಳಲು ಅನುಕೂಲ ವಾಗುವಂತೆ ಹಿಡಿಯು ಇರುತ್ತದೆ. ಬೇರೆ ಬೇರೆ ಆಕೃತಿಯ ಲೋಟಗಳನ್ನು ಕುಂಬಾರರು ಮಾಡುವರು.




## ವ

ವಡಕಗಡಿಗೆ (ನಾ) ತೂತು ಬಿದ್ದ, ಸೀಳಿದ ಗಡಿಗೆ. ನೋಡಿ ಒಡಕ.

ವಡಗ (ನಾ) ಪಡಗ, ಹರವಿ, ನೀರು ತುಂಬಿಸಲು ಬಳಸುವ ದೊಡ್ಡ ಗಡಿಗೆ.

ವಾಡೆ (ನಾ) ದೊಡ್ಡ ಪ್ರಮಾಣದ ಗುಡಾಣ. ಕೋಳಿ ಮೊಟ್ಟೆ ಆಕಾರದ ಪಾತ್ರೆ, ರೈತರು ಇದನ್ನು ಜೋಳ, ರಾಗಿ ಭತ್ತ ಮೊದಲಾದ ಧಾನ್ಯಗಳನ್ನು ಶೇಖರಿಸಿಡಲು ಇದನ್ನು ಬಳಸುವರು. ಇದನ್ನು ಕೆಲವೆಡೆ ಗೋಡೆಯಲ್ಲಿ ಹುದುಗಿಸಿಡವರು. ಇವುಗಳಲ್ಲಿ ಸಣ್ಣ ಮತ್ತು ದೊಡ್ಡ ಗಾತ್ರದ ವಾಡೆಗಳು ಇರುತ್ತವೆ. ವಾಡೆಯಲ್ಲಿ ಧಾನ್ಯ ತುಂಬಿ ಅದರ ಬಾಯಿಯನ್ನು ಹುಲ್ಲು ಮತ್ತು ಬೇವಿನ ತಪ್ಪಲನ್ನು



ಹಾಕಿ ಮುಚ್ಚಿ ಅದಕ್ಕೆ ಮಣ್ಣು ಮೆತ್ತಿ ಸಗಣಿಯಿಂದ ಸಾರಿಸುವರು. ನುಸಿ ಮತ್ತು ಹುಳುಗಳು ಧಾನ್ಯಗಳನ್ನು ನಾಶ ಮಾಡದಂತೆ ಸಂರಕ್ಷಿಸಿ ಇಡುವ ಕ್ರಮವಿದು. ವಾಡೆಗೆ ಕೆಲವು ಕಡೆ ಅಳಗ ಎನ್ನುವರು. ವಾಡೆಯಲ್ಲಿಯ ಧಾನ್ಯಗಳನ್ನು ತೆಗೆದುಕೊಳ್ಳಲು ವಾಡೆಯ ಕೆಳಭಾಗದಲ್ಲಿ ಒಂದು ರಂಧ್ರ ಮಾಡಲಾಗಿರುತ್ತದೆ. ಕೈಹಗ್ಗ ಸೇರಿಸಿದ ಟೆಂಗಿನ ಕರಟವನ್ನು ಧಾನ್ಯ ತುಂಬುವ ಮೊದಲು ವಾಡೆಗೆ ಸೇರಿಸಿ ಅಳವಡಿಸಲಾಗಿರುವುದು. ಧಾನ್ಯ ಹೊರಕ್ಕೆ ತೆಗೆಯಬೇಕಾದಾಗ ಕರಟವನ್ನು ಹಿಂದಕ್ಕೆ ಸ್ವಲ್ಪ ತಳ್ಳಿದರೆ ಧಾನ್ಯ ಹೊರಕ್ಕೆ ಬರುವುದು. ಬೇಕಾದಷ್ಟನ್ನು ತಗೆದುಕೊಂಡ ಮೇಲೆ ಹಗ್ಗದಿಂದ ಮುಂದಕ್ಕೆ ಎಳೆದರೆ ರಂಧ್ರ ಮುಚ್ಚಿಕೊಳ್ಳುತ್ತದೆ ಹರಪನಹಳ್ಳಿ ತಾಲೂಕು ಕೂಲಹಳ್ಳಿಯಲ್ಲಿ ಹಿಂದಿನ ಕಾಲದ ೨೨ ಮಣ್ಣಿನ ವಾಡೆಗಳು ದೊರೆತಿವೆ.

ರೈತನ ಮನಿಯಾಗ ವಾಡೆ ಚೆಂದ, ಸೇಕಾರ ಮನಿಯಾಗ ಮಗ್ಗ ಚೆಂದ (ಗಾದೆ)

## ಶ

ಶವದ ಮಡಕೆ (ನಾ) — ಶವದ ಗಡಿಗೆ, ಶವಸಂಸ್ಕಾರದ ಸಮಯದಲ್ಲಿ ಬಳಸುವ ಗಡಿಗೆ

ಶರಾವ (ನಾ) — ಶ್ರಾವೆ, ಸರಾವ, ತಟ್ಟೆ ಮುಚ್ಚಳ a cover

ಶೀಥಕ್ (ನಾ) (Refrigerator) — ತರಕಾರಿಗಳನ್ನು ಬಾಡದಂತೆ ಶೇಖರಿಸಿ ಇಡಲು ಬಳಸುವ ಪಾತ್ರೆ. ಪದಾರ್ಥಗಳನ್ನು ತಂಪಾಗಿರಿಸಲು ಬಳಸುವ ರೆಫ್ರಿಜರೇಟರ್ ನಂತೆ ಇದನ್ನು ಬಳಸಲಾಗುವುದು. ಇದು ಕಡಿಮೆ ಬೆಲೆಯಲ್ಲಿ ದೊರೆಯುವುದರಿಂದ ಗ್ರಾಮೀಣ ಪ್ರದೇಶದ ಜನರಿಗೆ ಇದು ಬಹಳ ಉಪಯುಕ್ತ ಇವುಗಳನ್ನು ರಾಮನಗರ ಮತ್ತು ಖಾನಾಪುರದ ಪಾಟರಿ ಕೇಂದ್ರಗಳಲ್ಲಿ ತಯಾರಿಸುವರು.

ಶೂಲ (ನಾ) — ನೋಡಿ – ತಿಗುರಿಗೂಟ.

# ಸ

**ಸಣ್ಣ ಗುಂಡಾಲು (ನಾ)** ಕಿವಿಹಚ್ಚಿದ ಚಿಕ್ಕ ಚಟಿಗೆ



**ಸಬಸರಬಿ (ನಾ)** ಹಸಿ ಅರಿವೆ, ಮಡಕೆ ತಟ್ಟುವಾಗ ಮಡಿಕೆಗೆ ನೀರು ಹಚ್ಚಲು ಬಳಸುವ ಒದ್ದೆ ಬಟ್ಟೆ, ಕುಂಬಾರಗಿತ್ತಿಯರು ಮಡಕೆ ತೀಡುವಾಗ ಕೂಡ ಇದನ್ನು ಬಳಸುವರು. ತಿಗುರಿಯ ಮೇಲೆ ಮಡಕೆ ಗೇಯುವಾಗ ತಗ್ಗು ಏರುಗಳು, ಹಾಗೂ ಹುಳುಕುಗಳನ್ನು ಸಮಗೊಳಿಸಿ ನುಣುಪು ಮಾಡಲು ಒದ್ದೆ ಅರಿವೆ ಬಳಸಲಾಗುತ್ತದೆ.

**ಸಮೇವು (ನಾ)** ಕಾಲು ದೀಪ, ಸಾಮಾನ್ಯವಾಗಿ ೧೫ ಸೆ.ಮೀ. ನಿಂದ ೪೫ ಸೆಂ.ಮೀ. ಎತ್ತರವಿರುತ್ತದೆ. ಅದರ ಮೇಲೆ ಮಣ್ಣಿನ ಪ್ರಣತಿ ಇಟ್ಟು ದೀಪ ಹಚ್ಚುವರು. ಪಣತಿ ಸಮೇತ ಸಮೇವು ಕೂಡ ಮಾಡುವರು.



**ಸರಗಲ್ಲು (ನಾ)** ಕಡಬು ಬೇಯಿಸುವ ಮಣ್ಣಿನ ಪಾತ್ರೆ, ಇಡ್ಲಿ ಪಾತ್ರೆ ಹಾಗೆ ಇರುವುದು, ಮಲೆನಾಡಿನ ಜನರು ಇದನ್ನು ಹೆಚ್ಚಾಗಿ ಬಳಸುವರು, ಈ ಪಾತ್ರೆಯಲ್ಲಿ ಎರಡು ಅರೆಗಳಿದ್ದು ಮೇಲಿನ ಭಾಗದಲ್ಲಿ ಕಡಬು ಇಡುವರು ತಳಭಾಗದಲ್ಲಿ ರಂಧ್ರದ ಮೂಲಕ ನೀರು ತುಂಬುವರು, ಮೇಲ್ಭಾಗದಲ್ಲಿ ಮುಚ್ಚಳ ಮುಚ್ಚಿರುವುದರಿಂದ ನೀರಿನ ಆವಿಯಲ್ಲಿ ಕಡಬುಗಳು ಬೇಯುವವು.


**ಸರಬು (ನಾ)** ಮಡಿಕೆ ಸುಡುವ ಉರುವಲು, ನಾನಾ ತರದ ಗಿಡ - ಗಂಟಿಗಳಿಂದ ಇದನ್ನು ಸಂಗ್ರಹಿಸುವರು.

**ಸರಬೆ (ನಾ)** ಮಡಕೆ ತುಂಬಿದ ಗಾಡಿಯ ಎರಡು ಕಡೆಯ ಬಿದುರು ತಟ್ಟೆಗಳಿಗೆ ಉದ್ದನೆಯ ಹಗ್ಗದ ಸಹಾಯದಿಂದ ಕಟ್ಟಿದ ಗಡಿಗೆಗಳ ಸಾಲು. ಮಡಿಕೆಗಳನ್ನು ಕಟ್ಟುವ ಹಗ್ಗಕ್ಕೂ ಕೂಡ ಸರಬೆ ಎನ್ನುವರು.

**ಸಲಕಿ (ನಾ)** ಕುಂಬಾರ ಗುಂಡಿಯಿಂದ ಮಣ್ಣನ್ನು ತುಂಬಲು, ಆವಿಗೆ ಬೂದಿ ಎಳೆಯಲು, ಹೀಗೆ ಬೇರೆ ಬೇರೆ ಕಾರ್ಯಗಳಿಗೆ ಬಳಸುವರು.

ಸಾಣಿಗೆ (ನಾ) — ಜರಡಿ, ಮರಳು, ಬೂದಿಯನ್ನು ಸಾಣಿಸಲು ಕುಂಬಾರರು ಬಳಸುವರು.

ಸ್ವಾರಿಗಾಡಿ (ನಾ) — ಮಾರಾಟಕ್ಕೆ ಕೊಂಡೊಯ್ಯಲು ಮಡಕೆಗಳನ್ನು ತುಂಬಿಟ್ಟ ಎತ್ತಿನಗಾಡಿ ಬಳ್ಳಾರಿ, ದಾವಣಗೆರೆ, ಹಾವೇರಿ ಜಿಲ್ಲೆಗಳಲ್ಲಿ ಈ ಪದ ಹೆಚ್ಚು ಬಳಕೆಯಲ್ಲಿದೆ. ಗಡಿಗೆಗಾಡಿ, ಮಡಕೆಗಾಡಿ ಎಂತಲೂ ಕರೆಯುವರು.



ಸೀಳು (ಕ್ರಿ) — ಎರಡುಭಾಗ ಮಾಡು ಅರೆ ಹಸಿ ಇದ್ದಾಗ ಹಂಚನ್ನು ಎರಡು ಭಾಗ ಮಾಡುವರು. ಸೀಳು ಮುಚ್ಚುವರು. ಸುಟ್ಟ ನಂತರ ಹೋಳು ಮಾಡಲು ಅನುಕೂಲವಾಗುವದು.

ಸುಣ್ಣದ ಬಾನಿ (ನಾ) — ಕರಿಬಾನಿ, ಅಗಲಬಾಯಿಯ ಮಣ್ಣಿನ ಪಾತ್ರೆ, ಇದರಲ್ಲಿ ಸುಣ್ಣದ ನೀರನ್ನು ಹಾಕಿ ಚರ್ಮವನ್ನು ನೆನೆಸಿ ಹದ ಮಾಡಲು ಬಳಸುವರು.

ಸುತ್ತು (ಕ್ರಿ) — ಹರವೆ – ರಂಜಣಿಗೆಯಂತೆ ದೊಡ್ಡ ಪಾತ್ರೆಯನ್ನು ಮಾಡುವಾಗ; ಕೆಳಭಾಗದ ಮಣ್ಣನ್ನು ತಗೆದು ಮಡಿಕೆ ಸುತ್ತಲೂ ಮೆತ್ತುವುದಕ್ಕೆ ಸುತ್ತು ಹಚ್ಚು ಎನ್ನುವರು.

ಸುರಾಯಿ (ನಾ) — ಉದ್ದ ಕುತ್ತಿಗೆಯ ಹೂಜಿ

ಸುರಿಗಡಗಿ (ನಾ) — ಹೆಂಡದ ಗಡಿಗೆ, ಮಲೆನಾಡಿನಲ್ಲಿ ಸುಬ್ಬಿ ಎನ್ನುವ ಪದ ಪ್ರಯೋಗದಲ್ಲಿದೆ.


ಸೆದೆಮುಚ್ಚುವುದು (ಕ್ರಿ) — ಆವಿಗೆಯಲ್ಲಿ ಮಡಕೆಗಳನ್ನು ಸುಡಲು ಜೋಡಿಸಿಟ್ಟ ಮೇಲೆ ಆವಿಗೆಯ ಮೇಲ್ಭಾಗಕ್ಕೆ ಸೊಪ್ಪುಸದೆ ಹಾಕಿ ಮುಚ್ಚುವುದು. ನಂತರ ಅದರ ಮೇಲೆ ಒಣ ಮಸಿ ಮುಚ್ಚುವರು.

ಸೊಡ್ಲು (ನಾ) — ಪಣತಿ, ಹಣತಿ

ಸೊಳ (ನಾ) — ಸುಳ, ಸಲಪ, ಕೈಮಣಿ, ಮಡಿಕೆ ಬಡಿಯುವ ಕಟ್ಟಿಗೆಯ ಸಾಧನ, ತಟ್ಟುವ ಹಲಗೆ, ಕುಂಬಾರಿಕೆಯಲ್ಲಿ ಬಳಸುವ ಮುಖ್ಯ ಸಾಧನ, ಇದನ್ನು ಬೇವು, ಜಾಲಿ, ತೇಗಿನ ಮರದ ಹಲಗೆಯಿಂದ ತಯಾರಿಸುವರು ಸೊಳಗಳಲ್ಲಿ ಕುದುಮು ಮಾಡುವ ಸೊಳ, ಗಟ್ಟಿಸುವ ಸೊಳ, ನುಣಿಸುವ ಸೊಳ, ಅಚ್ಚು ಹಾಕುವ ಸೊಳ ಎಂದು ವಿವಿಧ ಪ್ರಕಾರಗಳಿವೆ.



**ಸೋರೆ (ನಾ)** ಸ್ವಾರಿ, ಮುದ್ದಿಸ್ವಾರಿ, ಮಡಕೆ, ಗಡಿಗೆ, ಈ ಪದ ಉತ್ತರ ಕರ್ನಾಟಕದಲ್ಲಿ ಹೆಚ್ಚು ಬಳಕೆಯಲ್ಲಿದೆ.




ಅಡುವ ಸೋರೆಕೊಟ್ಟು ಬಾಯ್ಗೆ ಬದ್ನಿಕಾಯಿ ಇಟಗಂಡ್ಲು (ಗಾದೆ)
ಹಸ್ತನಾಯಿ ಮುದ್ದಿಸ್ವಾರಿ ಮೂಸಿನೋಡ್ತಂತ (ಗಾದೆ)


**ಸೋಸು (ಕ್ರಿ)** ಸೋಸುವುದು, ನಾಜೂಕಾದ ಪಾತ್ರೆ, ಗೊಂಬೆ, ಮೂರ್ತಿ ಇತ್ಯಾದಿಗಳನ್ನು ಮಾಡಲು ಜರಡಿಯಿಂದ ಮಣ್ಣನ್ನು ಸೋಸಿ ನಯವಾದ ಮಣ್ಣನ್ನು ತಯಾರಿಸುವರು.

# ಹ

**ಹಂಚು (ನಾ)** ಓಡು, ಛಾವಣಿಗೆ ಹೊದಿಸುವ ಹಂಚು, ಅಧಿಕ ಮಳೆ ಬೀಳುವ ಪ್ರದೇಶಗಳಲ್ಲಿ ಮತ್ತು ಮಲೆನಾಡಿನಲ್ಲಿ ಹಂಚಿನ ಬಳಕೆ ಹೆಚ್ಚು. ಒಡೆದ ಮಡಿಕೆ ಚೂರಿಗೂ ಕೂಡ ಹಂಚು ಎನ್ನುವರು. ಹಂಚಿನಲ್ಲಿ ನಾನಾ ವಿಧಗಳಿವೆ ಕೊರಡು ಹಂಚು, ಪರಿಹಂಚು, ಡಂಬೆ ಹಂಚು, ಬೆಂಕ್ಸಿ ಹಂಚು ಇತ್ಯಾದಿ.



ಡಂಬೆ ಹಂಚು



ಮಾಳಿಗೆ ಹಂಚು

"ಹಂಚಿನಿದಿರಲಿ ಹಲ್ಲು ತೆರದರೆ ಮಿಂಚುಕನ್ನಡಿಯಾಗಬಲ್ಲುದೆ?"
(ಪ್ರಸನ್ನವೆಂಕಟದಾಸರು)

ಹಂಚು ಕಾಣದವಳು ಕಂಚು ಕಂಡ್ರೆ
ದಿನಕ್ಕೆ ಮೂರಾವರ್ತೆ ಬೆಳಗಿ ತಿಂದ್ಲು (ಗಾದೆ)

**ಹಣತೆ (ನಾ)** ನೋಡಿ – ಪಣತಿ.

**ಹರವಿ (ನಾ)** ಪರವಿ, ಹರಿವಿ, ಹರಿಜಿ, ಹರುಜಿ, ಹರುವಿ, ಕುಡಿಯುವ ನೀರನ್ನು ಹಾಕಿಡಲು ಬಳಸುವ ದೊಡ್ಡ ಗಡಿಗೆ, ನೀರಿನ ಪಡಗ, ಹಂಡೆ ತರಹ ಇರುವುದು.




"ದಂಡಿಗಂಜುವ ಭಂಟ ಒಡಕು ಹರವಿಯ ಕಂಠ" (ಕನಕದಾಸ)
ಹರವಿಯ ಅನ್ನದಲ್ಲಿ ಒಂದಗಳು ನೋಡಿದರೆ ಸಾಕು (ಗಾದೆ)
ಮುರುವಿಗೆ ಬಗೆ ಇಲ್ಲದಿದ್ರ ಹರವಿಗೂ ದರಿದ್ರವೆ (ಗಾದೆ)

**ಹರವೀಡು (ನಾ)** ದಪ್ಪ ಗಡಿಗೆ, ದಕ್ಷಿಣ ಕರ್ನಾಟಕದಲ್ಲಿ ಈ ಪದ ಹೆಚ್ಚಾಗಿ ಬಳಕೆಯಲ್ಲಿದೆ.

**ಹರಿಗಲ್ಲು (ನಾ)** ದೊಡ್ಡ ಮಡಿಕೆಗಳನ್ನು ತಟ್ಟುವ ಕಲ್ಲು.

**ಹರಿನಾಳಿಗೆ (ನಾ)** ಮಣ್ಣಿನ ಕೊಳವೆ, ಪೈಪು, ಮಳೆಗಾಲದಲ್ಲಿ ಮಾಳಿಗೆಯ ನೀರು ಹರಿದು ಹೋಗಲು ಕುಂಬಿಯಲ್ಲಿ ಹರಿನಾಳಿಗೆಯನ್ನು ಕೂಡ್ರಿಸುವರು. ಇವು ಸುಮಾರು ಒಂದು ಮೀಟರದಷ್ಟು ಉದ್ದ ಇರುತ್ತವೆ. ಜೋಡು ಹರಿನಾಳಗೆ ಕೂಡ ಇಡುವರು. ಹಳ್ಳಿಗಳಲ್ಲಿ ಮಳೆ ಬಿದ್ದ ಪ್ರಮಾಣವನ್ನು ಹೇಳುವಾಗ 'ಮಳಿ ಹರಿ ನಾಳಿಗಿ ನೀರ ಬಿದ್ದಂಗ ಬಿತ್ತು' – ಎನ್ನುವರು.



ಶಾನಬೋಗರ ಕುದುರೆ ನಿಂತು ನೀರು ಹೊಯ್ಯುತ್ತೆ (ಒಗಟು)

**ಹರಿವಾಣ (ನಾ)** ಅರಿವಾಣ, ಅಗಲವಾದ ತಟ್ಟೆ ಪರಾತ

ಚಿನ್ನದ ಹರಿವಾಣವಾದರೂ ಮಣ್ಣಿನ ಗೋಡೆಗೆ ಒರಗಬೇಕು (ಗಾದೆ)

**ಹಲ್ಲೆ (ನಾ)** ಕುಂಬಾರಗಿತ್ತಿಯರು ಕೈಯಿಂದ ಮಡಕೆ ಮಾಡುವಾಗ ಮಣ್ಣನ್ನು ಸುರುಳಿ ಮಾಡಿ, ತುಂಡು ತುಂಡು ಮಾಡಿಕೊಂಡು, ಒಂದೊಂದೆ ತುಂಡನ್ನು ಜಜ್ಜುವಕಲ್ಲಿನಿಂದ ಜಜ್ಜಿ ಅಗಲ ಮಾಡುವರು, ಇದು ರೊಟ್ಟಿಯ ಹಾಗೆ ದುಂಡಗಿರುವದು ಇದನ್ನೇ ಹಲ್ಲೆ ಎನ್ನುವರು, ಮಾಡುವ ಮಡಕೆಯ ಗಾತ್ರಕ್ಕನುಗುಣವಾಗಿ ಸಣ್ಣ, ದೊಡ್ಡ ಹಲ್ಲಿ ಮಾಡಿಕೊಳ್ಳಲುವರು, ಅದನ್ನೆ ತೆಗೆದು ಅಟ್ಟಿಗೆ ಹಾಕಿ ಕೈಯಿಂದ ತೀಡುವರು.


**ಹವೆ ಗೂಡು (ನಾ)** ಆವಿಗೆಯಲ್ಲಿ ಮಡಕೆಗಳನ್ನಿಟ್ಟು ಸುಡುವಾಗ ಒಳಗಿನ ಹಬೆ ಹೊರಕ್ಕೆ ಹೋಗುವಂತೆ ಆವಿಗೆಯ ಮಧ್ಯದಲ್ಲಿ ಬಿಟ್ಟ ಚಿಕ್ಕ ಕಿಂಡಿ.

**ಹಳಕು (ನಾ)** ಹಳಕ, ಆವಿಗೆಯನ್ನು ಬೂದಿಯಿಂದ ಮುಚ್ಚಿ ಆವಿಗೆ ಕಾಯುಸುತ್ತಿರುವಾಗ ಬೂದಿಯಲ್ಲಿ ಬೀಳುವ ತೂತುಗಳು, ಪುನಃ ಅವುಗಳನ್ನು ಬೂದಿಯಿಂದ ಮುಚ್ಚುವರು.

**ಹಳಗ (ನಾ)** ಹಳಗೆ, ನೀರು ಕಾಯಿಸುವ ಗಡಿಗೆ

**ಹಾಂಡ (ನಾ)** ಕುಂಬಾರ, ಕುಲಾಲ, ದಕ್ಷಿಣ ಕನ್ನಡ ಜಿಲ್ಲೆಯ ಕೆಲವಡೆ ಕುಂಬಾರರು ತಮ್ಮ ಹೆಸರಿನ ಮುಂದೆ ಹಾಂಡ ಎಂದು ಹಚ್ಚಿಕೊಳ್ಳುವರು ''ಹಂಡೆ'' ಪದದಿಂದ ಹಾಂಡ ಬಂದಿರಬೇಕು.

**ಹ್ಯಾಂಗಿಂಗ್ ಪಾಟ್ (ನಾ)** ಇದು ಇಂಗ್ಲಿಷ್ ಶಬ್ದ, ಕನ್ನಡದ ಪದ ಎನ್ನುವಷ್ಟರ ಮಟ್ಟಿಗೆ ದಕ್ಷಿಣ ಕರ್ನಾಟಕದಲ್ಲಿ ಬಳಕೆಯಲ್ಲಿದೆ. ಇದರ ಕಂಠಕ್ಕೆ ಮೂರು ಕಡೆ ರಂಧ್ರ ಮಾಡಿ ಹಗ್ಗ ಅಥವಾ ತಂತಿಯಿಂದ ತಕ್ಕಡಿ ರೀತಿ ಕಟ್ಟಿ ಮಣ್ಣನ್ನು ತುಂಬಿ ಅಲಂಕೃತ ಸಸ್ಯ ಬೆಳೆಸಿ ಮನೆಮುಂದುಗಡೆ ತೂಗುಹಾಕುವರು.



**ಹಾರುಹೊಡಿ (ಕ್ರಿ)**
೧. ಆವಿಗೆಯನ್ನು ತೆಗೆದು ಮಡಕೆಗಳು ಆರಲೆಂದು ಬಿಡುವುದು.
೨. ಮಡಕೆಗಳು ಕೆಂಪುಬಣ್ಣ ಪಡೆಯಲೆಂದು ಆವಿಗೆ ಹಿಂದೆ ಇಟ್ಟ ಕಿಂಡಿಗಳನ್ನು ತೆರೆದಿಡುವರು.

**ಹಾಲರವಿ (ನಾ)** ಹಾಲಹರವಿ, ಹಾಲು ತುಂಬಿದ ಹರವಿ, ಗ್ರಾಮ ದೇವತೆಯ ಹಬ್ಬದಲ್ಲಿ ಕುಂಬಾರರ ಮನೆಯಿಂದ ಒಯ್ಯುವರು.

**ಹಾಸಗಲ್ಲು (ನಾ)** ಅಡಿಗಲ್ಲು, ಹೆಂಗಸರು ಮಣ್ಣಿನ ಕೆಲಸ ಮಾಡುವಾಗ ಉಪಯೋಗಿಸುವ ದುಂಡಗಿನ ಚಪ್ಪಟೆಯಾದ ಕಲ್ಲು. ಸಾಮಾನ್ಯವಾಗಿ ೩೦ ಸೆಂ.ಮೀ. ವ್ಯಾಸವುಳ್ಳದ್ದು ನೆಲ್ಲದಲ್ಲಿಯೆ ಶಾಶ್ವತವಾಗಿ ಕೂರಿಸಿರುತ್ತಾರೆ. ಹಾಸುಗಲ್ಲಿನ ಮೇಲೆ ಮಣ್ಣಿನ ಉರುಳೆಗಳ ನಿಟ್ಟು ಜಜ್ಜುವ ಕಲ್ಲಿನಿಂದ ಉರುಳೆಯನ್ನು ಜಜ್ಜಿ ಚಪ್ಪಟೆ ಮಾಡಿ ಅಚ್ಚಿಗೆ ಹಾಕುವರು.

**ಹಿಡಕಿ (ನಾ)** ಹಿಡಿಕೆ, ಮಣ್ಣಿನ ವಿವಿಧ ಮಡಿಕೆಗಳನ್ನು ಕೈಯಲ್ಲಿ ಹಿಡಿಯಲು ಅನುಕೂಲವಾಗುವಂತೆ ಮಣ್ಣಿನ ಹಿಡಿಕೆಗಳನ್ನು ಪ್ರತ್ಯೇಕವಾಗಿ ತಯಾರಿಸಿ, ಹೂಜಿ ತತ್ರಾಣಿ, ಜಗ್ಗು ಇತ್ಯಾದಿ ಮಣ್ಣಿನ ವಸ್ತುಗಳಿಗೆ ಅವು ಅರೆ ಹಸಿ ಇರುವಾಗಲೆ ಅಂಟಿಸುವರು.


**ಹಿರೆಕೊಪ್ಪರಿಗೆ (ನಾ)** ಮಣ್ಣಿನ ದೊಡ್ಡ ಪಾತ್ರೆ, ಜಾತ್ರೆಗಳಲ್ಲಿ ಹುಗ್ಗಿ ಮಾಡಲು ಹಾಗೂ ನೀರು ತುಂಬಿಡಲು ಬಳಸುವರು ಬೆಳಗಾಂವ್ ಜಿಲ್ಲೆಯಲ್ಲಿ ಈ ಪದ ಬಳಕೆಯಲ್ಲಿದೆ.

**ಹುಗ್ಗಿ ಗಡಿಗೆ (ನಾ)** ಹುಗ್ಗಿ ಮಾಡಲು ಬಳಸುವ ಗಡಿಗೆ

**ಹುಡಿಮಣ್ಣು (ನಾ)** ಪುಡಿ, ಹುಡಿಮಣ್ಣು ಹೆಂಟೆಯನ್ನು ಒಡೆದು ಹುಡಿ ಮಾಡಿದ ಮಣ್ಣು ನೀರುಹಾಕದೆ ಇರುವಂತಹುದು.

ಹೂಕುಂಡ (ನಾ) ಹೂದಾನಿ, ಕುಂಡ, ಫ್ಲವ್ವರ್ ಪಾಟ್, ಮನೆ, ಆಫೀಸು ಮುಂತಾದ ಸ್ಥಳಗಳಲ್ಲಿ ವಿವಿಧ ಗಿಡ-ಬಳ್ಳಿಗಳನ್ನು ಬೆಳಸಲು ಮಾಡಿರುವ ಕುಂಡ,
'ಹೂವಿನ ಗೋಣಮುರಿದು
ಹೂದಾನಿಯಲ್ಲಿ ಇರಿಸುತ್ತೇನೆ' (ಸವಿತಾ ನಾಗಭೂಷಣ)

ಹೂಜಿ (ನಾ)



೧. ಹೂಜೆ, ಮಣ್ಣಿನಿಂದ ಮಾಡಿದ ಉದ್ದವಾದ ಕಂಠವಿರುವ ನೀರು ತುಂಬುವ ಪಾತ್ರೆ, ನೀರು ತುಂಬಿಡುವ ಪಾತ್ರೆ.
೨. ಮಣ್ಣಿನ ಮಗೆಯ ಮೇಲೆ ಇರಿಸುವ ಸ್ತ್ರೀ ದೇವತೆಯ ಆಕಾರದ ಆರೇಳು ಸೆಂ.ಮೀ. ಎತ್ತರದ ಮಣ್ಣಿನ ಮುಚ್ಚಿಗೆ ಇದನ್ನೆ ಕೆಲವೆಡೆ ಭರಣಿ ಎಂತಲೂ ಕರೆಯುವರು.

'ಓಜನ್ ಒಕ್ಕಲು ಅಲ್ಲ ಹೂಜಿ ಭಾಣ್ದ ದೊಳಲ್ಲ' (ಸರ್ವಜ್ಞ)
ಪೂಜೆ ಮಾಡಿದರೂ ಹೂಜೆ ಸಜ್ಜಾಗಲಿಲ್ಲ (ಗಾದೆ)

ಹೆಂಡದ ಮಡಿಕೆ (ನಾ) ಹೆಂಡ ಹಾಕಿಡುವ ಮಡಕೆ ಸೆರೆಗಡಿಗೆ ಬಳಕೆಗನುಗುಣವಾಗಿ ಇವುಗಳನ್ನು ವಿವಿಧ ವಿಧದಲ್ಲಿ ತಯಾರಿಸುವರು. ಈಚಲ ಮರ ಮತ್ತು ತಾಳೆಮರದಿಂದ ಹೆಂಡ ಇಳಿಸಲು ಮರಕ್ಕೆ ಕಟ್ಟುವ ಮಡಿಕೆಗೆ ಗೊಬ್ಬೆ, ಗೊಬ್ಬಿ, ಸುಬ್ಬಿ ಎಂದು ಕರೆಯುವರು. ಇದರ ಕಂಠ ಚಿಕ್ಕದಾಗಿರುವುದು. ಹೆಂಡದ ಮಡಕೆ ಗೊಬ್ಬೆಗಿಂತ ಸ್ವಲ್ಪ ಭಿನ್ನವಾಗಿದ್ದು, ಗಾತ್ರದಲ್ಲಿ ದೊಡ್ಡದಿರುತ್ತದೆ ರೋಮನ್ನರು ದೊಡ್ಡ ದೊಡ್ಡ ಮಡಿಕೆಗಳಲ್ಲಿ ಮಧ್ಯವನ್ನು ತುಂಬಿ ಹಡಗುಗಳ ಮೂಲಕ ಹೊರದೇಶಗಳಿಗೆ ಮಧ್ಯವನ್ನು ರವಾನಿಸುತ್ತಿದ್ದರು. ಅವರು ಆ ಮಡಿಕೆಗಳಿಗೆ ಎಂಫೋರಾ ಎಂದು ಕರೆಯುತ್ತಿದ್ದರು. ಕಳ್ಳ ಭಟ್ಟಿ ಇಳಿಸಲು ದೊಡ್ಡ ಪಡಗವನ್ನು ಬಳಸುವರು.
''ಭಾಂಡ ಭಾಜನ ಶುದ್ಧವಿಲ್ಲದವರ ಭಕ್ತಿ ಹೆಂಡದ ಮಡಕೆಯ ಹೊರಗೆ ತೊಳೆದಂತೆ'' (ಬಸವಣ್ಣ)
''ಸೆರೆಗಡಿಗೆಗೆ ಬೂದಿಸಲೆ
ಬಳಿದೋಡೇನು?'' (ಯೋಗಿ ವೇಮನ)

ಹೆಂಡ ಕುಡಿಯುವ ಮಡಿಕೆ (ನಾ) ಪಾನಪಾತ್ರೆ, ಚಿಕ್ಕ ಗಡಿಗೆ, ಸುರೆಯಗಡಿಗೆ, ಇದು ಲೋಟಾದಂತೆ ಇರುವುದು.

ಹೆಂಟೆ (ನಾ) ಮಣ್ಣಿನ ಹೆಂಡೆ

**ಹೆಡಿಗೆ (ನಾ)** ದೊಡ್ಡ ಗಾತ್ರದ ಪಿಂಗಾಣಿ ಭರಣಿ, ಬುಟ್ಟಿ, ರಾಜರ ಕಾಲದಲ್ಲಿ ಅರಮನೆಗಳಲ್ಲಿ ದ್ರಾಕ್ಷಾರಸ ಸಂಗ್ರಹಿಸಲು ಇದನ್ನು ಬಳಸುತ್ತಿದ್ದರು. ಕುಂಬಾರರು ಅದರಲ್ಲಿ ಮಡಕೆ ತುಂಬಿಕೊಂಡು ಮಾರುವರು.

**ಹೆಪ್ಪಿನ ಗಡಿಗೆ (ನಾ)** ಹಾಲು ಕಾಸಿ ಹೆಪ್ಪು ಹಾಕಲು ಬಳಸುವ ಗಡಿಗೆ, ಇದಕ್ಕೆ ಹಾಲಿನ ಗಡಿಗೆ ಎಂತಲೂ ಕರೆಯುವರು.

**ಹೆರಿ (ಕ್ರಿ)** ಮಣ್ಣು ಹೆರಿ, ಕುಂಬಾರರು, ಹದಮಾಡಿಟ್ಟ ಮಣ್ಣನ್ನು ಒಟ್ಟುವರು ಬೇಕಾದಾಗ, ಹೆರಿಕತ್ತಿ, ಚೂರಿಯಿಂದ ಮಣ್ಣನ್ನು ಹೆರೆದು ತೆಗೆಯುವರು.

**ಹೆರಿದೆಬ್ಬೆ (ನಾ)** ಚಿಕ್ಕ ತಗಡಿನ ತುಂಡು. ಕುಂಬಾರಗಿತ್ತಿಯರು ಅಚ್ಚಿನಲ್ಲಿ ಮಾಡಿದ ಮಡಕೆಗಳ ತಳವನ್ನು ನುಣ್ಣಗೆ ಮಾಡಲು ತಗಡಿನ ತುಂಡನ್ನು ಬಳಸುವುವರು.

**ಹೆರೆಬಳೆ (ನಾ)** ಬ್ಲೇಡವುಳ್ಳ ದುಂಡನೆಯ ಕಬ್ಬಿಣದ ಬಳೆ ಮಡಕೆ ಮಾಡಲು ತಂದ ಮಣ್ಣನ್ನು ರಾಸಿ ಹಾಕಿಟ್ಟನಂತರ ರಾಶಿಯಿಂದ ಕೆಲಸಕ್ಕೆ ಬೇಕಷ್ಟು ಮಣ್ಣನ್ನು ಹೆರೆದು ತೆಗೆಯುವ ಬ್ಲೇಡನ್ನೊಳಗೊಂಡ ದುಂಡನೆಯ ಕಬ್ಬಿಣದ ಬಳೆ.



**ಹೊನ್ನೆ (ನಾ)**
**ವಂದರಿ (ನಾ)** ಜರಡಿ, ಸಾಣಿಗೆ, ಮಣ್ಣಿನಲ್ಲಿರುವ ಕಸ-ಕಡ್ಡಿಯನ್ನು ಬೇರ್ಪಡಿಸಲು ಇದನ್ನು ಬಳಸುವರು ದಕ್ಷಿಣ ಕರ್ನಾಟಕದಲ್ಲಿ ಈ ಪದ ಹೆಚ್ಚಾಗಿ ಬಳಕೆಯಲ್ಲಿದೆ.

**ಹೊಮ್ಮಣ್ಣು (ನಾ)** ಬಿಂಗ, ಒಂದು ವಿಧದ ಮಣ್ಣು ಹೆಂಟೆಯ ರೂಪದಲ್ಲಿ ದೊರೆಯುವುದು. ಇದು ಬೂದಿ ಬಣ್ಣದ್ದಿರುವುದು, ಮಡಕೆಗಳಿಗೆ ಹೊಳಪು ಬರಲು ಈ ಮಣ್ಣನ್ನು ಹಸಿ - ಮಡಿಕೆಗಳಿಗೆ ಹಚ್ಚುವರು. ಈ ಮಣ್ಣು ಧಾರವಾಡ, ಹಾವೇರಿ ಮತ್ತು ಬೆಳಗಾಂವಿ ಜಿಲ್ಲೆಯಲ್ಲಿ ಭೂಮಿಯಲ್ಲಿ ದೊರೆಯುವುದು.

**ಹೋಕು (ನಾ)** ಬಳಕೆಗೆ ನಿರುಪಯುಕ್ತವಾದ ಸುಟ್ಟ ಮಡಿಕೆ. ಆವಿಗೆಯಲ್ಲಿ ಮಡಕೆಗಳನ್ನು ಸುಟ್ಟಾಗ ಕೆಲವು ಹಸಿ ಬಿಸಿ ಸುಡುವವು ಮತ್ತು ಕೆಲವು ಮುಕ್ಕಾಗುವವು. ಇಂಥ ಗಡಿಗೆಗಳಿಗೆ ಹೋಕು ಎನ್ನುವರು. 'ಮಳೆಗಾಲ್ದಾಗ ಆವಿಗಿ ಸುಟ್ರ ಹೋಕ ಬಾಳಪ್ಪಾ' ಕುಂಬಾರರ ಆಡುನುಡಿ.

Series of drawings showing the making and firing of pottery in ancient Egypt, from the tomb of Tyat Saqqara, 5[tt] Dynasty. C. 2400 BC



ಕೃಪೆ : Ten Thousand years of poettry – by Emmamul

# ಅಧ್ಯಾಯ ಮೂರು

# ಇಂಗ್ಲಿಷ್-ಇಂಗ್ಲಿಷ್-ಕನ್ನಡ ಪದಕೋಶ

## A

**Absorbency (n)** Sucking in, drinking in, the term which describes the rate at which a body of material (clay, unfired and fired plaster, wood, stone, etc will soak up moisture) ಹೀರುವಿಕೆ, ಹೀರಿಕೊಳ್ಳುವಗುಣ, ಸುಡದೆ ಇರುವ ಹಾಗೂ ಸುಟ್ಟ ಮಡಕೆಗಳು ನೀರನ್ನು ಹೀರಿಕೊಳ್ಳುವ ಗುಣ. ಸಾಮಾನ್ಯ ಉಷ್ಣತೆಯಲ್ಲಿ ಸುಟ್ಟ ಹಾಗೂ ಗ್ಲೇಸ್ಡ್ ಮಾಡದ ಮಡಕೆಗಳು ನೀರನ್ನು ಹೀರಿಕೊಳ್ಳುತ್ತವೆ. ಸುಟ್ಟ ಮಡಕೆಗಳನ್ನು ಬಳಸಿದಂತೆಲ್ಲಾ ರಂಧ್ರಗಳು ಮುಚ್ಚಲ್ಪಟ್ಟು ನೀರನ್ನು ಹೀರುವುದು ಕಡಿಮೆಯಾಗುತ್ತದೆ.

**Abstract (ad)** Not concrete or ideal. The description of an art form of object, which prinmarily, an arrangement of basic visual elements of colour line and contour mass shape and texture. ಅಮೂರ್ತ, ಸತ್ವ ಸೂಚಿ ಶಿಲ್ಪ, ಅಮೂರ್ತ ಕಲ್ಪನೆ.

**Agate ware (n)** Decorative ceramic ware made from different coloured clays, enamel ware with an agate like pattern – ವಿವಿಧ ವರ್ಣಗಳ ಮಣ್ಣಿನಿಂದ ಸಿದ್ಧಪಡಿಸಿದ ಅಲಂಕರಣ ಕುಂಭ ವಸ್ತುಗಳು.

**Air bubbles (n)** Balls of air or gas – These are pockets of air trapped in the clay. ಕುಂಬಾರಿಕೆಯ ಮಣ್ಣಿನಲ್ಲಿ ಉಳಿಯುವ ಗಾಳಿಗುಳ್ಳೆಗಳು ಮಣ್ಣಿನಲ್ಲಿ ಗಾಳಿ ಉಳಿದರೆ, ಸುಡುವಾಗ ಮಡಕೆಗಳು ಸೀಳುವ, ಒಡೆಯುವ ಸಾಧ್ಯತೆಗಳು ಹೆಚ್ಚು ಮಣ್ಣನ್ನು ಹದಗೊಳಿಸುವಾಗ ಗಾಳಿಗುಳ್ಳೆಗಳನ್ನು ಸಂಪೂರ್ಣವಾಗಿ ಇಲ್ಲದಂತೆ ಮಾಡಬೇಕು.

**Alkali (n)** Substance that neutralises acids. The fluxes used in certain types of glazes, soda and borax magnesia from the main part of low firing glazes. They have the effect of heightening the colour reaction to vide for example in Egyptian paste and Persion pottery – ಕ್ಷಾರ, ನೀರಿನಲ್ಲಿ ಕರಗಬಲ್ಲ ಮತ್ತು ಸುಡುವ ಗುಣಗಳ ಸ್ರಾವಕ, ಆಮ್ಲತೆಯನ್ನು ನಿವಾರಿಸುವ ಕ್ಷಾರ. ಮಡಕೆಗೆ ಹೊಳಪು ಮೈ ಭರಿಸಲು ಉಪಯೋಗಿಸುವರು. ಈಜಿಪ್ಟ ಮತ್ತು ಪರ್ಷಿಯನ್ ಕುಂಭಗಳನ್ನು ಹೆಸರಿಸಬಹುದು. ಆಲ್ಕಾಲಿ ಮಣ್ಣಿನ ಪಿ.ಎಚ್. ಮೌಲ್ಯ ಏಳಕ್ಕಿಂತ ಹೆಚ್ಚಾಗಿರುವುದು.

**Alloy (n)** A metal that is a mixture of one or more metals – ಬೆರಕೆಯ ಲೋಹ, ಕೀಳುಲೋಹ, ಮಿಶ್ರಲೋಹ

**Alluvial (n)** Material deposited by flood – ರೇವೆಮಣ್ಣು ಇದನ್ನು ಮಡಕೆಗಳನ್ನು ತಯಾರಿಸಲು ಬಳಸುವರು. ಬಂಗಾಳದಲ್ಲಿ

ಟೆರ್ರಾಕೊಟಾ ವಸ್ತುಗಳನ್ನು ತಯಾರಿಸಲು ಹೆಚ್ಚಾಗಿ ರೇವುಮಣ್ಣನ್ನು ಬಳಸುವರು.

Alumina ($Al_2O_3$) — The oxide of aluminium. A major ingredient found in all clays and glazes – ಎಲ್ಲಾ ಮಣ್ಣು ಮತ್ತು ಗ್ಲೇಸ್‌ನಲ್ಲಿರುವ ಒಂದು ಘಟಕ. ಕುಂಭವಸ್ತುಗಳನ್ನು ಮಾಡುವ ಮಣ್ಣಿನಲ್ಲಿ ಸುಮಾರು ೩೯–೭೨ರಷ್ಟು ಅಲ್ಯೂಮಿನ ಇರಬೇಕು.

Amplita (n) — A bottle usually made among the Romans either glass or earthen ware – ಪ್ರಾಚೀನ ರೋಮನ್ನರು ಗಾಜು ಇಲ್ಲವೆ ಮಣ್ಣಿನಿಂದ ಸಿದ್ಧಪಡಿಸಿದ ಬಾಟಲಿ.

Amphora (n) — Greek jar, mainly for storage with oval body and two handles reaching from mouth or neck or to the shoulder – ಧಾನ್ಯಗಳನ್ನು ಸಂಗ್ರಹಿಸಿಡಲು ಗ್ರೀಕ್ ಕುಂಬಾರರು ಮಾಡುತ್ತಿದ್ದ ಮೊಟ್ಟೆ ಆಕೃತಿಯ ವಾಡೆ, ಇದರ ತಳಚೂಪಾಗಿದ್ದು ಮಣ್ಣಿನಲ್ಲಿ ಹೂಳಲು ಅನುಕೂಲವಾಗುತ್ತಿತ್ತು. ಎತ್ತಿಡಲು, ಹಾಗೂ ಸಾಗಾಟಕ್ಕೆ ಅನುಕೂಲವಾಗುವಂತೆ ಬಾಯಿಯ ಕೆಳಬದಿಯಿಂದ ಭುಜದವರೆಗೆ ಎರಡು ದೊಡ್ಡ ಹಿಡಿಕೆಗಳನ್ನು ಅಂಟಿಸುತ್ತಿದ್ದರು. ಎಣ್ಣೆ ಮತ್ತು ಮದ್ಯವನ್ನು ತುಂಬಿಡಲು ಕೂಡ ಎಂಪೋರವನ್ನು ಬಳಸುತ್ತಿದ್ದರು. ಸುಮಾರು ೨೫ರಿಂದ ೪೦ ಲೀಟರ್ ದ್ರವವನ್ನು ತುಂಬುವಷ್ಟು ದೊಡ್ಡದಾದ ತಳ ಚೂಪವಿಲ್ಲದ ಎಂಪೋರಗಳನ್ನು ಕೂಡ ಮಾಡುತ್ತಿದ್ದರು.



Ampulla (n) — A bottle with a bulbous body and narrow neck used by the ancient – Romans for oil, wine or other liquids – ಪ್ರಾಚೀನ ರೋಮನ್‌ರು, ಗಾಜು ಯಾ ಮಣ್ಣಿನಿಂದ ಮಾಡಿದ ಜೋಡು ಹಿಡಿಕೆಯ ಪಾತ್ರೆ. ಪೂಜಾ ವಿಧಿಗಳಲ್ಲಿ ಮತ್ತು ತೈಲ ಇಲ್ಲವೆ ಮದ್ಯ ತುಂಬಿಡಲು ಬಳಸುತ್ತಿದ್ದರು.

Anvil (n) — An iron block on which metals are shaped – ಅಡಿಗಲ್ಲು, ಸೆರಾಮಿಕ್ ಕೈಗಾರಿಕೆಯಲ್ಲಿ ಕೂಡ ಬಳಸುವರು.

Argil (n) — A whitish potters clay – ಕುಂಬಾರಿಕೆಯ ಬಿಳಿ ಮಣ್ಣು, ಜೇಡಿ ಮಣ್ಣು.

Art (n) — Skill a technique or method used in deliberate creation of an image or object – ಕಲೆ, ಚಾತುರ್ಯ, ವಿದ್ಯಾ ಕೌಶಲ್ಯ ಮಾನವೀಯ ಅನುಭವಗಳನ್ನು ವ್ಯವಸ್ಥಿತ ರೀತಿಯಲ್ಲಿ ಅನ್ಯರಿಗೆ ತಿಳಿಸುವ ಸಾಧನ. ಕುಂಬಾರಿಕೆ ಜನೋಪಯೋಗಿ ಕಲೆಯಾಗಿ ಬಹು ಪ್ರಾಚೀನದಿಂದ ಬೆಳೆದು ಬಂದಿದೆ. Pottery is an art, has divine origin – (Sirherbest Read)

Aryballos (n) — Oil bottle with narrow neck usually with glabular body used by athletes at the bath – ಗ್ರೀಕ್ ಕ್ರೀಡಾಪಟುಗಳು ಸ್ನಾನಕ್ಕಾಗಿ ಬಳಸುತ್ತಿದ್ದ ಮಣ್ಣಿನಿಂದ ಮಾಡಿದ ಕಿರಿದಾದ ಕುತ್ತಿಗೆಯ ಬಾಟಲಿ

Ash (n) — The grey powder which remains something has burnt. It is commonly used to provide from 40 to 60 percent of high temperature glaze ingradients – ಕಟ್ಟಿಗೆ, ಸೊಪ್ಪು, ಸೆದೆ ಸುಟ್ಟ ಬೂದಿ, ಬೂದಿಯು ಒಂದು ಸ್ರಾವಕ: ಸಿಲಿಕಾ ಮತ್ತು ಅಲ್ಯೂಮಿನಗಳನ್ನು ಒಳಗೊಂಡಿದೆ. ಕುಂಬಾರರು ಮಣ್ಣನ್ನು ಹದಮಾಡಲು ಬೂದಿಯನ್ನು ಮಣ್ಣಿಗೆ ಬೆರೆಸುವರು.

## B

Bag wall (n) — A fire brick structure in a kiln which prevents the flames striking the ware directly – ಮಣ್ಣಿನ ವಸ್ತುಗಳನ್ನು ಆವಿಗೆಯಲ್ಲಿಟ್ಟು ಸುಡುವಾಗ ಜ್ವಾಲೆಗಳು ಮಡಕೆಗೆ ನೇರವಾಗಿ ತಾಗದಿರಲೆಂದು ಅಗ್ನಿ ನಿರೋಧಕ ಇಟ್ಟಿಗೆಯಿಂದ ಮಾಡಿದ ತಡೆಗೋಡೆ.

**Ball clay (n)** A very plastic clay used in bodies and glazes – ಉಂಡೆಜೇಡು, ಹೆಚ್ಚು ಮಿದುಣತ್ವ ಉಳ್ಳದ್ದು, ಕುಂಭ ವಸ್ತುಗಳನ್ನು ತಯಾರಿಸಲು ಹಾಗೂ ಗ್ಲೇಸಿಂಗಿಗೆ ಉಪಯೋಗಿಸುವರು. ಮೊದಲಿಗೆ ಗಣಿಗಳಿಂದ ತಗೆದ ಮಣ್ಣನ್ನು ಉಂಡೆಗಳನ್ನಾಗಿ ಮಾಡಿ ಮಡಕೆ ಮಾಡುವ ಕಾರ್ಯಾಗಾರಕ್ಕೆ ಸಾಗಿಸುತ್ತಿದ್ದರು. ಇದರಿಂದಾಗಿ 'ಬಾಲ್ ಕ್ಲೇ' ಎನ್ನುವ ಹೆಸರು ಬಂದಿದೆ.

**Ball mill (n)** A revolving drum mechanicaly driven, containing hard balls of flint or fired por celain which grind powders finally in a mixture with water – ತಿರುಗುವ ಡ್ರಮ್, ಕುಂಭ ಕೈಗಾರಿಕೆಗೆ ಬೇಕಾದ ಚಿಕ್ಕಯಂತ್ರ, ಜೇಡಿಮಣ್ಣಿನ ಪುಡಿಯನ್ನು ಡ್ರಮ್ಮಿಗೆ ಹಾಕಿ ನೀರುಬೆರಸಿ ಡ್ರಮ್ ತಿರುಗಿಸಿ ಮಿಶ್ರಣ ಮಾಡುವರು.

**Banding** The application of a band of colour around a pot, usually done while the pot is rotating on a banding wheel – ಮಡಕೆಯನ್ನು ತಿಗುರಿಯ ಮೂಲಕ ಗೇಯುವಾಗಲೆ ಮಡಕೆಯ ಸುತ್ತ ಬಣ್ಣದ ಪಟ್ಟಿ ಮಾಡುವ ಕ್ರಿಯೆ. ಸುತ್ತು ಪಟ್ಟಿ ಮಾಡುವುದು.

**Banding wheel or whirler (n)** Small wheel turned by direction action of the hand used for coling and decorating pots – ಕೈಯಿಂದ ತಿರುಗಿಸಬಹುದಾದ ಕುಂಬಾರನ ಕೈತಿಗುರಿ, ಮಣ್ಣನ್ನು ಸುರುಳಿ ಮಾಡಲು ಹಾಗೂ ಕುಂಭ ವಸ್ತುಗಳನ್ನು ಅಲಂಕರಣ ಮಾಡಲು ಈ ತಿಗುರಿಯನ್ನು ಬಳಸುವರು.

**Basalt ware (n)** A high fired unglarzed body coloured with oxides and left unglarzed used in the 18th century most famously by Josiah wedgood – ಹೆಚ್ಚಿನ ತಾಪಮಾನದಲ್ಲಿ ಸುಟ್ಟ ಹೊಳಪುರಹಿತವಾದ ಕುಂಭ ವಸ್ತು. ೧೭೬೮ರಲ್ಲಿ ಪ್ರಸಿದ್ಧ ಇಂಗ್ಲೀಷ್ ಕುಂಭ ತಜ್ಞ ಜೋಷೈ ವೆಡ್ಗವುಡ್ ಈ ಕಪ್ಪು ಪಿಂಗಾಣಿಯನ್ನು ಬೆಳಕಿಗೆ ತಂದನು.

Basin (n) — A wide-open vessel or dish – ಬೋಗುಣಿ, ಬಾನೆ, ಗಂಗಾಳ, ಅಗಲಬಾಯಿಯ ಮಣ್ಣಿನ ಪಾತ್ರೆ.

Batt (n) — A tile made from highly refractory material used for kiln shelves. A plaster disc used for throwing on the wheel – ಆವಿಗೆಯಲ್ಲಿಡುವ ಕಪಾಟಿಗೆ (ರ್‍ಯಾಕ್) ಅಗ್ನಿ ನಿರೋಧಕ ಮಣ್ಣಿನಿಂದ ಮಾಡಿದ ಹಂಚು. ಚಕ್ರದಲ್ಲಿ ಗೇಯುವಾಗ ಬಳಸುವ ಅಗಲನೆಯ ಡಿಸ್ಕ, ಹಸಿ ಮಡಕೆಗಳು ಬೀಳದಂತೆ ಇಡಲು ಮಾಡಿದ ಸಾಧನ.

Bat wash (n) — A coating refractory material (Alumina and water applied to a kiln bat to protect it from drops of glase and also to prevent pots from sticking to it during firing – ಕುಂಭ ವಸ್ತುಗಳನ್ನು ಆವಿಗೆಯಲ್ಲಿಟ್ಟು ಸುಡುವ ಮುನ್ನ ಅಗ್ನಿ ನಿರೋಧಕ ಮಿಶ್ರಣವನ್ನು ಆವಿಗೆಯ ಕಪಾಟುಗಳಿಗೆ ಲೇಪಿಸುವುದು. ಇದರಿಂದ ಕುಂಭ ವಸ್ತುಗಳು ಒಂದಕ್ಕೊಂದು ಅಂಟಿಕೊಳ್ಳುವುದಿಲ್ಲ.

Bead (n) — A little clay ball, a necklace of beads – ಮಣಿ, ಮಣಿಸರ ಹರಪ್ಪ ಮೊಹಂಜದಾರೋ ಉತ್ಖನನದಲ್ಲಿ ಕೊರಳಿಗೆ ಹಾಕಿಕೊಳ್ಳುವ ಮಣ್ಣಿನ ಮಣಿಸರ ದೊರೆತಿವೆ. ಎನಾಮಿಲ್ ಮಾಡಿದ ಮಣ್ಣಿನ ಮಣಿಸರಗಳನ್ನು ಅಲಂಕಾರಕ್ಕಾಗಿ ಹೆಂಗಸರು ಧರಿಸುವರು.

Beaker (n) — A large drinking bowl or cup – ಕುಡಿಯುವ ದೊಡ್ಡ ಬಟ್ಟಲು, ಕೊಕ್ಕು ಪಾತ್ರೆ.

Beating (n) — Hitting a pot with a paddle or a stick to shape it – ಸೊಳದಿಂದ ಗಡಿಗೆ ಬಡಿಯುವುದು, ತಟ್ಟುವುದು, ತಿಗುರಿಯಿಂದಾಲಗಲಿ, ಕೈಯಿಂದಾಗಲಿ ಮಾಡಿದ ಹಸಿಮಡಕೆಗಳನ್ನು ಸೊಳಮತ್ತು ಕಲ್ಲಿನಿಂದ ತಟ್ಟಿ ಗಡಿಗೆಯನ್ನು ರೂಪಿಸುವರು.

Bedding (n) — The bedding of clay ware in alumina or sand to prevent warping during firing – ಮರಳು ಹಾಸಿಗೆ, ಆವಿಗೆಯಲ್ಲಿ ಕುಂಭವಸ್ತುಗಳನ್ನು ಸುಡಲು ಇಡುವ

ಮುನ್ನ ಹಾಕುವ, ಅಲೂಮಿನಾ, ಅಥವಾ ಮರಳಿನ ಹಾಸಿಗೆ, ಕುಂಭವಸ್ತುಗಳನ್ನು ಸುಡುವಾಗ ಬಾಗುಬರದಿರಲು ಆವಿಗೆಯಲ್ಲಿ ಮರಳಿನ ಹಾಸಿಗೆ ಹಾಕುವರು.

**Beads pot (n)** Decorative pot – ಗೆಜ್ಜೆಗಡಿಗೆ, ಗಡಿಗೆಯ ಅಲಂಕರಣಕ್ಕಾಗಿ ಅರೆ ಹಸಿ ಇರುವಾಗಲೆ ಮಣ್ಣಿನ ಮಣಿಗಳನ್ನು ಸೊಂಟದ ಸುತ್ತಲೂ ಅಂಟಿಸುವರು. ಟೆರ್ರಾಕೋಟಾ ಅಲಂಕಾರಿಕ ವಸ್ತುಗಳಿಗೆ ಮಣಿಗಳನ್ನು ಅಂಟಿಸುವರು.

**Bell jar (n)** Bell shaped vessel – ಘಂಟೆ ಆಕಾರದ ಪಿಂಗಾಣಿ ಜಾಡಿ.

**Bentonile** A clay like material used to add plasticity to clay – ಒಂದು ಬಗೆಯ ಜೇಡಿಮಣ್ಣು, ಮಡಕೆ ಮಾಡುವ ಮಣ್ಣಿಗೆ ಮಿದುಣತ್ವ ಹೆಚ್ಚಿಸಲು ಬೆರೆಸುವ ಜೇಡಿಮಣ್ಣು.

**Big Bellied container (n)** Big pot used to store grains – ದೊಡ್ಡ ಗುಡಾಣ, ವಾಡೆ, ಧಾನ್ಯ ಹಾಕಿಡಲು, ಹಾಗೂ ನೀರು ತುಂಬಿಡಲು ಬಳಸುವರು.

**Bi-Functional (v)** ದ್ವಿಕಾರ್ಯ, ಒಂದೇ ಮಡಕೆಯನ್ನು ಬೇರೆ ಬೇರೆ ಕಾರ್ಯಗಳಿಗೆ ಉಪಯೋಗಿಸುವರು, ಉದಾ : ಪಡುಗ, ನೀರು ತುಂಬಿಡಲು, ಹಾಗೂ ಧಾನ್ಯ ತುಂಬಿಡಲೂ ಕೂಡ ಬಳಸುವರು.

**Binders (n)** Various materials gums polyvenil alchol that increase glaze adherence, impart strength to a cast or pressed clay body – ಸಂಯೋಜಕ, ಬಂಧಕವಸ್ತು

**Bird bath (n)** A basin for birds to drink from or bathe in – ಉರುಳಿ, ಹಕ್ಕಿಬಾನಿ, ಹಕ್ಕಿಗಳು ನೀರುಕುಡಿಯಲು ಹಾಗೂ ಸ್ನಾನಕ್ಕಾಗಿ ಇಟ್ಟಿರುವ ಮಣ್ಣಿನ ಅಗಲವಾದ ಪಾತ್ರೆ.

**Biscuit (n)** Unglazed, once baked – ಗಾಜು ಮೈಭರಿಸದ ಮಡಕೆ, ಒಂದು ಬಾರೆಮಾತ್ರ ಸುಟ್ಟದ್ದು.

**Black figure (n)** A style of decoration applied to early Greek pottery in which an image was painted in black glaze on a ground of natural red clay –

ಗ್ರೀಕ್ ಕುಂಬಾರರು ಕೆಂಪು ಮಣ್ಣಿನ ಮೇಲೆ ಕಪ್ಪುಗ್ಲೇಸನ್ನು ಮಾಡಿ ಮಡಕೆಯನ್ನು ಅಂದಗೊಳಿಸುತ್ತಿದ್ದ ಒಂದು ಬಗೆಯ ಶೈಲಿ.

Black ware (n) — Black coloured pot – ಕಪ್ಪು ವರ್ಣದ ಕುಂಭ ವಸ್ತು.

Bloating — Blisters in the body caused by over baking – ಮಡಕೆ ಸುಡುವಾಗ ಹೆಚ್ಚಿನ ತಾಪಮಾನದಿಂದ ಮಡಕೆಯ ಮೈಮೇಲೆ ಉಂಟಾಗುವ ಗುಳ್ಳೆಗಳು, ಉಬ್ಬುಗಳು.

Blunge (v) — To mix a slip, ದ್ರವರೂಪದ ಮಣ್ಣನ್ನು ಮಿಶ್ರಮಾಡುವುದು.

Blunger (n) — A mixing machine with revolving paddles used to prepare large quantities of clay slip or glaze. ದ್ರವರೂಪದ ಮಣ್ಣನ್ನು ಮತ್ತು ಗ್ಲೇಸ್ಡ ಮಿಶ್ರಣವನ್ನು ಹೆಚ್ಚಿನ ಪ್ರಮಾಣದಲ್ಲಿ ಮಿಶ್ರ ಮಾಡುವ ಯಂತ್ರ.

Body (n) — A clay or mixture of clays used to make pots – ಮಡಕೆ ತಯಾರಿಸಲು ಹದಮಾಡಿಟ್ಟ ಮಣ್ಣಿನ ಗುಪ್ಪೆ.

Boneash (n) — A form of calcium phosphate produced by roasting ground animal bones usually ox bone. It is primerly ingredient of Bona china and is used as a flux on opaque ceramic glaze – ಮೂಳೆ ಬೂದಿ, ಎಲುಬಿನ ಬೂದಿ ಬೋನಾ ಚೈನಾ ಪಿಂಗಾಣಿ (ಇಂಗ್ಲಿಷ್ ಪಿಂಗಾಣಿ) ತಯಾರಿಕೆಯ ಮುಖ್ಯ ಘಟಕ, ಪಾರದರ್ಶಕ ಪಿಂಗಾಣಿ ತಯಾರಿಕೆಯಲ್ಲಿ ಸ್ರಾವಕವಾಗಿ ಉಪಯೋಗಿಸುವರು.

Bone china (n) — The English porcelain bone asha and china clays are the main ingredients and the reason for its world renowned translucency and whiteness – ಇದು ಇಂಗ್ಲಿಷ್ ಪಿಂಗಾಣಿ, ಇದರ ಮುಖ್ಯ ಘಟಕಗಳು ಎಲುಬಿನ ಪುಡಿ ಮತ್ತು ಚೀನಿ ಮಣ್ಣು, ಅಚ್ಚ ಬಿಳಿ ಬಣ್ಣದ್ದಾಗಿರುತ್ತದೆ. ಪಾರದರ್ಶಕವಾಗಿದ್ದು ಹೆಚ್ಚಿನ ತಾಪಮಾನದಲ್ಲಿ ಸುಡಲ್ಪಡುತ್ತದೆ.

Bottle kiln (n) — The typically bottle shaped intermittent up draught kiln generally fired by coal – ಸೀಸೆ ಆಕೃತಿಯ ಆವಿಗೆ, ಇದಕ್ಕೆ ಇಂದನವಾಗಿ ಕಲ್ಲಿದ್ದಲು

ಬಳಸುತ್ತಿದ್ದರು. ವಿದ್ಯುತ್ ಆವಿಗೆ ಬಂದ ನಂತರ ಇದರ ಉಪಯೋಗ ಕಡಿಮೆಯಾಗಿದೆ.

**Boxing (n)** The placing of clay ware vertically rim to rim to prevent distortion during baking – ಆವಿಗೆ ಕಟ್ಟು, ಆವಿಗೆ ಇಡು, ಆವಿಗೆಯಲ್ಲಿ ಮಡಕೆಗಳನ್ನಿಟ್ಟು ಸುಡುವಾಗ ಒಂದೊಕ್ಕೊಂದು ಘರ್ಷಣೆಯಿಂದ ಒಡೆದು ಹೋಗದಂತೆ ಜೋಡಿಸುವ ಕ್ರಮ.

**Bullers Ring (n)** Manufactured rings made from ceramic material which are used to measure the progerss of a baking in term of heat work done – ಸೆರಾಮಿಕ್ ವಸ್ತುಗಳಿಂದ ಮಾಡಿದ ಬಳೆ, ಇದನ್ನು ಮಡಕೆಗಳನ್ನು ಆವಿಗೆಯಲ್ಲಿಟ್ಟು ಸುಡುವಾಗ ತಾಪಮಾನವನ್ನು ಅಳೆಯಲು ಉಪಯೋಗಿಸುವರು.

**Bung (n)** A verticle stack of saggars containing ceramic ware for baking – ಮಡಕೆಗಳನ್ನು ಸುಡಲು ಒಂದರ ಮೇಲೊಂದು ಜೋಡಿಸಿಟ್ಟ ಮಡಕೆಗಳ ಸಾಲು.

**Burnishing (v)** The process of rubbing the surface of a clay form usually at the leather hard stage to consolidate the material and create surface seen. ತಟ್ಟಿ ಸಿದ್ದಗೊಳಿಸಿದ ಮಡಕೆಗಳನ್ನು ಅರೆ ಹಸಿ ಇರುವಾಗಲೆ ಅದರ ಮೈಯನ್ನು ಮಣಿಸಗ, ಗಜ್ಜುಗ ಮೊದಲಾದವುಗಳಿಂದ ಉಜ್ಜಿ ನುಣುಪುಗೊಳಿಸುವುದು, ಇದರಿಂದ ಮೈಸಮತಟ್ಟವಾಗುವುದು. ಇದೊಂದು ರೀತಿಯ ಕುಂಭಾಲಂಕರಣ ವಿಧಾನ.

**Bust (n)** A sculpture of a person's head, shoulders and chest – ಪ್ರತಿಮೆ, ವಿಗ್ರಹ, ಎದೆಯ ಮೇಲ್ಭಾಗದ ಮುಖಶಿಲ್ಪ, ಕೈಯಿಂದ ಇಲ್ಲವೆ ಅಚ್ಚುಗಳಿಂದ ಮಣ್ಣಿನ ಮುಖ ಶಿಲ್ಪ ಮಾಡುವರು.

**Butter pot (n)** Round pot with broad mouth prepared for keeping butter – ಬೆಣ್ಣೆಗಡಿಗಿ, ಬೆಣ್ಣೆ ಬೋಗುಣಿ, ಬೆಣ್ಣೆ ಪಲ್ಟಿ

Bowl (n) — A round vessel, begging bowl a drinking cup, ಪಾತೇಲಿ, ಬಟ್ಟಲು Bowls of compassion (Bible) Begger knows his bowl (prv)

## C

Calcium carbonate (n) — Chalk in the form of whiting, lime stone used as a flux in middle to high temperature glazes – ಸುಣ್ಣ, ಬಳಪ, ಸಾಧಾರಣ ಮತ್ತು ಹೆಚ್ಚಿನ ಉಷ್ಣತೆಯ ಗ್ಲೇಸಿಂಗ್ ಮಾಡುವ ಸಂದರ್ಭದಲ್ಲಿ ಸ್ರಾವಕವಾಗಿ ಸುಣ್ಣವನ್ನು ಉಪಯೋಗಿಸುವರು.

Carrying pole (n) — Thin bamboo pole, ಅಡ್ಡೆ, ಬಿದುರಿನ ಉದ್ದನೆಯ ಗಣೆ, ಕೋಲು ಕುಂಬಾರರು ಮಡಕೆಗಳನ್ನು ಅದಕ್ಕೆ ಕಟ್ಟಿ ಹೆಗಲಮೇಲೆ ಇಟ್ಟುಕೊಂಡು ಮಾರಲು ಹೋಗುವರು. ಹೆಚ್ಚು ಭಾರವನ್ನು ಆಯಾಸವಿಲ್ಲದೆ ಹೋರಲು ಅಡ್ಡೆ ಅನುಕೂಲ.

Cast (v) — To produce a three dimensional form by casting a raw material in mould – ಎರಕ ಎರೆದ ವಸ್ತು, ಕರಗಿಸಿದ ಲೋಹ ಅಥವಾ ಹಸಿಗಚ್ಚು ಮಣ್ಣನ್ನು ಒಂದು ಅಚ್ಚಿನೊಳಗೆ ಸುರಿದು, ಅದುಗಟ್ಟಿಯಾದ ಮೇಲೆ ಪಡೆಯುವುದು, ಮಣ್ಣಿನ ಶಿಲ್ಪವನ್ನು ಅಚ್ಚಿನಿಂದ ಮಾಡುವರು.

Cauldron (n) — Caldron, large kettle for boiling or heating liquids – ದ್ರವ ಪದಾರ್ಥಗಳನ್ನು ಬಿಸಿಮಾಡುವ ಮಣ್ಣಿನ ಪಾತ್ರೆ, ದೊಡ್ಡ ಕೆಟ್ಲ ಬಿಸಿ, ಕಾಫಿ, ಟೀ ಅದರಲ್ಲಿ ಹಾಕಿಡುವರು. Kitchen Kettle ಎನ್ನುವರು "ಕೆಟ್ಲ" ಎಂದೇ ಕನ್ನಡದಲಿಲ ಬಳಕೆಯಲ್ಲಿದೆ.

Celadon (n) — A ceramic ware glazed in a green or grey green tone – ಸೆರಾಮಿಕ್ ಪಾತ್ರೆ, ಸೆರಾಮಿಕ್ ವಸ್ತು, ಹಸಿರು ವರ್ಣ, ಬೂದು ಹಸಿರು ವರ್ಣದ ಗ್ಲೇಸ್ಡ ಪಾತ್ರೆ ಕಬ್ಬಿಣದ ಅಂಶ ಹೆಚ್ಚಿರುತ್ತದೆ.

**Centering (n)** Getting the clay exactly in the centre of the wheel head when throwing – ಮಡಕೆ ಮಾಡಲು ತಿಗುರಿಯ ಹಣೆಗೆ ಹಾಕುವ ಮಣ್ಣನ್ನು ಸರಿಯಾಗಿ ಮಧ್ಯಕ್ಕೆ ಭರಿಸುವುದು.

**Ceramics (n)** Objects made by shaping and heating clay. Pottery, ceramic ware, crockery, the techniques and processess involved in making clay forms that are brought to a finished state by firing ಇಂಗ್ಲಿಷಿನ ಸೆರಾಮಿಕ್ ಶಬ್ದ ಫ್ರೆಂಚ್ ಮೂಲದ್ದು (Ceramique) ಇವೆರಡಕ್ಕೂ ಮೂಲವಾದದ್ದು 'Keramic' ಎಂಬುದು, ಕುಂಬಾರನು ಮಣ್ಣಿನಿಂದ ಮಾಡಿ ಸುಟ್ಟ ವಸ್ತು 'Kermo' ಎಂದರೆ ಗ್ರೀಕ್ ಭಾಷೆಯಲ್ಲಿ ಮಣ್ಣು ಎಂದರ್ಥ. ಆವೆಮಣ್ಣಿನಿಂದ ಕೈಯಿಂದಾಗಲಿ, ತಿಗುರಿಯಿಂದಾಗಲಿ, ಬೇಕಾದ ಆಕೃತಿಗಳನ್ನು ಸಿದ್ಧಗೊಳಿಸಿ ಆವಿಗೆಯಲ್ಲಿಟ್ಟು ಸುಟ್ಟ ಕುಂಭ ವಸ್ತುಗಳು ಮಡಕೆ, ಕುಡಿಕೆ, ಹಂಚು, ಇಟ್ಟಿಗೆ, ಪಿಂಗಾಣಿ, ಇತ್ಯಾದಿ, ಗಾಜು ಮತ್ತು ಸಿಮೆಂಟ್ ಕೂಡ ಸೆರಾಮಿಕ್ ಗುಂಪಿಗೆ ಸೇರುತ್ತವೆ. In Europe the term ceramics is applied only to clay products. 'The history of ceramics is the history or all humanity'.

**Ceramist (n)** One who makes a scientific study of clays and other ceramic materials or who pots them to practical use or study of pottery – ಕುಂಭ ತಜ್ಞ, ಕುಂಭ ವಸ್ತುಗಳ ತಯಾರಿಕೆಯಲ್ಲಿ ಪರಿಣತಿ ಹೊಂದಿದವ ಕುಂಭಕಲಾ ಕುಶಲಿ.

**Chattering (n)** A pattern of unseen humps on the surface of a turned pot caused by irregular objcets in the clay – ಕಲ್ಲು, ಹರಳು, ಕಸಕಡ್ಡಿವುಳ್ಳ ಮಣ್ಣಿನಿಂದಾಗಿ ಚಕ್ರದಿಂದ ಗೇಯ್ದ ಮಡಕೆಗಳಲ್ಲಿ ಉಂಟಾಗುವ, ಕಣ್ಣಿಗೆ ಕಾಣದಷ್ಟು ಸೂಕ್ಷ್ಮವಾದ ಓರೆ ಕೋರೆಗಳು, ಉಬ್ಬು ತಗ್ಗುಗಳು.

China Clay (n) — A white primary clay of low plasticity deposited through the decomposition of granite – ಮೂಲ ಶಿಲೆಗಳಿಂದ ಉಂಟಾದ ಕಡಿಮೆ ಮಿದುಣತ್ವದ ಬಿಳಿಮಣ್ಣು ಪಿಂಗಾಣಿ ವಸ್ತುಗಳನ್ನು ತಯಾರಿಸಲು ಇದನ್ನು ಉಪಯೋಗಿಸುವರು. ನಮ್ಮ ದೇಶದ ಅನೇಕ ಭಾಗಗಳಲ್ಲಿ ಪಿಂಗಾಣಿ ಮಣ್ಣು ದೊರೆಯುತ್ತದೆ.

China ware (n) — Porcelain articles – ಚೀನಾ ಪಿಂಗಾಣಿ

Chuck (n) — A shaped object for holding leather hard pots while they are being turned. They can be made in a clay, wood metal or plaster – ಇಲಕಿ ಹಸಿ ಮಡಕೆಗಳನ್ನು ಬೀಳದಂತೆ ಭದ್ರವಾಗಿ ಹಿಡಿದುಕೊಳ್ಳುವ ಸಾಧನ, ತಿಗುರಿಯಿಂದ ಗೇಯ್ದ ಮಣ್ಣಿನ ವಸ್ತುಗಳನ್ನು ಬೀಳದಂತೆ ಇಡಲು, ಮಣ್ಣು, ಕಟ್ಟಿಗೆ ಲೋಹದಿಂದ ಮಾಡಿದ ಸಾಧನ. ಕುಂಬಾರರು ಸಾಮಾನ್ಯವಾಗಿ, ದೊಡ್ಡದಾದ ಮುಕ್ಕಾದ ಮಡಕೆಗಳನ್ನು ಸೊಂಟಕ್ಕೆ ಸರಿಯಾಗಿ ಒಡೆದು ಬಾಯಿ ಕೆಳಗೆ ಮಾಡಿ ಇಡುವರು, ಇದನ್ನು ಇಲಕಿ ಎನ್ನುವರು ಇದರಲ್ಲಿ ಹಸಿಮಡಕೆ ಇಡುವರು. ಒಂದು ಸಾರೆ ತಟ್ಟಿದ ಮಡಕೆಗಳನ್ನು ಕೂಡ ಇಲಕಿಯಲ್ಲಿಡುವರು.

Clay (n) — A type of heavy soil that becomes hard when dry, used for making clay pots and bricks – ಜಿಗಟು ಮಣ್ಣು, ಕುಂಬಾರಿಕೆಯ ಮಣ್ಣು, ಇದು ಅಲ್ಯೂಮಿನಾ ಮತ್ತು ಸಿಲಿಕೇಟ್‌ಗಳನ್ನು ಒಳಗೊಂಡಿರುತ್ತದೆ. "Which is the more important the potter or the clay. All of us are vital to gods great master plan" (William Arthur ward)

Clay body (n) — A general term to indicate a mxiture of clays and minerals used for building pots – ಬೇರೆ ಬೇರೆ ವಿಧದ ಮಣ್ಣು ಮತ್ತು ಖನಿಜಗಳ ಮಿಶ್ರಣದಿಂದ ಒಟ್ಟುಗೂಡಿದ ಮಣ್ಣು, ಮಡಿಕೆ ಮಾಡಲು ಬಳಸುವರು.

| | |
|---|---|
| Claypit (n) | Pit from which clay is dug – ಮಣ್ಣು ಗುಂಡಿ, ಕುಂಬಾರರು ಮಡಕೆ ಮಾಡಲು ಮಣ್ಣು ತರುವ ಸ್ಥಳ. |
| Clay stone (n) | A natural rock stone formed from partly decompsed granite with high content of felspar. It is an essential ingredient of porcelain bona china – ಸ್ವಾಭಾವಿಕ ಶಿಲೆಯಿಂದ ಉಂಟಾದ ಮಣ್ಣು ಭಾಗಶಃ ಬೋನಾಚೈನಾ ಪಿಂಗಾಣಿ ತಯಾರಿಸುವ ಮಣ್ಣಿನಲ್ಲಿ ಇದು ಮುಖ್ಯ ಘಟಕ. |
| Clay plate (n) | Lid, mouth covering plate – ಮುಚ್ಚಳ, ಮಡಕೆಯ ಬಾಯಿಗೆ ತಕ್ಕುದಾದ ಬೇರೆ ಬೇರೆ ಅಳತೆಯ ಮುಚ್ಚಳವನ್ನು ಕುಂಬಾರರು ಮಾಡುವರು ಸಾಮಾನ್ಯವಾಗಿ ಕುಂಬಾರಗಿತ್ತಿಯರು ಕೈಯಿಂದಲೆ ಮುಚ್ಚಳ ಮಾಡುವರು. |
| Clay pipe (n) | A tobacco pipe made of clay – ತಂಬಾಕು ಸೇದುವ ಮಣ್ಣಿನ ಚಿಲುಮೆ. |
| Clay ware (n) | Clay pot, vessel – ಮಣ್ಣಿನ ಗಡಿಗೆ ಪಾತ್ರೆ. |
| Coiling (v) | A means of building by hand, a pot using ropes of clay laid on top or each other and smoothed together – ಕೈಯಿಂದ ಮಡಕೆ ಮಾಡುವ ಸುರಳಿ ವಿಧಾನ. ಮಣ್ಣನ್ನು ಹಗ್ಗದಂತೆ ಹೊಸೆದು ಸಿಂಬಿಗಳನ್ನಾಗಿ ಮಾಡಿ ಒಂದರ ಮೇಲೊಂದಿಟ್ಟು ಬೇಕಾದ ಆಕೃತಿಯ ಮಡಕೆಯನ್ನು ಕೈಯಿಂದ ರೂಪಗೊಳಿಸುವುದು. ಈ ವಿಧಾನ ಬಹು ಪ್ರಾಚೀನದಿಂದಲೂ ರೂಢಿಯಲ್ಲಿದೆ. |
| Colloring (v) | To make folds around the neck of a pot. ಮಡಿಕೆಯನ್ನು ಅಂದಗೊಳಿಸಲು ಅದರ ಕಂಠದ ಸುತ್ತಲೂ ಪಟ್ಟಿ ಮಾಡುವುದು. |
| Combing (v) | Scraping into a damp surface either directy on to a clay or through a coating of slip with an even tooled tool – ಹಸಿ ಮಡಕೆಯ ಮೈಯನ್ನು ಸಮ ಹಲ್ಲುಗಳ ಬಾಚಣಿಗೆಯಿಂದ ಕೆರೆಯುವುದು, ಹಿಕ್ಕುವುದು, ಇಲ್ಲವೆ ಮಣ್ಣಿನ ದ್ರವವನ್ನು ಮೈಗೆ ಸವರಿ |

| | |
|---|---|
| | ಬಾಚಣಿಗೆಯಿಂದ ಮಡಕೆಯ ಮೈಯನ್ನು ಬಾಚುವುದು. ಇದೊಂದು ರೀತಿಯ ಕುಂಭಾಲಂಕರಣ. |
| Cone (n) | A small conical object made from glaze materials which has known melting point used in kiln in front of the spy hole to indicate a given temperature – ಗ್ಲೇಸ್ಡ ವಸ್ತುವಿನಿಂದ ಮಾಡಿದ ಶಂಕಾಕೃತಿಯ ಚಿಕ್ಕ ಸಾಧನ. ಆವಿಗೆಯಲ್ಲಿನ ತಾಪಮಾನ ತಿಳಿಯಲು ಆವಿಗೆಯಲ್ಲಿನ ಕಳ್ಳ ಕಿಂಡಿಯ ಮುಂದುಗಡೆ ಇಡುವರು. |
| Corn bin (n) | A oval shape pot used for storing grains – ವಾಡೆ, ಕೊಮ್ಮೆ. |
| Craft (n) | Skilled trade, occupation – ಕಸಬು, ಕೈಕಸಬು. |
| Craft guild | An association of men engaged in the same task crafts man – ಕಸಬುಗಾರ ಮಂಡಳಿ, ವೃತ್ತಿ ಕೂಟ, ಮಧ್ಯಯುಗದಲ್ಲಿ ಕುಂಬಾರರ ಮಂಡಳಿಗಳಿದ್ದವು. |
| Crank (n) | A heavily grogged and open clay mixture of coarse grained texture. With stands shrinkage and thermal shock. ಅಧಿಕ ಬೂದಿ ಮತ್ತು ಮರಳನ್ನು ಮಿಶ್ರ ಮಾಡಿದ ಮಣ್ಣು, ಮರಳಿನ ದಪ್ಪ ಕಣಗಳು ಮಡಕೆ ಉಡುಗುವದನ್ನು ತಡೆಗಟ್ಟುತ್ತದೆ, ಹೆಚ್ಚಿನ ಉಷ್ಣತೆಯನ್ನು ತಡೆದು ಕೊಳ್ಳಬಲ್ಲದು. |
| Crafts man (n) | One engaged in craft, ಕಸಬುಗಾರ, ಕುಶಲಕರ್ಮಿ ಗ್ರಾಮೀಣ ಮುಖ್ಯ ಕಸಬುಗಾರರಲ್ಲಿ ಕುಂಬಾರನು ಒಬ್ಬ. |
| Crawling (n) | A glaze fault, the glaze leaves bold patches on the pot – ಕುಂಭವಸ್ತುಗಳನ್ನು ಗ್ಲೇಸ್ಡ್ ಮಾಡುವಾಗಿನ ದೋಷದಿಂದಾಗಿ, ಕುಂಭದ ಮೇಲೆ ಉಂಟಾಗುವ ತೇಪೆಗಳು. |
| Crock (n) | Earthern Jar, Pot, vase, bowl – ಬಿಂದಿಗೆ, ಮಡಕೆ, ಕುಡಿಕೆ, ಬೋಗುಣಿ. |
| Crockery (n) | Earthen plates, cups, other vessels – ಮಣ್ಣಿನ ಪಾತ್ರೆಗಳು. |

**Cup (n)** A small round vessel with a handle on the side and sued to drink tea or coffe – ಚಹ, ಕಾಫಿ ಕುಡಿಯುವ ಬಟ್ಟಲು

**Curved line (ad)** Not a straight line – ವಕ್ರರೇಖೆ, ಮಡಕೆಯ ಅಲಂಕರಣಕ್ಕೆ ಸಂದರ್ಭಾನುಸಾರ ವಕ್ರರೇಖೆಯನ್ನು ಮಡಕೆ ಅರೆಹಸಿ ಇರುವಾಗ ಮೊಳೆಯಿಂದ ಎಳೆಯುವರು.

**Cuspidor (n)** A spittoon – ಮಣ್ಣಿನ ಉಗುಳುವ ಪಾತ್ರೆ, ಪೀಕದಾನಿ.

## D

**Damper (n)** The adjustable shutter in a klin flue used to control the draft – ಆವಿಗೆಯ ತಾಪಮಾನವನ್ನು ಗಾಳಿಯ ಹರಿವನ್ನು ಹತೋಟಿಯಲ್ಲಿಡುವ ಆವಿಗೆಯಲ್ಲಿ ಕವಾಟು, ತೇಪಮಾಡುವ ಸಲಕರಣೆ.

**Dearing (v)** The forcing of air out of clay as done in the de-airing chamber of pug mill – ಮಣ್ಣಿನಲ್ಲಿನ ಗಾಳಿ ತಗೆಯುವುದು.

**Delft ware (n)** The chinese influenced glazed earthen ware made at Delfin in Holland during the early seventeenth century. The technique was similar to Itailian Maiolica similar ware made in England was known as English Delft – ಹದಿನೇಳನೆ ಶತಮಾನದಲ್ಲಿ ಹಾಲೆಂಡಿನ ಡೆಲ್ಟ ಎಂಬಲ್ಲಿ ತಯಾರಿಸಿದ ಮೆರಗು ಪಿಂಗಾಣಿ ಚೀನಾ ದೇಶದ ಕುಂಭ ಕಲೆಯ ಪ್ರಭಾವದಿಂದ ಹಾಲೆಂಡಿನ ಡೆಲ್ಫನಲ್ಲಿ ಈ ಕುಂಭವನ್ನು ಸಿದ್ಧಪಡಿಸಿದ್ದರಿಂದ 'ಡೆಲ್ಫವ್ಹೇರ್' ಎಂಬ ಹೆಸರು ಬಂತು. ಇಟಲಿಯ ಮೆಜೊಲಿಕವನ್ನು ಇದು ಹೋಲುತ್ತದೆ. ಇಂಗ್ಲೆಂಡಿನಲ್ಲಿ ಇದನ್ನೆ ಇಂಗ್ಲೀಷ್ ಡೆಲ್ಫ ಎನ್ನುವರು.

**Della Robbia ware (n)** Ceramic sculpture of glazed terracotta generally in relief produced in Florena of Lucca della Robbia as his family during the

15th century. The glaze used was the lead tin majolica type developed in Spain – ಪ್ಲಾರೆನ್ಸಿನ ಲುಕ್ಕಾಡೆಲ್ಲಾ ರೂಬಿಯಾ ಕುಟುಂಬದವರು ೧೫ನೇ ಶತಮಾನದಲ್ಲಿ ತಯಾರಿಸುತ್ತಿದ್ದ ಗ್ಲೇಸ್ಡ ಸೆರಾಮಿಕ್ ಶಿಲ್ಪ. ಸ್ಪೇನಿನ ಮೆಜೋಲಿಕ್ ಶಿಲ್ಪಕ್ಕೆ ಬಳಸುತ್ತಿದ್ದ ಸತು ಮತ್ತು ತವರದ ಗ್ಲೇಜನ್ನು ಇದರ ತಯಾರಿಕೆಗೆ ಬಳಸುತ್ತಿದ್ದರು.

**Design (ad)** Pattern, a drawing or sketch – ಮಾದರಿ ನಕ್ಷೆ ಶ್ರೇಷ್ಟ ದರ್ಜೆಯ ಮಣ್ಣಿನಲ್ಲಿ ಕಲಾಕೃತಿ ರಚಿಸುವಾಗ ಮಾದರಿ ನಕ್ಷೆಯ ಅವಶ್ಯಕತೆ ಇದೆ.

**De-watering (v)** Reducing the water content of the clay – ಮಣ್ಣಿನಲ್ಲಿರುವ ನೀರಿನ ಅಂಶವನ್ನು ಕಡಿಮೆ ಮಾಡುವುದು.

**Dipping (v)** A method of applying a coat of glaze to a pot by immersion – ಮಣ್ಣಿನ ವಸ್ತುಗಳಿಗೆ ಗ್ಲೇಸಿಂಗ್ ಮಾಡುವ ಒಂದು ವಿಧಾನ ಗ್ಲೇಸಿಂಗ್ ಮಾಡಬೇಕಾದ ಸೆರಾಮಿಕ್ ವಸ್ತುಗಳನ್ನು ಮೊದಲೆ ಸಿದ್ದತೆ ಮಾಡಿಟ್ಟುಕೊಂಡು, ದ್ರಾವಣದಲ್ಲಿ ಅದ್ದುವರು ಚಿಕ್ಕ, ಚಿಕ್ಕ ಸೆರಾಮಿಕ್ ವಸ್ತುಗಳನ್ನು ಗ್ಲೇಸ್ಡ ಮಾಡಲು ಈ ವಿಧಾನ ಉಪಯುಕ್ತ.

**Dish (n)** A vessel one that is flat or shallow – ತಟ್ಟೆ ಗಂಗಾಳ, ತಾಟು, ಬಟ್ಟಲು, ಪಿಂಗಾಣಿಯ ತಟ್ಟೆ

**Disk (n)** Any flat thin circular body – ತೆಳ್ಳನೆಯ ದುಂಡು ತಗಡು, ಬಿಲ್ಲೆ, ಮಣ್ಣಿನಲ್ಲಿಯು ಮಾಡುವರು.

**Dog head wedging** A way of preparing clay wedjing it into spirals that resemble a pointed dogs head – ಕುಂಭ ವಸ್ತುಗಳನ್ನು ಮಾಡುವ ಮಣ್ಣನ್ನು ಹದಗೊಳಿಸುವ ಒಂದು ವಿಧಾನ. ಮಣ್ಣನ್ನು ತುಳಿದು ಸಿಂಬೆ ಹಾಗೆ ಗುಪ್ಪೆ ಹಾಕುವುದು. ಅದೊಂದು ರೀತಿಯಲ್ಲಿ ನಾಯಿಯ ತಲೆಯನ್ನು ಹೋಲುತ್ತದೆ.

**Double Dipping (n)** Dipping a pot in two different glazes – ಗ್ಲೇಸ್ಡ ಮಾಡುವ ಕುಂಭ ವಸ್ತುವನ್ನು ಬೇರೆ ಬೇರೆ ಗ್ಲೇಸಿನ ಎರಡು ಗ್ಲೇಸ್ಡ ದ್ರಾವಣದಲ್ಲಿ ಅದ್ದುವುದು.

**Dough (n)** — Trough – ಕಣಕದಂತೆ ನಾದಿದ ಮಣ್ಣು

**Down draught kiln (n)** — One in which the heat is drawn in at the top at through flues in the floom – ಇಳಿವರ್ಗೀರೆ ಆವಿಗೆ.

**Drawing (v)** — unpacking the kiln after firing – ಆವಿಗೆ ತಗೆ, ಸುಟ್ಟ ಮಡಕೆಗಳನ್ನು ಆವಿಗೆಯಿಂದ ತಗೆಯುವುದು.

**Drawn trial (n)** — A small piece of cermaic often in the form of a ring, drawn from the kiln durign firing to gauge the process of the firing – ಮಡಕೆಗಳನ್ನು ಆವಿಗೆಯಲ್ಲಿಟ್ಟು ಸುಡುತ್ತಿರುವಾಗ ಮಡಕೆಗಳು ಸುಟ್ಟಿರುವ ಬಗೆಯನ್ನು ತಿಳಿದುಕೊಳ್ಳಲು ಸೆರಾಮಿಕ್ ಬಳೆಯನ್ನು ಆವಿಗೆಯಲ್ಲಿಡುವರು ಆ ಬಳೆಯೊಂದನ್ನೆ ಕವೆಗೋಲಿನಿಂದ ಹೊರತೆಗೆದು ಸುಡತಿಯನ್ನು ತಿಳಿದುಕೊಳ್ಳುವರು.

**Dry foot (v)** — To clean the bottom of glazed piece before firing – ಗ್ಲೇಸ್ಡ ಸೆರಾಮಿಕ್ ವಸ್ತುಗಳನ್ನು ಸುಡುವ ಮೊದಲು ಅದರ ತಳವನ್ನು ಸ್ವಚ್ಛಗೊಳಿಸುವುದು.

**Dunting (v)** — The cracking of fired ware caused by two rapid cooling – ಸುಟ್ಟ ಕುಂಭ ವಸ್ತುಗಳನ್ನು ತೀವ್ರವಾಗಿ ತಣಿಸುವದರಿಂದ ಮಡಕೆಯ ಮೈಮೇಲೆ ಉಂಟಾಗುವ ಬಿರುಕುಗಳು.

**Dusting (n)** — This is one of the glazing methods of fine glaze powder on green articles which are still damp to retain powder is applied. Now it is rarely used – ಕುಂಭ ವಸ್ತುಗಳು ಅರೆ ಹಸಿ ಇರುವಾಗಲೆ ಹೊಳಪು ಮೈ ಭರಿಸಲು ನುಣುಪಾದ ಪುಡಿಯನ್ನು ಸವರುವುದು. ಇದೊಂದು ರೀತಿಯ ಗ್ಲೇಸಿಂಗ್ ವಿಧಾನ, ಈಗ ಹೆಚ್ಚು ಬಳಕೆಯಲ್ಲಿಲ್ಲ.

## E

**Earthen ware (n)** Any ware produced out of earth or clay, a pottery fired at a low temperature about 700°c which remains porous until glazed, this is the most common form of ware – ಸಾಮಾನ್ಯ ತಾಪಮಾನದಲ್ಲಿ (೭೦೦°-೧೦೦೦° ಸಿ) ಸುಟ್ಟ ಮಡಕೆ, ಸಚ್ಛಿದ್ರತೆ ಹಾಗೆ ಉಳಿದಿರುತ್ತದೆ. ಇತಿಹಾಸ ಪೂರ್ವದಿಂದಲೂ ಬಳಕೆಯಲ್ಲಿರುವ ಕುಂಭ ವಸ್ತುಗಳ ಒಂದು ವಿಧ. ಬಡವರಿಂದ ಶ್ರೀಮಂತರವರೆಗೆ ವಿಶ್ವದಾದ್ಯಂತ ಉಪಯೋಗದಲ್ಲಿದೆ. ಪ್ರಪಂಚದಾದ್ಯಂತ ನಡೆದ ಉತ್ಖನನಗಳಲ್ಲಿ ಈ ಬಗೆಯ ಮಡಕೆಗಳು ದೊರೆತಿವೆ. ಮಡಕೆಗಳ ಗಾತ್ರ ಮತ್ತು ಉಪಯೋಗಕ್ಕನುಗುಣವಾಗಿ ಬೇರೆ, ಬೇರೆ ಹೆಸರುಗಳಿಂದ ಕರೆಯುವರು. ನೀರು ತರುವ, ಬಿಂದಿಗೆ, ಕೊಡ, ನೀರು ತುಂಬಿಡುವ ಹರವಿ, ಪಡಗ ಆಹಾರ ಬೇಯಿಸುವ ಗಡಿಗೆ, ಚಟಿಗೆ ಇತರೆ ಅಡುಗೆ ಮನೆಯ ಪಾತ್ರೆಗಳು, ಮಧ್ಯ ತುಂಬಿಡುವ ಪಾತ್ರೆ, ಧಾನ್ಯ ತುಂಬಿಡುವ ವಾಡೆ, ಧಾರ್ಮಿಕ ಆಚರಣೆಯಲ್ಲಿ ಬಳಸುವ ಮಡಕೆ, ಇತ್ಯಾದಿ, ಇವೆಲ್ಲವೂ ಕುಂಭವಸ್ತುಗಳು.

**Egg shell (n)** A name given to certain under matured glazes having appearance of hen's egg. Also a highly translucent thin porcelain made in China and Japan for export to Europe – ಚೀನಾ ಮತ್ತು ಜಪಾನಿನಲ್ಲಿ ತಯಾರಾಗುತ್ತಿದ್ದ ಮೊಟ್ಟೆ ಆಕೃತಿಯ ತೆಳುವಾದ ಪಾರದರ್ಶಕ ಪಿಂಗಾಣಿ. ಯುರೋಪಿಯನ್ ದೇಶಗಳಿಗೆ, ಈ ಪಿಂಗಾಣಿ ರಫ್ತಾಗುತ್ತಿತ್ತು.

**Egyptian paste (n)** A body formed of clay and glazed materials and colouring oxides in which a glaze forms on the surface after the soda content migrates – A non plastic mixture, it was first used by the Egyptians to form small models and beeds – ಮಣ್ಣು, ಗ್ಲೇಸ್ಡ ವಸ್ತುಗಳು ಮತ್ತು ವರ್ಣ

ಆಕ್ಸೈಡುಗಳಿಂದ ವರಾಡಿದ ಮೃದತ್ವವಿಲ್ಲದ ಮಿಶ್ರಣ, ಕಣಕ ಈಜಿಪ್ಟಿಯನ್‌ರು ಮೊದಲ ಬಾರಿಗೆ ಚಿಕ್ಕ ಚಿಕ್ಕ ಮಾದರಿ ಆಕೃತಿಗಳನ್ನು ಮಣ್ಣಿನ ಮಣಿ ಸರಗಳನ್ನು ಈ ಮಿಶ್ರಣದಿಂದ ತಯಾರಿಸುತ್ತಿದ್ದರು.

Element (n) — Coiled wire that heat electric kiln – ವಿದ್ಯುತ್ ಆವಿಗೆಯನ್ನು ಬಿಸಿಮಾಡುವ ವಿದ್ಯುತ್ ತಂತಿ ಸುರುಳಿ.

Elongate (ad) — Pot with elongated neck – ನೀಳ ಕುತ್ತಿಗೆ, ನೀಳ ಕುತ್ತಿಗೆಯ ಹೂಜಿ.

Enamel (ad) — Glass like substance used for coating metal or pottery – ಗಾಜು ಲೇಪ, ಮಡಕೆಯನ್ನು ಅಂದಗೊಳಿಸಲು ಹಚ್ಚುವ ಮೆರಗು.

Encaustic tile — Tiles decorated with inlaid method using different coloured clays – ಕುಂದಣದ ವಿಧಾನದಲ್ಲಿ ಬೇರೆ, ಬೇರೆ ವರ್ಣ ಸಂಯೋಜನೆಯಿಂದ ಹಂಚನ್ನು ಅಂದಗೊಳಿಸುವುದು.

Engoble (n) — A word used for decorative slip – ಅಲಂಕರಣದ ಮಣ್ಣಿನ ದ್ರವ. ಹಸಿಮಡಕೆ ಇಲ್ಲವೆ ಒಂದು ಬಾರೆ ಸುಟ್ಟ ಮಡಕೆಗೆ ಅಂದಗೊಳಿಸಲು ತಯಾರಿಸಿದ ದ್ರವರೂಪದ ಮಣ್ಣು.

Ever (n) — A pitcher, water jug – ಗಡಿಗೆ, ಹೂಜಿ, ಕೂಜ.

## F

Facing tile (n) — Tile designed for use on interior walls ಮನೆಯ ಒಳಗೋಡೆಗಳಿಗೆ ಹೊದಿಸುವ ಅಂದಚೆಂದದ ಹಂಚು, ಗೋಡೆ ಬಿಲ್ಲೆ, ಗೋಡೆ ಹಂಚು.

Faience (n) — A French term for ear then ware probably referring to the tin enameled earthen ware of Faenyain Italy – ಮಣ್ಣಿನ ಮಡಕೆ, ಕುಡಿಕೆಗಳಿಗೆ ಬಳಸುತ್ತಿದ್ದ ಫ್ರೆಂಚ್ ಶಬ್ದ ಇಟಲಿಯ ಮೂಲದ್ದು

ಇಂಗ್ಲೆಂಡಿನಲ್ಲಿ ವಾಸ್ತು ಶಿಲ್ಪಕ್ಕಾಗಿ ಬಳಸುತ್ತಿರುವ ಸ್ಲ್ಯಾಬ್ ಮತ್ತು ಬ್ಲಾಕ್‌ಗಳಿಗಾಗಿ ಈ ಶಬ್ದ ಈಗ ಪ್ರಯೋಗದಲ್ಲಿದೆ.

**Feather combing (ad)** Drawnig a tip of a feather across lines of wet slip to make pattern – ಇದೊಂದು ಬಗೆಯ ಕುಂಭಾಲಂಕರಣ ಅರೆ ಹಸಿ ಮಡಕೆಯ ಮೇಲೆ ಸವರಿದ ಮಣ್ಣಿನ ದ್ರವದ ಮೇಲೆ ಬಾಚುವುದು.

**Feldspar (Felspar) (n)** ಅಗ್ನಿಶಿಲೆಗಳ ವರ್ಗೀಕರಣಕ್ಕೆ ಅಗತ್ಯವಾದ ಒಂದು ಪ್ರಮುಖ ಖನಿಜ. ಇದರ ರಾಸಾಯನಿಕ ಶಿಥಿಲತೆಯಿಂದ ಬಿಳಿಜೇಡು ಉತ್ಪತ್ತಿಯಾಗುತ್ತದೆ.

**Fettle line (n)** The seam line on a pot resulting from the meeting of two pots of plaster mould – ಪ್ಲಾಸ್ಟರ್ ಅಚ್ಚಿನ ಮಡಕೆಗಳಲ್ಲಿ ಎರಡು ಮಡಕೆಗಳು ಒಂದಕ್ಕೊಂದು ಸೇರಿದಾಗ, ಉಂಟಾಗುವ ಕಲೆ, ಗುರುತು.

**Filler (n)** Non plastic material such as grog, pitchers etc which ever added to clay bodies to promote drying and shrinkage – ಮಿದುಣತ್ವಗುಣವಿಲ್ಲದ ಬೂದಿ, ಮರಳು, ರಾಳ ಮುಂತಾದ ವಸ್ತುಗಳು. ಹಸಿ ಮಡಕೆಗಳು ಒಣಗಲು ಹಾಗೂ ಉಡುಗುವದನ್ನು ತಡೆಗಟ್ಟಲು ಮಡಕೆ ಮಾಡುವ ಮಣ್ಣಿಗೆ ಮಿಶ್ರ ಮಾಡುವವರು.

**Fire clay (n)** This is secondary so called because it is found in the region of coal seams. It is highly refractory – ಕಾವುಜೇಡಿ, ಜಲಜಶಿಲೆಯಿಂದ ಉಂಟಾದ ಮಣ್ಣು, ಕಲ್ಲಿದ್ದಲು ಗಣಿ ಪ್ರದೇಶದಲ್ಲಿ ಹೆಚ್ಚಾಗಿ ದೊರೆಯುತ್ತದೆ. ಹೆಚ್ಚಿನ ತಾಪಮಾನವನ್ನು ತಡೆದುಕೊಳ್ಳಬಲ್ಲದು.

**Firing (v)** The controlled application of heat to clay and glaze to effect the necessary chemical changes required for production of pottery – ಆವಿಗೆ ಸುಡುವುದು, ಆವಿಗೆಯಲ್ಲಿ ಹಸಿಮಣ್ಣಿನ ಮಡಕೆಗಳನ್ನಿಟ್ಟು ಸುಡುವುದು, ಕಾವಿನಿಂದ ಗಾಜಿನಂಥ ವಸ್ತುಗಳನ್ನು ಕರಗಿಸಿ ಹೊಳಪು ಮೈ ಭರಿಸುವುದು.

Flaring (ad) — Glitter – ಹೊಳೆಯುವ, ಮಡಕೆಗಳನ್ನು ಅರೆ ಹಸಿ ಇರುವಾಗ ಉಜ್ಜಿ ನುಣುಪುಗೊಳಿಸಿ ಹೊಳೆಯುವಂತೆ ಮಾಡುವದು. ಗ್ಲೇಸಿಂಗ್ ವಿಧಾನದಿಂದ ಕುಂಭ ವಸ್ತುಗಳನ್ನು ಹೊಳೆಯುವಂತೆ ಮಾಡುವರು.

Flat clay (n) — A plastic clay such as ball clay – ಅಧಿಕ ಮಿದುತ್ವವುಳ್ಳಮಣ್ಣು ಉಂಡೇಜೇಡು, ಅದಕ್ಕೆ ವಿರೋಧವಾಗಿ ಕಡಿಮೆ ಮಿದುತ್ವದ ಮಣ್ಣು.

Flat ware (n) — The collective term for items of pottery such as platse, and shallow dishes or bowls which are broad and open in form complete hollow ware – ತಟ್ಟೆ, ಕಿರಿದಾದ ಬೋಗುಣಿ, ಮುಂತಾದ ತೆರೆದ ಅಗಲಬಾಯುಳ್ಳ ಮಡಕೆಗಳು.

Flint (n) — Silica – ಮರಳು, ಹೊಯಿಗೆ ಉಸುಕು, ಮಣ್ಣನ್ನು ಹದಗೊಳಿಸಲು ಮರಳನ್ನು ಮಣ್ಣಿಗೆ ಬೆರಸುವರು.

Flue (n) — The passage way for the flames in kiln – ಆವಿಗೆಯ ಜ್ವಾಲೆಗಳು ಹೊರಗೆ ಹೋಗುವ ದಾರಿ.

Flux (n) — An ingredient in a clay body or glaze which lowers the melting point of the ingredients – ಮಡಕೆ ಮಣ್ಣು ಅಥವಾ ಗ್ಲೇಸ್‌ನಲ್ಲಿರುವ ಘಟಕಗಳಲ್ಲಿನ ಸ್ರಾವಕ, ಇತರ ಘಟಕಗಳೊಡನೆ ಸೇರಿ ದ್ರವವಾಗಿಸುವ ಕ್ರಿಯೆಯಲ್ಲಿ ನೆರವಾಗುತ್ತದೆ. ಯಾವುದೇ ಗ್ಲೇಸ್ ಮಾಡಲು ಕೂಡ ಸ್ರಾವಕಬೇಕು ಗ್ಲೇಸಿನ ಗುಣ ನಿರ್ಧಾರವಾಗುವುದು ಈ ಸ್ರಾವಕದಿಂದಲೆ.

Folk art (n) — Folk craft, handed down by tradition of the people – ವಂಶಪಾರಂಪರ್ಯವಾಗಿ ಬಂದ ವೃತ್ತಿಗಳು, ಕಲೆಗಳು ಉದಾ: ಗ್ರಾಮೀಣ ವೃತ್ತಿಗಳಾದ ಕುಂಬಾರಿಕೆ, ಚಮ್ಮಾರಿಕೆ, ಇತ್ಯಾದಿ.

Foot ring (n) — A circle of clay left while turnign or trimming the base of a pot and which allows pot to stand evenly – ತಿಗುರಿಯಿಂದ ಮಡಕೆಯನ್ನು

ಗೇಯುವಾಗ ಕೆಳಗೆ ಉಳಿಯುವ ಬಳೆ ಆಕಾರದ ಮಣ್ಣಿನ ಸಿಂಬೆ. ಆ ಸಿಂಬೆ ಗೇಯುತ್ತಿರುವ ಮಡಕೆಗಿಂತ ಸ್ವಲ್ಪ ಅಗಲವಾಗಿರುತ್ತದೆ. ಮಡಕೆ ಸ್ಥಿರವಾಗಿ ನಿಲ್ಲಲು – ಅದರಿಂದ ಅನುಕೂಲವಾಗುತ್ತದೆ.

Form (v) — A word often confused with shape properly the form of an object is the combination of all the characteristics that establish its identity. Form not only includes shape but also aspects such as size texture colour time and movement – ಆಕಾರ ಕೊಡು, ರೂಪಿಸು, ಚಿತ್ರದ ಅಂಗಭಾಗಗಳ ವ್ಯವಸ್ಥೆ, ಆಳತೆ, ರಚನೆ, ಇದೆಲ್ಲವನ್ನು ಒಳಗೊಂಡ ವಸ್ತು, ಕಲಾಪ್ರದರ್ಶನಗಳನ್ನು ಏರ್ಪಡಿಸುವಾಗ 'ಫಾರಂ' ಬಹಳ ಮುಖ್ಯ.

## G

Galena (n) — A lead sulphide (pbs) frequently used by early potters to make lead glaze – ನಿಸರ್ಗದಲ್ಲಿ ದೊರೆಯುವ ಸೀಸದ ಸಲ್ಫೈಡ್ ಸಂಯೋಜನೆಯುಳ್ಳ ಸೀಸದ ಅದಿರು, ಮಧ್ಯಯುಗದ ಕುಂಬಾರರು ಮಡಕೆ ಮೈಗೆ ಹೊಳಪು ಭರಿಸಲು ಬಳಸುತ್ತಿದ್ದ ಸೀಸದ ಅದಿರು.

Ganister (n) — A refractory clayey sand found beneath the coal slams – ಮಣ್ಣಿನಾಂಶವುಳ್ಳ ಅಗ್ನಿನಿರೋಧಕ ಮರಳು, ಕಲ್ಲಿದ್ದಲು ಗಣಿಗಳಲ್ಲಿ ದೊರೆಯುತ್ತದೆ. ಕುಲುಮೆಗಳ ಅಸ್ತರಿಗಾಗಿ ಬಳಸುವ ನೈಸರ್ಗಿಕವಾಗಿ ದೊರೆಯುವ ಜೋಡಿಮಿಶ್ರಿತ ಕಲ್ಲು.

Gauge post (n) — An instrument positioned on the tool tray of pattern wheel for measuring the height of the thrown ware – ಕುಂಬಾರನ ಚಕ್ರದ ಸಲಕರಣೆಗಳಲ್ಲಿ ಇದೂ ಒಂದು, ಗೇಯ್ದಿಟ್ಟ ಮಡಕೆಗಳ ಎತ್ತರ ನೋಡುವ ಸಾಧನ.

**Gilding (v)** The application of a thin layer of gold to pot – ಗಿಲೀಟು ಮಾಡುವುದು ಅತಿಹೆಚ್ಚಿನ ಅಲಂಕರಣಕ್ಕಾಗಿ ಮಡಕೆಯ ಮೈ ಮೇಲೆ ಲೇಪಿಸುವ ಚಿನ್ನದ ಲೇಪನ, ಬಳಕೆ ಕಡಿಮೆ.

**Glaze (v)** A thin glassy coating melted on the surface of a pot to make it nonporous and of required colour and texture – ಮಡಕೆಗೆ ಗಾಜು ಮೈಭರಿಸಿ ಸಚ್ಛಿದ್ರತೆ ಇಲ್ಲದಂತೆ ಮಾಡುವುದು, ಲೋಹಗಳ ಮಿಶ್ರಣ ಲೇಪಿಸಿ ಮೈಯನ್ನು ಹೊಳಪುಭರಿಸುವುದು, ಕಾವಿನಿಂದ ಗಾಜಿನಂಥ ವಸ್ತುಗಳನ್ನು ಕರಗಿಸಿ ಲೇಪಕೊಡುವ ಬಗೆ. "The glazing is like clothing that yuo put on your pot to make it hygienic to make it stand wear and tear" (Dr. Gurucharan Singh).

**Glost (n)** Glaze ಗಾಜು ಮೈ, ಹೊಳಪುಮೈ.

**Gloss Firing (v)** The firing of the kiln to sufficiently high temperature to meet the glaze on a pot – ಮಡಕೆಗೆ ಗಾಜು ಮೈ ಭರಿಸಲು ಹೆಚ್ಚಿನ ತಾಪಮಾನದಲ್ಲಿ ಸುಡುವುದು.

**Glost kiln (n)** A kiln used for firing the glazed on a ware – ಮಡಕೆಗಳನ್ನು ಗ್ಲೇಸ್ಡ ಮಾಡಲು ಬಳಸುವ ಆವಿಗೆ.

**Goblet (n)** Drinking cup – ಗಿಂಡಿ, ಥಾಲಿ, ಪಾನಪಾತ್ರೆ.

**Green glaze (n)** A glaze applied to ceramic ware before biscuit firing – ಕುಂಭ ವಸ್ತುಗಳಿಗೆ ಮೊದಲ ಸುಡತಿಗೆ ಮುನ್ನ ಮಾಡುವ ಗ್ಲೇಸ್.

**Green ware (n)** Unfired clay ware – ಸುಡದೆ ಇರುವ ಕುಂಭ ವಸ್ತುಗಳು.

**Grey ware (n)** ಬೂದುಬಣ್ಣದ ಕುಂಭ ವಸ್ತು.

**Grit (n)** Particles of stone or sand – ಕಲ್ಲಿನ ಪುಡಿ, ಮರಳು, ಮಡಕೆ ಮಾಡುವ ಮಣ್ಣಿಗೆ ಬೆರೆಸುವರು.

**Grog (n)** Previously fired clay ground down used to make body stronger and more malleable –

ಸುಟ್ಟಮಣ್ಣಿನ ಪುಡಿ, ಒಡೆದ, ಹೋಕಾದ ಮಡಕೆಗಳನ್ನು ಕುಟ್ಟಿ ಪುಡಿಮಾಡಿದ ದೊರಗುಬೂದಿ, ಮಡಕೆ ಮಾಡುವ ಮಣ್ಣನ್ನು ಹದಮಾಡುವಾಗ, ದೊರಗು ಬೂದಿಬೆರೆಸುವರು, ಇದು ಮಡಕೆಗಳು ಉಡುಗುವದನ್ನು ತಡೆಗಟ್ಟುತ್ತದೆ.

Grolling (n) — A refined English kaolin that is relatively plastic – ಸಾಧಾರಣ ಮಿದುಣತ್ವವುಳ್ಳ ಉತ್ಕೃಷ್ಟವಾದ ಕೆಯೋಲಿನ್ ಮಣ್ಣು ಬಿಳಿಮಣ್ಣು.

Grouting or pointing (n) — The filler between tiles and mosaics – ಸಂದುಗಳನ್ನು ಮುಚ್ಚುವ ನೀರುಗಾರೆ.

Guild (n) — Potters colony, Kumbhara wade – ಕುಂಬಾರ ಜನಾಂಗದ ಶ್ರೇಣಿ, ಸಂಘ, ವೃತ್ತಿಸಂಘ, ಕುಶಲಕರ್ಮಿಗಳ ಸಂಘ, ಪ್ರಾಚೀನ ಭಾರತದಲ್ಲಿ ಕುಂಬಾರ ಸಂಘಗಳು (ಒಕ್ಕೂಟಗಳು) ಇದ್ದ ಬಗೆಗೆ ಐತಿಹಾಸಿಕ ದಾಖಲೆಗಳಿವೆ.

## H

Hand building (v) — Forming of pots without using a wheel by coiling pinching and slabbing – ಕುಂಬಾರನ ಚಕ್ರವನ್ನು ಉಪಯೋಗಿಸದೆ, ಸುರುಳಿವಿಧಾನದಿಂದ, ಹಿಚುಕು ವಿಧಾನದಿಂದ, ಇಲ್ಲವೆ ಸ್ಲ್ಯಾಬ್ ವಿಧಾನದಿಂದ ಮಡಕೆಗಳನ್ನು ಕೈಯಿಂದ ಮಾಡುವುದು, ಮಡಕೆ ಮಾಡುವುದು ಮೊದಲಿಗೆ ಕೈಯಿಂದಲೆ ಆರಂಭವಾಯಿತು.

Handi (n) — The round bottomed vessel with a broad width and narrow mouth used for storing water, small handies are used for cooking – ಇದು ಮರಾಠಿ ಶಬ್ದ ಹಂಡೆ, ಪಡಗ, ಹರಿವಿ, ನೀರು ತುಂಬಿಡುವ ದೊಡ್ಡ ಗುಡಾಣ ಸೊಂಟ ಅಗಲವಾಗಿದ್ದು ಬಾಯಿ ಕಿರಿದಾಗಿರುತ್ತದೆ. ಚಿಕ್ಕ ಹಂಡಿಯನ್ನು ಅಡುಗೆ ಮಾಡಲು ಬಳಸುವರು.

**Handle (n)** — A hilt, ಹಿಡಿಕೆ. ಜಗ್, ಕಪ್ಪುಬಸಿ, ಥಾಲಿ, ಮೊದಲಾದ ಮಣ್ಣಿನ ವಸ್ತುಗಳಿಗೆ ಹಿಡಿದು ಕೊಳ್ಳಲು ಅನುಕೂಲವಾಗುವಂತೆ, ಅರೆ ಹಸಿಇರುವಾಗಲೆ ಹಿಡಿಕೆಯನ್ನು ಅಂಟಿಸುವರು.

**Hand paste (n)** — The porcelain which is fired to temperature in excess of 2370° F (1300° C) – ಅತಿಹೆಚ್ಚಿನ ತಾಪಮಾನದಲ್ಲಿ ಕಾಯಿಸಿದ ಪಿಂಗಾಣಿಯ ಗಟ್ಟಿ ಕಣಕ.

**Hard glaze (n)** — ಹೆಚ್ಚಿನ ತಾಪಮಾನದಲ್ಲಿ ಮಾಡಿದ ಸೆರಾಮಿಕ್ ಗ್ಲೇಸ್

**Hovel (n)** — The brick enclosure of a bottle kiln – ಬಾಟಲಿ ಆವಿಗೆಯಲ್ಲಿನ ಇಟ್ಟಿಗೆಯಿಂದ ಮಾಡಿದ ಹೊರಗೋಡೆಯ, ಕವಚ.

**Hydria (n)** — Water carrying pots they were large enough to hold good supply of water. They had three handles, two for lifting and carrying and one to hold when pouring or when the vessel was empty – ಗ್ರೀಕ್ ದೇಶದ, ಮೂರುಹಿಡಿಕೆಯ ದೊಡ್ಡ ನೀರಿನ ಪಾತ್ರೆ, ಎರಡು ಹಿಡಿಕೆಗಳು ಎತ್ತಲು ಹಾಗೂ ಸಾಗಿಸಲು ಉಪಯೋಗಿಸಿದರೆ ಮೂರನೆಯದನ್ನು ಇನ್ನೊಂದು ಪಾತ್ರೆಗೆ ನೀರನ್ನು ಸುರಿಯಲು, ಬರಿದಾಗಿದ್ದಾಗ ಎತ್ತಲು ಉಪಯೋಗವಾಗುತ್ತಿತ್ತು.

## I

**Icon (Ikon) (n)** — Portrait of a sacred figure in the form of painting mosaic a low relief usually small scale – ಪವಿತ್ರ ಮೂರುತಿ, ಚಿಕ್ಕ ಪ್ರತಿಮೆ, ಹೆಚ್ಚಾಗಿ ಮತ ಧರ್ಮಗಳದ್ದು ಮಣ್ಣಿನಿಂದ ಕೂಡ ಮಾಡುವರು.

**Igneous (n)** — Fire formed or produced by solidifcation of earths internal Molton magma – ಅಗ್ನಿ ಜನ್ಯ, ಜ್ವಾಲಾಮುಖಿಯಿಂದಾದ ಖನಿಜ.

**Impermeable** — Non porous pottery body which has been endured near porous by vetrification – ಸಚ್ಛಿದ್ರತೆ

ಇಲ್ಲದ ಕುಂಭ ವಸ್ತು, ಕುಂಭಕ್ಕೆ ಗಾಜು ಮೈಭರಿಸಿ ಸಚ್ಛಿದ್ರತೆ ಇಲ್ಲದಂತೆ ಮಾಡಿದ ಕುಂಭ ವಸ್ತು.

Inkpot (n) — A bottle for holding ink – ದೌತಿ, ಮಸಿಬುಡ್ಡಿ ಮಸಿಕುಡಿಕೆ, ಟೆರ್ರಾಕೊಟಾ ಮಸಿ ಬುಡ್ಡಿ ಮಾಡುವರು.

Inlay work (v) — Embed a thing into another, inlaying – ಕುಂದಣಾಲಂಕರಣ, ಕೆತ್ತಿಕೂರಿಸು, ಕುಂದಣಕೆಲಸ, ಕೊರೆದ ಭಾಗದಲ್ಲಿ ಪರವಸ್ತುಗಳನ್ನು ತುಂಬಿಸುವ ಕೆಲಸ, ಅಂಟಿಸುವ ಕೆಲಸ, ಕುಂಭವಸ್ತುಗಳಿಗೂ ಮಾಡುವರು.

Inverted firing technique (v) — ಆವಿಗೆಯಲ್ಲಿ ಮಡಕೆಗಳನ್ನು ತಲೆಕೆಳಗಾಗಿಟ್ಟು ಸುಡುವುದು ಹರಪ್ಪಾ ನಾಗರಿಕತೆಯ ಲೋಥಾಲ್ ಕುಂಬಾರರಿಗೆ ಈ ವಿಧಾನ ತಿಳಿದಿತ್ತು ಈ ವಿಧಾನ ಈಗಲೂ ಬಳಕೆಯಲ್ಲಿದೆ.

Ironstone china (n) — A vitreous opaque pottery introduced by E.J. Mason Stroke-on-Trent in 1813. It was termed iron stone because of its strength – ಹೊಳಪುಳ್ಳ ಪಾರದರ್ಶಕವಲ್ಲದ ಮಣ್ಣಿನ ಪಾತ್ರೆ ೧೮೧೩ರಲ್ಲಿ ಇ.ಜೆ. ಮೇಸನ್ ಸ್ಟ್ರೋಕ್ ಹೊರತಂದನು. ಇದರಗಟ್ಟಿತನದಿಂದಾಗಿ ಐರನ್ ಸ್ಟೋನ್ ಎಂಬ ಹೆಸರು ಬಂದಿದೆ.

Iron oxide (n) — One of the main oxides used for colouring and decoration present in most dug clays except the pure kaolin – ಬಣ್ಣ ಮತ್ತು ಅಂದಕ್ಕಾಗಿ ಬಳಸುವ ಮುಖ್ಯ ಆಕ್ಸೈಡಗಳಲ್ಲಿ ಕಬ್ಬಿಣದ ಆಕ್ಸೈಡ್ ಪ್ರಮುಖವಾದುದು ಶುದ್ಧ ಕೆಯೋಲಿನ್ ಹೊರತುಪಡಿಸಿ ಉಳಿದ ಎಲ್ಲಾ ಮಣ್ಣುಗಳಲ್ಲಿ ಕಬ್ಬಿಣದ ಆಕ್ಸೈಡ್ ಇರುತ್ತದೆ.

## J

Jar (n) — A wide mouthed vessel – ದುಂಡಗಿನ ಅಗಲ ಬಾಯಿಯ, ಹಿಡಿಕೆಯುಳ್ಳ ಅಥವಾ ಇಲ್ಲದ ಪಾತ್ರೆ, ಕನ್ನಡದಲ್ಲಿ 'ಜಾರ್' ಎಂದೇ ಬಳಕೆಯಲ್ಲಿದೆ.

Jasper ware (n) — A variety of coloured stone wares first made by Josiawedg-wood in 1774 and still being produced today – ವರ್ಣಯುತವಾದ ಕಲ್ ಮಡಿಕೆ ೧೭೭೪ರಲ್ಲಿ ಜೋಷೈವೆಡ್ಗವುಡ್ ಮೊದಲಬಾರಿಗೆ ತಯಾರಿಸಿದನು. ಈಗಲೂ ಆ ಪಾತ್ರೆಯ ಉತ್ಪಾದನೆ ಇದೆ.

Jiggering and Jolleying (n) — A process mainly for making cups and saucers and plates in which the clay takes shape between profile and rotary plaster mould. ಕಪ್‌ಸಾಸರ್ ಮತ್ತು ಪ್ಲೇಟ್ ಮಾಡುವ ಕ್ರಿಯೆ.

Jug (n) — Small vessel for keeping water or wine – ಕನ್ನಡದಲ್ಲಿ ಕೂಡಾ ಜಗ್ ಎಂದೇ ಕರೆಯುವರು ಹೂಜಿ, ಕೂಜಾ, ನೀಳಕತ್ತಿನ ಮಡಕೆ, ನೀರು ಕುಡಿಯಲು ನೀರು ತುಂಬಿಡಲು ಉಪಯೋಗಿಸುವರು ಸಾಮಾನ್ಯವಾಗಿ ಜಗ್ಗಿನಲ್ಲಿ ನೀರು ತುಂಬಿ ಊಟದ ಟೇಬಲ್ ಮೇಲೆ ಇಡುವರು.

## K

Kaolin (n) — Pure clay known as China clay. It is used in porcelain bodies – ಶುದ್ಧವಾದ ಪಿಂಗಾಣಿಮಣ್ಣು, ಚೈನಾ ಮಣ್ಣು ಎಂದು ಕರೆಯುವರು. ಪಿಂಗಾಣಿ ಸಾಮಾನುಗಳನ್ನು ತಯಾರಿಸಲು ಬಳಸುವರು.

Kettle (n) — A vessel for heating or boiling liquids for domestic use one with spout and lid – ಚಹಕೆಟ್ಲ್, ದ್ರವ ವಸ್ತುಗಳನ್ನು ಬಿಸಿಮಾಡಲು ಉಪಯೋಗಿಸುವ ಸೊಂಡಿಲುಳ್ಳ ಮಣ್ಣಿನ ಪಾತ್ರೆ. Kettle called the pot black (prv)

Kick wheel (n) — A potter's wheel operated by Tread bar or pedal at its, box – ಕಾಲ್‌ಚಕ್ರ

Kiln (n) — An oven or furnace used for firing ceramics, the potters furnace – ಆವಿಗೆ, ಆವಿ ಮಡಕೆ ಸುಡುವ ಗೂಡು, ಭಟ್ಟಿ ಒಲೆ ಕುಲುಮೆ, ಗ್ರಾಮೀಣ ಪ್ರದೇಶದಲ್ಲಿ



ಕುಂಬಾರರು, ಸ್ಥಳೀಯವಾಗಿ ದೊರೆಯುವ ಕಲ್ಲು ಮಣ್ಣುಗಳಿಂದ ಆವಿಗೆಯನ್ನು ಕಟ್ಟಿಕೊಳ್ಳುವರು. ಸುಧಾರಿತ ಆವಿಗೆಯ ನಿರ್ಮಾಣಕ್ಕೆ ಅಗ್ನಿ ನಿರೋಧಕ ಇಟ್ಟಿಗೆಗಳನ್ನು ಉಪಯೋಗಿಸುವರು. ಈಗೀಗ ವಿದ್ಯುತ್ ಒಲೆಗಳು ಬಂದಿವೆ. ಆವಿಗೆಯ ಇಂದನವಾಗಿ ಎಣ್ಣೆಯನ್ನು ಕೂಡ ಬಳುಸವರು. ತೀರಾ ಇತ್ತೀಚೆಗೆ ಫೈಬರ್ ಒಲೆಯಿಂದಾಗಿ ಕೇವಲ ೩-೪ ಗಂಟೆಗಳ ಅವಧಿಯಲ್ಲಿ ಮಡಕೆಗಳನ್ನು ಸುಡಬಹುದಾಗಿದೆ. ಫೈಬರ್ ಕವಚದ ಒಲೆಗಳನ್ನು ಎಲ್ಲೆಂದರಲ್ಲಿಗೆ ಸುಲಭವಾಗಿ ಸಾಗಿಸಬಹುದು. Kiln call oven burnt house (prv)

Kiln furniture (n) — Bats props and other refractory pieces supporting pottery in the kiln – ಆವಿಗೆಯ ಪರಿಕರಗಳು, ಕವೆಗೋಲು, ಒತ್ತುಗೋಲು, ಇತರೆ ಅಗ್ನಿ ನಿರೋಧಕ ವಸ್ತುಗಳು. ಆವಿಗೆಯಲ್ಲಿ ಮಡಕೆಗಳನ್ನು ಸುಡುವದಕ್ಕೆ ಸುಟ್ಟ ಮಡಕಗಳನ್ನು ತಗೆಯುವುದಕ್ಕೆ ಉಪಯೋಗಿಸಲ್ಪಡುವ ಸಲಕರಣೆಗಳು.

Kylix (n) — It is a Greek pottery two handled drinking cup – ಎರಡು ಹಿಡಿಕೆಯುಳ್ಳ ಗ್ರೀಕಿನ ಮಣ್ಣಿನ ಪಾನ ಪಾತ್ರೆ.

## L

Lacquering (ad) — Making impervious shining smooth and clean – ಸುಡದೆ ಇರುವ ಹಸಿಮಡಕೆಗಳನ್ನು ಮೆರುಗೆಣ್ಣೆ ಸವರಿ ಅಂದಗೊಳಿಸುವುದು.

Ladle (n) — A large spoon for lifting liquid, bowl for holding Molton metal – ಮಣ್ಣಿನ ಚಮಚ, ಸೌಟು, ಲೋಹಗಳ ದ್ರವವನ್ನು ಹಾಕಿಡುವ ಮಣ್ಣಿನ ಬೋಗುಣಿ.

Lagging (n) — Material used for insulating the out side of kilns such as asbestos – ವಿದ್ಯುತ್ ಆವಿಗೆಯಲ್ಲಿ ಹೊರಭಾಗದ ರಕ್ಷಣೆಗಾಗಿ ಹೊದಿಸುವ ವಿದ್ಯುತ್ ನಿರೋಧಕ ವಸ್ತು ಉದಾ: ಕಲ್ನಾರು

**Lamp (n)** — A vessel for burning oil with a wick and so giving light – ಹಣತೆ, ಪ್ರಣತಿ, ಮಣ್ಣಿನ ದೀಪ.

**Lawn (n)** — Phosphor – bronze-mesh sieves used in pottery for slips and glazes – ಜರಡಿ, ಸಾಣಿಗೆ, ಕುಂಬಾರಿಕೆಯ ಮಣ್ಣನ್ನು ಸೋಸುವ ಲೋಹದ ಜರಡಿ, ದ್ರವರೂಪದ ಮಣ್ಣನ್ನು, ಹಾಗೂ ಗ್ಲೇಸ್ ಮಿಶ್ರಣ ಸೋಸುವ ಸಾಣಿಗೆ.

**Leather hard (n)** — The condition of the raw ware, when most of the moisture has left the body but when it is plastic enough to be carved or joined – ಅರೆ ಹಸಿಯ ಕುಂಭ ವಸ್ತು, ಅತ್ಯಂತ ಕಡಿಮೆ ತೇವಾಂಶವುಳ್ಳದ್ದು ಗೇಯ್ದು ಮಡಕೆಯನ್ನು ಕೊನೆ ಹಂತವಾಗಿ ತಟ್ಟಿದ ಬಳಿಕ ಇರುವ ಸ್ಥಿತಿ, ಗ್ರಾಮೀಣ ಪ್ರದೇಶದ ಕುಂಬಾರರು 'ನಂಮ ಹಸಿ' ಎನ್ನುವರು. ಈ ಸ್ಥಿತಿಯಲ್ಲಿ ಕುಂಭ ವಸ್ತುಗಳಿಗೆ ಚಿತ್ತಾರ ಮಾಡಲು, ಗೆರೆ ಕೊರೆಯಲು ಬಗೆಬಗೆಯ ಅಲಂಕರಣ ಮಾಡಲು ಅನುಕೂಲವಾಗುವುದ.

**Levigation** — A method of refining clay by water flotation the heavier particles settling out – ಚೂರ್ಣೀಕರಿಸು, ಮಡಕೆ ಮಾಡುವ ಮಣ್ಣನ್ನು ನೀರಿಗೆ ಹಾಕಿ ನುಣ್ಣಗೆ ಮಾಡುವುದು, ದಪ್ಪನೆಯ ಕಣಗಳು ತಳದಲ್ಲಿ ಉಳಿದು ಸಪುರಾದದ್ದು (ಸಣ್ಣನೆಯ ಕಣ) ಮಾತ್ರ ಮೇಲೆ ಉಳಿಯುತ್ತದೆ.

**Lid (n)** — Clayplate, mouth covering plate, Jar-lid – ಮುಚ್ಚಳ.

**Lime (n)** — Calcium carbonate – ಸುಣ್ಣ, ಕುಂಬಾರಿಕೆಯಲ್ಲಿ ಸುಣ್ಣವನ್ನು ಬೇರೆ, ಬೇರೆ ಕಾರ್ಯಗಳಿಗೆ ಬಳಸುವರು.

**Loam (n)** — Rich soil of clay sand and decayed vegetable matter – ಸಾವಯುವ ಪದಾರ್ಥಗಳಿಂದ ಕೂಡಿದ, ಮರಳು ಬೆರೆತ ಜಿಗುಟಾದ ಜೇಡಿಮಣ್ಣು, ಕಳಿತಮಣ್ಣು, ಇಟ್ಟಿಗೆ ತಯಾರಿಸಲು ಮಾಡಿದ ಜೇಡಿ.

**Long clay (n)** Clay with high plasticity and strength – ಹೆಚ್ಚು ಬಲ ಮತ್ತು ಮಿದುಣತ್ವವುಳ್ಳ ಕುಂಬಾರಿಕೆಯ ಮಣ್ಣು.

**Lugs (n)** Small projection or ears on the side of pots which functions as handles – ಮಡಕೆಯ ಕಿವಿ, ಕಂಠದ ಹೊರಚಾಚು, ಮಡಕೆಯನ್ನು ಹಿಡಿದುಕೊಳ್ಳಲು ಅಂಟಿಸಿದ ಚಿಕ್ಕಹಿಡಿ, ಚಾಚುಹಿಡಿ, ಹೂಜಿಗೆ ಹಿಡಿಕೆ ಅಂಟಿಸುವರು.

**Lustre (n)** A thin iridescent coating of metallic substance applied as decoration to a glazed surface in liquid form and then fired at a low temperatuer – ಹೊಳಪು, ಕಾಂತಿ.

**Luting (v)** Joining together pieces of clay in leather hard condition by scoring the area of wetting with slip – ಅರೆ ಹಸಿಯ ಮಡಕೆಗಳಿಗೆ, ಹಿಡಿಕೆ, ಕಂಠ, ಕಿವಿ, ಅಂಟಿಸಬೇಕಾದಾಗ ಆ ಭಾಗವನ್ನು ಕೆರೆದು ದೊರಗು ಮಾಡಿ ದ್ರವರೂಪದ ಮಣ್ಣನ್ನು ಲೇಪಿಸಿ ಮಣ್ಣಿನ ಹಿಡಿಕೆ, ಕಿವಿ, ಕಂಠವನ್ನು ಅಂಟಿಸುವುದು.

## M

**Maiolica / Majolica (n)** Italian tin glazed work originating in the Majorca (hence the name) in the 15th century, Basically similar to Hispano Moresque Delft and Faience – ಪಾರದರ್ಶಕವಲ್ಲದ ತವರದ ಗ್ಲೇಸ್ಡ್ ಮಾಡಿದ ಮಣ್ಣಿನ ಪಾತ್ರೆಗಳು ಇದನ್ನು ಮೂರುಬಾರೆ ಸುಡುವರು - ಇಂಥಹ ಗ್ಲೇಸ್ಡ ವಸ್ತುಗಳನ್ನು ಇಟಲಿಯ ಭಾಷೆಯಲ್ಲಿ ಮಜೊರಿಕಾ ಎಂತಲೂ, ಅಲ್ಲದೆ ಇದನ್ನು ಮೊದಲಿಗೆ ತಯಾರಿಸಿದ ಫಾವಿನ್ಜಾದ ಫ್ರೇಂಚ್ ಹೆಸರಾದ ಫಾಯನ್ಸ (Faience) ಎಂದು ಕರೆಯುವರು.

**Mallet (n)** A small wooden hammer – ಸುತ್ತಿಗೆ, ಕುಂಬಾರರು ಮಣ್ಣಿನ ಹೆಂಟೆಯನ್ನು ಪುಡಿಮಾಡಲು ಉಪಯೋಗಿಸುವರು.

| | |
|---|---|
| Maquette (n) | A small sculpture made as a pre-paratory study for large work – ಮಾದರಿ ಶಿಲ್ಪ. |
| Marls (n) | Clay containing large proportion of lime – ಸುಣ್ಣದ ಪ್ರಮಾಣ ಅಧಿಕವಾಗಿರುವ ಮಣ್ಣು, ಸುಣ್ಣ ಜೇಡಿ. |
| Mask (n) | A mould of the face and or head – ಮೊಗವಾಡ, ಮಣ್ಣು, ಲೋಹ, ಕಟ್ಟಿಗೆ, ಪ್ಲಾಸ್ಟಿಕ್ಕಿನ ಬಗೆ ಬಗೆಯ ಮುಖವಾಡಗಳನ್ನು ಮಾಡುವರು. ಟೆರ್ರಾಕೊಟಾದ ಅಂದ ಚೆಂದ ಮುಖವಾಡ ಕೂಡ ಮಾಡುವರು. |
| Master-mould (n) | Block mould – ಮೂಲ ಅಚ್ಚಿನಿಂದ ಮಾಡಿದ ಅಚ್ಚು ಮಣ್ಣಿನ ಪ್ರತಿಮೆಗಳನ್ನು ಆಟಿಕೆ ಸಾಮಾನು, ಗೊಂಬೆ ಮುಂತಾದವುಗಳನ್ನು ಮಾಡಲು ಬಳಸುವರು. |
| Maturing (ad) | Clayes which are stored damp matuer or improve in quality by the process of aging – ಕುಂಬಾರರು ಮಡಕೆ ಮಾಡುವ ಮಣ್ಣನ್ನು ಹೊಳೆ, ಹಳ್ಳ ಹೊಂಡ, ಕೆರೆಗಳ ದಡದಿಂದ ತರುವರು. ಮಲೆನಾಡು ಪ್ರದೇಶದ ಕುಂಬಾರರು ವರ್ಷಕ್ಕೆ ಬೇಕಾಗುವಷ್ಟು ಮಣ್ಣನ್ನು ಯುಗಾದಿಯ ನಂತರ ಮಳೆಗಾಲಕ್ಕೆ ಮುನ್ನ ತಂದು ರಾಶಿಹಾಕಿ, ನೀರು ಹಾಕಿ ತುಳಿದು ಕೊಟ್ಟಿಗೆಯಲ್ಲಿ ಒಟ್ಟುವರು. ಒಣಗದಿರಲೆಂದು ಗೋಣಿ ತಟ್ಟು ಮುಚ್ಚಿ ನಿತ್ಯವು ನೀರು ಚಿಮುಕಿಸುವರು. ತಮಗೆ, ಬೇಕಾದಾಗ ರಾಶಿಯಿಂದ ತೆಗೆದು ಮಿಜ್ಜಿ ನಾದಿ ಹದಗೊಳಿಸಿ, ಮಡಕೆ ಮಾಡಲು ಬಳಸುವ ರೂಢಿ ಈಗಲೂ ಇದೆ – ಮಣ್ಣು ಕಾಲ ಕಳೆದಂತೆ ಕಳಿತು ಮಿದುಣತ್ವ ಹೆಚ್ಚಿ ಬಲ ಬರುತ್ತದೆ. ಒಣಮಣ್ಣನ್ನು ಕೂಡ ಗಾಳಿ ಮಳೆ ಬಿಸಿಲಿಗೆ ತೆರೆದಿಡುವರು ವಾತಾವರಣದ ಕ್ರಿಯೆಯಿಂದ ಮಣ್ಣಿಗೆ ಬಲಬರುತ್ತದೆ. ಆಗಲೆ ಮಣ್ಣು ತಂದು, ನೀರು ಹಾಕಿ, ಅರಲು ಮಾಡಿ ಹದಗೊಳಿಸುವ ರೂಢಿ ಕೆಲವೆಡೆ ಇದೆ, ಅದು ಸರಿಯಾದ ಕ್ರಮವಲ್ಲ, ಮಣ್ಣು ಜಿಗಿ ಬರುವದಿಲ್ಲ, ಚೀನಿಯವರು ಮಡಕೆ ಮಾಡುವ ಮಣ್ಣನ್ನು ತಂದು ದಶಕಗಟ್ಟಲೆ ಗಾಳಿ, ಮಳೆ ಬಿಸಿಲಿಗೆ ತೆರೆದಿಡುತ್ತಿದ್ದರಂತೆ. ಅಪ್ಪರಾಶಿ ಮಾಡಿಟ್ಟ |

| | |
|---|---|
| | ಮಣ್ಣನ್ನು ಮಗ ಮಡಕೆ ಮಾಡಲು ಬಳಸುತ್ತಿದ್ದನೆನ್ನುವ ಪ್ರತೀತಿ ಇದೆ. |
| Mica (n) | Any of a group of silicate minerals – ಅಭ್ರಕ, ಕಾಗೆ ಬಂಗಾರ. |
| Minon art (n) | A term commonly used to refer the art of Crete especially that produced betwen 2500 and 1100 B.C. ಕ್ರಿ.ಪೂ. ೨೫೦೦ ಮತ್ತು ೧೧೦೦ರ ಮಧ್ಯಾವಧಿಯ ಕ್ರೀಟೆನಾಗರಿಕತೆಯ ಕಾಲಾವಧಿಯಲ್ಲಿ ಬೆಳೆದು ಬಂದ ಕುಂಭಕಲೆಗೆ 'ಮಿನೋಯಿನ್' ಕುಂಭಕಲೆ ಎನ್ನುವರು. |
| Model (n) | Pattern, ಮಾದರಿ, ಆಕೃತಿ ನಮೂನೆ. |
| Motif (n) | A recurrent theme or pattern in works art ಒಂದು ಕಲಾಕೃತಿಯ ಮೂಲಾಶಯ, ಅಲಂಕಾರ ಮಾದರಿ. |
| Mouth (n) | Open space of the pot at top ಗಡಿಗಿ ಬಾಯಿ. |
| Mug (n) | A cup with more or less verticle sides – ಉರುಳೆಯಾಕಾರದ ಹಿಡಿ ಇರುವ ಅಥವಾ ಇಲ್ಲದ ನೀರು ಕುಡಿಯುವ ಮಣ್ಣಿನ ಪಾತ್ರೆ. |
| Mural (ad) | The figure drawn on wall – ಭಿತ್ತಿ ಚಿತ್ರ, ಗೋಡೆಗಳ ಮೇಲೆ ಬರೆದ ಚಿತ್ರ ಟೆರ್ರಾ ಕೊಟಾದ ಶಿಲ್ಪವನ್ನು ಗೋಡೆಗಳ ಮೇಲೆ ಭಿತ್ತಿ ಚಿತ್ರದ ನಮೂನೆಯಲ್ಲಿ ಮಾಡುವರು ಬಂಗಾಳದ ಅನೇಕ ಹಳೆಯ ದೇವಾಲಯಗಳಲ್ಲಿ ನೋಡಬಹುದು. |

## N

| | |
|---|---|
| Neck (n) | A something resembling a neck such as the narrow part of a vessel – ಮಡಕೆಯ ಕುತ್ತಿಗೆಯ ಭಾಗ, ಬಾಯಿಯ ಕೆಳಗಿನ ಭಾಗ. |

## O

| | |
|---|---|
| Obliquely (adv) | Slanting neither perpendicular nor parallel – ಐಮೂಲಿ, ಅಸರಳ, ಸೊಟ್ಟ, ಅಸಮ ಕೋನದಲ್ಲಿ ಬಾಗಿರುವ. |

**Ocher (n)** Pale brownish colour, natural iron earth which can be used as slips or colouring pigments – ಪ್ರಾಕೃತಿಕವಾಗಿ ದೊರೆಯುವ ಕಬ್ಬಿಣಾಂಶವುಳ್ಳ ಮಣ್ಣು ಬಣ್ಣ ತಯಾರಿಸಲು ಉಪಯೋಗಿಸುವರು. ಉದಾ: ಹುರಮಂಜ, ಇದನ್ನು ನೀರಿನಲ್ಲಿ ಕಲಸಿ ಬ್ರಷ್ ಮೂಲಕ ಬಣ್ಣ ಬಳಿಯಬಹುದು. ಹಳದಿ, ಕೆಂಪು, ಕಂದು ವರ್ಣದ ಮಣ್ಣು ಭೂಮಿಯಲ್ಲಿ ದೊರೆಯುತ್ತದೆ. ಖಾನಾಪುರದ ಬಳಿ ದೊರೆಯುವ ಬಣ್ಣದ ಮಣ್ಣನ್ನು ಡಿಸ್ ಟೆಂಬರ್ ತಯಾರಿಸಲು ಮುಂಬಯಿ, ಮತ್ತು ಪೂನಾಕ್ಕೆ ಸಾಗಿಸಲಾಗುತ್ತಿದೆ.

**Offering Stand (n)** This is the most distinctive type of the Harappan pottery, offering stand having a dish on bowl for its crowning component – ಮಣ್ಣಿನ ಹರಕೆ ಪೀಠ ಆರಾಧನಾ ಸಮಯದಲ್ಲಿ ಸಾಂಸ್ಕೃತಿಕ ಸಂದರ್ಭದಲ್ಲಿ ಅರ್ಪಿಸುವ ಕಾಣಿಕೆ ವಸ್ತು. ಹರಪ್ಪ ಮೊಹಂಜದಾರೋ ಉತ್ಖನನದಲ್ಲಿ ಹಲವಾರು ಬಗೆಯ ಹರಕೆ ಪೀಠಗಳು ದೊರೆತಿವೆ.

**Opaque (ad)** Not transparent, cannot be seen though, ಅಪಾರದರ್ಶಕ ಮಡಕೆ, ಕೆಲವು ಪಿಂಗಾಣಿ ವಸ್ತುಗಳು ಅಪಾರದರ್ಶಕವಾಗಿರುತ್ತವೆ.

**Open firing (v)** A firing in which the ware is exposed to the flames – ಬಯಲು ಆವಿಗೆಯಲ್ಲಿ ಬೆಂಕಿ ಹಾಕಿ ಮಡಕೆ ಸುಡುವ ವಿಧಾನ.

**Opening materials (n)** Non plastic materials such as sand and grog which are used to facilitate drying and reduce shrinkage – ಮಿದುಣತ್ವ ಗುಣವಿಲ್ಲದ ಮರಳು ಮತ್ತು ಬೂದಿಯನ್ನು ಮಡಕೆ ಮಾಡುವ ಮಣ್ಣಿಗೆ ಬೆರಸುವದು. ಇದರಿಂದ ಮಡಕೆ ಒಣಗಲು ಹಾಗೂ ಉಡುಗುವದನ್ನು ತಡೆಗಟ್ಟಲು ಅನುಕೂಲವಾಗುವುದು.

Oven (n) — Fireplace, an enclosed compartment of brick stone clay or metal for cooking food – ಒಲೆ, ಅಡುಗೆ ಒಲೆ, ಒಂಟಿ ಒಲೆ, ಜೋಡು ಒಲೆ, ಕಿಂಡಿ ಒಲೆ.

Ovoid (ad) — Egg shaped body – ಮೊಟ್ಟೆ ಆಕಾರದ ಪಾತ್ರೆ ಲೋಥಾಲ್ ಉತ್ಖನನದಲ್ಲಿ ದೊರೆತಿದೆ.

Oxidation (v) — Firing a kiln with an oxidizing atmosphere a good supply of air produces a clear atomsphere in the kiln – ಉರಿಯಲು ಅನುಕೂಲವಾದಂತಹ ವಾತಾವರಣದ ಸಮಯದಲ್ಲಿ ಆವಿಗೆ ಹೊತ್ತಿಸುವುದು.

## P

Paddle (n) — A small stick to hit the pot and shaping it – ಸೊಳ, ಟೊಳ್ಳಾದ ಹಸಿಮಡಕೆಗಳನ್ನು ಕಲ್ಲು ಮತ್ತು ಸೊಳದಿಂದ ತಟ್ಟುವರು, ಸೊಳವನ್ನು ಮರದಿಂದ ಮಾಡುವರು.

Pan (n) — Broad shallow vessel – ತಟ್ಟೆ, ಹರಿವಾಣ, ಆಳವಿಲ್ಲದ ಅಗಲವಾದ ಪಾತ್ರೆ ಮುಚ್ಚಳ, ತವೆ, ಬಾಣಲೆ.

Paste (n) — A term used for porcelian bodies – ಹೆಚ್ಚು ಸೀಸವನ್ನು ಬೆರಸಿ ತಯಾರಿಸಿದ ಮಿಶ್ರಣ, ಕಣಕ, ಕುಂಬಾರಜೇಡಿ ಪೋರ್ಸಲೀನ್ ತಯಾರಿಕೆಯಲ್ಲಿ ಬಳಕೆಯಲ್ಲಿದೆ.

Patella (n) — A little pan – ಚಿಕ್ಕ ತಾಟು, ಪ್ಲೇಟು, ಚಿಕ್ಕ ಮುಚ್ಚಳ.

Pate - Surpate (v) — A method of decorating ceramic objects with layers of slip so that resulting design stands out in low relief – ಕುಂಭ ವಸ್ತುಗಳಿಗೆ ಮಣ್ಣಿನ ತೆಳುವಾದ ದ್ರವವನ್ನು ಪದರು ಪದರಾಗಿ ಲೇಪಿಸಿ ಅಂದಗೊಳಿಸುವುದು.

Pedology (n) — Pottery technics – ಮೃತ್ತಿಕಾ ಶಾಸ್ತ್ರ, ಕುಂಭಕಲೆ, ಮಡಕೆ, ಹಂಚು ಮುಂತಾದ ಮಣ್ಣಿನ ವಸ್ತುಗಳ, ವಿಜ್ಞಾನ, ಕುಂಬಾರಿಕೆ.

Peeling (v) — The separation of a slip or glaze from a body – ಹಕ್ಕಳೆ ಕೀಳು, ಸಿಪ್ಪೆ ಕೀಳು, ಕುಂಭ ವಸ್ತುವಿಗೆ ಲೇಪಿಸಿದ

ದ್ರವರೂಪದ ಮಣ್ಣಿನ ಸಿಪ್ಪೆ ಕೀಳುವುದು, ಹೊಳಪು ಭರಿಸಿದ ಮಡಕೆಯ ಮೈ ಸಿಪ್ಪೆ ಕೀಳುವುದು.

**Pinch pot (v)** To compress a clay between finger and thumb – ಮಣ್ಣನ್ನು ಕೈಯಿಂದ ಹಿಸುಕಿ ಗಡಿಗೆ ಮಾಡುವ ವಿಧಾನ. ಬಹು ಪ್ರಾಚೀನದಿಂದಲೂ ಈ ವಿಧಾನ ಬಳಕೆಯಲ್ಲಿದೆ.

**Pipe clay (n)** A white clay used for pottery especially for pipes – ಕೊಳವೆ ಮಾಡುವ ಮಣ್ಣು.

**Pipkin (n)** Small pot – ಮಣ್ಣಿನ ಚಿಕ್ಕಗಡಿಗೆ

**Pitcher (n)** Large jug, vessel, big pitcher ಕೊಡ, small pitcher – ಬಿಂದಿಗೆ, ಬಾವಿಯಿಂದ ನೀರು ಎತ್ತಲು ಉಪಯೋಗಿಸುವ ಮಣ್ಣಿನ ಗಡಿಗೆ ಬಾಯಿ ಚಿಕ್ಕದಿದ್ದು ಮೈ ದುಂಡಗಿರುತ್ತದೆ. ಹೂಜಿ, ಮರಿಗೆ pitcher strikes the stone (prv)

**Pitchers (n)** Broken fired pottery which has been ground to a powder for adding to clay as a filler – ಸುಟ್ಟ ಮಡಕೆಯ ಬೂದಿ, ದಪ್ಪ ಕಣಗಳಿರುತ್ತವೆ. ಹದಗೊಳಿಸಲು ಹಸಿಮಣ್ಣಿಗೆ ಬೆರಸುವರು.

**Plaster of Paris (n)** Hydrate of calcium sulphate made by gypsum. It hardens after being mixed with water used for making plaster casts etc. – ಜಿಪ್ಸಮ್ಮಿನ ಸುಣ್ಣನೆಯ ಬಿಳಿಪುಡಿ ಅಚ್ಚುಗಳನ್ನು ಮಾಡಲು ಉಪಯೋಗಿಸುವರು.

**Plasticity (n)** Quality of being plastic – ಲೆಪ್ಪಕೆಲಸದ: ಜೇಡಿ, ಮೇಣ, ಮೊದಲಾದ ಮೆದು ಪದಾರ್ಥಗಳ ಮುದ್ದೆಗೆರೂಪ ಕೊಡುವ ಕುಂಭಕಲೆ ಇತ್ಯಾದಿ.

**Plastic earth (n)** An alternative term which may be used in referring to any of the material clays used in the sculpture and ceramics – ಕುಂಬಾರಿಕೆ, ಹಾಗೂ ಮೃತ್ ಶಿಲ್ಪಕ್ಕೆ ಬಳಸುವ ಮಣ್ಣಿಗಿರುವ ಮತ್ತೊಂದು ಹೆಸರು

ಪ್ಲಾಸ್ಟಿಕ್ ಮಣ್ಣು ಹೆಚ್ಚು ಮಿದುಣತ್ವ ಗುಣ ಹೊಂದಿರುವ ಮಣ್ಣು ಜೇಡಿಮಣ್ಣು.

Plate (n) — A shallow dish, covering plate – ತಟ್ಟೆ ಬಟ್ಟಲು, ಮುಚ್ಚಳ ಮಣ್ಣು ಅಥವಾ ಪಿಂಗಾಣಿಯ ಊಟದ ತಟ್ಟೆ

Porcelain (n) — A fine earthern ware, while thin transparent or semi transparent first made in China – porcelain is fired at 1300 to 1450°C ನಯವಾದ ಮಡಕೆ ಪಿಂಗಾಣಿ ಪಾರದರ್ಶಕ ಇಲ್ಲವೆ ಅರೆ ಪಾರದರ್ಶಕ ವಾದದ್ದು, ಪಿಂಗಾಣಿಯನ್ನು ಚೀನಿಯರು ವಿಶ್ವಕ್ಕೆ ಮೊದಲು ಪರಿಚಯಿಸಿದರು.

Polish (v) — Make or become smooth or glassy by rubbing – ಕುಂಭ ವಸ್ತುಗಳನ್ನು ಮೆರುಗೆಣ್ಣೆಯಿಂದ ಉಜ್ಜಿ ಹೊಳಪು ಗೊಳಿಸುವುದು ಗ್ರಾಮೀಣ ಪ್ರದೇಶದ ಕುಂಭಾರರು ಭೂಮಿಯಲ್ಲಿ ಸಿಗುವ ಹೊಮ್ಮಣ್ಣು ತಂದು ಪುಡಿ ಮಾಡಿ ಸ್ವಲ್ಪ ನೀರು ಹಾಕಿ ಬಟ್ಟೆಗೆ ಹಚ್ಚಿಕೊಂಡು ಮಡಕೆಯ ಮೈಯನ್ನು ಉಜ್ಜಿ ಹೊಳಪು ಗೊಳಿಸುವರು. ಸಾಮಾನ್ಯವಾಗಿ ಈ ಕೆಲಸವನ್ನು ಮಹಿಳೆಯರು ಮತ್ತು ಮಕ್ಕಳು ಮಾಡುವರು.

Porcelain Clay (n) — A term generally applied to white vitreous tranclucent pottery clay – ಪಿಂಗಾಣಿ ಮಣ್ಣು ಇದಕ್ಕೆ 'ಕೆಯೊಲಿನ್' ಅಥವಾ ಚೀನಿಜೇಡು ಚೈನಾ ಮಣ್ಣು ಎನ್ನುವವರು. ಬಿಳಿಜೇಡಿನಿಂದ ಬಹುವಾಗಿ ಪಿಂಗಾಣಿ ಸಾಮಾನುಗಳನ್ನು, ಅಧಿಕ ಶಕ್ತಿಯ ವಿದ್ಯುತ್ ಅವಾಹಕಗಳು ಮತ್ತು ಇತರೆ ಅಗ್ನಿನಿರೋಧಕ ವಸ್ತುಗಳನ್ನು ತಯಾರಿಸುವರು. ಬೆಂಗಳೂರು ಮತ್ತು ಹಾಸನ ಸುತ್ತಮುತ್ತ ಬಿಳಿಜೇಡು ಹೆಚ್ಚಾಗಿ ದೊರೆಯುವುದು.

Porosity (ad) — The proportion of pores or small spaces between the solid particles – ತೂತುಗಳಿರುವಿಕೆ; ಸಚ್ಛಿದ್ರತೆ, ಸರಂಧ್ರತೆ, ಸಾಮಾನ್ಯ ಸುಡತಿಯಲ್ಲಿ ಸುಟ್ಟ ಮಡಕೆಗಳು ಸಚ್ಛಿದ್ರತೆ ಮೈಯನ್ನು ಹೊಂದಿರುತ್ತವೆ. ಗ್ಲೇಸಿಂಗ್ ಮಾಡುವದರಿಂದ ರಂಧ್ರಗಳು ಮುಚ್ಚಿಕೊಳ್ಳುತ್ತವೆ.

Porringer (n) — A small bowl often with handle – ಅಂಬಲಿ, ಗಂಜಿ ಹಾಕಿ ಬಡಿಸುವ ಚಿಕ್ಕ ಡಬರಿ, ಬೋಗುಣಿ, ಸಣ್ಣ ಗಂಗಾಳ.

Pot (n) — Earthern ware, ceramic ware – ಮಡಕೆ, ಕುಡಿಕೆ, ಗಡಿಗೆ, ಕುಂಭ, ಕುಂಡ Big-pot ದೊಡ್ಡ ಮನುಷ್ಯ pot head – ತಿಕ್ಕಲು ಮನುಷ್ಯ ಕೀಳು ಮನುಷ್ಯ Pot calling Kettle black (prv) The pot shows the universe (prv) Pot that belongs to many is ill stirred and worse boiled (prv) A little pot is soon hot (prv).

Potable (ad) — fit to drink – ಕುಡಿಯಲು ಯೋಗ್ಯವಾದ ನೀರು, ಗಡಿಗೆಯಲ್ಲಿ ತುಂಬಿಟ್ಟ ನೀರು.

Pot-lid (n) — A cover of pot – ಮುಚ್ಚಳ.

Pot hook (n) — A hook for hanging a pot over a fire – ಭಟ್ಟಿಯಲ್ಲಿ ಮಡಕೆಸುಡಲು ನೇತು ಹಾಕುವ ಕೊಕ್ಕೆ.

Pot-plant (n) — A plant grown in a pot – ಹೂಕುಂಡ

Pot sherd (n) — Broken piece of fired pot – ಬೋಕಿ, ಒಡೆದ ಮಡಕೆಯ ತುಂಡು

Pot shot — Easy range, random shot – ಸುಲಭಗುರಿ

Pot stick (n) — A stick for stirring what is being cooked in a pot – ಮಣ್ಣಿನ ಸೌಟು.

Potter (n) — One who makes earthen ware vessel or crockery – ಕುಂಬಾರ, ಕುಲಾಲ, ಕೋವರ, ಚಕ್ರದಿಂದಾಗಲಿ, ಕೈಯಿಂದಾಗಲಿ ಮಣ್ಣಿನ ಪಾತ್ರೆಗಳನ್ನು ಮಾಡುವವನು.
Poter hates potter and poet hates poet (prv)

Potters Clay (n) — Clay which is used for making pots – ಕುಂಬಾರಿಕೆ ಮಣ್ಣು, ಮಣ್ಣಿನ ವಸ್ತುಗಳನ್ನು ತಯಾರಿಸುವ ಜೇಡಿಮಣ್ಣು.

Pottery (n) — The word pottery is applied to all articles made or formed of baked clay. It was made in the most remote ages and all primitive

races of the world seen to have been used it in same form or other – ಮಣ್ಣಿನಿಂದ ಮಾಡಿ ಸುಟ್ಟ ಎಲ್ಲಾ ಬಗೆಯ ಕುಂಭ ವಸ್ತುಗಳು. ಇತಿಹಾಸಪೂರ್ವದಿಂದಲೂ ಕುಂಬಾರಿಕೆ ಬೆಳೆದು ಬಂದಿದೆ. There is prose and there is poetry in pottery.
"The art of country judge of its fineness sensibility by its pottery it is sure touch stone" (Sir Herbert Read)

Potting (n) — The preserving of articles of food in pots for future use – ಗಡಿಗೆಯಲ್ಲಿ ಆಹಾರ ಧಾನ್ಯ ಶೇಖರಿಸುವುದು.

Pottle (n) — Drinking vessel – ಕುಡಿಯುವ ನೀರನ್ನು ಹಾಕಿಡುವ ಪಾತ್ರೆ.

Pot marks (n) — Name of the trade mark, and manufacturer carved on the pot – ಕುಂಭವಸ್ತುಗಳ ಮೇಲೆ ಮಾಡಿದವನ ಹೆಸರು, ಚಿಹ್ನೆ ಇತ್ಯಾದಿ ಕೊರೆದಿರುವುದು.

Pouring (v) — A method of applying ceramic glaze by pouring it over the surface of the ware to leave an even coating – ಸುರಿಯುವುದು, ಹಾಕುವುದು, ಸೆರಾಮಿಕ್ ವಸ್ತುಗಳಿಗೆ ಗ್ಲೇಸಿಂಗ್ ಮಾಡುವ ವಿಧಾನಗಳಲ್ಲಿ ಇದು ಕೂಡ ಒಂದು ಗ್ಲೇಸಿಂಗ್ ಮಿಶ್ರಣವನ್ನು ಸೆರಾಮಿಕ್ ವಸ್ತುಗಳ ಮೈಗೆ ಸಮವಾಗಿ ಸುರಿಯುವುದು.

Potter's wheel (n) — A horizontal revolving disk used to hold ceramic clay as it is shaped by the potter – ಕುಂಬಾರನ ಚಕ್ರ, ಕುಲಾಲ ಚಕ್ರ, ತಿಗುರಿ ಕುಂಬಾರನ ಚಕ್ರವನ್ನು ಸುಮೇರಿಯನ್‌ರು ಮೊದಲು ಬಳಕೆಗೆ ತಂದರು. ಮೊದಲಿಗೆ ಕಲ್ಲಿನ ಚಕ್ರವನ್ನು ಬಳಸುತ್ತಿದ್ದರು ನಂತರ, ಮರ, ಮಣ್ಣಿನಿಂದ ಮಾಡಿದ ಚಕ್ರಗಳು ಬಳಕೆಗೆ ಬಂದವು, ಈಗ ಬಾಲ್ ಬೇರಿಂಗ್ ಚಕ್ರಗಳು ಬಳಕೆಗೆ ಬಂದಿವೆ, ಕುಳಿತುಕೊಂಡೇ ಕುಂಭ ವಸ್ತುಗಳನ್ನು ಗೇಯಬಹುದು. ಈಗೀಗ ವಿದ್ಯುತ್ ಚಕ್ರಗಳು



ವಿದ್ಯುತ್ ಚಕ್ರ

ಬಳಕೆಗೆ ಬಂದ ಮೇಲೆ ಶ್ರಮ ಕಡಿಮೆ ಆಗಿದೆ. ನೋಡಿ - ಕುಲಾಲ ಚಕ್ರ

Puddle (n-v) — Small muddy pool, a mixture of clay and sand – ಮರುಳುಬೆರೆಸಿದ ಕಲಸು ಜೇಡಿ, ಜೇಡಿ ಮಣ್ಣನ್ನು ತುಳಿದು ಹದಮಾಡು.

Pug (n) — Clay ground and worked with water, to grind with water and make plastic – ಕಲಸಿಹದಗೊಳಿಸಿದ ಬಂಕೆ ಮಣ್ಣು, ಅಂಟು ಮಣ್ಣು

Pug Mill (n) — A machine for mixing up plastic clay into a more homogenous mass – ಮಣ್ಣನ್ನು ಹದವಾಗಿ ಕಲಸುವ ಯಂತ್ರ.

Putty (n) — A cement of whiting and linseed oil – ಕೆನೆಗಾರೆ, ನಯಗಾರೆ, ಸುಣ್ಣಕ್ಕೆ ಮರಳು ಹಾಕದೆ, ನೀರು ಹಾಕಿ ತಯಾರಿಸಿದಗಾರೆ, ಸಂದುಗಳನ್ನು ಮುಚ್ಚಲು ಉಪಯೋಗಿಸುವರು.

Pyrometer (n) — An instrument for measuring high temperature – ಹೆಚ್ಚಿನ ತಾಪಮಾನವನ್ನು ಅಳೆಯುವ ಉಷ್ಣಮಾಪಕ ಮಡಕೆಗಳನ್ನು ಸುಧಾರಿತ ಆವಿಗೆಯಲ್ಲಿಟ್ಟು ಸುಡುವಾಗ, ಅದರ ತಾಪಮಾನವನ್ನು ಪೈರೋಮೀಟರ್‌ನಿಂದ ತಿಳಿಯುವರು.

## Q

Quartz (n) — Flint or silica – ಸಿಲಿಕಾ ಹರಳು, ಮರಳು, ಹೊಯಿಗೆ, ಉಸುಕು.

Queens Ware (n) — A hard cream coloured eartherware introduced by Josiah Wedgwood in the late 18th century ಹದಿನೆಂಟನೆ ಶತಮಾನದಲ್ಲಿ ಕುಂಭ ತಜ್ಞ ಜೋಷೈ ವೆಡ್ಗವುಡ್ ಮಾಡಿದ ಕೆನೆಬಣ್ಣದ ಮಣ್ಣಿನ ಪಾತ್ರೆ.

## R

**Raku (n)** Low fired earthen ware made of grogged open clay covered with low melting glaze and oxides, the pot is taken from the kiln (using long handel tongs) and reduced or trated with various substances to change the colours of the glaze and oxides – ಜಪಾನಿನ ಚಹಾಕೂಟಕ್ಕಾಗಿ ಹುಟ್ಟಿಬಂದ ಸಾಮಾನ್ಯ ಉಷ್ಣತೆಯಲ್ಲಿ ಸುಟ್ಟ ಕುಂಭ ವಸ್ತುವೆ ರಾಕು ಪಾಟರಿ ಜಪಾನಿನ ಸೆನ್ನೋರೈಕು ಎಂಬವನೆ, ರಾಕು ಪಾಟರಿಯ ನಿರ್ಮಾಣಕ್ಕೆ ಕಾರಣನಾದವನು ರಾಕು ಪಾಟರಿಯನ್ನು ಎಲ್ಲಾ ಕಡೆ ಸುಲಭವಾಗಿ ದೊರೆಯುವ ಮಣ್ಣಿನಿಂದಲೇ ಮಾಡುವರು. ರಾಕು ಮಡಕೆಯ ಸುಡತಿ ಬಹಳ ವಿಶಿಷ್ಟವಾದದ್ದು ಚಹ ಕೂಟಕ್ಕೆ ಬೇಕಾದ ಲೋಟ ಕಪ್ಪು ಮಗ್ಗುಮುಂತಾದ ವಸ್ತುಗಳನ್ನು ಆವಿಗೆಯಿಂದ ತಗೆದು ಚಹ ಕೂಟದ ಅಡುಗೆಯನ್ನು ತಯಾರಿಸಲು ಉಪಯೋಗಿಸುವರು ಸುಡುವ ಕ್ರಮ ಅರ್ಧಗಂಟೆಯಲ್ಲಿ ನಡೆದು ಹೋಗುತ್ತದೆ.

**Raw clay (n)** Clay which has not been fired, green clay – ಸುಡದೆ ಇರುವ ಕುಂಭ ವಸ್ತು.

**Raw glaze (n)** A glaze made with unfritted materials. Also a term used for glazes applied to glass ware – ಒಂದು ಬಾರೆ ಸುಟ್ಟ, ಇಲ್ಲವೆ ಸುಡದೆ ಇರುವ ಒಣಗಿದ ಗಡಿಗೆಗಳಿಗೆ ಗಾಜು ಮೈ ಭರಿಸುವುದು.

**Raw Material (n)** Not processed or manufactured – ಕಚ್ಚಾ ಪದಾರ್ಥ, ಮಡಕೆ ತಯಾರಿಕೆಗೆ ಮಣ್ಣು ಕಚ್ಚಾ ಪದಾರ್ಥ.

**Red ware (n)** red colour pot – ಕೆಂಪು ಮಡಕೆ, ಗ್ರಾಮೀಣ ಪ್ರದೇಶದ ಕುಂಬಾರರು ಕೆಂಪು ಮಡಿಕೆ ಮಾಡ ಬೇಕಾದಲ್ಲಿ ಆವಿಗೆಯ ಹಿಂದೆ ಇಟ್ಟಿರುವ ಕಿಂಡಿಗಳನ್ನು ಮುಚ್ಚದೆ ಹಾಗೆಯೇ ತೆರೆದಿಡುವುದರ ಮೂಲಕ ಕೆಂಪು ಮಡಿಕೆಗಳನ್ನು ಸಿದ್ಧಗೊಳಿಸುವುದು.

| | |
|---|---|
| Refractory (ad) | The property of being able to with stand high temperature – ತಾಪನಿರೋಧಕ ಉದಾ: ತಾಪನಿರೋಧಕ ಇಟ್ಟಿಗೆ. |
| Rib (n) | A tool smoothing the out side of a pot while it is being thrown – ತಿಗುರಿಯ ಮೇಲೆ ಮಡಕೆ ಗೇಯುವಾಗ, ಅದನ್ನು ನಯಗೊಳಿಸುವ ಸಾಧನ, ಆಧಾರದಂಡ, ಕಂಠದ ಕೆಳಗಣ ಅಂಚು. |
| Rim (n) | The neck of the pot – ಮಡಕೆಯ ಕಂಠದ ಅಂಚುಕಟ್ಟು ಹೊರಸುತ್ತು. |
| Ritual (n) | Prescribed order for performing religious order – ಧರ್ಮಶಾಸ್ತ್ರ ವಿಧಿ ಮತಕ್ರಿಯಾವಿಧಿ ಕೆಲವೊಂದು ಧಾರ್ಮಿಕ ಆಚರಣೆಗಾಗಿ, ವಿಶೇಷ ಮಡಕೆ ಕುಡಿಕೆಗಳನ್ನು ಉಪಯೋಗಿಸುವರು. ಉದಾ: ಸತ್ತಾಗ, ಹೆಣದ ಮುಂದೆ ಸ್ಮಶಾನಕ್ಕೆ ಒಯ್ಯುವ ಬೆಂಕಿಗಡಿಗೆ. |
| Round container (n) | Big bellied pot for storing grains – ಗುಂಡುವಾಡೆ ಧಾನ್ಯಗಳನ್ನು ಸಂಗ್ರಹಿಸಿಡುವ ವಾಡೆ ರಣಜಗಿ |
| Rummer (n) | A large drinking glass – ಮಧ್ಯದ ಬಟ್ಟಲು, ಜೇಡಿ ಮಣ್ಣು ಮತ್ತು ಪಿಂಗಾಣಿಯಿಂದ ಮಾಡುವರು. |

## S

| | |
|---|---|
| Saggar (n) | A container with a lid made of fire clay for holding a pot or pots to prevent damage to the pot by naked flames in the kiln – ಸುಟ್ಟ ಮಣ್ಣಿನ ಕೋಶ, ಆವಿಗೆಯ ಒಳಗಿನ ಮೂಸೆ, ಮಡಕೆಗಳನ್ನು ಸುಡುವಾಗ, ಅವು ಹೋಕುಬರದಿರಲೆಂದು ಮೂಸೆಯಲ್ಲಿಟ್ಟು ಸುಡುವರು. ಇದೊಂದು ಅಗ್ನಿ ನಿರೋಧಕ ಮಣ್ಣಿನಿಂದ ಮಾಡಿರುವ ಮುಚ್ಚಳವಿರುವ ಪಾತ್ರೆ. ವಿದ್ಯುತ್ ಆವಿಗೆಗಳು ಬಂದ ನಂತರ ಇದರ ಬಳಕೆ ಕಡಿಮೆ ಆಗಿದೆ. |

**Salt glaze** A glaze which forms on the pot when slat is introduced in the kiln and the resulting sodium oxide vapour reacts with the silica in the clay – ಲವಣಗ್ಲೇಸ್, ಆವಿಗೆಯಲ್ಲಿ ಮಡಕೆಗಳನ್ನು ಸುಡುತ್ತಿರುವಾಗ ಉಪ್ಪನ್ನು ಮಡಕೆಯ ಮೈಗೆ ಹಾಕಿ ಗ್ಲೇಸಿಂಗ್ ಮಾಡುವುದು. ಉಪ್ಪು ಮಣ್ಣಿನಲ್ಲಿರುವ ಸಿಲಿಕಾದೊಂದಿಗೆ (ಮರಳು) ಸೇರಿ, ರಾಸಾಯನಿಕ ಕ್ರಿಯೆಯಿಂದ ಉಂಟಾಗುವ ಗಾಜುಮೈ.

**Sand (n)** Predominately silica, a mass of rounded Quartz grains usualy containing impurities such as mica felsper and iron – ಮರಳು, ಉಸುಕು, ಹೊಯಿಗೆ, ಮೈಕಾ, ಫೆಲಸಪರ್, ಕಬ್ಬಿಣದ ಅಂಶ, ಮೊದಲಾದ ಅಶುದ್ಧ ವಸ್ತುಗಳನ್ನು ಒಳಗೊಂಡಿರುತ್ತದೆ.

**Sarcup hages (n)** A terracotta coffin, ancient art – ಹೆಣ ತುಂಬಿಡುತ್ತಿದ್ದ ಟೆರ್‍ರಾಕೊಟಾದ ಮಣ್ಣಿನ ಪಾತ್ರೆ, ಒಂದು ಅಪೂರ್ವ ಮಣ್ಣಿನ ಶಿಲ್ಪ.

**Sculpture (n)** Clay sculpture – ಮೃತ್‌ಶಿಲ್ಪ ಹರಪ್ಪಾ ಮೊಹಂಜಾದಾರೋ ಕಾಲದಿಂದಲೂ ಮಣ್ಣಿನ ಶಿಲ್ಪ ಬೆಳೆದು ಬಂದಿದೆ. "Silpa denotes both sculpture in stone and in clay."

**Seal (n)** The mark made by potters on the pot to identify the make – potters mark, ಗುರುತು, ಋಜು, ಮಡಕೆ ಸಿದ್ಧ ಪಡಿಸಿದವರ ಹೆಸರು, ಊರಿನ ಹೆಸರು ಇತ್ಯಾದಿ, ಮಣ್ಣಿನ ಮುದ್ರೆಗಳು ಹರಪ್ಪಾ ಮೊಹಂಜದಾರೋ ಉತ್ಖನನದಲ್ಲಿ ಬಹಳಷ್ಟು ಸಂಖ್ಯೆಯಲ್ಲಿ ದೊರೆತಿವೆ. ಅದರಲ್ಲಿ, ಪ್ರಾಣಿ, ಪಕ್ಷಿ, ಮನುಷ್ಯರ ಚಿತ್ರಗಳನ್ನು ಕೊರೆದಿದ್ದಾರೆ.

**Secondary clay** Depreciated earth – ಸವಕಳಿಕೆಯಿಂದ ಉಂಟಾದ ಮಣ್ಣು.

**Shard (n)** A broken fragment of pottery – ಒಡೆದ ಮಡಕೆಯ ಚೂರು, ಬೋಕಿ.

**Short clay (n)** lean clay, those which are not very plastic – ಹೆಚ್ಚು ಮಿದುಣತ್ವ ಹೊಂದಿರದ ಮಣ್ಣು.

**Shoulder (n)** Below the neck of the pot – ಗಡಿಗೆಯ ಕಂಠದ ಕೆಳಭಾಗ ಭುಜಭಾಗ.

**Shrinkage (n)** Contraction of clay during drying and firing – ಹಸಿ ಕುಂಭ ವಸ್ತುಗಳು ಒಣಗುವಾಗ ಹಾಗೂ ಸುಡುವಾಗ ಉಡುಗುವದು.

**Silica (n)** Basic component of clays and glazes – ಮರಳು, ಹೊಯಿಗೆ, ಮಡಕೆ ಮಾಡುವ ಮಣ್ಣಿಗೆ ಹಾಗೂ ಗ್ಲೇಸಿಗೆ ಅಗತ್ಯವಾಗಿ ಬೇಕಾದ ಘಟಕ.

**Slant (v)** To turn to slope in particular direction – ಓರೆ, ಓರೆಮಾಡು, ಬಾಗು ಒಂದು ಕಡೆ ವಾಲು.

**Slab pot (n)** A ceramic vessel formed by the technique of slabbing – ಸ್ಲ್ಯಾಬ್ ವಿಧಾನದಿಂದ ಮಾಡುವ ಮಡಕೆ.

**Slip (n)** Liquid clay – ನೀರು ಜೇಡಿ, ಜೇಡಿ ಕೆನೆ, ದ್ರವರೂಪದ ತೆಳುವಾದ ಮಣ್ಣು ಕುಂಭಾಲಂಕರಣಕ್ಕಾಗಿ ಬಳಸುವರು ಕುಂಭಾಲಕಂರಣದಲ್ಲಿ slip decoration ಕೂಡ ಒಂದು.

**Slurry (n)** Thick mixture of clay and water ಕೆಸರು ನೀರು, ಕವಳಿ.

**Smooth clay (n)** Clay which is smooth and plastic – ನಯವಾದ, ಮೇಣದಂತ ಮಣ್ಣು.

**Soft-glaze (n)** Low fired glaze – ಕಡಿಮೆ ತಾಪಮಾನದಲ್ಲಿ ಸುಟ್ಟ ಮಣ್ಣಿನ ಗ್ಲೇಸ್ಡ ವಸ್ತುಗಳು.

**Soluble (n)** Capable of being dissolved into water – ಕರಗಬಲ್ಲ ಲೀನವಾಗಬಲ್ಲ.


**Spitton (n)** A vessel for splting in – ತಾಂಬೂಲ ಉಗುಳುವ ಮಣ್ಣಿನ ಪಾತ್ರೆ.

**Spraying (v)** Applying glazes with a compressed air spray machine – ಗ್ಲೇಸಿಂಗ್ ಮಾಡುವ ಒಂದು ವಿಧಾನ

ಸ್ಪ್ರೇಯಿಂಗ್ ಯಂತ್ರದಿಂದ ದ್ರಾವಣವನ್ನು ಮಡಕೆಗಳಿಗೆ ಸಿಂಪಡಿಸಿ ಗ್ಲೇಸಿಂಗ್ ಮಾಡುವುದು.

Sprigging (v) — Applying clay in plastic state to form decoration – ಅಲಂಕರಣಕ್ಕಾಗಿ ಕುಂಭವಸ್ತುಗಳಿಗೆ ನಯವಾದ ತೆಳುಮಣ್ಣನ್ನು ಲೇಪಿಸುವುದು. ಇದರಿಂದ ರಂಧ್ರಗಳು ಮುಚ್ಚಿ ಕುಂಭ ಬಲಗೊಳ್ಳುತ್ತದೆ.

Spouted vessel (n) — It is a type of pot usually of rounded body which has projecting tubular spout – ಸೊಂಡಿಲು ಪಾತ್ರೆ ನಳಿಗೆ ಪಾತ್ರೆ ದ್ರವ ಪದಾರ್ಥಗಳನ್ನು ಬಡಿಸುವ, ಅನುಕೂಲಕ್ಕಾಗಿ ಈ ಪಾತ್ರೆಗಳನ್ನು ಬಳಸುವರು ಚಹ ಕಿತ್ಲೆ ಇದಕ್ಕೆ ಉತ್ತಮ ಉದಾಹರಣೆ ಮೊದಲಿಗೆ, ಮಣ್ಣಿನ ಸೊಂಡಿಲುಳ್ಳ ಪಾತ್ರೆಗಳು ಹೆಚ್ಚು ಬಳಕೆಯಲ್ಲಿದ್ದವು. ಈಗೀಗ ಲೋಹದ ಹಾಗೂ ಪ್ಲಾಸ್ಟಿಕ್ ಸೊಂಡಿಲನ ಪಾತ್ರೆಗಳು ಬಳಕೆಗೆ ಬಂದಿವೆ. ಬೋಗುಣಿ, ಹೂಜಿಗಳಿಗೆ ಅವು ಹಸಿ ಇರುವಾಗಲೆ ಸೊಂಡಿಲನ್ನು ಪ್ರತ್ಯೇಕವಾಗಿ ಮಾಡಿ ಅಂಟಿಸುವರು.



Stem (n) — The main body – ಅಂಗ, ದಿಂಡು, ಗಡಿಗೆಯ ನಡುವಿನ ಭಾಗ.

Stilt (n) — A small pointed stand used to support pots in a kiln to prevent the glazed base sticking shelf – ಆವಿಗೆಯಲ್ಲಿ ಹಸಿಮಡಕೆಗಳನ್ನು ಸುಡಲು ಗಡಿಗೆಗಳಿಗೆ ಆನಿಕೆಯಾಗಿ ಕೊಡುವ ಚಿಕ್ಕ ಕುಂಭ ಆವಿಗೆಯಲ್ಲಿ ಪಿಂಗಾಣಿ ಸಾಮಾನುಗಳನ್ನು ಸುಡಲು ಬಳಸುವ ಆನಿಕೆ. ಮುಗ್ಗಾಲ ಪೀಠ.

Stoneware (n) — Pottery fired at a 1900° high temperature to virtify the clay so that it is close grained almost non porous extremly durable – ಅಪಾರದರ್ಶಕವಾದ ಜೇಡಿ ಪಾತ್ರೆಗಳು ಸುಮಾರು ೧೯೦೦°ಸಿ ನಲ್ಲಿ ಸುಡಲ್ಪಡುತ್ತದೆ. ಗಟ್ಟಿಯಾದ ಪಾತ್ರೆ, ಸಚ್ಛಿದ್ರತೆ ಬಹಳ ಕಡಿಮೆ.

**Stoup (n)** Drinking vessel, holy water vessel – ಪಾನಪಾತ್ರೆ, ಕುಡಿಯುವ ಪಾತ್ರೆ, ಪವಿತ್ರೋದಕದ ಪಾತ್ರೆ.

**Surahi (n)** The long necked pot for pouring the drinking water – ನೀಳ್ಕತ್ತಿನ ಮಡಕೆ, ಕುಡಿಯುವ ನೀರನ್ನು ತುಂಬಿಡುವರು ಮದ್ಯ ತುಂಬಿಡಲು ಕೂಡ ಬಳಸುವರು. 'ಸುರಾಯಿ' ಮಾಡುವದರಲ್ಲಿ ಲಕ್ನೋದ ಕುಂಬಾರರು ಪ್ರಸಿದ್ಧರಾಗಿದ್ದರು.

## T

**Tang dynasty (n)** A period in China noted for its fine earthen ware and terracotta sculpture – ಚೀನಾದ ಟಾಂಗ ವಂಶದ ಕಾಲಾವಧಿ ಕುಂಭ ಶಿಲ್ಪಕ್ಕೆ ಮತ್ತು ಟೆರ್ರಾಕೊಟಾ ತಯಾರಿಕೆಗೆ ಪ್ರಖ್ಯಾತವಾಗಿತ್ತು.

**Tankard (n)** A long mug like a vessel – ಕುಡಿಯುವ ಪಾತ್ರೆ, ಜಾಡಿ.

**Tawa (n)** The clay flat griddle – ತವೆ, ರೊಟ್ಟಿಹಂಚು ಮಣ್ಣಿನ ತವೆಯನ್ನು ರೊಟ್ಟಿಸುಡಲು ಗ್ರಾಮೀಣರು ಬಳಸುವರು.

**Tazza (n)** A shallow vessel mounted on a foot a saucer shaped bowl – ಪೀಠದ ಮೇಲೆ ಇಡುವ ಮಣ್ಣಿನ ಬೋಗುಣಿ.

**Teapot (n)** Tea drinking cup, a spouted vessel for pouring out tea – ಚಹ ಕುಡಿಯುವ ಪಾತ್ರೆ, ಮಣ್ಣು ಮತ್ತು ಪಿಂಗಾಣಿಯ ಕಪ್ಪುಗಳನ್ನು ಚಹ ಕುಡಿಯಲು ಬಳಸುವರು. ಸೊಂಡಿಲುಳ್ಳ ಕೆಟ್ಲ.

**Tease (v)** To scratch or roughen the clay prior to joining – ಕೆರೆಯುವುದು, ದೂರಗು ಮಾಡು, ಒಂದು ಮಣ್ಣಿನ ವಸ್ತುವಿಗೆ ಮಣ್ಣಿನ ಬೇರೊಂದು ಭಾಗವನ್ನು ಅಂಟಿಲಸುವುದು, ಉದಾ: ಜಾರ್‌ಗೆ ಹಿಡಿ ಅಂಟಿಸುವುದು ಸೊಂಡಿಲು ಅಂಟಿಸುವುದು. ಕುಂಭಾರರು ಇದನ್ನು ಕುಂಭವಸ್ತು

ಅರೆಹಸಿ ಇದ್ದಾಗಲೆ ಮಾಡುವರು ಅಂಟಿಸ ಬೇಕಾದ ಭಾಗವನ್ನು ಕರೆದು ದೊರಗು ಮಾಡಿ, ದ್ರವರೂಪದ ಮಣ್ಣನ್ನು ಲೇಪಿಸಿ ಅಂಟಿಸುವುದು, ಭದ್ರವಾಗಿ ಅಂಟಿಕೊಳ್ಳುತ್ತದೆ.

Tea urn (n) — Tea pot – ಚಹಮಾಡಲು ನೀರನ್ನು ಕುದಿಸುವ ಪಾತ್ರೆ, ಟೀಮಡಕೆ.

Tenmoku (n) — A Japenese name for a glaze which has high iron content giving rich red/black brown colour – ಅಧಿಕ ಕಬ್ಬಿಣಾಂಶವುಳ್ಳ, ಕೆಂಪು, ಕಪ್ಪು, ಕಂದು ಬಣ್ಣದ ಗ್ಲೇಸಿಗೆ ಜಪಾನಿಯರು ಕರೆಯುವ ಹೆಸರು.

Terracotta (n) — A collective term used to describe low fired unglazed colour pottery including most primitive pottery – ಕುಂಭ ವಸ್ತುಗಳಲ್ಲಿ ಇದು ಒಂದು ಪ್ರಕಾರ ಬಹಳ ಪ್ರಾಚೀನ ಕಾಲದಿಂದಲೂ ಬಳಕೆಯಲ್ಲಿದೆ, ಇಟಲಿ ಭಾಷೆಯ ಮೂಲದಿಂದ ಬಂದದ್ದು, ಟ್ರೆರ್ರಾಕೊಟಾ ವಸ್ತುಗಳು ಸಾಮಾನ್ಯವಾಗಿ ಕೆಂಪು, ಕಂದು, ಬಣ್ಣವನ್ನು ಹೊಂದಿರುತ್ತವೆ. ಕಡಿಮೆ ತಾಪಮಾನದಲ್ಲಿ ಸುಡುವರು. ಸಾಮಾನ್ಯ ಗೃಹಬಳಕೆಯ ವಸ್ತುಗಳಿಂದ ಮೊದಲ್ಗೊಂಡು ಮೃತ್‌ಶಿಲ್ಪದ ವಸ್ತುಗಳೆಲ್ಲಾ ಈ ಪ್ರಕಾರಕ್ಕೆ ಒಳಪಡುತ್ತವೆ. ಬಂಗಾಳವು ಟೆರ್ರಾಕೊಟಾ ತಯಾರಿಕೆಯಲ್ಲಿ ಹೆಸರು ಪಡೆದಿದೆ.

Terrasigillate (n) — A very fine slip used for coating pots, it is often fine enough to shine without being burnished – ಉತ್ತಮವಾದ ದ್ರವರೂಪದ ಮಣ್ಣು ಮಡಕೆಗಳ ಮೈಗೆ ಲೇಪಿಸಿ ಹೊಳೆಯುವಂತೆ ಮಾಡುವುದು ಅಂದಗೊಳಿಸುವುದು.

Texture (n) — Any thing woven – ರಚನೆ, ವಿನ್ಯಾಸ.

Throwing (v) — The method of making clay shapes on a potters wheel – ಚಕ್ರದಿಂದ ಮಡಕೆ ಮಾಡುವುದು, ಚಕ್ರದ ಹಣೆಗೆ ಮಣ್ಣುಹಾಕಿ ಚಕ್ರವನ್ನು ತಿರುಗಿಸಿ ಗೇಯುವುದು.

Thumb pot (n) — A very small flower pot – ಚಿಕ್ಕ ಗಾತ್ರದ ಹೂ ಕುಂಡ.

**Tile (n)** Thin piece of baked clay – ಮಾಳಿಗೆ ಹಂಚು.

**Toby (n)** A beer mug shaped like a man with three cornered hat – ಮುಮ್ಮೂಲೆಯ ಟೊಪ್ಪಿಗೆ ಧರಿಸಿದ ಮನುಷ್ಯನಾಕಾರದ ಮದು ಹೂಜೆ.

**T-material (n)** An english term for a beautifully plastic grogged clay ideal for large pieces of work – ಇದು ಇಂಗ್ಲಿಷ್ ಪದ, ದೊಡ್ಡ ದೊಡ್ಡ ಕುಂಭವಸ್ತುಗಳ ತಯಾರಿಕೆಗೆ ಮರಳು ಬೆರಸಿ, ಹದಮಾಡಿಟ್ಟ ಮಿದುಣತ್ವ ಹೊಂದಿದ ಮಣ್ಣು.

**Trailing (v)** Decorating by squeezing slip from rubber blub through a thin nozzle – ರಬ್ಬರ್ ನಳಿಗೆಯ ಮೂಲಕ ನೀರು ಜೇಡಿಯನ್ನು ಕುಂಭವಸ್ತುಗಳ ಹೊರಭಾಗಕ್ಕೆ ಚಿಮುಕಿಸಿ ಅಲಂಕರಣಗೊಳಿಸುವುದು.

**Trans-parent** Able to seen through – ಪಾರದರ್ಶಕ ಗಾಜುಮ್ಮೆ ಕೆಲವೊಂದು ವಿಧದ ಪಿಂಗಾಣಿ ವಸ್ತುಗಳು ಪಾರದರ್ಶಕ ವಾಗಿರುತ್ತವೆ.

**Translucent** Allowing light to pass through, a quality of porcelain – ಅರೆಪಾರದರ್ಶಕವಾದ ಹೊಳಪುಳ್ಳ ಪಿಂಗಾಣಿ.

**Tumbler (n)** Cup, drinking glass with a handle – ಹಿಡಿಕೆಯುಳ್ಳ ಲೋಟ.

**Tunnel kiln (n)** The long modern industrial kiln in which trucks of stacked ware enter the kiln at one end and pass slowly through reaching maturing heat at the centre of the kiln and cool down towards the exit – ಆಧುನಿಕ ಸುರಂಗ ಆವಿಗೆ.

**Tuming/Trimming (v)** Finishing off by removing spare clay with a sharp tool from the base of a pot while it revolves on the wheel – ತಿಗುರಿಯ ಮೇಲೆ ಮಣ್ಣು ಹಾಕಿ ಮಡಕೆ ಗೇಯುತ್ತಿರುವಾಗ ಹೆಚ್ಚುವರಿ ಮಣ್ಣನ್ನು ಚಿಕ್ಕ ತಗಡಿನಿಂದ ತೆಗೆಯುವುದು.

**Twin pot (n)** Single pot with twin mouths – ಅವಳಿಗಡಿಗೆ, ಒಂದೇ ಪಾತ್ರೆ ಬಾಯಿ ಮಾತ್ರ ಎರಡು, ಇಂಧನ ಉಳಿತಾಯಕ್ಕಾಗಿ ಅವಳಿಗಡಿಗೆಯನ್ನು ಬಳಸುತ್ತಿದ್ದರು.

## U

**Umber (n)** A natural earth clay containing iron and mangenese – ಕಬ್ಬಿಣ ಮತ್ತು ಮ್ಯಾಂಗನೀಸ್ ಖನಿಜಗಳನ್ನೊಳಗೊಂಡ ನೈಸರ್ಗಿಕ ಮಣ್ಣು.

**Urn (n)** Vase for storing ashes of dead – ಚಿತಾ ಭಸ್ಮದ ಪಾತ್ರೆ, ಹೆಣದ ಬೂದಿಯನ್ನು ಹಾಕಿಡಲು ಉಪಯೋಗಿಸುತ್ತಿದ್ದ ಮಣ್ಣಿನ ಪಾತ್ರೆ.

**Ushabti figures (n)** Egyptian clay figures buried in the tombs with dead. These little clay figures date back to 2000-3000 BC – ಉಷ್‌ಬತಿ ಮಣ್ಣಿನ ಚಿಕ್ಕ ಮೂರುತಿಗಳು, ಈಜಿಪ್ಟಿನ ಶವಗೋರಿಗಳಲ್ಲಿ ದೊರೆತಿವೆ ಕಾಲಮಾನ ೨೦೦೦-೩೦೦೦ ಬಿ.ಸಿ.

## V

**Vase (n)** Ceramic ware a vessel – ಹೂಕುಂಡ, ಪುಷ್ಪದಾನಿ, ಹೂಗಳನ್ನು ಜೋಡಿಸಿ ಅಲಂಕಾರಗೊಳಿಸುವದಕ್ಕಾಗಿ ಬಳಸುವ ಮಣ್ಣಿನ ಪಾತ್ರೆ ಗಾಜಿನ, ಪಿಂಗಾಣಿಯ ಕುಂಡ.

**Vessel (n)** Chatty, teapot, flowerpot kettle, vase, jug, water and wine pot – ಮಣ್ಣಿನ ಪಾತ್ರೆ ಭಾಂಡ, ಹೂಜಿ. ನೀರಿನ ಪಾತ್ರೆ, ಮದ್ಯದ ಪಾತ್ರೆ, ಹೂಕುಂಡ empty vessel makes much noise (prv).

**Vinegar (n)** A sour liquid obtained from wine clider – ಹುಳಿ ರಸ, ವಿಶೇ ಮಣ್ಣಿನ ಶಿಲ್ಪ ಮಾಡುವ ಮಣ್ಣಿಗೆ ಬೆರಸುವದು.

**Vitreous (n)** Glass like – ಗಾಜಿನಂತಹ ಮೈಉಳ್ಳದ್ದು.

**Vitrify (v)** To heat to hard glass to convert or to be converted – ಕಾವಿನಿಂದ ಗಾಜಿನಂಥ ವಸ್ತುಗಳನ್ನು ಕರಗಿಸಿ ಕುಂಭವಸ್ತುಗಳಿಗೆ ಗಾಜುಮ್ಮೆ ಭರಿಸುವುದು.

**Votive (n)** Offered or dedicated in fulfilment of vow – ಹರಕೆಯ ಮುಡುಪಿನ ದೇವರಿಗೆ ಹರಕೆ ಒಪ್ಪಿಸುವುದು. ಹರಕೆ ಒಪ್ಪಸುವ ವಿಧಿಗೆ ಪ್ರತ್ಯೇಕವಾದ ಮಡಕೆ ಮಾಡುವರು, ತಮಿಳುನಾಡಿನಲ್ಲಿ ಬೆಳೆ ಸಮೃದ್ಧಿಬರಲೆಂದು ರೋಗರುಜಿನ ಬಾರದಿರಲೆಂದು ಮಣ್ಣಿನ ಕುದುರೆಯನ್ನು ಹೊಲದಲ್ಲಿಡುವರು, ಬೇರೆ, ಬೇರೆ, ಮಣ್ಣಿನ ಹರಕೆ ಮೂರುತಿ ಮಾಡುವ ಪದ್ಧತಿ ನಮ್ಮ ರಾಜ್ಯದಲ್ಲೂ ಇದೆ ದಕ್ಷಿಣ ಕನ್ನಡ ಜಿಲ್ಲೆಯ ಉಜಿರೆಯ ಕುಂಬಾರರು ಮಣ್ಣಿನ ವಿವಿಧ ಬಗೆಯ ಹರಕೆ ಮೂರತಿ ಮಾಡುವರು. ಹರಕೆ ಒಪ್ಪಿಸುವ ಪದ್ಧತಿ ವಿಶ್ವದಾದ್ಯಂತ ಪ್ರಚಲಿತದಲ್ಲಿದೆ.

## W

**Ware (n)** Earthen ware, clay ware – ಮಣ್ಣಿನ ಮಡಕೆ ಕುಡಿಕೆಗಳು, ಕುಂಭ ವಸ್ತುಗಳು.

**Warp (v.n)** Distoration of a pot become bent – ಡೊಂಕು, ಬಾಗು, ವಕ್ರತೆ ಹವಾಮಾನದ ವೈಪರೀತ್ಯ, ಹಸಿಮಡಕೆಗಳು ಸರಿಯಾಗಿ ಒಣಗದಿರುವುದು, ಆವಿಗೆಯಲ್ಲಿಟ್ಟು ಸುಡುವಾಗಿನ ದೋಷಗಳಿಂದ ಹೀಗೆ ಬೇರೆ, ಬೇರೆ, ಕಾರಣಗಳಿಂದ ಮಡಕೆಗಳು, ಡೊಂಕಾಗುವ, ಬಾಗುವ ಸಾಧ್ಯತೆಗಳಿವೆ.

**Water pot (n)** Pot used for drawing water from the well and also carrying and storing water vessel – ಕೊಡ, ಬಿಂದಿಗೆ, ಹೂಜಿ.

**Wax risist (v)** A method of decoration by painting wax on to a surface which will resist – ಮೇಣ ಲೇಪಿಸಿ, ಮಡಕೆಯನ್ನು ಅಂದಗೊಳಿಸುವ ವಿಧಾನ, ಇದೊಂದು ರೀತಿಯ ಕುಂಭಾಲಂಕರಣ.

Weathering (v) — Clay left in the open to mature in the rain the sun and ice breaks down the particles make the clay more plastic – ಮಡಕೆ ಮಾಡುವ ಮಣ್ಣನ್ನು ಭೂಮಿಯಿಂದ ತೆಗೆದು ವಾತಾವರಣದಲ್ಲಿ ಕಳಿಯಲು ಬಿಡುವುದು, ಬಿಸಿಲು, ಚಳಿ, ಮಳೆಗಳಿಂದ ಹವಾಮಾನ ದಿಂದಾಗಿ ಮಣ್ಣು ಕಳಿತು ಬಲ ಮತ್ತು ಮಿದುಣತ್ವ ಪಡೆಯುವುದು. ಚೀನಿ ಕುಂಬಾರರು ಮಡಕೆ ಮಾಡುವ ಮಣ್ಣನ್ನು ತೆಗೆದು, ದಶಕಗಟ್ಟಲೆ ವಾತಾವರಣದಲ್ಲಿ ಬಿಡುತ್ತಿದ್ದರು.

Wedging (v) — A hand method of milling plastic clay into homogenous mass prior to kneading – ಹಸಿ ಮಣ್ಣನ್ನು ಕೈಯಿಂದ ಕಲಸಿ ಮಿಜ್ಜಿ ಮತ್ತೆ ಕಾಲಿನಿಂದ ತುಳಿದು ಹದಮಾಡಲು ಅಣಿಗೊಳಿಸುವುದು.

Whistling Jar (n) — Sound producing vessel – ವಾದ್ಯಗಳ ಹೊಳವುಗಳನ್ನು ಮಣ್ಣಿನಿಂದ ಮಾಡುವುದು ಆದಿ ಕಾಲದಿಂದಲೂ ಇದೆ. ಈಗಲೂ ಮಾಡುತ್ತಾರೆ ಮೃದಂಗ, ಮದ್ದಳೆ ಉದಾಹರಿಸ ಬಹುದು. ದಕ್ಷಿಣ ಅಮೇರಿಕದಲ್ಲಿ ಧ್ವನಿ ಹೊರಡಿಸುವ ಜಾರ್‌ಗಳನ್ನು ಮಾಡುತ್ತಿದ್ದರು.

Whiting (n) — Calcium carbonate or ground chalk – ಚಾಕ್, ಸುಣ್ಣ.

Wine bottle — ಮದ್ಯದ ಬಾಟಲಿ

Wine cup (n) — A cup tor holding wine – ಮದ್ಯದ ಬಟ್ಟಲು.

Woodash (n) — Used as a glaze or glaze component – ಮರದಿಂದ ಸುಟ್ಟ ಬೂದಿ, ಮಡಕೆಗಳನ್ನು ಗ್ಲೇಸ್ ಮಾಡಲು ಉಪಯೋಗಿಸುವರು ಗ್ಲೇಸಿನ ಒಂದು ಘಟಕವಾಗಿಯೂ ಬಳಕೆಯಲ್ಲಿದೆ.

## Z

Zig Zag (n) — ಅಂಕು–ಡೊಂಕು, ವಕ್ರ–ವಕ್ರ.

# ಅಧ್ಯಾಯ ನಾಲ್ಕು

## ಕೆಲಭಾಷಾ ಪದಕೋಶ

## ೧. ತುಳು

| ತುಳು | ಕನ್ನಡ |
|---|---|
| ಅಗೋಳಿ (ನಾ) | ಅನ್ನ ಬೇಯಿಸಲು ಉಪಯೋಗಿಸುತ್ತಿದ್ದ ದೊಡ್ಡ ಪಾತ್ರೆ, ವೃತ್ತಾಕಾರದ ಬಾಯಿಯುಳ್ಳ ದುಂಡಗಿನ ಪಾತ್ರೆ. ಇದರಲ್ಲಿ ದೊಡ್ಡ ಮತ್ತು ಸಣ್ಣ ಗಾತ್ರದ ಪಾತ್ರೆಗಳಿರುತ್ತವೆ. |
| ಅಡ್ಯರ (ನಾ) | ಗಂಜಿಯಿಂದ ಗಂಜಿನೀರನ್ನು (ತಿಳಿ) ಬೇರ್ಪಡಿಸಿ ಅನ್ನ ಮಾಡಲು ಉಪಯೋಗಿಸುವ ಪಾತ್ರೆ. ಗಾತ್ರದಲ್ಲಿ ಚಿಕ್ಕದು. ಅಡಿ ಇರುವ ಮಣ್ಣಿನ ಪಾತ್ರೆ. |
| ಅರ್‌ಮಣ್ಣು (ನಾ) | ಕಂಚಿನ ಎರಕಕ್ಕೆ ಅಚ್ಚು ತಯಾರಿಸಲು ಗುಂಡುಕಲ್ಲಿಇಂದ ಅರೆದು ಪಾಕ ಭರಿಸಿದ ಮಣ್ಣು. |
| ಅರಿಯ (ನಾ) | ಮಣ್ಣಿನಿಂದ ತಯಾರಿಸಿದ ಚಿಕ್ಕ ಪಾತ್ರೆ, ಕುಡಿಕೆ A small earthen vessel |
| ಅಲೆ (ಕ್ರಿ) | ಗುಂಡುಕಲ್ಲಿನಿಂದ ಮಡಕೆಯನ್ನು ತಿಕ್ಕಿ ನಯಗೊಳಿಸುವುದು. |
| ಆವೆ (ನಾ) | ಆವಿಗೆ, ಕುಂಬಾರನ ಒಲೆ, ಕುಲುಮೆ A potters kiln<br>ಆವಿಗೆಯಲ್ಲಿ ಬೇಯಬೇಕು ಮಡಕೆ.<br>ಕೋವೆಯಲ್ಲಿ ಕರಗಬೇಕು ಬೆಳ್ಳಿ ಬಂಗಾರ (ಗಾದೆ) |
| ಆವೆತ ಕಮಾನ್ (ವಿಶೇ) | ಆವಿಗೆಯ ಕಮಾನು |
| ಆವೆತ ಕಂಡಿ (ನಾ) | ಆವಿಗೆಯ ಕಿಂಡಿ |
| ಆವೆತ ಗುರಿ (ನಾ) | ಮಡಕೆ ಸುಡುವ ಹೊಂಡ |

ಓಡ್ (ನಾ) ಓಡು, ಹಂಚು ಮಡಕೆಯ ಚೂರು.

ಓಡಾರಿ (ನಾ) ಕುಂಬಾರ, ಮೂಲ್ಯ

ಓಡಾರ್ತಿ (ನಾ) ಕುಂಬಾರ ಹೆಂಗಸು.

ಒಳವು (ನಾ) ಉಳಿಗೆ, ಚಕ್ರಕ್ಕೆ ಮಣ್ಣು ಹಾಕಿ ಮೇಲಕ್ಕೆ ಗೋಪುರದಂತೆ ಎತ್ತುವರು ಇದು ಟೊಳ್ಳಾಗಿರುತ್ತದೆ.

ಕರ (ನಾ) ಅನ್ನ ಬೇಯಿಸುವ ಪಾತ್ರೆ, ಇದು ಅಗೋಳಿಗಿಂತ ಚಿಕ್ಕದು. ಸಣ್ಣ ಮತ್ತು ಅತಿ ಸಣ್ಣ ಕುಟುಂಬಗಳಲ್ಲಿ ಈ ಪಾತ್ರೆಯನ್ನು ಹೆಚ್ಚಾಗಿ ಬಳಸುತ್ತಿದ್ದರು.

ಕಡ್ಯ (ನಾ) ಕಂದೆಲ್, ಕೊಡ ಬಿಂದಿಗೆ, ಚಿಕ್ಕ ಬಾಯಿಯ ದುಂಡಗಿನ ಈ ಪಾತ್ರೆಯನ್ನು ತೆಂಗಿನಗಿಡಕ್ಕೆ ನೀರು ಹಾಕಲು ಬಳಸುತ್ತಿದ್ದರು.

ಕದಿಕೆ ಕದಿಕ್ಕೆ (ನಾ) ದೇವರಿಗೆ ಹರಕೆ ಹಾಕಲಿಕ್ಕಾಗಿ ಇಟ್ಟ ಒಂದು ಬಗೆಯ ಪಾತ್ರೆ, ಮಡಕೆ ಕಾಣಿಕೆ ಡಬ್ಬ ಗಡಗಿ.

ಕನ್ನಟಿ ಓಡ್ (ನಾ) ಕನ್ನಡಿ ಹೆಂಚು, ಬೆಳಕಿನ ಹೆಂಚು, A kind of tile having glass in the middle for the proper illumination of the house.

ಕನ್ನೆಗಡ್ಡೆ (ನಾ) ಕುಂಬಾರಿಕೆಯ ಮಣ್ಣು

ಕಪ್ಪರ್ (ನಾ) ಮಡಕೆತುಂಡು, ಕಾವಲಿಯಾಗಿ ಉಪಯೋಗಿಸುವ ಒಡೆದ ಮಡಿಕೆಯ ಭಾಗ

ಕಪ್ಪರ್ ರೊಟಿ (ನಾ) ಓಡು ರೊಟ್ಟಿ, ಮಣ್ಣಿನ ಹಂಚಿನಲ್ಲಿ ಮಾಡಿದ ರೊಟ್ಟಿ A kind of bread baked in pot sherd.

ಕಪ್ಪಲ್ (ನಾ) ದನಗಳಿಗೆ ಅಕ್ಕಚ್ಚು ಹಾಕಿಡುವ ದೊಡ್ಡ ಮಣ್ಣಿನ ಪಾತ್ರೆ ಬಾನಿ, ಭತ್ತಿದಿಂದ ಅಕ್ಕಿ ತೆಗೆಯುವ ಪ್ರಕ್ರಿಯೆಯ ಮೊದಲ ಹಂತದಲ್ಲಿ ಭತ್ತವನ್ನು ನೆನೆಹಾಕಲು ಬಳಸುವ ದೊಡ್ಡ ಪಾತ್ರೆ. A broad mouthed vessel. A big earthen vessel to store drinking water for cattle.

ಕಾರ್‌ದ ಕಡ್ಯ (ನಾ) ಇದು ಸಾಮಾನ್ಯವಾಗಿ ಕೊಡಪಾನದಂತಿದ್ದು ಅಡಿಭಾಗದಲ್ಲಿ ಮಣ್ಣಿನ ಪಟ್ಟಿ ಇರುತ್ತದೆ. ಇದನ್ನು ಮನೆಯಲ್ಲಿ ನೀರು ತುಂಬಿಡಲು ಬಳಸುತ್ತಾರೆ. ಇದರಲ್ಲಿ ಹಾಕಿಟ್ಟ ನೀರು ತಣ್ಣಗಿರುವದರಿಂದ ಸೆಕೆಗಾಲದಲ್ಲಿ ಇದರ ಬಳಕೆ ಅಧಿಕ.

**ಕಿನ್ನಿ ಬಿಸಲೆ (ನಾ)** ತಿಂಡಿ ತಿನಿಸುಗಳಿಗೆ ಒಗ್ಗರಣೆ ಹಾಕಲು ಅಲ್ಪ-ಸ್ವಲ್ಪ ತರಕಾರಿ ಪಲ್ಯ ತಯಾರಿಸಲು ಬಳಸುತ್ತಿದ್ದ ಚಿಕ್ಕ ಪಾತ್ರೆ.

**ಕುಜಿಲ್ (ನಾ)** ಇದು ವಿಶೇಷವಾಗಿ ತಾಳೆಯ ಮರದಿಂದ ಕಳ್ಳು ತೆಗೆಯಲು ಉಪಯೋಗಿಸುವ ಪಾತ್ರೆ. ಇದುದುಂಡಗಿದ್ದು, ಸಾಗಾಟಕ್ಕೆ ಅನುಕೂಲವಾಗಿರುತ್ತದೆ.

**ಕುದುಪೆ (ನಾ)** ಹಾಲು ಬಿಸಿ ಮಾಡಲು ಬಳಸುತ್ತಿದ್ದ ಸಣ್ಣ ಗಾತ್ರದ ಮಣ್ಣಿನ ಪಾತ್ರೆ ಹಾಲಿನ ಚಟಿಗಿ, ಮೊಸರಿನಿಂದ ಬೆಣ್ಣೆ ತೆಗೆಯಲು ಇದನ್ನೇ ಬಳಸುತ್ತಿದ್ದರು.

**ಕೋರಯಿ (ನಾ)** ಇದು ಅಗಲವಾದ ಕಡಿಮೆ ಆಳದ ಪಾತ್ರೆ, ಅಕ್ಕಿಯನ್ನು ತೊಳೆಯಲು ಮತ್ತು ಅಕ್ಕಿಯಲ್ಲಿ ಬೆರೆತಿರುವ ಕಲ್ಲು, ಹೊಯ್ಗೆಯನ್ನು ಬೇರ್ಪಡಿಸಲು ಬಳಸುವ ಪಾತ್ರೆ.

**ಗಟ್ಟಣೆ (ಕ್ರಿ)** ಹಸಿಮಡಕೆಯನ್ನು ಕಲ್ಲು, ಸೊಳದಿಂದ ತಟ್ಟುವುದು.

**ಗುಂಡಿ ಬಿಸಲೆ (ನಾ)** ಸಾರು, ತೋವೆ ಮತ್ತು ತರಕಾರಿ ಪಲ್ಯ ತಯಾರಿಸಲು ಉಪಯೋಗಿಸುವ ಪಾತ್ರೆ, ಆಳವಾಗಿರುತ್ತದೆ.

**ಚಟ್ಟಿ (ನಾ)** ಹೂಕುಂಡ, ಹೂದಾನಿ, ಕನ್ನಡದಲ್ಲಿ ಕೂಡ ಚಟ್ಟಿ ಎನ್ನುವ ಪದ ಬಳಕೆಯಲ್ಲಿದೆ. ಮನೆಯ ಹಾಗೂ ಕಟ್ಟಡಗಳ ಹೊರ ಅಲಂಕರಣಕ್ಕಾಗಿ ಹೂಗಿಡಗಳನ್ನು ನೆಡುವ ಪಾತ್ರೆ.

**ಗುರ್ಕೆ (ನಾ)** ಗುಡಾಣ, ಹರಿವೆ, ಪಡಗ

**ತಗೋರಿ (ನಾ)** ತಿಗುರಿ, ಕುಂಬಾರನ ಚಕ್ರ, ವಿದ್ಯುತ್ ಚಾಲಿತ ಚಕ್ರಗಳು ಬಂದಿವೆ. ಮರದ ಮತ್ತು ಮಣ್ಣಿನ ತಿಗುರಿಯ ಬಳಕೆ ಈಗಲೂ ಇದೆ.

**ತಟ್ಟಿ ಬಿಸಲೆ (ನಾ)** ಇದು ಗಾತ್ರದಲ್ಲಿ ಚಿಕ್ಕದಾಗಿದ್ದು ಅಗಲವಾದ ಬಾಯಿಯನ್ನು ಹೊಂದಿರುತ್ತದೆ. ಮೀನು ಮಾಂಸದ ಅಡುಗೆ ಪಾತ್ರೆಯಾಗಿ ವಿಶೇಷವಾಗಿ ಉಪಯೋಗಿಸುವರು.

**ತಂದೂರ್ ರೊಟ್ಟಿ ಗೂಡು (ನಾ)** ಇದು ತುಳುವಿಗೆ ಬೇರೆ ಭಾಷೆಯಿಂದ ಬಂದದ್ದು ತಂದೂರಿ ರೋಟ್ಟಿಯನ್ನು ತಯಾರಿಸುವ ಮಣ್ಣಿನ ಒಲೆ ''ತಂದೂರಿ ಒಲೆ'' ಎಂದೇ ಕನ್ನಡದಲ್ಲಿ ಬಳಕೆಯಲ್ಲಿದೆ. ತಂದೂರಿ ಒಲೆ ತಯಾರಿಸುವಾಗ ಮಣ್ಣಿಗೆ ಕುಪ್ಪಿಚೂರು ಮತ್ತು ಮರಳನ್ನು ಹೆಚ್ಚಾಗಿ ಬೆರೆಸುವರು.

ತಿಬಿಲೆ (ನಾ) ಹಣತೆ, ಪ್ರಣತಿ, ದೀಪಾವಳಿ, ಹಾಗೂ ಕಾರ್ತೀಕ ಮಾಸದಲ್ಲಿ ದೀಪ ಹಚ್ಚಲು ಪ್ರಣತಿಯನ್ನು ಹೆಚ್ಚಾಗಿ ಬಳಸುವರು.

ತೂರಿ (ನಾ) ಇದು ದೇವಸ್ಥಾನಗಳಲ್ಲಿ ಪೂಜಾವಿಧಿಗಳಿಗೆ ಬಳಸುವ ಕಲಶ ಶವ ಸಂಸ್ಕಾರದ ಸಮಯದಲ್ಲಿ ಶ್ರೀಮಂತರಿಂದ ಬಡವರವರೆಗೆ ಉಪಯೋಗಿಸುವ ಮಣ್ಣಿನ ಮಡಕೆ ಎಂದರೆ ''ತೂರಿ'' ಇದನ್ನು ಮುಗಯಿ ಎಂದು ಕರೆಯುವರುಂಟು.

ನಡಾರೆ (ನಾ) ಇದು ಮಣ್ಣಿನ ಒಲೆ ಹಿಂಬದಿ ಮುಚ್ಚಿದ್ದು ಎದುರುಗಡೆ ಉರುವಲಿಗಾಗಿ ಬಾಯಿ ಇರುತ್ತದೆ. ಬೆಂಕಿಯ ಅನುಕೂಲಕ್ಕೆ ಗಾಳಿ ಸಿಗಲು ಬದಿಗಳಲ್ಲಿ ರಂಧ್ರಗಳನ್ನು ಮಾಡಿರುತ್ತಾರೆ.

ಪಲ್ಲಯಿ/ಗದ್ದವು (ನಾ) ಹಳೆಯ ಕಾಲದ ಊಟದ ಬಟ್ಟಲು. ಈಗಲೂ ಗ್ರಾಮೀಣ ಪ್ರದೇಶದಲ್ಲಿ ಬಾಣಂತಿಯರು ಊಟ ಮಾಡಲು ಮಣ್ಣಿನ ಬಟ್ಟಲನ್ನೇ ಉಪಯೋಗಿಸುವರು. ದೊಡ್ಡ ಗಾತ್ರದ ಬಟ್ಟಲನ್ನು 'ಪಲ್ಲಯಿ' ಎಂದು ಚಿಕ್ಕ ಗಾತ್ರದ ಬಟ್ಟಲನ್ನು 'ಗದ್ದವು' ಎನ್ನುವುದು ವಾಡಿಕೆ. ಚಿಕ್ಕಮಕ್ಕಳಿಗೆ ಗಿಡಮೂಲಿಕೆ ಮದ್ದನ್ನು ಹಾಕಿ ಅರೆದು ಕುಡಿಸಲು ಕೂಡ ಉಪಯೋಗಿಸುತ್ತಿದ್ದರು.

ತಿಪ್ಪಿ (ಗೆರಟೆ) (ನಾ) ಅರೆ ಒಣಗಿದ ಮಡಕೆಗಳನ್ನು ನಯಗೊಳಿಸಲು ಗೆರಟೆಯಿಂದ ಉಜ್ಜುವರು. ತೆಂಗಿನ ಚಿಪ್ಪನ್ನು ಇದಕ್ಕಾಗಿ ಉಪಯೋಗಿಸುವರು.

ಪುಡಯಿ (ನಾ) ಬಳ್ಳಿಯಿಂದ ಮಾಡಿದ ದೊಡ್ಡ ಪುಟ್ಟಿ ಚಿಕ್ಕ ಮಡಕೆಗಳನ್ನು ಅದರಲ್ಲಿಟ್ಟು ಕುಂಬಾರರು ಹೊತ್ತುಮಾರುವರು.

ಪೊಲಿ (ನಾ) ಸೊಳ, ಮಡಕೆ ತಟ್ಟುವ ಕಟ್ಟಿಗೆಯ ಸಾಧನ.

ಬಾವಡೆ (ನಾ) ಮುಚ್ಚಳ, ಮಡಕೆಗಳ ಬಾಯಿಗೆ ಅನುಕೂಲವಾಗುವಂತೆ ಚಿಕ್ಕ, ದೊಡ್ಡ ಮುಚ್ಚಳ ತಯಾರಿಸುವರು.

ಬೈಹುಲ್ಲು (ನಾ) ಆವಿಗೆಯಲ್ಲಿಟ್ಟು ಮಡಕೆಗಳನ್ನು ಸುಡುವಾಗ ಒಂದೊಕ್ಕೊಂದು ತಾಗಿ ಒಡೆದು ಹೋಗದಿರಲು ಎಡೆಗಳಿಗೆ ಬೈಹುಲ್ಲು ಜೋಡಿಸುವರು.

ರೊಟ್ಟಿದ ಓಡು (ನಾ) ರೊಟ್ಟಿಹಂಚು, ಗ್ರಾಮಗಳಲ್ಲಿ ರೊಟ್ಟಿ ಮಾಡಲು ಬಳಸುವರು.

ಸೇಡಿಮಣ್ಣು (ನಾ) ಒಂದು ತರದ ಬಿಳಿಮಣ್ಣು ಮರಳಿಗೆ ಬದಲಾಗಿ ಸೇಡಿ ಮಣ್ಣನ್ನು ಮಡಕೆ ಮಾಡುವ ಮಣ್ಣಿಗೆ ಬೆರೆಸುವ ರೂಢಿ ಇದೆ. ಮಳಲಿ, ಸುರತ್ಕಲ್ ಬಾಳ, ತೋಕೂರು, ಕುಳಾಯಿ ಮುಂತಾದ ಕಡೆ ಗದ್ದೆ

ಹೊಳೆಬದಿಯಲ್ಲಿ ಸಿಗುವ ಬಿಳಿ ಮಣ್ಣನ್ನು ಬಳಸುವರು.

ಹೊಯ್ಗೆ (ನಾ) ಮರಳು, ಕನ್ನಡದಲ್ಲು ಹೊಯ್ಗೆ ಎನ್ನುವ ಶಬ್ದ ಬಳಕೆಯಲ್ಲಿದೆ, ಮಡಕೆ ಬಿರುಕು ಬಿಡದಿರಲು ಮಣ್ಣಿಗೆ ಹಾಕಿ ಕಲಸುವರು.

– ನೆರವು : ಶಂಕರ್ ಬಾಳೆಹಿತ್ತಲು, ಕಾಸರಗೋಡ್

# ೨. ತೆಲುಗು

| ತೆಲುಗು | ಕನ್ನಡ |
|---|---|
| ಆಮೆ | ಆವಿಗೆ, ಆವಿಗೆ ಗೂಡು |
| ಇಸುಕ | ಉಸುಕು, ಮರಳು |
| ಕಟ್ಟೆ | ಸೋಳ ತಟ್ಟುಮಣೆ, ಕೈಮಣೆ |
| ಕಲಸಮ್ | ಕಲಶ, ಮಂಗಳಘಟ |
| ಕುಂಡ | ಗಡಿಗೆ, ಮಡಕೆ ಸ್ವಾರ್ರಿ ಕುಂಭ |
| ಕುಮ್ಮರ | ಕುಂಬಾರ, ಕುಲಾಲ |
| ಕುಮ್ಮರಿದಿ | ಕುಂಬಾರ ಗಿತ್ತಿ |
| ಕುಮ್ಮರಿ ಸಾರೆ | ತಿಗುರಿ, ಕುಂಬಾರನ ಚಕ್ರ |
| ಕೂಜಾ | ಹೂಜಿ, ಹೂಜೆ |
| ಗವಾ ಖಲಿ | ಬಾದಾಳ |
| ಕಡಾಯಿ | ಕೋಣಬಿಗೆ |
| ಚಿನ್ನಬಿಂದೆ | ಬಿಂದಿಗೆ, ಚಿಕ್ಕ ಕೊಡ |
| ಚಿನ್ನ ಕುಂಡ | ಚಿಕ್ಕ ಕುಡಿಕೆ |
| ಚಟ್ಟಿ ಬಾಣೆ | ಅಡಕಲು ಗಡಿಗೆ |
| ನೀಳ್ ಕುಂಡ | ಹರಿವೆ, ನೀರಿನ ಪಡಗ |
| ತಪೇಲಿ | ಪಚೇಲಿ |
| ತೊಪ್ಪ | ಬಾನಿ |
| ಪಣೆತ | ಪ್ರಣತಿ, ಹಣತಿ |

| | |
|---|---|
| ಪನಿಚೇಯುಟಿ | ಗೇಯುವುದು ಚಕ್ರದ ಮೇಲೆ ಮಣ್ಣು ಹಾಕಿ ಮಡಕೆ ಮಾಡುವುದು |
| ಪೆಳ್ಳಿ ಕುಂಡಲು | ಐರಾಣಿ ಗಡಿಗಿ |
| ಪೆದ್ದ ಕುಂಡವಾಡೆ | ವಾಡೆ, ಧಾನ್ಯಗಳನ್ನು ತುಂಬಿಡುವ ಶಂಕಾಕೃತಿಯ ದೊಡ್ಡ ಮಡಕೆ |
| ಪೊಡುಗ | ಹೆಂಡದ ಮಡಕೆ |
| ಪೊಯ್ಯಿ | ಅಡುಗೆ ಒಲೆ |
| ಪೊಲತೊಟ್ಟಿ | ಹೂಕುಂಡ |
| ಪೆಂಕು | ಮಾಳಿಗೆ ಹಂಚು |
| ಬಿಂದೆ | ಕೊಡ |
| ಬೂಹಿದ | ಬೂದಿ |
| ಮುಕ್ಕ | ಬೋಕಿ, ಒಡೆದ ಮಡಕೆಯ ಚೂರು |
| ಮುಂಕ | ಗೊಬ್ಬೆ, ಹೆಂಡದ ಮಡಕೆ |
| ಮುಂತ | ಮಗೆ |
| ಮೂತ | ಮುಚ್ಚಳ |
| ರಾಯಿ | ಮಡಕೆ ತಟ್ಟುವ ಕಲ್ಲು |
| ಕಾಗು | ಹರಿವಾಣ |

ಒದಗಿಸಿದವರು: ಕೆ. ಈರಣ್ಣ ಬೆಂಗಳೂರು ಅಧ್ಯಕ್ಷರು (ದಕ್ಷಿಣ ಭಾರತ)
ಅಖಿಲ ಭಾರತ ಪ್ರಜಾಪತಿ ಸಂಘ (ಕುಂಬಾರ ಸಂಘ) ದೆಹಲಿ.

## ೩. ಮರಾಠಿ

| **ಮರಾಠಿ** | **ಕನ್ನಡ** |
|---|---|
| ಧೂರಾಡ | ಅಗ್ಗಿಷ್ಟಿಗೆ |
| ಚೂಲ | ಅಡುಗೆ ಒಲೆ |
| ಕಿಂಕಾಳ | ಅಡಕಲು ಗಡಿಗೆ |
| ನಕ್ಷಿಜೆ ಮಡಕೆ | ಅಲಂಕಾರಗಡಿಗೆ |
| ಆವಾ | ಆವಿಗೆ |

| | |
|---|---|
| ರಾಖ | ಆವಿಗೆ ಬೂದಿ |
| ಆವಾಚ ಜಳಸ | ಆವಿಗೆ ಸುಡುವುದು |
| ಸುಗ್ಗಡ | ಐರಾಣಿ ಗಡಿಗೆ |
| ಬೋಳಕಿ | ಕುಡಿಕಿ |
| ಕುಂಭಾರ | ಕುಂಬಾರ |
| ಕುಂಬಾರಾಂಚಿ | ಕುಂಬಾರಗಿತ್ತಿ |
| ಲಾಲಿಮಡಕೆ | ಕೆಂಪುಗಡಿಗೆ |
| ಘಾಗರ್ | ಕೊಡ |
| ಮಡಕೆ | ಗಡಿಗೆ |
| ಗುಗ್ಗಳ ಕೋಲೇಲಿ ಮಡಕೆ | ಗುಗ್ಗಳ ಕೊಡ |
| ಕುತಾ | ತಿಗುರಿ ಗೂಟ |
| ಚಿಲುಮೆ | ಚಿಲುಮೆ |
| ಜೇತಾಯತ ದಗಡ | ಜಜ್ಜುವಕಲ್ಲು |
| ಹಾಕಾ | ತಪೇಲಿ |
| ದಗಡ | ತಟ್ಟುವ ಕಲ್ಲು |
| ಕುಂಭಾರಚಕ್ | ತಿಗುರಿ |
| ಪೀಚಕದಾನಿ | ಪೀಕದಾನಿ |
| ಸೂರಯಿ | ಪಿಂಗಾಣಿ |
| ಕಾರಿ | ಬಡಿಗೆ |
| ಮಂದಾನ | ಬಾನಿ |
| ಕವಡಸಾ | ಬಾದಾಳ |
| ಪಾತೇಲ | ಬೋಗುಣಿ |
| ಕಳಸಿ | ಬಿಂದಿಗೆ |
| ದಿಚಕ | ಮಗಿ |
| ವಾಳು | ಮರುಳು |
| ಝೂಕಣ | ಮುಚ್ಚಳ |
| ದಹೀಚಗಾಡಗ | ಮೊಸರಿನಗಡಿಗೆ |
| ಮಾತಿ | ಮಣ್ಣು |

| | |
|---|---|
| ಮಾತೀಚಬೈಲ | ಮಣ್ಣೆತ್ತು |
| ಮೂಲಾಚ ಖೇಳನಿ | ಮಣ್ಣಿನ ಮಕ್ಕಳಾಟಿಕೆಗಳು |
| ಥಾಪಿ, ಮಡಕ ಘಟನಚ | ಸೊಳ |
| ತವಾ | ರೊಟ್ಟಿಹಂಚು |
| ರಂಜನ | ಹರವಿ |
| ಪಣತಿ | ಹಣತಿ |
| ಪನ್ನಾಳಿಗೆ | ಹರಿನಾಳಿಗೆ |
| ದೂದಾಕ-ಗಾಡಗ | ಹಾಲಿನಗಡಿಗೆ |
| ಪಾನಸೋಯಿ | ಹೂಜಿ |
| ಕವಡಸಾ | ಹೂವಿನಕುಂಡ |
| ಹುಂಡಿ | ಹುಂಡಿಕುಡಕಿ |

ಒದಗಿಸಿದವರು: ಶ್ರೀಮತಿ ವಿಜಯಾ ಅಶೋಕ ಕುಂಬಾರ ಹಾಗೂ ಬಸವರಾಜ ಕುಂಬಾರ ಧಾರವಾಡ.

# ಅಧ್ಯಾಯ ಐದು

# ಅನುಬಂಧಗಳು

## ೧. ಮಣ್ಣಿನ ಮೂರುತಿಗಳು

೧. ಕೃಷ್ಣ - ಬಲರಾಮ

ಗೋಕುಲಾಷ್ಟಮಿಯ ದಿನ ಕೃಷ್ಣ - ಬಲರಾಮರ ಮಣ್ಣಿನ ಮೂರ್ತಿಗಳನ್ನು ಪೂಜಿಸುವ ಪದ್ಧತಿ - ನಮ್ಮ ಸಂಸ್ಕೃತಿಯಲ್ಲಿ ಬೆಳೆದು ಬಂದಿದೆ ಆ ದಿನ ಕುಂಬಾರರು ತಯಾರಿಸಿದ ಕೃಷ್ಣ - ಬಲರಾಮರ ಮಣ್ಣಿನ ಮೂರ್ತಿಗಳನ್ನು ತಂದು ಭಯ-ಭಕ್ತಿಯಿಂದ ಪೂಜಿಸಿ ಗೋಕುಲಾಷ್ಟಮಿ ಆಚರಿಸುವರು. ಈ ಪದ್ಧತಿಯನ್ನು ಧಾರವಾಡ ಜಿಲ್ಲೆಯಲ್ಲಿ ಕಾಣಬಹುದು.


೨. ಗಣಪತಿ



ಪ್ರತಿವರ್ಷ ಭಾದ್ರಪದ ಮಾಸದ ಶುಕ್ಲಪಕ್ಷದ ಚೌತಿಯಂದು ಮಣ್ಣಿನ ಗಣಪತಿಯನ್ನು ತಂದು ಭಕ್ತಿ ಭಾವಗಳಿಂದ ಜನರು ಪೂಜಿಸುವರು. ವಿಘ್ನನಿವಾರಕನೆಂದೇ ಖ್ಯಾತಿ ಪಡೆದ ಈತನನ್ನು ಸರ್ವರೂ ತುಂಬ ಭಕ್ತಿಯಿಂದ ಪೂಜಿಸುವುದರಿಂದ ಈ ಹಬ್ಬದಲ್ಲಿ ಲಕ್ಷ-ಲಕ್ಷ ಸಂಖ್ಯೆಯಲ್ಲಿ ಗಣಪನ ಮೂರ್ತಿಗಳು ತಯಾರಿಸಲ್ಪಡುವವು. ಆರು ಅಂಗುಲದಿಂದ ಮೊದಲು ಮಾಡಿ ೩ ಮೀಟರ್‌ವರೆಗೆ ಎತ್ತರ ಇರುವ ಬೃಹತ್ ಮೂರ್ತಿಗಳನ್ನು ಕಲಾಕಾರರು ತಯಾರಿಸುವರು. ಸಾಮಾನ್ಯವಾಗಿ ಈ ಮೂರ್ತಿಗಳನ್ನು ಕುಂಬಾರರು, ಬಡಿಗರು, ಬಣ್ಣಗಾರರು, ಚಿತ್ರಗಾರರು ತಯಾರಿಸಿ ವಿವಿಧ ಬಣ್ಣಗಳಿಂದ ಅಲಂಕರಿಸುವರು, ಜನರು ತಮ್ಮ ಮನೆಗಳಲ್ಲಿ ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಗಣಪತಿ ಮೂರ್ತಿ

ಗಳನ್ನಿಟ್ಟು ವಾರಗಟ್ಟಲೆ ಅತ್ಯಂತ ಉತ್ಸಾಹದಿಂದ ಆತನನ್ನು ಆರಾಧಿಸಿ ಕೊನೆಯ ದಿನ ಹೊಳೆ-ಹಳ್ಳ, ಕೆರೆ-ಭಾವಿ, ಸಮುದ್ರಗಳಲ್ಲಿ ವಿಸರ್ಜಿಸುವರು.

೩. ಗುಳ್ಳವ್ವ



ಆಷಾಢ ಮಾಸದ ಪ್ರತಿ ಮಂಗಳವಾರದ ದಿನ ಮಣ್ಣಿನಿಂದ ತಯಾರಿಸಲ್ಪಟ್ಟ 'ಗುಳ್ಳವ್ವ' ಎಂಬ ದೇವತೆಯನ್ನು ಪೂಜಿಸುವ ಸಂಪ್ರದಾಯ ನಮ್ಮ ಸಂಸ್ಕೃತಿಯಲ್ಲಿ ಬೆಳೆದು ಬಂದಿದೆ. ಅಮವಾಸ್ಯೆಯ ನಂತರ ಬರುವ ಐದು ಮಂಗಳವಾರದ ದಿನದಂದು ಗುಳ್ಳವನ ಪೂಜೆ ನಡೆಯುವುದು. ಒಂದೊಂದು ಮಂಗಳವಾರ ಒಂದೊಂದು ತರಹದ ಗುಳ್ಳವನನ್ನು ಕುಂಬಾರರು ತಯಾರಿಸುವರು. ಮೊದಲನೆಯ ಮಂಗಳವಾರ ಲಿಂಗಾಕಾರದ ಗುಳ್ಳವ್ವ, ಎರಡನೆಯ ಮಂಗಳವಾರ ಗುಡಿ ಆಕಾರದ ಗುಳ್ಳವ್ವ, ಮೂರನೆಯ ಮಂಗಳವಾರ ಕಟ್ಟೆ ಆಕಾರದ ಗುಳ್ಳವ್ವ, ನಾಲ್ಕನೆಯ ಮಂಗಳವಾರ ಹೆಣ್ಣಾಕಾರದ ಗುಳ್ಳವ್ವ ಮತ್ತು ಐದನೆಯ ಮಂಗಳವಾರ ತಿಗರಿ ಆಕಾರದ ಗುಳ್ಳವ್ವನನ್ನು ಕುಂಬಾರರು ತಯಾರಿಸುವರು ಹಳ್ಳಿಗಳಲ್ಲಿ ರೈತರು ಐದುವಾರಗಳವರೆಗೆ ಈ ದೇವತೆಯ ಮೂರ್ತಿಗಳನ್ನು ಕುಂಬಾರರ ಮನೆಯಿಂದ ತಂದು ಪೂಜಿಸಿ ವಿಸರ್ಜನೆ ಮಾಡುವರು. ಈ ಪದ್ಧತಿ ಹೆಚ್ಚಾಗಿ ಉತ್ತರ ಕರ್ನಾಟಕದಲ್ಲಿ ಕಂಡುಬರುತ್ತದೆ.

೪. ಗೊಗ್ಗವ್ವ

'ಗುಳ್ಳವ'ನ ಎಡಭಾಗದಲ್ಲಿ ಕುಳ್ಳ ಆಕಾರದ ಇನ್ನೊಂದು ಮಣ್ಣಿನ ಮೂರ್ತಿಯನ್ನು ಇಟ್ಟು ಪೂಜಿಸುವರು. ನೋಡಲಿಕ್ಕೆ ಕುರೂಪಿಯಾಗಿರುವ ಈ ಮೂರ್ತಿಗೆ ಗೊಗ್ಗವ್ವ ಎಂದು ಹೆಸರು.

೫. ಗೌರಿ ಗಡಿಗೆ

ಶ್ರಾವಣ ಮಾಸದಲ್ಲಿ ಗೌರಿ ಗಡಿಗೆ ಪೂಜೆ ಮಾಡುವ ಪದ್ಧತಿ ಆಚರಣೆಯಲ್ಲಿದೆ ಇದನ್ನು ಅಷ್ಟಮಿ ಪೂಜೆ ಎನ್ನುವರು. ಗೌರಿ ಗಡಿಗೆ ಸುಣ್ಣ ಬಣ್ಣ ಹಚ್ಚಿ ಕುಂಬಾರರು ಪೇಟೆಯಲ್ಲಿ ಮಾರಲು ಇಡುತ್ತಾರೆ. ಗೌರಿ ಗಡಿಗೆಯನ್ನು ಕೊಂಡು


ಹೋಗಿ ಅದರೊಳಗೆ ಅಕ್ಕಿ ಹಾಕಿಟ್ಟು ಸುಮಾರು ಒಂದು ತಿಂಗಳ ಕಾಲ ಪ್ರತಿ ಶುಕ್ರವಾರ ಶನಿವಾರ ಪೂಜೆ ಮಾಡುವರು, ಗೌರಿ ಗಡಿಗೆ ಪೂಜೆ ಮಾಡುವ ಸಂಪ್ರದಾಯ ಹೆಚ್ಚಾಗಿ ಬ್ರಾಹ್ಮಣ ಸಮುದಾಯದಲ್ಲಿದೆ.

೬. ಗೌರವ್ವ



ಗೌರಿ – ಹುಣ್ಣಿಮೆಯ ದಿನ ಗೌರಿಯ ಮಣ್ಣಿನ ಮೂರ್ತಿಗಳನ್ನು ಹೆಣ್ಣು ಮಕ್ಕಳು ತಮ್ಮ ತಮ್ಮ ಮನೆಗಳಲ್ಲಿಟ್ಟು ಪೂಜಿಸುವರು. ಕೆಲವು ಕಡೆ ಗಣೇಶಚೌತಿಯ ಹಿಂದಿನ ದಿನ, ಮಣ್ಣಿನ ಗೌರಿ ಮೂರ್ತಿಯನ್ನು ತಂದು, ಅದಕ್ಕೆ ವಿಧವಿಧವಾಗಿ ಅಲಂಕರಿಸಿ ಪೂಜಿಸುವರು. ಇದಕ್ಕೆ ಗೌರಿಗಣೇಶನ ಪೂಜೆ ಎನ್ನುವರು. ಮಲೆನಾಡು ಮತ್ತು ದಕ್ಷಿಣ ಕರ್ನಾಟಕದಲ್ಲಿ ಇದು ಹೆಚ್ಚು ರೂಢಿಯಲ್ಲಿದೆ.


೭. ಜೋಕುಮಾರ



ಅನಂತನ ಹುಣ್ಣಿಮೆಯ ದಿನ ಕುಂಬಾರರು ಜೋಕುಮಾರನ ಮೂರ್ತಿಯನ್ನು ತಯಾರಿಸುವರು, ಈ ಮೂರ್ತಿ ಸುಮಾರು ೯೦ ಸೆಂ.ಮೀ. ಎತ್ತರವಾಗಿದ್ದು, ಅಗಲವಾದ ಮುಖ, ಹೊಳೆಯುವ ಕಣ್ಣು, ದೊಡ್ಡ ಬಾಯಿಯನ್ನು ಹೊಂದಿರುತ್ತದೆ. ಈ ಮೂರ್ತಿಯನ್ನು ಒಂದು ಬುಟ್ಟಿಯಲ್ಲಿ ಇಟ್ಟು ಬೇವಿನ ತೊಪ್ಪಲನ್ನು ಮೂರ್ತಿ ಸುತ್ತಲೂ ಹಾಕಿರುವರು ಮತ್ತು ಆತನ ಬಾಯಿಗೆ ಬೆಣ್ಣೆಯನ್ನು ಮೆತ್ತಲಾಗಿರುವದು. ಈಪುಟ್ಟಿಯಲ್ಲಿ ಸ್ಥಾಪಿಸಲ್ಪಟ್ಟಿರುವ ಜೋಕುಮಾರನನ್ನು ಹೆಣ್ಣು ಮಕ್ಕಳು ತಲೆಯ ಮೇಲೆ ಹೊತ್ತುಕೊಂಡು ಮನೆ-ಮನೆಗೆ ಹೋಗಿ ಹಾಡುವರು. ಮಳೆ ಬರದೆ, ಬೆಳೆಗಳು ಒಣಗಲಾರಂಭಿಸಿ ದಾಗ ಜೋಕುಮಾರನು ಶಿವನನ್ನು ಪ್ರಾರ್ಥಿಸಿ ಮಳೆ ತರುವನೆಂಬ ಪ್ರತೀತಿ ಇದೆ. ಅಂಥಲೆ ಜೋಕುಮಾರನನ್ನು ಹೊತ್ತುಕೊಂಡು ಮನೆ-ಮನೆಗೆ ಹೋದ ಆ ಹೆಣ್ಣು ಮಕ್ಕಳು 'ಅಡ್ಡಡ್ಡ ಮಳೆಬಂದು ದೊಡ್ಡ-ದೊಡ್ಡ ಕೆರೆ ತುಂಬಿ ಗೊಡ್ಡುಗಳೆಲ್ಲಿ ಹಯನಾಗಿ ಜೋಕುಮಾರ' ಎಂದು ಹಾಡುವರು ಒಂಬತ್ತು ದಿನಗಳವರೆಗೆ ಜೋಕುಮಾರನನ್ನು

ಆರಾಧಿಸಿ ಹೊಳ-ಹಳ್ಳಗಳಲ್ಲಿ ಆತನ ಮೂರ್ತಿಯನ್ನು ವಿಸರ್ಜಿಸಿ ಬರುವರು.

೮. ಹುತ್ತಪ್ಪ



ಪ್ರತಿವರುಷ ನಾಗರ ಪಂಚಮಿಯ ದಿನ ಮಣ್ಣಿನ ನಾಗಪ್ಪನನ್ನು ಮಾಡಿ, ಜಗಲಿಯ ಮೇಲಿಟ್ಟು, ಅದಕ್ಕೆ ಹಾಲೆರೆಯುವರು. ಸಾಮಾನ್ಯವಾಗಿ ನಾಗರ ಹಾವಿನ ಮಣ್ಣಿನ ಮೂರ್ತಿಗಳನ್ನು ಪೂಜಿಸುವರು.

೯. ಮೃಣ್ಮಯಿ ರಾಜರಾಜೇಶ್ವರಿ

ದಕ್ಷಿಣ ಕನ್ನಡ ಜಿಲ್ಲೆಯ ಪೊಳಲಿಯಲ್ಲಿ ರಾಜರಾಜೇಶ್ವರಿ ದೇವಾಲಯವಿದೆ ಇದೊಂದು ಪ್ರಮುಖ ಯಾತ್ರಾ ಸ್ಥಳ ಆ ದೇವಾಲಯದ ಆಧಿದೇವತೆಯಾಗಿರುವ ರಾಜರಾಜೇಶ್ವರಿ ಯನ್ನು ಮಣ್ಣಿನಿಂದ ತಯಾರಿಸಲಾಗಿದೆ ಅಂಥಲಿ ಆಕೆಗೆ ಮೃಣ್ಮಯಿ ರಾಜರಾಜೇಶ್ವರಿ ಎಂಬ ಹೆಸರು ಬಂದಿದೆ ವಿಶ್ವದ ಪ್ರಾಚೀನ ಮಣ್ಣಿನ ವಿಗ್ರಹಗಳಲ್ಲಿ ಈ ಮೂರ್ತಿಗೆ ವಿಶಿಷ್ಟ ಸ್ಥಾನವಿದೆ. ಈ ದೇವತೆಗೆ 'ಪಾರ್ವತಿ' ಎಂದೂ ಕೂಡ ಕರೆಯುವರು. ಈ ವಿಗ್ರಹ ಸುಮಾರು ೨ ಮೀಟರ್ ಎತ್ತರವಾಗಿದ್ದು, ಬಹು ಸುಂದರವಾಗಿದೆ. ಈ ರಾಜರಾಜೇಶ್ವರಿಯ ಮೂರ್ತಿಯನ್ನು ಒಂಬತ್ತನೆಯ ಶತಮಾನದ ಸುಮಾರಿಗೆ ಸ್ಥಾಪಿಸಲಾಗಿದೆ ಎಂದು ವಿದ್ವಾಂಸರು ಅಭಿಪ್ರಾಯ ಪಡುವರು, ರಾಜರಾಜೇಶ್ವರಿಯ ಪರಿವಾರದಲ್ಲಿರುವ ಗಣಪತಿ, ಸುಬ್ರಹ್ಮಣ್ಯ, ರುದ್ರದೇವ, ಲಕ್ಷ್ಮಿ-ಸರಸ್ವತಿ ಈ ಎಲ್ಲ ದೇವರುಗಳಿಗೆ ವಿವಿಧ ವಸ್ತ್ರಾಭರಣಗಳನ್ನು ತೊಡಿಸಿ ನಿತ್ಯವೂ ಪೂಜೆ ಮಾಡುವರು. ಆದರೆ ನೀರನ್ನು ಮುಟ್ಟಿಸುವದಿಲ್ಲ, ಜಲಾಭಿಷೇಕ ಮಾಡಿಸುವಾಗ ಮಾತ್ರ ಪ್ರತಿರೂಪದ ಕಂಚಿನ ಮೂರ್ತಿಗಳನ್ನಿಟ್ಟು ಅಭಿಷೇಕ ಮಾಡುವರು. ಈ ದೇವಾಲಯಕ್ಕೆ ೧೪೨೦ರಲ್ಲಿ ಭೇಟಿ

ನೀಡಿದ ಇಟಲಿಯ ನಿಕಲೋಕಂಠಿ ಎಂಬ ಪ್ರವಾಸಿಯು ಇಲ್ಲಿನ ಮಣ್ಣಿನ ವಿಗ್ರಹಗಳನ್ನು ನೋಡಿ "ಅಂತಹ ಮಣ್ಣಿನ ವಿಗ್ರಹಗಳನ್ನು ನಾನೆಲ್ಲೂ ನೋಡಿಲ್ಲ" ಎಂದು ಹೇಳಿದ್ದಾನೆ.


**೧೦. ಮಣ್ ಮೈಲಾರಲಿಂಗ** ಕರ್ನಾಟಕದ ಪ್ರಮುಖ ಪ್ರಾಚೀನ ಸಂಪ್ರದಾಯಗಳಲ್ಲಿ ಮೈಲಾರಲಿಂಗ ಸಂಪ್ರದಾಯವು ಒಂದು ಕರ್ನಾಟಕದ ಸುಮಾರು ೧೪ ಮೈಲಾರ ದೇವಾಲಯಗಳಲ್ಲಿ ಬಳ್ಳಾರಿ ಜಿಲ್ಲೆಯ ಹೂವಿನ ಹಡಗಲಿ ತಾಲ್ಲೂಕಿನ ಹಿರೇಮೈಲಾರವು ಹೆಚ್ಚು ಪ್ರಸಿದ್ಧಿ ಪಡೆದಿದೆ. ಈ ಮೈಲಾರಲಿಂಗನ ವೈಶಿಷ್ಟ್ಯವೆಂದರೆ, ದೇವಾಲಯದ ಗರ್ಭಗೃಹದಲ್ಲಿ ಸ್ವಯಂ ಭೂ ಲಿಂಗವಿದೆ. ಲಿಂಗ ಸಹಜವಾಗಿದ್ದು ಬುಡದಲ್ಲಿರುವ ಒಂದು ದೊಡ್ಡ ಬಂಡೆಗಲ್ಲಿನಿಂದ ಮೇಲೆದ್ದಿದೆ. ಹಿಂಭಾಗದ ಗೋಡೆಯಲ್ಲಿ ಸುಮಾರು ಇನ್ನೂರಐವತ್ತು ಸೆಂ.ಮೀ. ಎತ್ತರದ ಕಮಾನು ಕೊರೆಯಲಾಗಿದೆ. ಈ ಕಮಾನಿನಲ್ಲಿ ಮೈಲಾರಲಿಂಗನ ಮೃಣ್ಮಯ ಮೂರ್ತಿ ಇದೆ. ಮೂರ್ತಿ ೧೮೨ ಸೆಂ.ಮೀ. ಎತ್ತರ ೧೮೨ ಸೆಂ.ಮೀ. ಅಗಲವಾಗಿದೆ. ಚತುರ್ಭುಜ ಹೊಂದಿದ್ದ ನಾಲ್ಕು ಹಸ್ತಗಳಲ್ಲಿ ಖಡ್ಗ ತ್ರಿಶೂಲ, ಡಮರು ಮತ್ತು ಬಟ್ಟಲುಗಳಿವೆ. ಖಡ್ಗವೊಂದನ್ನು ಬಿಟ್ಟು ಉಳಿದೆಲ್ಲವೂ ಮಣ್ಣಿನವು ಮೂರ್ತಿಯ ಎರಡು ಬದಿಗಳಲ್ಲಿ ಚಾಮರಧಾರಿಗಳನ್ನು ಪಾದದಡಿಯಲ್ಲಿ ಎರಡೂ ಪಕ್ಕದಲ್ಲಿ ಎರಡು ರುಂಡಗಳನ್ನು ಬಿಡಿಸಲಾಗಿದೆ. ಇವೆಲ್ಲವನ್ನು ಮಣ್ಣಿನಿಂದಲೇ ಮಾಡಿರುವುದರಿಂದ ಇದು ಮಣ್ ಮೈಲಾರ ಕ್ಷೇತ್ರವೆಂದು ಹೆಸರಾಗಿದೆ. ಇದನ್ನು ಮಣ್ ಮೈಲಾರಲಿಂಗ ಎಂದು ಕರೆಯಲಾಗುತ್ತದೆ. ಇದರ ಕಾಲಮಾನ ಕ್ರಿ.ಶ. ೧೧೧೨ ಇರಬಹುದೆಂದು ಅಭಿಪ್ರಾಯ ಪಡಲಾಗಿದೆ. ಮೈಲಾರದಲ್ಲಿ ಪ್ರತಿವರ್ಷ ಭಾರತ ಹುಣ್ಣಿಮೆಯಂದು ದೊಡ್ಡ ಜಾತ್ರೆ ನಡೆಯುತ್ತದೆ. ಆಗ ಕಾರಣಿಕವನ್ನು ಹೇಳುವರು. ಮೈಲಾರ ಈಗ ಯಾತ್ರಾ ಸ್ಥಳವಾಗಿದೆ.

ಆದಾರ:- ಕರ್ನಾಟಕದ ಪ್ರಾಚೀನ ಮೈಲಾರದೇವಾಲಯಗಳು ಮತ್ತು ನೊಳಂಬರು - ಎಚ್. ಜಯಮ್ಮ ಕರಿಯಣ್ಣ ಬೆಂಗಳೂರು (ಇತಿಹಾಸ ದರ್ಶನ)

೧೧. ಶಿರಿಯಾಳ ಚೆಂಗಳೆ ಮೂರ್ತಿಶಿಲ್ಪ

ಹನ್ನೆರಡನೆ ಶತಮಾನದ ಶಿವಶರಣ ಶಿರಿಯಾಳ ಶೆಟ್ಟಿಯ ಮತ್ತು ತನ್ನ ಭಕ್ತಿಪರಾಕಾಷ್ಠೆಯಿಂದ ಶಿವನನ್ನು ಸಾಕ್ಷಾತ್ಕರಿಸಿಕೊಂಡ ಭಕ್ತಿಶಿರೋಮಣಿ ಚೆಂಗಳೆ ಇವರ ಸ್ಮರಣೆಯಲ್ಲಿ ಜನಪದರು ಶ್ರಾವಣ ಮಾಸದಲ್ಲಿ ಶಿರಿಯಾಳ ಚೆಂಗಳೆಯರ ಮಣ್ಣಿನ ಮೂರುತಿ ಪೂಜಿಸುವ ಆಚರಣೆ ನಡೆಯುತ್ತದೆ. ಈ ಪೂಜೆಯ ಬಗೆಗೆ ಕೆಲವರು ಶಿರಿಯಾಳ ಶೆಟ್ಟಿಯ ಪೂಜೆಯೆಂದು ಕೆಲವು ಪ್ರದೇಶದಲ್ಲಿ ಚೆಂಗಳವ್ವನ ಪೂಜೆ ಎಂದು ಕರೆಯುವರು. ಪುಣೆಯ ಭಾಗದಲ್ಲಿ 'ಶಿರಾಳಸೇಟ'ನ ಆಚರಣೆಯೆಂದು ಕರೆಯುವರು. ಸಂತಾನ ಪ್ರಾಪ್ತಿಗಾಗಿಯೂ ಈ ಮೂರ್ತಿಯನ್ನು ಪೂಜಿಸುವ ಸಂಪ್ರದಾಯವಿದೆ.

೧೨. ಮಣ್ಣೆತ್ತು



ಮಣ್ಣೆತ್ತಿನ ಅಮವಾಸ್ಯೆಯ ದಿನ ಮಣ್ಣಿನಿಂದ ತಯಾರಿಸಿದ ಜೋಡಿ ಎತ್ತುಗಳನ್ನು ರೈತರು, ಕುಂಬಾರರ ಮನೆಯಿಂದ ತಂದು ಪೂಜಿಸುವರು. ಹೊಲದಲ್ಲಿ ಬೆಳೆ ಹುಲುಸಾಗಿ ಬರಲು, ಭೂಮಿಯನ್ನು ಚೆನ್ನಾಗಿ ಊಳುವ ಎತ್ತುಗಳನ್ನು ದೇವರೆಂದು ರೈತರು ಭಕ್ತಿಯಿಂದ ಪೂಜಿಸುವರು.

೧೩. ಶೀಗವ್ವ



ಶೀಗಿಹುಣ್ಣಿಮೆಯ ದಿನ ಗೋಪುರಾಕಾರದ ಮಣ್ಣಿನ ದೇವತೆಯನ್ನು ಕುಂಬಾರರು ತಯಾರಿಸುವರು. ಆ ದಿನ ಹೆಣ್ಣುಮಕ್ಕಳು ಶೀಗವ್ವನನ್ನು ಮನೆಗೆ ತಂದು, ಅಲಂಕಾರ ಮಾಡಿ ಪೂಜಿಸುವರು.

೧೪. ಹರಕೆಮೂರ್ತಿ

ಮಣ್ಣಿನಿಂದ ಹರಕೆ ಮೂರ್ತಿಗಳನ್ನು ಮಾಡಿ ದೇವರಿಗೆ ಹರಕೆ ಒಪ್ಪಿಸುವ ಪದ್ಧತಿ ಪ್ರಪಂಚದ ಎಲ್ಲಾ ಭಾಗಗಳಲ್ಲಿ ಕಂಡು ಬರುತ್ತದೆ. ಅವರು ತಮ್ಮ ದೈನಂದಿನ ಜೀವನದಲ್ಲಿ ಹಲವಾರು ಕಷ್ಟಕಾರ್ಪಣ್ಯಗಳನ್ನು ಎದುರಸಿಬೇಕಾಗುವುದು. ಅವುಗಳ ನಿವಾರಣೆಗಾಗಿ ವಿವಿಧ ರೀತಿಯ ಮಣ್ಣಿನ ಮೂರ್ತಿಗಳನ್ನು ತಂದು ದೇವರಿಗೆ ಹರಕೆ ಕೊಡುವರು. ಉದಾಹರಣೆಗಾಗಿ ತಮಿಳುನಾಡಿನಲ್ಲಿ ಮಣ್ಣಿನ ಕುದುರೆ ಗಳನ್ನು ಹರಕೆ ಕೊಡುವ ಪದ್ಧತಿ ಇದೆ. ದಕ್ಷಿಣ ಕನ್ನಡದ ಬೆಳ್ತಂಗಡಿ ತಾಲೂಕಿನ ಉಜಿರೆ ಗ್ರಾಮದ ಕುಂಬಾರರು ಹರಕೆ ಮೂರ್ತಿಗಳನ್ನು ತಯಾರಿಸುವರು. ಆ ಭಾಗದ ಜನರು ತಮ್ಮ ದನ-ಕರುಗಳಿಗೆ ಕಾಯಿಲೆ ಬಂದರೆ, ಮನೆಯಲ್ಲಿ ಬೇನೆ - ಬೇಸರಿಕೆಯಿಂದ ಬಳಲುತ್ತಿದ್ದರೆ, ಕುಟುಂಬದಲ್ಲಿ ಉದ್ಭವಿಸುವ ಸಮಸ್ಯೆಗಳ ಪರಿಹಾರಕ್ಕಾಗಿ ಕುಂಬಾರರ ಮನೆಯಿಂದ ಹರಕೆ - ಮೂರ್ತಿಗಳನ್ನು ತಂದು ಅಲ್ಲಿಯೇ ಹತ್ತಿರದಲ್ಲಿರುವ ಸೂರ್ಯ ದೇವಸ್ಥಾನಕ್ಕೆ ಹರಕೆ - ಕೊಡುವರು. ಹಸುಹಾಲು ಸರಿಯಾಗಿ ಕೊಡದಿದ್ದರೆ ಮಣ್ಣಿನ ಆಕಳನ್ನು ತಂದು ದೇವರಿಗೆ ಹರಕೆ ಕೊಡುವರು. ಈ ರೀತಿ ಮನುಷ್ಯನ, ಪ್ರಾಣಿಗಳ, ಪಕ್ಷಿಗಳ ಮಣ್ಣಿನ ಮೂರ್ತಿಗಳನ್ನು ಹರಕೆ ಕೊಡುವ ಪದ್ಧತಿ ಇದೆ. ಮಕ್ಕಳಾಗದವರು ಮಕ್ಕಳನ್ನು ಪಡೆಯಲು ಮನುಷ್ಯ ದೇಹದ - ನಾಗಮುಖದ ಹರಕೆ ಮೂರ್ತಿಯನ್ನು ದೇವರಿಗೆ ಹರಕೆ ಕೊಡುತ್ತಿದ್ದರೆಂಬುದು ಪಾಟ್ನಾದ ವಸ್ತು ಸಂಗ್ರಹಾಲಯದಲ್ಲಿರುವ ಮೂರ್ತಿಯಿಂದ ತಿಳಿದು ಬರುತ್ತದೆ. ಟೆರ್ರಾಕೊಟಾದಲ್ಲಿ ತಯಾರಿಸಿದ ಈ ಹರಕೆ ಮೂರ್ತಿಯ ಕಾಲ ಕ್ರಿ.ಪೂ. ೮೦೦೦-೯೦೦೦ ಎಂದು ವಿದ್ವಾಂಸರ ಅಭಿಪ್ರಾಯ.

ಆಧಾರ - ಕುಂಬಾರಜನಾಂಗ

## ೨. ಪವಿತ್ರ ಮಡಕೆಗಳು



## ೩. ಪ್ರಾಚೀನ ಕಾಲದಲ್ಲಿ ಬಳಕೆಯಲ್ಲಿದ್ದ ಕೆಲವು ಮಡಕೆಗಳು

**ಅಮತ್ರ** (Amatra) :- ಪ್ರತಿಷ್ಠಿತ ವ್ಯಕ್ತಿಗಳಿಗೆ ಸೋಮರಸವನ್ನು (ಸೋಮಲತೆಯಿಂದ ತಗೆದರಸ) ಕುಡಿಯಲು ಕೊಡಲು ಬಳಸುತ್ತಿದ್ದ ಮಡಕೆ - ಪಾತ್ರೆ.

**ಅಶೇಚನಾ** (Assechana) :- ದ್ರವ ಪದಾರ್ಥಗಳನ್ನು ತುಂಬಿಡಲು ಬಳಸುತ್ತಿದ್ದ ಮಣ್ಣಿನ ಪಾತ್ರೆ, ಉದಾ:- ತುಪ್ಪ ಮಾಂಸದ ರಸ ಇತ್ಯಾದಿ.

**ಅಹವಾ** (Ahava) :- ದನ-ಕರುಗಳಿಗೆ ನೀರು ಕುಡಿಸಲು ಉಪಯೋಗಿಸುತ್ತಿದ್ದ ಅಗಲ ಬಾಯಿಯ ಬಾನಿ. ಇದನ್ನು ಬಾವಿಯ ಪಕ್ಕದಲ್ಲಿ ಇಡುತ್ತಿದ್ದರು.

ಉಖ — ವೇದ ಕಾಲದಲ್ಲಿ ಯಜ್ಞ – ಯಾಗಾದಿಳನ್ನು ಮಾಡುವಾಗ ಈ ಮಡಕೆಯನ್ನು ಬಳಸುತ್ತಿದ್ದರೆಂಬುದು ತಿಳಿದು ಬರುತ್ತದೆ ಇದು ಯಜ್ಞಕ್ಕೆ ಸಂಬಂಧಿಸಿದ ಮಡಿಕೆಯಾದರೂ, ಅಡಿಗೆ ಮಾಡಲು ಮತ್ತು ಗೃಹೋಪಯೋಗಿ ಮಡಿಕೆಯಾಗಿ ಬೇರೆ-ಬೇರೆ ಉದ್ದೇಶಗಳಿಗೆ ಇದನ್ನು ಬಳಸಲಾಗುತ್ತಿತ್ತು ಎಂದು ತಿಳಿದುಬರುವುದು. ಇದಕ್ಕೆ 'ಮೃಣ್ಮಯಿ' ಎಂದೂ ಕರೆಯಲಾಗಿದೆ. ವಿವಿಧ ಗಾತ್ರ ಮತ್ತು ಆಕಾರಗಳಲ್ಲಿದ್ದ ಈ ಮಡಕೆಯ ತಳ ಅಗಲವಾಗಿದ್ದು ಅದರ ಬದಿಯನ್ನು ದಿಂಡುದಿಂಡಾಗಿ (ಲೇಯರ್ ಬೈಲೇಯರ್) ಎತ್ತರಿಸಲಾಗಿದೆ. ಬಹುಶಃ ಈ ಮಡಕೆಯನ್ನು ಸುರುಳಿ ವಿಧಾನದಿಂದ ಕೈಯಿಂದ ಮಾಡುತ್ತಿದ್ದರೆಂದು ತಿಳಿಯಬಹುದು. ಈ ಮಡಕೆಯ ಬಗ್ಗೆ ವೈದಿಕ ಸಾಹಿತ್ಯದಲ್ಲಿ ಪ್ರಸ್ತಾಪಿಸಲಾಗಿದೆ.

ಉದಂಚನ — (Udanchana) :- ಬಾವಿಯಿಂದ ನೀರನ್ನು ರಾಟಿಯ ಮೂಲಕ ಮೇಲೆತ್ತಲು ಬಳಸುತ್ತಿದ್ದ ಕೊಡದಂತ ಮಡಕೆ.

ಉಪಶೇಚನಿ — (Upasechani) :- ಸಾರು – ಸಾಂಬಾರು ಮೊದಲಾದ ದ್ರವ ಪದಾರ್ಥಗಳನ್ನು ಬಡಿಸುತ್ತಿದ್ದ ಮಣ್ಣಿನ ಸವಟು, ಇದು ಋಗ್ವೇದದ ಕಾಲದಲ್ಲಿ ಬಳಕೆಯಲ್ಲಿತ್ತೆಂದು ಹೇಳಲಾಗುತ್ತದೆ.

ಕಪಲಾ — ಮಣ್ಣಿನ ಬಟ್ಟಲು, ಮುಚ್ಚಳ, ಇದು ಆಕಾರದಲ್ಲಿ ತಲೆಬುರುಡೆಯಂತೆ ಇದ್ದುದರಿಂದ ಇದಕ್ಕೆ ಕಪಲಾ ಎಂದು ಕರೆಯಲಾಗುತ್ತಿತ್ತು. ಯಜ್ಞ ಮಾಡುವಾಗ ಬಳಸುತ್ತಿದ್ದ ಮಡಿಕೆಗಳಲ್ಲಿ ಇದೂ ಒಂದು.

ಘಟ — ಪವಿತ್ರ ಕಾರ್ಯಗಳಲ್ಲಿ ನೀರನ್ನು ತರಲು ಬಳಸುತ್ತಿದ್ದ ಮಣ್ಣಿನ ಮಡಕೆ – ಕಲಶ. ಮಂಗಳ ಘಟ.

ಜುಹೂ — (Juh) :- ದೇವರಿಗೆ ಬೆಣ್ಣೆಯನ್ನು ಎಡೆಮಾಡಲು ಬಳಸುತ್ತಿದ್ದ ಮಣ್ಣಿನ ಚಿಕ್ಕ ಪಾತ್ರೆ. ಋಗ್ವೇದದಲ್ಲಿ ಇದರ ಪ್ರಸ್ತಾಪ ಬರುತ್ತದೆ.

ಪಾತ್ರೆ — ಮಣ್ಣಿನ ಪಾತ್ರೆ, ಪಾತ್ರಿ, ನೀರು ಕುಡಿಯಲು ಮತ್ತು ಅಡಿಗೆ ಮಾಡಲು ಅನುಕೂಲವಾಗುವಂತೆ ತಯಾರಿಸಿದ ಮಡಕೆಗೆ ಪಾತ್ರೆ, ಪಾತ್ರಿ ಎಂದು ಕರೆಯುತ್ತಿದ್ದರು.

ಮೃಚ್ಛಕಟಿಕಾ — ಮಣ್ಣಿನಿಂದ ತಯಾರಿಸಿದ ಚಕ್ಕಡಿ, ಇದನ್ನು ಮಕ್ಕಳ ಆಟಿಗೆಯ ವಸ್ತುವಾಗಿ ಬಳಸುತ್ತಿದ್ದರು. ಹರಪ್ಪ - ಮೊಹಂಜೋದಾರು ಉತ್ಖನನದಲ್ಲಿ ಮಣ್ಣಿನ ಬಂಡಿ - ಮೃಚ್ಛಕಟಿಕಾ ದೊರೆತಿವೆ.

ಸ್ಥಾಲಿ — (sthali) :- ಅನ್ನ ಬೇಯಿಸಲು ಬಳಸುತ್ತಿದ್ದ ಮಣ್ಣಿನ ಪಾತ್ರೆ ಬ್ರಾಹ್ಮಣೀಯ ಮತ್ತು ಉಪನಿಷತ್ತುಗಳಲ್ಲಿ ಇದರ ಉಲ್ಲೇಖವಿದೆ.

## ೪. ಸೆರಾಮಿಕ್ಸ್ (CERAMICS)

**Nouns**

೧. Ceramics, ceramic, pottery

೨. Ceramic ware, ceramics; pottery, Crockery: pot, crock, vase, urn, jug, bowl, bisque, biscuit, mosaic, tile, tiling.

೩. (Materials) clay, Potter's clay or earth, fire clay, adobe, terracotta, porcelain clay, kaolin, china clay, china stone, flux.

೪. Potter's wheel, wheel, kick wheel, pedal wheel, power wheel.

೫. Kiln, oven, stove, furnace, acid kiln, brickkiln, cement kiln, enamel kiln, muffle kiln, lime kiln, reverberatory kiln, stovehouse.

**Verbs**

೬. Pot, shape, throw, turn, throw or turn a pot, fire, bake.

**Adj**

೭. Ceramic, clay, enamel, china, porcelain, glasses.

**Different kinds of wares :-**

Allervale pottery
Basalt
Berlin ware
Black ware
Castleford ware
Champleve
Champleve enamel
China, chinaware
Clayware
Cloisonne
Cloisonne enamel
Cottage china
Crackle, crackle ware

Crouch ware
Crown Derby
Delft, delftware
Dresden china
Eathern ware
Eggshell porcelain
Enamel, enamel
Ware
Faience
Glassware
Glazed ware
Gombroon
Ironstone ware or china

Jasper ware
Leeds pottery
Limoges, limoges ware

Lowestoft ware
Lusterware, luster pottery

Majolica
Meissen ware
Mexican pottery
Old worcester
Palissy ware
Porcelain
Queen's ware
Rockingham ware
Salt-glazed ware
Satsuma ware
Sevres, sevres ware
Spode
Staffordshire ware
Stoneware
Terracotta
Toftware
Wedgwood ware
Whiteware, white
Pottery
Worcesterware

**ಕೃಪೆ: Rogets International Thesaurus**

## ೫. ಮಡಕೆ ಮತ್ತು ಮುಚ್ಚಳಗಳು (Pot and Pans)

Amphore
Biggin
Boiler
Caldron
Chatty [India]
Coffeepot
Coffee urn
Cuspidor
Demijohn
Flowerpot
Jardiniere
Jug
Ashpan
Bakepan
Bedpan
Boiler
Brazier
Breadpan
Boiler
Cakepan
Dishpan
Double boilder
dustpan
Kettle
Kitchen boiler
Olla [U.S.]
Patella [archaeol]
Pipkin
Spittoon
Tazza [it.]
Teakettle
Teapot
Teaurn
Urn
Vase
Frynig pan
Panboiler
Piepan
Posnet [dial]
Roaster
Saucepan
Skillet
Spider
Stwepan
Warming pan

ಕೃಪೆ: **Rogets International Thesaurus**

## ೬. ಗ್ರಾಮೀಣ ಕುಂಬಾರಿಕೆಯ ಸಾಧನ ಸಲಕರಣೆಗಳು

| | ಪುಟ |
|---|---|
| ತಿಗುರಿ, ಚಕ್ರ | ೫೦ |
| ತಿಗುರಿಕೋಲು | ೫೦ |
| ಆವಿಗೆ | ೧೭ |
| ತಟ್ಟುವ ಕಲ್ಲು (ಕಲ್ಲುಗುಂಡು) | ೩೦ |
| ಸೊಳ | ೭೧ |
| ಜಜ್ಜುವ ಕಲ್ಲು | ೪೭ |
| ಅಚ್ಚು / ತೀಡೋ ಅಚ್ಚು | ೧೪ |
| ಇಲಕಿ | ೨೧ |
| ಸಬಸರಬಿ | ೭೦ |
| ದರಗ | ೫೩ |
| ಕವೆಗೋಲು | ೩೧ |
| ಕೆಂಡ ಎತ್ತುವ ಜಾಲರಿ | ೩೭ |
| ಬೇಲ್ ಪಟ್ಟಿ | ೬೧ |
| ಬಂಡಿ ಕುಡಗೋಲು | ೫೭ |
| ಚೂರಿ | ೪೬ |
| ಗ್ವಾರಿ | ೪೨ |
| ಕೊಡತಿ | ೩೮ |
| ಸಲಕಿ | ೭೦ |
| ಸಾಣಿಗೆ, ಜರಡಿ | ೭೧ |
| ಕಲ್ಲಿ | ೩೦ |
| ಕವಳಿದಾರ – ತಂತಿ | ೩೧ |
| ಕವಳಿಗಡಿಗೆ (ಚಟಿಗೆ) | ೩೧ |
| ಉಜ್ಜುಸರ | ೨೨ |
| ಹೆರಿಬಳೆ | ೭೬ |
| ಕುಕ್ಕುಮಣೆ | ೩೩ |

## ೭. ಸೆರಾಮಿಕ್ ಕಲಿಕಾ ಕೇಂದ್ರಗಳಲ್ಲಿನ ಸಾಮಾನ್ಯ ಯಂತ್ರೋಪಕರಣಗಳು

1. Roller Crusher
2. Blunger
3. Ball mill
4. Filter Press
5. Pug mill
6. Kneadling Machine
7. Potters Wheel
8. Fly press
9. Oggle press
10. Lathe
11. Muffle Furnace
12. Globar Furnace

# ೮. ಕರ್ನಾಟಕ - ಕುಂಭೋದ್ಯಮ ಹಾಗೂ ತರಬೇತು ಕೇಂದ್ರಗಳು

## ೧. ರಾಷ್ಟ್ರೀಯ ಗ್ರಾಮೀಣ ಕುಂಭೋದ್ಯಮ ಕೇಂದ್ರ ಖಾನಾಪುರ:

ಕರ್ನಾಟಕದ ಬೆಳಗಾವಿ ಜಿಲ್ಲೆಯಲ್ಲಿದೆ. ಕುಂಭಾರಿಕೆಯ ಕುರಿತು ಇಲ್ಲಿ ಮೂರು, ಆರು ತಿಂಗಳು ಹಾಗೂ ಒಂದು ವರ್ಷದ ತರಬೇತಿ ನೀಡಲಾಗುವುದು. ತರಬೇತಿ ಅವಧಿಯಲ್ಲಿ ಸಿದ್ಧಗೊಂಡ ಮಣ್ಣಿನ ಬಗೆಬಗೆಯ ವಸ್ತುಗಳನ್ನು ಮಾರಾಟ ಮಾಡಲಾಗುತ್ತಿದೆ.

## ೨. ರಾಮನಗರ ಕುಂಬಾರಿಕೆ ಕೇಂದ್ರ:

ಬೆಂಗಳೂರಿನಿಂದ ಮೈಸೂರಿಗೆ ಹೋಗುವ ಹೆದ್ದಾರಿಯ ಬಳಿ ಸುಮಾರು ೫೨ ಕಿ.ಮೀ. ದೂರದಲ್ಲಿ ಕುಂಬಾರಿಕೆ ಕೈಗಾರಿಕಾ ಕೇಂದ್ರವಿದೆ. ಇಲ್ಲಿ ಕುಂಬಾರಿಕೆಯ ವಸ್ತುಗಳ ಉತ್ಪಾದನೆಯ ಜೊತೆಗೆ ಕುಂಭಕಲೆಯ ತರಬೇತಿಯನ್ನು ಕೂಡ ನೀಡಲಾಗುತ್ತಿದೆ. ಇಲ್ಲಿ ಸಿದ್ಧವಾದ ಟೆರ್ರಾಕೂಟಾ ವಸ್ತುಗಳು ದೇಶ ವಿದೇಶಗಳಲ್ಲಿ ಮಾರಾಟವಾಗುತ್ತವೆ.

## ೩. ಕರಾವಳಿ ತೀರದ ಸಹಕಾರಿ ಕುಂಭೋದ್ಯಮ ಕೇಂದ್ರ ಪುತ್ತೂರು (ದ.ಕ)

ಇದು ಕುಂಬಾರರ ಸಹಕಾರಿ ನೆಲೆಯಲ್ಲಿ ಸ್ಥಾಪಿತವಾದ ಕುಂಬಾರಿಕೆ ಕೇಂದ್ರ. ಪುತ್ತೂರಿನಿಂದ ಸುಮಾರು ೧೫ ಕಿ.ಮೀ. ದೂರದ ಕೌಡಿಚಾರಿನಲ್ಲಿ ಕುಂಬಾರಿಕೆಯ ಕಾರ್ಯಾಗಾರವಿದೆ. ಈ ಕಾರ್ಯಾಗಾರದಲ್ಲಿ ಮಣ್ಣಿನ ವಿವಿಧ ಗೃಹೋಪಯೋಗಿ ವಸ್ತುಗಳ ಜೊತೆಗೆ ಟೆರ್ರಾ ಕೊಟಾದ ಅಲಂಕರಣ ವಸ್ತುಗಳನ್ನು ಕೂಡ ತಯಾರಿಸಲಾಗುತ್ತದೆ. ಇಲ್ಲಿ ಕುಂಬಾರಿಕೆಯ ಅಲ್ಪಾವಧಿಯ ತರಬೇತಿ ಕೂಡ ನೀಡಲಾಗುವುದು.

## ೪. ರಾಷ್ಟ್ರೀಯ ತಾಂತ್ರಿಕ ಕಾಲೇಜಿಗೆ ಒಳಪಟ್ಟ ಸೆರಾಮಿಕ್ ಉತ್ಪನ್ನಗಳ ಸಂಶೋಧನಾ ಮತ್ತು ಅಭಿವೃದ್ಧಿ ಕೇಂದ್ರ - ಸುರತ್ಕಲ್ ಮಂಗಳೂರು (ಎನ್.ಐ.ಟಿ.ಕೆ)

ಮಂಗಳೂರು ಉಡುಪಿಯ ಹೆದ್ದಾರಿಯಲ್ಲಿ ಮಂಗಳೂರಿನಿಂದ ಸುಮಾರು ೧೫ ಕಿ.ಮೀ. ದೂರದ ಸುರತ್ಕಲ್ಲನ ಎನ್.ಐ.ಟಿ.ಕೆ ಆವರಣದಲ್ಲಿ ಈ ಸಂಶೋಧನಾ ಕೇಂದ್ರವಿದೆ. ಮಂಗಳೂರು ಹಂಚಿನ ಉದ್ದಿಮೆಯನ್ನು ಬಲಪಡಿಸುವುದು ಇದರ ಮುಖ್ಯಗುರಿ.

**೫. ಜೋಗರ ದೊಡ್ಡಿಯ ಕೆನರಾಬ್ಯಾಂಕ ಕಲಾಗ್ರಾಮ :**

ಬೆಂಗಳೂರಿಂದ ಸುಮಾರು ೪೦ ಕಿ.ಮೀ. ದೂರದ ರಾಮನಗರ ಸಮೀಪದಲ್ಲಿ ಕೆ.ಪಿ.ಜೆ. ಪ್ರಭು ಕೆನರಬ್ಯಾಂಕ್ ಕಲಾಗ್ರಾಮ ಸ್ಥಾಪನೆಯಾಗಿದೆ. ಇಲ್ಲಿ ಸಾಂಪ್ರದಾಯಿಕ ಕಲೆಗಳಾದ, ಕಲ್ಲು, ಮರ, ಲೋಹ ಮತ್ತು ಮಣ್ಣಿನ ವಸ್ತುಗಳ ತಯಾರಿಕೆಯಲ್ಲಿ ಹದಿನೆಂಟು ತಿಂಗಳ ಅವಧಿಯ ತರಬೇತಿಯನ್ನು ನೀಡಲಾಗುತ್ತದೆ. ದಕ್ಷಿಣ ಕನ್ನಡದ ಕಾರ್ಕಳದಲ್ಲಿ ಇದರ ಶಾಖೆ ಇದೆ.

## ೯. ಸೆರಾಮಿಕ್ ಶಿಕ್ಷಣ ಸಂಸ್ಥೆಗಳು
## (Institutes in Ceramic Technology)

1. College of ceramic technology, 73, A-C Banerjee hane, Kolkatta - 700 010 (West Bengal)
2. Shaheed Bhagat Singh College of Engineering a Technology, Moga Road, Ferogepur - 152 001 (Punjab)
3. SKE Society's P.D.A. Colege of Engineering, Aiwan-E-Shahi Area, Gulbarga, 585 102 (Karnataka)
4. University college of Science and Technology, 992, Acharya Pra fulla Chandra Road, Kolkata - 700 009 (West Bengal)
5. Erode Institute of Chemical Technology, Dist. Pariyar (Tamil Nadu) Nadupatti, Uthukuli Road, Vijaya - Among alam, Dist. Periyar - 638 056
6. Lukhdhirji collge of engineering, Morvi (Gujarat) Morvi-36342
7. Shilpasadan visva Bharati-Shantiniketan, Birbhum (West Bengal), Birbhem - 731 235
8. Utkalmani Gopabandhu Institute of Engineering Tech. Rourkela (Orissa) at Kaalmani, Gopabandhu Institute of Engg. Tech, Rourkela - 4

ಮಾಹಿತಿ ನೀಡಿದವರು : ಮುದ್ದು ಮೂಲ್ಯ ಮುಖ್ಯ ಗ್ರಂಥಪಾಲರು
ಎನ್.ಐ.ಟಿ.ಕೆ. ಸುರತ್ಕಲ್ (ದ.ಕ.)

# ೧೦. ಪ್ರಖ್ಯಾತ ಕುಂಭ ಕಲಾ ತಜ್ಞರು

ಕುಂಭ ಕಲೆಯನ್ನು ಆಧುನಿಕಗೊಳಿಸಿ, ಶ್ರಮ ಕಡಿಮೆ ಆಗುವಂತೆ ಮಾಡಿ, ಅದರಲ್ಲಿ ನಾವೀನ್ಯತೆಯನ್ನು ತಂದು, ಅದೊಂದು ಸ್ಟುಡಿಯೋ ಕಲೆ ಆಗುವಂತೆ ಮಾಡಿದವರಲ್ಲಿ ಪಾಶ್ಚಾತ್ಯ ಕುಂಭತಜ್ಞರ ಪಾಲು ದೊಡ್ಡದು. ಈ ಮಹನೀಯರುಗಳ ಶ್ರಮ, ಆಸಕ್ತಿ ಮತ್ತು ಪರಿಣತಿಯಿಂದ ಕುಂಭಕಲೆಯು, ನಾವೀನ್ಯತೆಯನ್ನು ಪಡೆದು ಗ್ಯಾಲರಿ ಪ್ರದರ್ಶನವನ್ನು ಕಾಣಲು ಸಾಧ್ಯವಾಯಿತು. ದೊಡ್ಡ ದೊಡ್ಡ ವಸ್ತು ಪ್ರದರ್ಶನಾಲಯಗಳಲ್ಲಿ ಕುಂಬಾರನ ಕೈಚಳಕದ ಮಡಕೆ ಕುಡಿಕೆಗಳು, ಅಲಂಕರಣದ ಚಿತ್ತಾರದ ಗೊಂಬೆಗಳು, ಪಿಂಗಾಣಿಯ ಅಂದ ಚೆಂದದ ವಸ್ತುಗಳು. ಟೆರ್‍ರಾಕೊಟಾದ ಬಗೆ, ಬಗೆಯ ವಸ್ತುಗಳು ವಿಜೃಂಬಿಸ ತೊಡಗಿದವು. ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಮಣ್ಣಿನ ವಸ್ತುಗಳ ಪ್ರದರ್ಶನಕ್ಕಾಗಿಯೇ ಪ್ರತ್ಯೇಕ ಮ್ಯೂಸಿಯಮ್‌ಗಳು ಸ್ಥಾಪಿಸಲ್ಪಟ್ಟವು. ಕುಂಭೋದ್ಯಮವನ್ನು ಆಧುನಿಕಗೊಳಿಸಿದ ಪರಿಣತರಲ್ಲಿ ಕೆಲವರ ವಿವರವನ್ನು ಮಾತ್ರ ಕೊಡಲಾಗಿದೆ.

## ಬರ್ನಾರ್ಡ ಪಾಲಿಸ್ಸೆ (Bernard Palissy) – ೧೬ನೇ ಶತಮಾನ

ಈತನು ಫ್ರೆಂಚ್ ಕುಂಭ ತಜ್ಞ.೧೫೧೦ರಲ್ಲಿ ಬಡ ಕುಂಬಾರನ ಮಗನಾಗಿ ಜನಿಸಿದನು. ಕುಂಭ ಕಲೆಯ ಹೊಸತನಕ್ಕಾಗಿ ಜೀವನವಿಡಿ ಸೆಣಸಿದವನು. ಜಾಣ ಕುಂಭಾರನಾದ ಬರ್ನಾರ್ಡ ಬಗೆಗೆ ಅನೇಕ ಕುತೂಹಲಕರ ಕಥೆಗಳಿವೆ. ಕುಂಭಕಲೆಯ ಕುರಿತಾಗಿ ಮಾಡಿದ ಪ್ರಯೋಗಗಳು ಫ್ರಂಚ್ ಕುಂಭಕಲೆಯ ಚಕಿತಗೊಳಿಸುವ ಇತಿಹಾಸದ ಭಾಗವಾಗಿ ಉಳಿದಿವೆ. ತಾನು ಕಾರ್ಯಾಗಾರದಲ್ಲಿ ಬಳಸುತ್ತಿದ್ದ ಕುರ್ಸಿ ಟೇಬಲ್, ಅನೇಕ ಮರದ ವಸ್ತುಗಳನ್ನೆ ಮುರಿದು ಹಾಕಿ ಮಡಕೆಗಳನ್ನು ಸುಡಲು ಆವಿಗೆಗೆ ಉರುವಲಾಗಿ ಬಳಸಿದ. ಬಡತನಕ್ಕೆ ಜಗ್ಗದೆ, ವಿಷಾದ ಪಡದೆ, ಕುಂಭಕಲೆಯ ಪ್ರಯೋಗಗಳಲ್ಲಿ ತಲ್ಲೀನನಾದ ಬರ್ನಾರ್ಡ ಒಬ್ಬ ಅಪರೂಪದ ಕುಂಭ ತಜ್ಞ. ಈತನ ಕ್ರಿಯಾಶೀಲತೆ, ತಾಳ್ಮೆ ದೃಢವಾದ ಅವಿರತ ಯತ್ನ ಬರ್ನಾರ್ಡನಿಗೆ ಫ್ರೆಂಚ್ ಕುಂಭಕಲೆಯ ಇತಿಹಾಸದಲ್ಲಿ ಅತ್ಯುನ್ನತ ಸ್ಥಾನಗಿಟ್ಟಿಸಿಕೊಟ್ಟಿತು. ಕೊನೆಗೂ ತನ್ನ ಕುಂಭಕಲೆಗೆ ಬೇಕಾದ ಹೊಸ 'ಎನಾಮಲ್' ಕಂಡು ಕೊಳ್ಳುವಲ್ಲಿ ಯಶಸ್ವಿಯಾದ. ಕುಂಬಾರಿಕೆಯಿಂದಲೆ, ತಕ್ಕಮಟ್ಟಿಗೆ ಹಣಗಳಿಸಿಕೊಂಡು ಬಡತನದಿಂದ ದೂರವಾದ. ಬರ್ನಾರ್ಡ ತನ್ನ ಮಡಕೆಗಳ ಅಲಂಕರಣಕ್ಕೆ ಎಲೆ, ಮೀನು, ಶಂಖ, ಕಪ್ಪೆ ಚಿಪ್ಪಿನ ಚಿತ್ರಗಳನ್ನು ಬಳಸಿ ಎನಾಮಲ್ ಮಾಡುತ್ತಿದ್ದ. ಈತನು ಮಾಡಿದ ಬಗೆ ಬಗೆಯ ಮಣ್ಣಿನ ವಸ್ತುಗಳು ಫ್ರಾನ್ಸಿನ ಅನೇಕ ವಸ್ತು ಸಂಗ್ರಹಾಲಯಗಳನ್ನು ಅಲಂಕರಿಸಿವೆ.

## ಕೆಂಝುನ್ (KENZN) – ೧೭ನೇ ಶತಮಾನ

ಜಪಾನ್ ಸೆರಾಮಿಕ್ ಪ್ರಪಂಚದ ಹಳೆ ತಲೆಮಾರಿನ ಕುಂಭಕಾರರಲ್ಲಿ ಕೆಂಝುನ್‌ನ ಹೆಸರು ಮೊದಲ ಪಂಕ್ತಿಯಲ್ಲಿದೆ. ಕೆಂಝುನ್ ೧೬೬೩ರಲ್ಲಿ ಮಧ್ಯಮ ವರ್ಗದ ಕುಟುಂಬದಲ್ಲಿ ಕೊಯೋಟದಲ್ಲಿ ಜನಿಸಿದನು. ಇವರ ತಂದೆ ಸೋಕನ್ ಪುಸ್ತಕ ಪ್ರೇಮಿ, ವರ್ಣಚಿತ್ರಕಲಾವಿದ ನ್ಯಾಯಾಲಯಗಳಿಗೆ ಸಮವಸ್ತ್ರ ತಯಾರಿಸುವ ಉಡುಪಿನ ವ್ಯಾಪಾರಲ್ಲಿ ತೊಡಗಿದ್ದನು. ಕೆಂಝುನ್‌ನ ಅಣ್ಣ ಕೊರಿನ್, ಪ್ರಸಿದ್ಧ ಕಲಾವಿದನೆಂದು ಹೆಸರು ಪಡೆದಿದ್ದನು. ಸೋಕನ್ ತೀರಿಕೊಂಡಾಗ ಕೆಂಝುನನ ಪಾಲಿಗೆ ದೊರೆತದ್ದು ಪುಸ್ತಕಗಳು ಮತ್ತು ವರ್ಣ ಚಿತ್ರಗಳು, ವ್ಯಾಪಾರ–ವಹಿವಾಟಿನ ಬಗೆಗೆ ಆಸಕ್ತಿಯೇ ಇರಲಿಲ್ಲ. ಕೆಂಝುನ್ ಆಸಕ್ತಿಯಿಂದ ಪ್ರೀತಿಸಿ ಕಲಿದ್ದು ಕುಂಭಕಲೆ, ವರ್ಣರಂಜಿತ ಮಡಿಕೆಗಳನ್ನು ಮಾಡುವದರಲ್ಲಿ ನೈಪುಣ್ಯತೆಯನ್ನು ಪಡೆದು ಜಪಾನಿನ ಚಹಾ ಕೂಟದ "ರಾಕು" ಮಡಕೆ ಕುಡಿಕೆಗಳನ್ನು ಮಾಡುವದರಲ್ಲಿ ವಿಶೇಷ ಆಸಕ್ತಿ ತಳೆದನು.

ಕೆಂಝುನ್‌ನ ಸೆರಾಮಿಕ್ ಕಲೆಯ ಗುರು ನಿನ್ಸೆ, ಕೆಂಝುನ್‌ನಿಗೆ ಸೆರಾಮಿಕ್ ಕಲೆಯ ಬಗೆಗೆ ಇರುವ ಅಪಾರ ಆಸಕ್ತಿಯನ್ನು ಕಂಡು ಕುಂಭ ಕಲೆಯ ಸೂತ್ರಗಳನ್ನೆಲ್ಲಾ ಅವನಿಗೆ ನಿನ್ಸೆ ಧಾರೆಯೆರೆದನು. ನಿನ್ಸೆ ತನ್ನ ಮಗ ಇಹಾಚಿಗು ಕೂಡ ಕುಂಭಕಲೆಯ ಸೂತ್ರಗಳನ್ನು ಹೇಳಿ ಕೊಡಲಿಲ್ಲ, ಕೆಂಝುನ್‌ನ ಮೇಲೆ ನಿನ್ಸೆಗಿದ್ದ ಪ್ರೀತಿಗೆ ಇದು ನಿದರ್ಶನ. ಆದರೆ ಕೆಂಝುನ್ ಇಹಾಚಿಯನ್ನು ಜೊತೆಗಿಟ್ಟುಕೊಂಡೇ ಕುಂಭ ಕಲೆಯ ಕೆಲಸವನ್ನು ಮುಂದುವರಿಸಿದನು. ನಿನ್ಸೆಯ ಮರಣ ನಂತರ ಇಹಾಚಿಯೊಡನೆ ಕೊಯೋಟಕ್ಕೆ ತೆರಳಿ ಮಡಕೆ ಸುಡುವ ಆವಿಗೆಯನ್ನು ನಿರ್ಮಿಸಿ, ತನ್ನದೇ ಆದ ಕಾರ್ಯಾಗಾರದಲ್ಲಿ ಕೈಯಿಂದ ಬಗೆಗೆಯ ಮಡಕೆಗಳನ್ನು ಮಾಡಿ ಮಾರ ತೊಡಗಿದನು. ಇಹಾಚಿಯನ್ನೇ ತನ್ನ ವಾರಸುದಾರನಾಗಿ ಮಾಡಿಕೊಂಡು ಜಪಾನಿನ ಮೂಲೆ ಮೂಲೆಯನ್ನು ಸುತ್ತುಹಾಕಿ ಕುಂಭ ಕಲೆಯ ಎಲ್ಲಾ ಪ್ರಕಾರಗಳನ್ನು ಕಲಿತನು. ಅದುವರೆಗೆ ಜಪಾನಿನ ಕುಂಭ ಕಲೆಯಲ್ಲಿ ಹಾಸುಹೊಕ್ಕಾಗಿದ್ದ ಚೀನಾ ಕುಂಭ ಕಲೆಯ ಅನುಕರಣವನ್ನು ಬದಿಗೊತ್ತಿ ಜಪಾನಿನ ಮೂಲ ಸಂಪ್ರದಾಯದ ವಿನ್ಯಾಸವನೊಳಗೊಂಡ ಮಡಕೆ ಕುಡಿಕೆಗಳನ್ನು ಸಿದ್ಧಪಡಿಸಿ, ಜಪಾನಿನ ಸೆರಾಮಿಕ್ ಸೌರಭ ಎಲ್ಲೆಡೆಗೂ ಹರಡುವಂತೆ ಮಾಡಿದ ಕೀರ್ತಿ ಕೆಂಝುನ್‌ನಿಗೆ ಸಲ್ಲುತ್ತದೆ. ಕೆಂಝುನ್ ಜಪಾನ ಕುಂಭ ಕಲೆಗೆ ಹೊಸ ಇತಿಹಾಸವನ್ನೇ ಬರೆದನು. ಕೆಂಝುನ್‌ನನು ಝುನ್ ಸಂಪ್ರದಾಯದ ತತ್ವಗಳಿಗೆ ಮಾರುಹೋದವನು. ಹೀಗಾಗಿ ಅವನ ಸೆರಾಮಿಕ್ ಕಲೆಯಲ್ಲಿ ಬುದ್ಧನ ಮುಗುಳ್ನಗೆ ಹೊರಚೆಲ್ಲುತ್ತಿತ್ತು.

ಕೆಂಝುನ್‌ನನು ತನ್ನ ವೃದ್ಧಾಪ್ಯವನ್ನು ಟೋಕಿಯಾದಲ್ಲಿ ಅವನ ಕುಂಭ ಕಲೆಯನ್ನು ಪ್ರೋತ್ಸಾಹಿಸಿ ಆಶ್ರಯವಿತ್ತ ದೊರೆ ಕೊಕನ್ ಹತ್ತಿರ ಕಾಲ ಕಳೆದನು. ಆಗಲೆ ಕುಂಭ ಕಲೆಯ ಸೂತ್ರದ ವಿಶಿಷ್ಟವಾದ ಪುಸ್ತಕವನ್ನು ಬರೆದು ಮುಗಿಸಿದನು. ದುರ್ದೈವವೆಂದರೆ ೧೭೩೮ರಲ್ಲಿ ಅವನಿಗೆ ಆಶ್ರಯವಿತ್ತ ದೊರೆ ಕೊಕನ್ ಮರಣಹೊಂದಿದನು. ಇವರಿಂದಾಗಿ ಕೆಂಝುನ್‌ನನು ತನ್ನ ವೃದ್ಧಾಪ್ಯವನ್ನು ಅನಾಥನಾಗಿ ಕಾಲಕಳೆಯಬೇಕಾಯಿತು. ೧೭೩೮ರಲ್ಲಿ ತನ್ನ ೮೨ನೇ ವಯಸ್ಸಿನಲ್ಲಿ ಬಿಡುಗಾಸಿಲ್ಲದೆ ಕೆಂಝುನ್ ಈ ಲೋಕದಿಂದ ಕಣ್ಮರೆಯಾದನು.

"Pleasure and pain are over
Life seems like a dream"

ಇದು ಕೆಂಝುನ್ ಬರೆದ ಕೊನೆಯ ಕವಿತೆ, ಮಣ್ಣಿನಲ್ಲಿ ಕಾವ್ಯ ಅರಳಿಸಿದ ಕೆಂಝುನ್ ಜಪಾನ್ ಕುಂಭ ಕಲೆಗೆ ಶ್ರೀಮಂತ ಸಂಪ್ರದಾಯವನ್ನೇ ಬಿಟ್ಟು ಹೋದನು.

## ಥಾಮಸ್ ವ್ಹೆಲ್ಡನ್ (Thomas Whieldon) – ೧೮ನೇ ಶತಮಾನ

ಈತನು ಇಂಗ್ಲೀಷ್ ಕಂಭಕಾರ, ಜನನ ೧೭೧೯. ಬಣ್ಣದ ಗ್ಲೇಸ್ಡ್ ಕುಂಭ ಕಲೆಯಲ್ಲಿ ಹೆಚ್ಚಿನ ಪರಿಣತಿಯನ್ನು ಹೊಂದಿದ್ದನು. ಸಾಮಾನ್ಯ ಹುಲ್ಲಿನ ಛಾವಣಿಯಲ್ಲೇ ತನ್ನ ಕಾರ್ಯಗಾರ ಆರಂಭಿಸಿ, ಸ್ವತಃ ಕೆಲಸದಲ್ಲಿ ನಿರತನಾಗಿ, ಮಡಕೆಗಳನ್ನು ಪಟ್ಟಣದಿಂದ ಪಟ್ಟಣಕ್ಕೆ ಕೊಂಡು ಹೋಗಿ ಮಾರುತ್ತಿದ್ದನು. ಪ್ರಸಿದ್ಧ ಕುಂಭಕಾರನಾಗಿದ್ದ ಜೋಷೈ ವೆಡ್ಗ್‌ವುಡ್‌ನನ್ನು ಭೇಟಿಯಾಗಿ, ಕುಂಭಕಲೆಯ ಬಗ್ಗೆ ಸಮಾಲೋಚನೆ ನಡೆಸಿ, ಮಡಕೆಗಳಿಗೆ ಹೊಳಪು ಭರಿಸುವ ಕಲೆಯಲ್ಲಿ ಪ್ರಯೋಗಗಳನ್ನು ಮಾಡಿದನು. ಕುಂಬೋಧ್ಯಮವನ್ನು ಬೆಳಸಿ, ಶ್ರೀಮಂತನಾದನು. ಸ್ಟೆಫೋರ್ಡ್‌ಷೈಯರ್‌ನಲ್ಲಿ ಕುಂಭೋಧ್ಯಮದ ಕಾರ್ಯಗಾರ ಸ್ಥಾಪಿಸಿದನು. ೧೭೮೬ರಲ್ಲಿ ಈತನಿಗೆ ಶರೀಫ್ ಎಂಬ ಬಿರುದು ಸಿಕ್ಕಿತು. ತನ್ನ ಮುಂದಿನ ಕುಂಭ ಕಲೆಯ ಪರಿಣಿತರಿಗೆ ಥಾಮಸ್ ವ್ಹೆಲ್ಡನ್ ಮಾರ್ಗದರ್ಶಕನಾದನು.

## ಜೋಷೈ ವೆಡ್ಗವುಡ್ (Josiah Wedgwood) – ೧೮ನೇ ಶತಮಾನ

ಈತ ಇಂಗ್ಲೀಷ್ ಕುಂಭಕಾರ ಥಾಮಸ್ ವೆಡ್ಗವುಡ್ ಈತನ ತಂದೆ ೧೭೩೦ರಲ್ಲಿ ಥಾಮಸ್‌ನ ೧೩ನೆಯ ಮಗನಾಗಿ ಜೋಷೈ ವೆಡ್ಗವುಡ್ ಜನಿಸಿದನು. ಈತನ ತಂದೆ ಥಾಮಸ್ ವೆಡ್ಗವುಡ್ ಸ್ಟೈಫೋರ್ಡ್ ಜೋಷೈ ವೆಡ್ಗವುಡ್ ಕೇವಲ ಒಂಬತ್ತು ವರುಷ ವಯಸ್ಸಿನಲ್ಲಿರುವಾಗಲೇ ತಂದೆ ತೀರಿಹೋದನು. ಅವರಣ್ಣನ ಕಾರ್ಖಾನೆಯಲ್ಲೇ ಕುಂಬಾರಿಕೆಯನ್ನು ಕಲಿತು ೧೭೫೧ರಲ್ಲಿ ಜಾನ್ ಹ್ಯಾರಿಸನ್ ಜೊತೆ ಸೇರಿ ಕೆಲಸ ಮಾಡಿದ.

೧೭೫೯ರಲ್ಲಿ ತನ್ನದೇ ಆದ ಸ್ವಂತ ಕಾರ್ಖಾನೆಯನ್ನು ಆರಂಭಿಸಿದನು. ಕುಂಭಕಲೆಯ ನಾವೀನ್ಯತೆಯಲ್ಲಿ ತನ್ನದೇ ಆದ ಹೊಸ ಹಾದಿಯನ್ನು ತುಳಿದನು. ಪ್ರಾಚೀನತೆಯೊಂದಿಗೆ, ನವ್ಯತೆ, ಕಾಲ್ಪನಿಕತೆ, ಸೌಂದರ್ಯತೆ, ಉಪಯುಕ್ತತೆ, ವಾಣಿಜ್ಯ ಇವೆಲ್ಲವನ್ನು ಬೆರೆಸಿ ಕುಂಭೋದ್ಯಮ ವಿಜೃಂಭಿಸುವಂತೆ ಮಾಡಿದನು. ಆಧುನಿಕ ಕುಂಭೋದ್ಯಮದಲ್ಲಿ ವೆಡ್ಗವುಡ್‌ನಿಗೆ ವಿಶಿಷ್ಟ ಸ್ಥಾನವಿದೆ. ಕುಂಭೋದ್ಯಮದ ಹಲವಾರು ಕಾರ್ಖಾನೆಗಳನ್ನು ತೆರೆದು, ಕುಂಭಾರರಿಗೆ ಕೆಲಸಕ್ಕೆ ಎಡ ಮಾಡಿಕೊಟ್ಟನು. ಕೆನೆಬಣ್ಣದ ಪಿಂಗಾಣಿ ಪಾತ್ರೆ ಮಾಡುವದರಲ್ಲಿ ಪರಿಣಿತನಾಗಿದ್ದನು. ೧೭೬೫ರಲ್ಲಿ ಔತಣಕೂಟದ ಕೆನೆವರ್ಣದ ಪಿಂಗಾಣಿ ಸಾಮಾನುಗಳನ್ನು ರಾಣಿ ಚಾರ್ಲೊಟ್ಟಿಗೆ ಅರ್ಪಿಸಿದನು. ಅದಕ್ಕೆ ಕ್ವೀನ್ ವ್ಹೇರ್ ಎಂದು ನಾಮಕರಣ ಮಾಡಲಾಯಿತು. ವೆಡ್ಗವುಡ್ ಮಾಡಿದ ಕಪ್ಪು ವರ್ಣದ ಸ್ಟೋನ್‌ವ್ಹೇರ್ ಪಾತ್ರೆಗಳಿಗೆ ಬ್ಲ್ಯಾಕ್ ಪೋರ್ಸಲಿನ್ ಎಂದು ಹೆಸರಿಡಲಾಯಿತು. ನಸುನೀಲಿ, ಕಡುನೀಲಿ ಬಣ್ಣದ ವಿಶಿಷ್ಟ ಬಗೆಯ ಪಿಂಗಾಣಿಯನ್ನು ಮಾಡಿ ಹೆಸರು ಗಳಿಸಿದನು. ಅದಕ್ಕೆ "ಜಸಪರ್‌ವ್ಹೇರ್" ಎಂದು ಹೆಸರಿಡಲಾಯಿತು. ರಷ್ಯಾ ದೇಶದ ಕ್ಯಥರಿನ್‌ಗೆ ೯೫೨ ಮಣ್ಣಿನ ಬಗೆ ಬಗೆಯ ಸಾಮಾನುಗಳನ್ನು ಮಾಡಿಕೊಟ್ಟು ಹೆಸರು ಗಳಿಸಿದನು. ಪ್ರಸಿದ್ಧ ವಿಜ್ಞಾನಿ ಚಾರ್ಲಸ್ ಡಾರ್ವಿನ್ ವೆಡ್ಗವುಡ್‌ನ ಮೊಮ್ಮಗ. ಇವನು ಕುಂಭಾರಿಕೆಯ ವಾತಾವರಣದಲ್ಲೇ ಬೆಳೆದವನೆಂದು ತಿಳಿದು ಬರುತ್ತದೆ. ಬ್ರಿಟನ್ನಿನ ಕೆಲವು ಕುಂಭವಸ್ತು ಸಂಗ್ರಹಾಲಯಗಳಿಗೆ ವೆಡ್ಗವುಡ್‌ನ ಹೆಸರನ್ನಿಟ್ಟು ಗೌರವಿಸಲಾಗಿದೆ.

**ಬರ್ನಾರ್ಡ್‌ಲೀಚ್ - ೨೦ನೇ ಶತಮಾನ**

ಇವನು ಬ್ರಿಟಿಷ್ ಕುಂಭಕಾರ. ೧೮೮೭ರಲ್ಲಿ ಇಂಗ್ಲೀಷ್ ದಂಪತಿಗಳಿಗೆ ಹಾಂಕಾಂಗ್‌ನಲ್ಲಿ ಜನಿಸಿದ. ಇವನ ಬಾಲ್ಯದ ವಿದ್ಯಾಭ್ಯಾಸ ಇಂಗ್ಲೆಂಡಿನಲ್ಲಿ ನಡೆಯಿತು. ಮುಂದೆ ಜಪಾನಿಗೆ ಹೋಗಿ ಅಲ್ಲಿ ಹನ್ನೊಂದು ವರುಷ ಕುಂಭ ಕಲೆಯಲ್ಲಿ ತರಬೇತಿ ಪಡೆದು ೧೯೨೦ರಲ್ಲಿ ಆತನ ಗೆಳೆಯ ಷೋಜಿಹಮ್ಡನೊಂದಿಗೆ ಇಂಗ್ಲೆಂಡಿಗೆ ಮರಳಿ ಬಂದನು. ಇವರಿಬ್ಬರು ಜೊತೆಯಾಗಿ ಆಧುನಿಕ ಆವಿಗೆಯ ರಚನೆಯಲ್ಲಿ ಶ್ರಮಿಸಿದರಲ್ಲದೆ, ಹೊಸ ಮಾದರಿಯ ಕುಂಭಗಳನ್ನು ಮಾಡಿ ಪ್ರದರ್ಶನ ನಡೆಸಿದರು. ಕುಂಭ ಕಲೆಯ ಕುರಿತು ಹಲವಾರು ಉಪನ್ಯಾಸಗಳನ್ನು ಬರ್ನಾರ್ಡ್ ಲೀಚ್ ನೀಡಿದನು. ಅವನು ಇಂಗ್ಲೀಷ್‌ನಲ್ಲಿ ಬರೆದ "Potters Book" (ಪಾಟರ್ಸ್ ಬುಕ್) ಬಹಳ ಪ್ರಸಿದ್ಧಿಪಡೆಯಿತು. ೧೯೪೦ರಲ್ಲಿ "ಸ್ಟುಡಿಯೋ ಪಾಟರಿಯ ಕುರಿತು ಬರೆದ ಪುಸ್ತಕ ವಿಶ್ವದಾದ್ಯಂತ ಮೆಚ್ಚುಗೆ ಗಳಿಸಿತು. "ಸ್ಟುಡಿಯೋ ಪಾಟರಿಯ ಜನಕ'ನೆಂದು ಆತನನ್ನು ಕರೆಯುವರು. ಬರ್ನಾರ್ಡ್ ಲೀಚ್‌ನ

ಹೆಂಡತಿ, ಮಕ್ಕಳು ಇಡೀ ಕುಟುಂಬವೇ ಆಧುನಿಕ ಕುಂಭಕಲೆಗೆ ತಮ್ಮ ಜೀವನವನ್ನು ಧಾರೆ ಎರೆದರು. ಆಧುನಿಕ ಕುಂಭಕಲೆಯ ಇತಿಹಾಸದಲ್ಲಿ ಬರ್ನಾರ್ಡ್ ಲೀಚ್ ಹೆಸರು ಅಜರಾಮರ.

## ಷೋಜಿ ಹಮ್ದಾ (Shoji Hamda) - ೨೦ನೇ ಶತಮಾನ

ಪ್ರಪಂಚದ ಆಧುನಿಕ ಕುಂಭಕಲೆಯ ಪರಿಣತರಲ್ಲಿ ಜಪಾನಿನ ಷೋಜಿ ಹಮ್ದಾಕೂಡ ಒಬ್ಬರು. ಸ್ಟುಡಿಯೋ ಪಾಟರಿಯ ಕಲಾವಿದರ ಮೇಲೆ ಈತನ ಪ್ರಭಾವ ಅಪಾರವಾದದ್ದು ೧೮೯೪ರಲ್ಲಿ ಜನಿಸಿದ ಷೋಜಿ ಹಮ್ದಾ ಭಾರತದ ಕುಂಭ ತಜ್ಞ ಗುರು ಚರಣ ಸಿಂಗ್‌ನ ಸಮಕಾಲೀನನು. ಪ್ರಸಿದ್ಧ ಕುಂಭ ಕಲಾ ಪರಿಣತನಾದ ಬರ್ನಾರ್ಡ್ ಲೀಚನ ಜೊತೆಗೂಡಿ ಕೆಲಸ ಮಾಡಿ ಸಾಂಪ್ರದಾಯಿಕ ಕುಂಭಕಲೆಯಲ್ಲೂ, ಸ್ಟುಡಿಯೋ ಪಾಟರಿಯಲ್ಲೂ ಪರಿಣತಿಯನ್ನು ಪಡೆದನು.

ಪ್ರಾಯೋಜಿಕತೆ ಮತ್ತು ಸೌಂದರ್ಯ ಎರಡರ ಮಿಳಿತದ ಅವನು ಮಾಡಿದ ಕಲ್‌ಮಡಿಕೆಗಳು ಜಪಾನಿನಾದ್ಯಂತ ಜನಪ್ರಿಯವಾದವು. ಸುಮಾರು ಐದು ದಶಕಗಳ ಕಾಲ ಕುಂಭಾರಿಕೆಯಲ್ಲಿ ತನ್ನನ್ನು ತೊಡಗಿಸಿಕೊಂಡ ಹಮ್ದಾ ಕರಕುಶಲ ಕಲೆಯ ವಸ್ತು ಸಂಗ್ರಹಾಲಯವನ್ನು ಸ್ಥಾಪಿಸಿದನು.

ನಿಗರ್ವಿಯು ಸರಳಜೀವಿಯು ಆಗಿದ್ದ ಹಮ್ದಾ ತನ್ನ ಹೆಸರನ್ನು ಮಡಕೆಗಳ ಮೇಲೆ ಮುದ್ರಿಸಲಿಲ್ಲ. ಆತನ ಪ್ರಕಾರ ಮಡಕೆಗಳು ಸಿದ್ಧವಾಗುವದಿಲ್ಲ. "ಮನಸ್ಸು ಬುದ್ಧಿ ಕೈಚಳಕದಿಂದ ರೂಪಗೊಳಿಸುವ ಮಣ್ಣಿನ ಕಲಾಕೃತಿಗಳಿಗೆ ರುಜುವಾತಿನ ಅಗತ್ಯವಿಲ್ಲ" ಮಡಕೆಗಳು ತನ್ನಿಂದ ತಾನೆ ನೈಜವಾಗಿ ರೂಪಗೊಳ್ಳಬೇಕೆಂಬುದು ಆತನ ವಿಚಾರವಾಗಿತ್ತು.

## ಮೈಕಲ್ ಕಾರ್ಡಿವ್ (Michael Cardew) - ೨೦ನೇ ಶತಮಾನ

ಇವನು ಬರ್ನಾರ್ಡ್ ಲೀಚ್‌ನ ಹತ್ತಿರ ಎರಡು ವರುಷ ಕುಂಭಾರಿಕೆಯಲ್ಲಿ ತರಬೇತಿ ಪಡೆದು, ಸ್ಟುಡಿಯೋ ಪಾಟರಿಯ ಕ್ಷೇತ್ರದಲ್ಲಿ ಲೀಚ್‌ನ ಹೆಜ್ಜೆಯಲ್ಲಿ ಹೆಜ್ಜೆಯಿಟ್ಟವನೆಂದು ಹೇಳಬಹುದು. ಕುಂಭಕಲೆಗೆ ಕುಂಚದಿಂದ ಬಣ್ಣಕೊಡುವ ಕಲೆಯಲ್ಲಿ ಮೈಕಲ್ ಪರಿಣಿತನಾಗಿದ್ದನು. ಸ್ಥಳೀಯವಾಗಿ ದೊರೆಯುವ ಸಾಮಗ್ರಿಗಳನ್ನು ಬಳಸಿ ಮಡಕೆಗಳನ್ನು ಸಿದ್ಧ ಪಡಿಸಬೇಕೆಂಬುದು ಅವನ ವಿಚಾರವಾಗಿತ್ತು. ಸ್ಟುಡಿಯೋ ಪಾಟರಿಯ ವಸ್ತುಗಳನ್ನು ಕಟ್ಟಿಗೆಯನ್ನು ಇಂದನಕ್ಕಾಗಿ ಬಳಸಿ ಆವಿಗೆಯಲ್ಲಿಟ್ಟು ಸುಡುತ್ತಿದ್ದನು. ೧೯೫೦ರಿಂದ

೧೯೬೫ರವರೆಗೆ ನೈಜೀರಿಯಾದ ಸರಕಾರಿ ಕುಂಭೋದ್ಯಮದ ವಿಭಾಗದಲ್ಲಿ ಉನ್ನತ ಹುದ್ದೆಯಲ್ಲಿ ಕೆಲಸ ಮಾಡಿ ಅಭುಜಾದಲ್ಲಿ ಕುಂಬಾರಿಕೆಯ ತರಬೇತಿ ಕೇಂದ್ರವನ್ನು ಸ್ಥಾಪಿಸಿದನು. ಅಂತರಾಷ್ಟ್ರೀಯ ಕುಂಭ ಕಲಾ ಪ್ರದರ್ಶನದಲ್ಲಿ ಮೈಕಲ್‌ನ ಮಣ್ಣಿನ ಪಾತ್ರೆಗಳು ಪ್ರದರ್ಶಿಸಲ್ಪಟ್ಟವು.

**ವಿಲಿಯಂ ಸ್ಟೈಟೆ ಮುರ್ರೆ (William Staite Murray) – ೨೦ನೇ ಶತಮಾನ**

ಲಂಡನಿನಲ್ಲಿ ಜನಿಸಿದ ಮುರ್ರೆ ಸ್ಟುಡಿಯೋ ಪಾಟರಿಯ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸಿದನು. ಕ್ಯಾಂಬರ್‌ವೆಲ್ ಕರಕುಶಲ ಶಾಲೆಯಲ್ಲಿ ಮೂರು ವರ್ಷ ಕುಂಬಾರಿಕೆಯಲ್ಲಿ ತರಬೇತಿ ಪಡೆದನು. ಬಣ್ಣ ಹಾಕುವದರಲ್ಲಿ ಹೆಚ್ಚು ಆಸಕ್ತಿ ಹೊಂದಿದ್ದ ಮುರ್ರೆ ಸೆರಾಮಿಕ್ ಕೈಗಾರಿಕೆಯಲ್ಲೂ ಅಷ್ಟೇ ಆಸಕ್ತಿ ಹೊಂದಿದ್ದನು. ೧೯೧೯ರಲ್ಲಿ ತನ್ನದೇ ಆದ ಸ್ಟುಡಿಯೋ ಪಾಟರಿ ಪ್ರಾರಂಭಿಸಿ, ಹೆಚ್ಚು ಉಷ್ಣತೆಯ ಕಲ್ ಮಡಕೆಗಳನ್ನು ತಯಾರಿಸತೊಡಗಿದನು. ೧೯೨೬ರಲ್ಲಿ ರಾಯಲ್ ಕಲಾ ಕಾಲೇಜಿನ ಮುಖ್ಯಸ್ಥನಾಗಿ ನೇಮಕಗೊಂಡನು. ೧೯೬೨ರಲ್ಲಿ ರೊಡೇಷಿಯಾದಲ್ಲಿ ಮರಣ ಹೊಂದಿದನು.

**ಸೂಸ್ಯೆ ಕೂಪರ್ (Susie Cooper) – ೨೦ನೇ ಶತಮಾನ**

ಈಕೆ ೧೯೦೨ರಲ್ಲಿ ಜನಿಸಿದಳು. ಬುರ್ಷೆಲಮ್ ಕಲಾ ಶಾಲೆಯಲ್ಲಿ ಚಿತ್ರಕಲೆ ಮತ್ತು ಮಾಡೆಲಿಂಗ್ ತರಬೇತಿ ಪಡೆದಳು. ನಂತರ ಕೆಲಕಾಲ ಅಲ್ಲಲ್ಲಿ ಕೆಲಸ ಮಾಡಿ ೧೯೨೯ರಲ್ಲಿ ಬುರ್ಷೆಲಮ್‌ನಲ್ಲಿ ಸೆರಾಮಿಕ್ ಕಂಪನಿ ತೆರೆದಳು. ಸೆರಾಮಿಕ್ ವಸ್ತುಗಳಿಗೆ ಲೆಥಾಗ್ರಫಿಯಿಂದ ಅಂದಗೊಳಿಸುವ ಹೊಸವಿಧಾನವನ್ನು ಆರಂಭಿಸಿದಳು. ಇಂಡಸ್ಟ್ರಿಯಲ್ ಸೆರಾಮಿಕ್ ರಚನೆಗಾಗಿ ೧೯೭೯ರಲ್ಲಿ ಗೌರವಿಸಲ್ಪಟ್ಟಳು.

**ಸ್ವೆಂಡಾ ಬೇಯರ್ (Svend Bayer) – ೨೦ನೇ ಶತಮಾನ**

೧೯೪೬ರಲ್ಲಿ ಡೇನಿಷ್ ದಂಪತಿಗಳ ಮಗನಾಗಿ ಉಗಾಂಡದಲ್ಲಿ ಜನಿಸಿದನು. ೧೯೬೫ರಿಂದ ೬೮ರಮರೆಗೆ ಭೂಗೋಳ ಮತ್ತು ಅರ್ಥಶಾಸ್ತ್ರದಲ್ಲಿ ಶಿಕ್ಷಣ ಪಡೆದನು. ನಂತರ ಮೂರು ವರ್ಷಗಳ ಕಾಲ ಕುಂಭಕಲೆಯ ಕುರಿತು ಮೈಕಲ್ ಕಾರ್ಡಿವ್ ಬಳಿ ತರಬೇತಿ ಪಡೆದನು. ಕುಂಭಕಲೆಯ ಕುರಿತು ಹೆಚ್ಚಿನ ತಿಳುವಳಿಕೆ ಪಡೆಯಲು ಜಪಾನ್ ಕೋರಿಯಾ ಮುಂತಾದ ದೇಶಗಳನ್ನು ತಿರುಗಿ ಸಾಕಷ್ಟು ಅನುಭವ ಪಡೆದು ಯು.ಎಸ್.ಎ.ದಲ್ಲಿ ಸ್ವತಂತ್ರವಾಗಿ ಕುಂಭ ತಯಾರಿಕಾ ಕಾರ್ಖಾನೆ ಆರಂಭಿಸಿದನು. ಮಡಕೆ ತಯಾರಿಕಾ ಆವಿಗೆಗಳನ್ನು ನಿರ್ಮಿಸುವುದರಲ್ಲಿ ಬೇಯರ್‌ನಿಗೆ ಅತಿ ಹೆಚ್ಚು ಆಸಕ್ತಿ ಇತ್ತು. ಇಂದನಕ್ಕೆ

ಕಟ್ಟಿಗೆಯನ್ನು ಬಳಸಿ ಮಡಕೆ ಸುಡುವ ಬೃಹತ್ತಾದ ಆವಿಗೆಗಳನ್ನು ತಾನೇ ಸ್ವತಃ ನಿರ್ಮಿಸಿದನು. ಮಣ್ಣು ಮತ್ತು ಕಟ್ಟಿಗೆ ಧಾರಾಳ ಸಿಗುವ ಹಳ್ಳಿಯೊಂದರಲ್ಲಿ ನೆಲೆಯೂರಿ ಕುಂಭಾಗಾರಿಕೆಯಲ್ಲಿ ನಿರತನಾಗಿದ್ದ ಬೇಯಿರ್ ೧೯೭೫ರಲ್ಲಿ ಮರಣವಾದನು.

## ಜಾನ್ ಲೀಚ್ (John Leach) - ೨೦ನೇ ಶತಮಾನ

ಜಾನ್ ಲೀಚ್ ಬೇರೆಯಾರೂ ಅಲ್ಲ ಸ್ಟುಡಿಯೋ ಪಾಟರಿಯ ಜನಕನೆಂದು ಹೆಸರಾದ ಬರ್ನಾರ್ಡ ಲೀಚ್‌ನ ಮೊಮ್ಮಗ. ಇವನು ೧೯೩೯ರಲ್ಲಿ ಸೆಂಟ್ ಇವೇಸ್‌ನಲ್ಲಿ ಜನಿಸಿದನು. ತಂದೆ ಡೇವಿಡ್ ಲೀಚ್. ಅಜ್ಜ ಮತ್ತು ತಂದೆಯವರ ಕುಂಭಕಲೆಯನ್ನು ಮುಂದುವರಿಸಿ ಕುಂಭಕಲೆಯಲ್ಲಿ ಹೆಸರು ಪಡೆದನು. ೧೯೮೪ರಲ್ಲಿ ಕರಕುಶಲ ಸಂಸ್ಥೆಯಿಂದ ಜಾನ್ ರಸ್ಕಿನ್ ಪ್ರಶಸ್ತಿಪಡೆದನು. ಮನೆ ಬಳಕೆಯ ಅಂದ ಚೆಂದದ ಮಡಕೆ ಮಾಡುವದು ಅವನ ಅತ್ಯಂತ ಖುಷಿಯ ಕೆಲಸವಾಗಿತ್ತು.

## ಗ್ರಾಹಂ ಫ್ಲೈಟ್ (Grahm Flight) - ೨೦ನೇ ಶತಮಾನ

ಈತ ಇಂಗ್ಲಂಡಿನ ಕುಂಭಕಾರ ಕ್ಲೀವಲೆಂಡ್ ನಿವಾಸಿ ಕುಂಭಾರಿಕೆಯ ಕಾರ್ಯಾಗಾರ ನಡೆಸುವದರ ಜೊತೆಗೆ ಸುಮಾರು ೨೦ ವರುಷದಿಂದ ಕುಂಭಾರಿಕೆಯ ಶಿಕ್ಷಕನಾಗಿದ್ದಾನೆ. ಈತನ ಬಳಿ ಕಲಿತ ಅನೇಕ ಕುಂಭಕಾರರು ಪರಿಣಿತರಾಗಿದ್ದಾರೆ. ಕುಂಬಾರಿಕೆಯ ಅನುಭವವನ್ನು ಇಂಗ್ಲೀಷ್‌ನಲ್ಲಿ ಬರೆದ ''ಇಂಟ್ರಡಕ್ಷನ್ ಟು ಸೆರಾಮಿಕ್ಸ್'' ಎಂಬ ಪುಸ್ತಕದಲ್ಲಿ ಎರಕ ಹೊಯ್ದಿದ್ದಾನೆ.

## ಪದ್ಮ ಶ್ರೀ ಗುರುಚರಣ ಸಿಂಗ್ - ೨೦ನೇ ಶತಮಾನ

ಗುರುಚರಣ ಸಿಂಗ್ ೨೬ ಅಕ್ಟೋಬರ್, ೧೮೯೯ರಲ್ಲಿ ಶ್ರೀನಗರದಲ್ಲಿ ಜನಿಸಿದರು. ಈತನು ಓದಿದ್ದು ಭೂಗರ್ಭಶಾಸ್ತ್ರವಾದರು, ಖ್ಯಾತಿಯಾದದ್ದು ಕುಂಭ ಕಲೆಯಲ್ಲಿ ಇಟ್ಟಿಗೆಯ ಕಾರ್ಖಾನೆಯಲ್ಲಿ ಕೆಲಸಕ್ಕೆ ಸೇರಿದ ಗುರುಚರಣಸಿಂಗ್, ಅಲ್ಲಿಯ ಸೆರಾಮಿಕ್ ಕಲೆಗೆ ಮಾರು ಹೋಗಿ ಕುಂಭ ಕಲೆಯನ್ನು ಕರಗತಮಾಡಿಕೊಂಡನು. ಚೀನಾ ಜಪಾನಿಗೆ ಭೇಟಿ ನೀಡಿ ಅಲ್ಲಿನ ಕುಂಭ ಕಲೆಯ ಜ್ಞಾನವನ್ನು ಪಡೆದನು. ಪ್ರಖ್ಯಾತ ಕುಂಭತಜ್ಞನಾದ ಬರ್ನಾರ್ಡ್‌ಲೀಚ್‌ನನ್ನ ಭೇಟಿಮಾಡಿದನು. ಭಾರತಕ್ಕೆ ಮರಳಿ ಒಂದು ಸ್ಟುಡಿಯೋ ಪಾಟರಿಯನ್ನು ಹುಟ್ಟಿಹಾಕಿ ಅದರ ಬೆಳವಣಿಗೆಗೆ ಕಾರಣನಾದನು. ದೆಹಲಿಯ ಬ್ಲೂ ಪಾಟರಿಯ ಜನಕನೆಂದೇ ಹೆಸರು ಪಡೆದನು. 'ಪಾಟರಿ ಇನ್ ಇಂಡಿಯಾ' ಎಂಬ ಅಮೂಲ್ಯವಾದ ಪುಸ್ತಕವನ್ನು ಗುರುಚರಣಸಿಂಗ್ ಬರೆದನು. ಕುಂಭಕಲೆಯ ಪ್ರತಿಭೆಯನ್ನು ಗುರುತಿಸಿ, ಆತನಿಗೆ ಪದ್ಮಶ್ರೀಯನ್ನು ಭಾರತ ಸರಕಾರ ನೀಡಿತು.

## ಅಮರೀಶ್ ಭಾಯ್, ಮೋತಿಭಾಯ್ ಪ್ರಜಾಪತಿ - ೨೦ನೇ ಶತಮಾನ

ವಿಶ್ವ ಕುಂಭೋದ್ಯಮ ಪರಿಣತರ ಸಾಲಿನಲ್ಲಿ ಸೇರಿಸಬಹುದಾದ ಭಾರತೀಯ ಕುಂಭೋದ್ಯಮಿ ಎಂದರೆ, ಗುಜರಾತಿನ ಅಮರೀಶ ಭಾಯ್ ಮೋತಿಭಾಯ್ ಪ್ರಚಾಪತಿ. ಈತನು ೧೯೩೪ರಲ್ಲಿ ಗುಜರಾತ್ ರಾಜ್ಯದ ಸುಲ್ತಾನಪುರದಲ್ಲಿ ಬಡ ಕುಂಬಾರ ಮನೆತನದಲ್ಲಿ ಹುಟ್ಟಿದನು. ಶಾಲೆಯ ಮೆಟ್ಟಿಲೇರದ ಈ ಬಾಲಕ ತಂದೆಯೊಂದಿಗೆ ಕುಲಕಸುಬಾದ ಕುಂಬಾರಿಕೆಯನ್ನು ಕಲಿಯತೊಡಗಿದ. ಕೇವಲ ಆರು ವರ್ಷ ಇರುವಾಗ ತಂದೆಯೊಂದಿಗೆ, ಮೋರ್ವಿಗೆ ಹೋಗಿ, ಪರಶುರಾಮ ಮಡಕೆ ತಯಾರಿಕಾ ಕಾರ್ಖಾನೆ ಸೇರಿದ. ಈ ಬಾಲ ಕಾರ್ಮಿಕನಿಗೆ ಆಗ ದೊರೆಯುತ್ತಿದ್ದ ವೇತನ ದಿನಕ್ಕೆ ಎರಡಾಣೆ (೧೨ ಪೈಸೆ), ಇದೇ ಬಾಲಕ ಮುಂದೊಂದು ದಿನ ಭಾರತದ, ಅತಿ ದೊಡ್ಡ ಕುಂಭೋದ್ಯಮಿ ಯಾಗುತ್ತಾನೆಂದು ಯಾರು ತಾನೆ ಎಣಿಸಲು ಸಾಧ್ಯ? ಅದು ಈಗ ಇತಿಹಾಸ.

ಮೋತಿಭಾಯ್ ಮೋರ್ವಿಯನ್ನು ಬಿಟ್ಟು ಕಾಥೆವಾಢದ ಕಾರ್ಖಾನೆಗಳಲ್ಲಿ ಕೆಲಕಾಲ ನಿಂತ. ಮೋತಿಭಾಯ್ ಕುಂಭೋದ್ಯಮದ ಒಂದೊಂದೆ ಮೆಟ್ಟಲು ಏರತೊಡಗಿದನು. ಅವಿರತ ಪ್ರಯತ್ನ, ಜಾಣ್ಮೆ, ತಾಳ್ಮೆ, ಎಲ್ಲವನ್ನು ಮೈಗೂಡಿಸಿಕೊಂಡು ಬೆಳೆದ ಮೋತಿಭಾಯ್ ಏಳು ಕಾರ್ಖಾನೆಗಳ ಒಡೆಯನಾದ. ಎರಡಾಣೆ ಕೂಲಿಗಾಗಿ ಪರದಾಡುತ್ತಿದ್ದ ಮೋತಿಭಾಯ್ ಸಾವಿರಾರು ಕಾರ್ಮಿಕರನ್ನು ತನ್ನ ಕಾರ್ಖಾನೆಗಳಲ್ಲಿ ದುಡಿಮೆಗೆ ಸೇರಿಸಿಕೊಂಡ. ಏಳು ಕಾರ್ಖಾನೆಗಳಲ್ಲಿ, ಐದು ಕಾರ್ಖಾನೆಗಳು ಮಂಗಳೂರು ಹಂಚನ್ನು ತಯಾರಿಸಲು ಮೀಸಲಾಗಿವೆ. ಮೆಸರ್ಸ ಪ್ರಜಾಪತಿ ಹಂಚಿನ ಕಾರ್ಖಾನೆ ವರ್ಷ ಒಂದಕ್ಕೆ ೪೦ ಲಕ್ಷಕ್ಕೂ ಹೆಚ್ಚು ಹಂಚುಗಳನ್ನು ದೇಶ ವಿದೇಶಕ್ಕೆ ಕಳಿಸುತ್ತದೆ. ರಫ್ತಿಗಾಗಿ, ಕಾರ್ಖಾನೆ ೮೭-೮೮, ೮೯-೯೦, ೯೧-೯೨ ಹೀಗೆ ಮೂರು ಬಾರೆ, ಗುಜರಾತ್ ಸೆರಾಮಿಕ್ ಸಂಸ್ಥೆಯಿಂದಲೂ ಈ ಕಂಪನಿಗೆ ಪುರಸ್ಕಾರ ದೊರೆಯಿತು. ಮೋತಿಭಾಯ್ ಒಡೆತನದ ಎರಡು ಕಂಪನಿಗಳು ಸೆರಾಮಿಕ್ ವಸ್ತುಗಳನ್ನು ತಯಾರಿಸಿ ದೇಶ, ವಿದೇಶಗಳಿಗೆ ರಫ್ತು ಮಾಡುತ್ತವೆ. ಮೋರ್ವಿಯ ಮೋತಿಭಾಯ್ ಕುಂಭೋದ್ಯಮದ ಕಾರ್ಖಾನೆಗಳು ಜಗತ್ತಿನ ಕುಂಭೋದ್ಯಮ ಭೂಪಟದಲ್ಲಿ ಸ್ಥಾನ ಪಡೆದಿವೆ. ಬಡ ಕುಂಭಾರನ ಮಗನೊಬ್ಬ ಭಾರತದ ಆಧುನಿಕ ಕುಂಭೋದ್ಯಮದ "ವೆಡ್ಗ್ ವುಡ್" ಎಂದು ಹೆಸರು ಪಡೆದ.

## ಕುಂಭ ತಜ್ಞೆ ನೀಲಮಣಿದೇವಿ - ೨೦ನೇ ಶತಮಾನ

ತನ್ನ ಬುದ್ಧಿವಂತಿಕೆ ಹಾಗೂ ಕುಶಲತೆಯಿಂದ ಕುಂಭಕಲೆಯನ್ನು ಕಲಾತ್ಮಕ ವೃತ್ತಿಯಾಗಿಸಿ ಕೊಂಡ ಮಣಿಪುರದ ನೀಲಮಣಿ ದೇವಿಗೆ "ತುಳಸಿಸನ್ಮಾನ್" ಹಾಗೂ ಮಧ್ಯಪ್ರದೇಶ

ಸರ್ಕಾರದಿಂದ ಐವತ್ತು ಸಾವಿರ ರೂಪಾಯಿಗಳ ಬಹುಮಾನ ದೊರೆತಿದೆ. ಅಂತರರಾಷ್ಟ್ರೀಯ ಜನಪದ ಕಲಾ ಪ್ರದರ್ಶನದಲ್ಲಿ ಇಂಟರ್‌ನ್ಯಾಷನಲ್ ಮ್ಯೂಸಿಯಂ ಆಫ್ ವರ್ಲ್ಡ್ ಫೋಕ್, ಆರ್ಟ್ ಗ್ಯಾಲರಿಗಳಲ್ಲಿ ಈ ಕಲಾತ್ಮಕ ಮಡಕೆಗಳು ಪ್ರದರ್ಶನಗೊಂಡಿವೆ. ತನ್ನ ತಾಯಿಯಿಂದ ಕಲಿತುಕೊಂಡ ಈ ವಿದ್ಯೆಯಿಂದ ಈಕೆ ವಿವಿಧ ರೀತಿಯ ಮಡಕೆಗಳನ್ನು ಸೃಷ್ಟಿಸಬಲ್ಲಳು.

ಖರಂಗ್ (ಮದ್ಯಗಳನ್ನು ಶೇಖರಿಸಿಡುವ ಮಣ್ಣಿನ ಮಡಕೆ), ಚೆಂಗ್‌ಪು (ಅಕ್ಕಿ ತುಂಬಿಸುವ ಮಡಕೆ), ಖುಜ್ಯಾ (ನೀರು ತುಂಬಿಸಿಡುವ ಮಡಕೆ), ಯನ್ (ತರಕಾರಿ ಬೇಯಿಸುವ ಮಡಕೆ) ಮೊದಲಾದ ಮಡಕೆಗಳನ್ನು ತನ್ನ ಏಳನೇ ವಯಸ್ಸಿನಲ್ಲೇ ತಯಾರಿಸುತ್ತಿದ್ದಳು. ಈಕೆ ಕುಂಬಾರ ಚಕ್ರವನ್ನು ಉಪಯೋಗಿಸದೆ ಮಣಿಪುರದ ಸಾಂಪ್ರದಾಯಿಕ ಶೈಲಿಯಲ್ಲಿ ಇವುಗಳನ್ನು ಕೈಯಿಂದಲೆ ಮಾಡುವಳು.

ಆಧಾರ : ಕುಂಬಾರ ಜನಾಂಗ

## ೧೧. ಕರ್ನಾಟಕದಲ್ಲಿ ಕುಂಭಕಲೆಗೆ ಹೆಸರು ಪಡೆದ ಊರುಗಳು

| ಮಡಕೆ, ಪ್ರತಿಮೆಯ ಹೆಸರು | ಊರಿನ ಹೆಸರು |
|---|---|
| ಕೊಡ | ಹರಿಹರ, ಹುಬ್ಬಳ್ಳಿ, ದಾವಣಗೆರೆ ಜಿಲ್ಲೆಯ ನ್ಯಾಮತಿ, ಶಿವಮೊಗ್ಗ ಜಿಲ್ಲೆಯ ಸಾಸ್ವಿಹಳ್ಳಿ, ಬಿಜಾಪುರ ತಾಲ್ಲೂಕಿನ ಚಿಮ್ಮಲಗಿ |
| ಹರವಿ (ಪಡಗ) | ಇಲಕಲ್ಲು, ಗುಳೇದಗುಡ್ಡ, ನಿಡಗುಂದಿ |
| ತತ್ರಾಣಿ | ಹಾವೇರಿ ಜಿಲ್ಲೆಯ ಲಕ್ಷ್ಮೇಶ್ವರ, ಯಕ್ಕುಂಡಿ ಸವದತ್ತಿ, ತಾಲ್ಲೂಕು ದಾವಣಗೆರೆ ಜಿಲ್ಲೆಯ ಕುಂಚೂರು. |
| ಬಾನಿ | ಶಿವಮೊಗ್ಗ ಜಿಲ್ಲೆಯ ಹಾರ್ನಳ್ಳಿ |
| ಕುಡಿಕೆ | ಬೇವೂರು, ಬೆಂಗಳೂರು ಗ್ರಾಮಾಂತರ ಜಿಲ್ಲೆ |
| ಪಣತಿ (ಹಣತಿ) | ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಬೇವೂರು |
| ಎಲ್ಲ ಬಗೆಯ ಮಡಕೆಗಳು ಮತ್ತು ಶೀತಕ ಹಾಗೂ ಹೂವಿನ ಕುಂಡಗಳು | ಬೆಳಗಾವಿ ಜಿಲ್ಲೆಯ ಖಾನಾಪುರ |
| ಮಣ್ಣಿನ ಮಕ್ಕಳಾಟಿಕೆ ಸಾಮಾನುಗಳು | ಚೆನ್ನಪಟ್ಟಣ (ಈಗ ಮಣ್ಣಿನ ಮಕ್ಕಳಾಟಿಕೆ ಸಾಮಾನುಗಳನ್ನು ಮಾಡುತ್ತಿಲ್ಲ) |
| ಮಣ್ಣಿನ ಗಂಟೆ | ಬೆಳಗಾವಿ ಜಿಲ್ಲೆಯ ಖಾನಾಪುರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಬೇವೂರು |
| ಅಡುಗೆ ಒಲೆ | ಜಮಖಂಡಿ ತಾಲ್ಲೂಕಿನ ತೇರದಾಳ, ಬಿಜಾಪುರ ತಾಲ್ಲೂಕಿನ ಚಿಮ್ಮಲಗಿ, ಬಾಗಲಕೋಟೆ ಜಿಲ್ಲೆಯ ಬೇಲೂರು, ತಂದೂರಿ ಒಲೆಗೆ ಹುಬ್ಬಳ್ಳಿ ಪ್ರಸಿದ್ಧವಾಗಿದೆ. |
| ಮಾಳಿಗೆಗೆ ಹೊದಿಸುವ ಕಪ್ಪು ಮತ್ತು ಕೆಂಪು ಹಂಚು | ಬೆಂಡಿಗೇರಿ ಬೆಳಗಾವಿ ತಾಲ್ಲೂಕು, ಕೋಲಾರ ಜಿಲ್ಲೆಯ ಮಾಲೂರು ಮತ್ತು ಮಂಗಳೂರಿನ, ಮಂಗಳೂರು ಹಂಚು |
| ಹರಕೆ ಮೂರ್ತಿ | ಮಂಗಳೂರು ಜಿಲ್ಲೆಯ ಉಜಿರೆ |
| ಗಣಪತಿ | ಗಣಪತಿ ಮೂರ್ತಿಯನ್ನು ಕರ್ನಾಟಕದಾದ್ಯಂತ |

| | |
|---|---|
| | ಎಲ್ಲಾ ಕುಂಬಾರರು ಮಾಡುವರು ಅದರಲ್ಲಿ ಪ್ರಸಿದ್ಧ ಊರುಗಳೆಂದರೆ ಶಿವಮೊಗ್ಗ ಭದ್ರಾವತಿ, ಲಕ್ಷ್ಮೇಶ್ವರ, ದಾವಣಗೆರೆ, ಹರಿಹರ, ಬೆಳಗಾವಿ, ಬೆಂಗಳೂರು ಜಿಲ್ಲೆಯ ಮಾಗಡಿ, ಹಾವೇರಿ ಜಿಲ್ಲೆಯ ಶಿಗ್ಗಾವಿ, ಬಾಗಲಕೋಟೆ, ಆಳೆತ್ತರದ ಬಗೆ ಬಗೆಯ ಮಣ್ಣಿನ ಶಿಲ್ಪಗಳನ್ನು ಮಾಡುವದರಲ್ಲಿ ಭದ್ರಾವತಿಯ ಶಾಂತಲಾ ಆರ್ಟ್ಸ್‌ನ ಎಸ್.ಜಿ. ಶಂಕರಮೂರ್ತಿ ಪ್ರಸಿದ್ಧರಾಗಿದ್ದಾರೆ. |
| ಟೆರ್ರಾಕೊಟಾ ವಸ್ತುಗಳು | ಬೆಂಗಳೂರು, ಬೆಳಗಾವಿ ಜಿಲ್ಲೆಯ ಖಾನಾಪುರ ಬಂಟ್ವಾಳ ದಕ್ಷಿಣ ಕನ್ನಡ ಜಿಲ್ಲೆ. |
| ಹುಂಡಿ | ಭದ್ರಾವತಿ ತಾಲ್ಲೂಕಿನ ಸೀಗೆಬಾಗಿ |
| ಕೆಂಪುಗಡಿಗೆ ಟೆರ್ರಾಕೊಟಾ ವಸ್ತುಗಳು | ಗುಂಜಿ, ಖಾನಾಪುರ ತಾಲ್ಲೂಕು, ದ.ಕ. ಜಿಲ್ಲೆಯ ಪುತ್ತೂರು ತಾಲ್ಲೂಕಿನ ಕೌಡಿಚಾರ್ |
| ಚಿಲುಮೆ | ಬಾಗಲಕೋಟೆ ತಂಬಾಕು ಸೇದುವ ಚಿಲುಮೆ ಗಳಿಗೆ ಪ್ರಸಿದ್ಧವಾಗಿದೆ ದೂರ, ದೂರದ ಊರು ಗಳಿಗೆ ಮಾರಾಟಕ್ಕೆ ಒಯ್ಯುವರು. |
| ಬಸಿಪೈಪು | ದಾವಣಗೆರೆ, ಶಿವಮೊಗ್ಗ |
| ಮಸಿಕುಡಿಕೆ (ಮದ್ದಿನ ಕುಡಿಕೆ) (Fire works) | ದಾವಣಗೆರೆ ಜಿಲ್ಲೆಯ ಚೆನ್ನಗಿರಿ ಕುಂಬಾರರು ಮಸಿಕುಡಿಕೆ ಮಾಡುವುದರಲ್ಲಿ ಪ್ರಸಿದ್ಧರಾಗಿದ್ದಾರೆ. ಸ್ವಾತಂತ್ರ ಯೋಧ ಚೆನ್ನಗಿರಿಯ ಎಸ್.ಕೆ. ಹನುಮಂತಪ್ಪನವರ ಮನೆಯವರು ನಾಲ್ಕೈದು ದಶಕಗಳಿಂದ ಮಸಿಕುಡಿಕೆ ಮಾಡುವದನ್ನು ತಮ್ಮ ವೃತ್ತಿಯನ್ನಾಗಿ ಮಾಡಿಕೊಂಡಿದ್ದಾರೆ. |
| ಗ್ರಾಮೀಣ ಶೀತಕ್ (ನಾ) (Refrigerator) | ಬೆಳಗಾವಿ ಜಿಲೆಯ ಖಾನಾಪುರ ಮತ್ತು ಮೈಸೂರು ಜಿಲ್ಲೆಯ ದೂರ ಗ್ರಾಮ |

*ಆಧಾರ : ಕುಂಬಾರ ಜನಾಂಗ*

# ೧೨. ಕರ್ನಾಟಕದಲ್ಲಿ ನೆಲಸಿರುವ ಕುಂಬಾರ ಜನಾಂಗದ ಪ್ರಭೇದಗಳು

೧. ಲಿಂಗಾಯತ ಕುಂಬಾರರು

೨. ದಕ್ಷಿಣ ಕನ್ನಡ ಜಿಲ್ಲೆಯ ಕುಲಾಲರು

೩. ಉತ್ತರ ಕನ್ನಡ ಜಿಲ್ಲೆಯ ಗುನಗರು

೪. ಸಜ್ಜನ ಕುಂಬಾರರು

೫. ಕೊಡಗು ಜಿಲ್ಲೆಯ ಕುಂಬಾರರು

೬. ತೆಲುಗು ಕುಂಬಾರರು (ಕುಮ್ಮರ)

೭. ತಮಿಳು ಕುಂಬಾರರು (ಕುಶವನರು)

೮. ಮರಾಠ ಕುಂಬಾರರು

೯. ಕೊಂಕಣಿ ಕುಂಬಾರರು

೧೦. ಮಲೆಯಾಳಿ ಕುಂಬಾರರು

೧೧. ಬೀದರ್ ಜಿಲ್ಲೆಯ ಲಾಡ ಕುಂಬಾರರು

೧೨. ಬೀದರ್ ಜಿಲ್ಲೆಯ ಗೊಂಬಿ ಕುಂಬಾರರು

೧೩. ಬಯಲು ಕುಂಬಾರರು

೧೪. ರೆಡ್ಡಿ ಕುಂಬಾರರು

೧೫. ಕ್ಷತ್ರಿಯ ಕುಂಬಾರರು

೧೬. ಉತ್ತರ ಭಾರತದ ಪ್ರಜಾಪತಿ ಕುಂಬಾರರು

## ೧೩. ಭಾರತದ ವಿವಿಧ ರಾಜ್ಯಗಳಲ್ಲಿ ಕರೆಯಲ್ಪಡುತ್ತಿರುವ ಕುಂಬಾರ ಜನಾಂಗದ ಬೇರೆ, ಬೇರೆ ಮುಖ್ಯ ಹೆಸರುಗಳು

| | | |
|---|---|---|
| ಕರ್ನಾಟಕ | : | ಕುಂಬಾರ (Kumbar) |
| | | ಕುಲಾಲ (Kulala) |
| | | ಚಕ್ರಸಾಲಿ (chakrasali) |
| | | ಹಾಂಡ (Handa) |
| ಆಂಧ್ರ ಪ್ರದೇಶ | : | ಕುಮ್ಮರ (Kummara) |
| | | ಕುಮ್ರಾರ್ಲು (Kumrulu) |
| | | ಕುಲಾಲನ್ (Kulalan) |
| ತಮಿಳುನಾಡು | : | ಕುಶವನ್ (Kusavan) |
| | | ಕುಲಾಲನ್ (Kulalan) |
| ಕೇರಳ | : | ಕುಯಾರುನ್ (Kuyarun) |
| ಮಹಾರಾಷ್ಟ್ರ | : | ಕುಂಭಾರ (Kumbhara) |
| ಪಂಜಾಬ | : | ಕುಂಬಾರ (Kumbara) |
| | | ಗ್ಹುಮಿಯಾರ (Ghumiar) |
| | | ಕುಬಾ (Kuba) |
| ಒರಿಸ್ಸಾ | : | ಕುಂಭಾರೋ (Kumbaro) |
| ಅಸ್ಸಾಂ | : | ಕುಂವರೋ |
| ಕಾಶ್ಮೀರ್ | : | ಕ್ರಾಲ್ (Kral) |
| ಲಡಖ್ | : | ಫುಸ್ರಾಯಿ (phusrai) |
| ಉತ್ತರ ಪ್ರದೇಶ | : | ಕುಂಬಾರ (Kumbhara) |
| ಹಾಗೂ | | ಕುಮ್ಹಾರ (Kumhara) |
| ಭಾರತದ | | ಕುಭೇರ (Kubhara) |
| ಉತ್ತರ ಭಾಗ | | ಕುಮಾರ (Kumar) |
| | | ಕುಮಾರೋ (Kumaro) |
| | | ಕುಬಾರ (Kubar) |
| | | ಕುಭಾರ (Khubar) |
| | | ಪ್ರಜಾಪತಿ (prajapati) |

# ೧೪. ಕುಂಬಾರಿಕೆ ಕುರಿತಾದ ಕೆಲವು ಉಪಯುಕ್ತ ಮಾಹಿತಿಗಳು

೧. ಸಿಮೆಂಟು, ಗಾಜು, ಇಟ್ಟಿಗೆ, ಹಂಚು, ಟೆರ್ರಾಕೊಟಾ ಪಿಂಗಾಣಿ, ಮಡಕೆಗಳೆಲ್ಲವೂ ಮಣ್ಣಿನ ಮೂಲದ ವಸ್ತುಗಳು. ಇವುಗಳನ್ನು ಸೆರಾಮಿಕ್ ಗುಂಪಿಗೆ ಸೇರಿದ ವಸ್ತುಗಳೆಂದು ಕರೆಯುವರು.

೨. ಕುಂಭಕಲೆಯು ಮಾನವ ನಿರ್ಮಿತ ಮೊದಲ ಕಲೆಯೆಂದು ಇತಿಹಾಸದಿಂದ ತಿಳಿದು ಬರುತ್ತದೆ.

೩. ಕುಂಬಾರಿಕೆಯು ಮೊದಲು ಆರಂಭವಾದುದು ಮಹಿಳೆಯರಿಂದಲೇ ಎಂದು ವಿದ್ವಾಂಸರು ಅಭಿಪ್ರಾಯ ಪಡುವರು. ಚಕ್ರ ಬಳಸಿ ಮಡಿಕೆಗಳನ್ನು ಮಾಡುವ ಮೊದಲು ಕೈಯಿಂದಲೇ ಮಡಿಕೆ ಮಾಡುವ ಕಲೆ ಆರಂಭವಾಯಿತು.

೪. ಕುಂಬಾರನ ಚಕ್ರವನ್ನು ಮೊತ್ತಮೊದಲು ಕಂಡುಹಿಡಿದವರು ಸುಮೇರಿಯನ್ನರು.

೫. ಡಬ್ಲ್ಯು. ಡೇವಿಡ್ ಕಿಂಗರಿಯನ್ನು (W. David Kingry)ಯನ್ನು ಆಧುನಿಕ ಸೆರಾಮಿಕ್ ವಿಜ್ಞಾನದ ಪಿತಾಮಹನೆಂದು ಕರೆಯುವರು.

೬. ಈಜಿಪ್ಟಿನ ಶಕ್ತಿದೇವತೆಯನ್ನು ನೈಲ್ ನದಿಯ ದಡದ ಮಣ್ಣಿನಿಂದ ತಯಾರಿಸಲಾಗಿದೆ.

೭. ಪಿಂಗಾಣಿಯನ್ನು ಜಗತ್ತಿಗೆ ಮೊದಲು ಪರಿಚಯಿಸಿದವರು ಚೀನಿಯರು.

೮. ಪಿಂಗಾಣಿ ವಸ್ತುಗಳನ್ನು ಕೆಯೋಲಿನ್ ಎಂಬ ಬಿಳಿ ಜೇಡಿ ಮಣ್ಣಿನಿಂದ ಮಾಡುವರು.

೯. ಅನೇಕ ಭಾಷೆಗಳಲ್ಲಿ ಪಿಂಗಾಣಿಗೆ ಮಣ್ಣಿನ ಮುತ್ತು ಎನ್ನುವ ಹೆಸರಿದೆ.

೧೦. ೧೮೬೦ರಲ್ಲಿ ಭಾರತದಲ್ಲಿ ಪಿಂಗಾಣಿ ವಸ್ತುಗಳನ್ನು ಮೊದಲ ಬಾರಿಗೆ ಬಿಹಾರ ರಾಜ್ಯದ ಭಾಗಲ್‌ಪುರ ಜಿಲ್ಲೆಯ ಪಥೇರಘಟ್ಟ ಎಂಬಲ್ಲಿ ತಯಾರಿಸಲಾಯಿತು.

೧೧. ಆಧುನಿಕ ಕುಂಭಕಲೆಯನ್ನು ಬೆಳಸಿದವರಲ್ಲಿ ಇಂಗ್ಲೆಂಡಿನ ಜೋಷೈ-ವೆಡ್ಗವುಡ್ ಎಂಬ ಕುಂಭತಜ್ಞನು ಪ್ರಮುಖನು.

೧೨. ಬರ್ನಾರ್ಡ್ ಲೀಚನನ್ನು ಸ್ಟುಡಿಯೋ ಪಾಟರಿಯ ಜನಕ ಎಂದು ಕರೆಯಲಾಗಿದೆ.

೧೩. ಗುಜರಾತಿನ ಹಂಚಿನ ಉದ್ದಿಮಿ ಮೋತಿಬಾಯಿ ಪ್ರಜಾಪತಿಯನ್ನು ಭಾರತದ ವೆಡ್ಗವುಡ್ ಎಂದು ಕರೆಯುವರು.

೧೪. ಪದ್ಮಶ್ರೀ ಗುರುಚರಣ ಸಿಂಗನನ್ನು ದೆಹಲಿಯ ಬ್ಲೂಪಾಟರಿ ಪಿತಾಮಹನೆಂದು ಕರೆಯಲಾಗಿದೆ.

೧೫. "ಪಾಟರಿ ಇನ್ ಇಂಡಿಯಾ" ಎಂಬ ಪುಸ್ತಕವನ್ನು ಗುರುಚರಣ ಸಿಂಗನು ಇಂಗ್ಲಿಷ್ ಭಾಷೆಯಲ್ಲಿ ಬರೆದಿದ್ದಾನೆ.

೧೬. ಕರ್ನಾಟಕದ ಜಾನ್ ದೇವರಾಜ ಟೆರ್‍ರಾಕೊಟ ಶಿಲ್ಪದಲ್ಲಿ ಖ್ಯಾತಿ ಪಡೆದ ಕಲಾವಿದನು.

೧೭. ಮಧ್ಯಪ್ರದೇಶದ ತುಳಸಿ ಸನ್ಮಾನ ಪ್ರಶಸ್ತಿಯನ್ನು ಮಣಿಪುರದ ಕುಂಭಕಲಾವಿದೆ ನೀಲಮಣಿದೇವಿ ಪಡೆದಿದ್ದಾಳೆ.

೧೮. ಕರ್ನಾಟಕದ ಬೆಳಗಾಂವ ಜಿಲ್ಲೆಯ ಖಾನಾಪುರದಲ್ಲಿ ಕೇಂದ್ರಿಯ ಕುಂಭಕಲೆಯ ತರಬೇತಿ ಕೇಂದ್ರವಿದ್ದು, ದೇಶದ ನಾನಾ ಭಾಗಗಳಿಂದ ವಿದ್ಯಾರ್ಥಿಗಳು ತರಬೇತಿ ಪಡೆಯಲು ಬರುವರು.

೧೯. ರಾಜಸ್ಥಾನದ ಅಲ್ವಾರದಲ್ಲಿ ಕಾಗದದಷ್ಟು ತೆಳುವಾದ ಮಣ್ಣಿನ ಮಡಕೆಗಳನ್ನು ತಯಾರಿಸಲಾಗುತ್ತಿದ್ದು, ಅವು ವಿಶ್ವವಿಖ್ಯಾತಿ ಪಡೆದಿವೆ ಆ ಮಡಕೆಗಳಿಗೆ 'ಕಾಗಜಕಿ-ಸುರಾಯಿ' ಎನ್ನುವರು.

೨೦. ತಮಿಳುನಾಡಿನ ಪನ್ನತಿ ಮತ್ತು ವೆಲ್ಲೂರಿನ ಸಮೀಪದ ಕಾರಗಿರಿಯಲ್ಲಿ ಮಣ್ಣಿನ ಗೊಂಬೆಗಳನ್ನು ತಯಾರಿಸುವದರಲ್ಲಿ ಪ್ರಸಿದ್ಧಿ ಪಡೆದಿವೆ.

೨೧. ಭಾರತದಲ್ಲಿ ಕುಂಬಾರಿಕೆಯನ್ನು ಉಳಿಸಿಕೊಂಡು ಬಂದಿರುವ ಪಟ್ಟಣಗಳೆಂದರೆ ಲಖನೌ, ದೆಹಲಿ, ಜಲಂದರ, ಅಜಮಗಡ, ಗ್ವಾಲಿಯರ್, ಬಂಗಾಳ, ಚೆನ್ನೈ, ಸೇಲಂ ಮತ್ತು ಬೆಂಗಳೂರು.

೨೨. ಕರ್ನಾಟಕದ ಎನ್, ಪುಷ್ಪಮಾಲ ಅವರಿಗೆ ೧೯೭೬ರಲ್ಲಿ ಟೆರ್‍ರಾಕೊಟ ಕಲೆಗಾಗಿ ಅಂತರಾಷ್ಟ್ರೀಯ ಪ್ರಶಸ್ತಿ ದೊರೆತಿದೆ.

೨೩. ಮಣ್ಣಿನ ಮಡಿಕೆಯ ಮೇಲೆ ಬರೆದ ಶಾಸನವು ಕೋಲಾರ ಜಿಲ್ಲೆಯ ಚಿಂತಾಮಣಿ ತಾಲೂಕಿನ ಸಂತೇಕಲ್ಲೇನಹಳ್ಳಿಯಲ್ಲಿ ದೊರೆತಿದೆ.

೨೪. ಮಂಗಳೂರು ಹಂಚು ಜಗತ್ತಿನ ವಾಸ್ತುಶಿಲ್ಪಕ್ಕೆ ಕೊಟ್ಟ ಒಂದು ಮಹತ್ವದ ಕೊಡುಗೆ ಎಂದು ನ್ಯೂಯಾರ್ಕ ವಾಸ್ತುಶಿಲ್ಪದ – ಕೈಪಿಡಿಯಲ್ಲಿ ದಾಖಲಾಗಿದೆ.

೨೫. ಸಮರ ಖಂಡವನ್ನು ರಾಜಧಾನಿಯನ್ನಾಗಿ ಮಾಡಿಕೊಂಡಿದ್ದ ಟರ್ಕಿಯ ಕುಂಟ ತೈಮೂರನು ಕುಂಬಾರಿಕೆ ಮೊದಲಾದ ಕರಕುಶಲ ಕಲೆಗಳಿಗೆ ಹೆಚ್ಚು ಪ್ರಾಶಸ್ತ್ಯ ಕೊಟ್ಟಿದ್ದನು.

೨೬. ಚೆನ್ನೈನ ವಸ್ತು ಸಂಗ್ರಹಾಲಯದಲ್ಲಿ ಮಣ್ಣಿನಿಂದ ಮಾಡಿದ ವಿಲ್ಲಾರ್ರಿ, ಪುಲ್ಲವಾನ, ಕುರುಮ್ ಎಂಬ ಆದಿವಾಸಿಗಳ ತಂತಿವಾದ್ಯಗಳನ್ನು ಪ್ರದರ್ಶನಕ್ಕೆ ಇಡಲಾಗಿದೆ.

೨೭. ಕುಂಭಕೋಣದ ಕುಂಭೇಶ್ವರ ಲಿಂಗವನ್ನು ಮಡಕೆಯ ಚೂರುಗಳಿಂದ ಮಾಡಲಾಗಿದೆ.

೨೮. ಚಿತ್ರದುರ್ಗದ ಬ್ರಹ್ಮಗಿರಿಯ ಉತ್ಖನನದಲ್ಲಿ ವರ್ಣಚಿತ್ರವುಳ್ಳ ಮಣ್ಣಿನ ಮಡಕೆಗಳು ದೊರೆತಿವೆ.

೨೯. ಸತ್ತವರ ಶವಗಳನ್ನು ಮಣ್ಣಿನ ಮಡಕೆಯಲ್ಲಿಟ್ಟು ಹೂಳುವ ಪದ್ಧತಿ ಪ್ರಾಚೀನಕಾಲದಲ್ಲಿ ಅನೇಕ ದೇಶಗಳಲ್ಲಿ ರೂಢಿಯಲ್ಲಿತ್ತು.

೩೦. ಉತ್ಖನನದಲ್ಲಿ ದೊರೆತ ಮಣ್ಣಿನ ಮಡಕೆ ಮತ್ತು ಬೋಕಿಗಳನ್ನು ಸಂಶೋಧಕರು ಲಿಪಿ ಇಲ್ಲದ ಗ್ರಂಥಗಳೆಂದು ಹೆಸರಿಸಿದ್ದಾರೆ.

೩೧. ಪ್ರಾಚೀನ ಕಾಲದಲ್ಲಿ ಬಟ್ಟೆಗಳನ್ನು ಇಡಲು ಕರ್ಜನ್ ಎಂಬ ಮಣ್ಣಿನ ಪಾತ್ರೆಯನ್ನು ಬಳಸುತ್ತಿದ್ದರು.

೩೨. ಗುಪ್ತರ ಕಾಲದಲ್ಲಿ ಕುಂಭಕಲೆಗೆ ಪ್ರಾಶಸ್ತ್ಯವಿತ್ತು.

೩೩. ಬಂಗಾಳವನ್ನು ಟೆರ್ರಾಕೊಟಾ ಶಿಲ್ಪದ ತವರುಮನೆ ಎಂದು ಕರೆಯಲಾಗುತ್ತದೆ.

೩೪. ಗುಲ್ಬರ್ಗಾದ ದೊಡ್ಡಪ್ಪ ಅಪ್ಪಾ ಇಂಜಿನಿಯರಿಂಗ್ ಕಾಲೇಜಿನಲ್ಲಿ ಸೆರಾಮಿಕ್ ಇಂಜಿನಿಯರಿಂಗ್ ಪದವಿ ವಿಭಾಗವಿದೆ.

೩೫. ಭಾರತದಲ್ಲಿ ಸೆರಾಮಿಕ್ ಉದ್ದಿಮೆಯಲ್ಲಿ ಗುಜರಾತ್, ಉತ್ತರ ಪ್ರದೇಶ ಮತ್ತು ಕರ್ನಾಟಕ ರಾಜ್ಯಗಳು ಮುಂಚೂಣಿಯಲ್ಲಿವೆ.

೩೬. ಕರ್ನಾಟಕದಲ್ಲಿ ಮಂಗಳೂರು ಹಂಚಿನ ತಯಾರಿಕಾ ಕಾರ್ಖಾನೆಯನ್ನು ಮಿ. ಪ್ಲೆಬ್ಸ್ ಸಾಹೇಬರ ೧೮೬೫ರಲ್ಲಿ ಮಂಗಳೂರಿನ ಜಪ್ಪಿನಲ್ಲಿ ಮೊದಲು ಆರಂಭಿಸಿದರು.

೩೭. ಎ.ಎಲ್. ಬಾಸನ್ ಬರೆದ The wonder that was India ಪುಸ್ತಕದಲ್ಲಿ ಪ್ರಾಚೀನ ಭಾರತದಲ್ಲಿ ಜೈನಕುಂಬಾರನೊಬ್ಬನ ಆಧೀನದಲ್ಲಿ ಕುಂಬಾರಿಕೆಯ ೫೦೦ ಕಾರ್ಯಾಗಾರಗಳಿದ್ದವೆಂದು ಗಂಗಾನದಿ ತೀರ ಪ್ರದೇಶದ ಜನವಸತಿಗಳಿಗೆಲ್ಲ ಗಡಿಗೆಗಳನ್ನು ಪೂರೈಸುತ್ತಿದ್ದ ಬಗೆಗೆ ದಾಖಲಾಗಿದೆ.

೩೮. ೧೯೮೦ರಲ್ಲಿ ಸ್ಪೆಯನನಲ್ಲಿ ಪತ್ತೆಯಾದ ಸುಮಾರು ೧೫೦೦ರಷ್ಟು ಹಳೆಯದಾದ ಮಣ್ಣಿನ ಮಡಿಕೆಯಲ್ಲಿ ಮುಚ್ಚಿಟ್ಟಿದ್ದ ಚಾಕಲೇಟ್ ದ್ರವ ರೂಪದಲ್ಲಿತ್ತು (ಚುಟುಕು ಅಕ್ಟೋಬರ್ ೧೯೯೩)

೩೯. ಚೀನಾದಲ್ಲಿ ತಯಾರಾಗುವ ವಿವಿಧ ಬಗೆಯ ಪಿಂಗಾಣಿ ವಸ್ತುಗಳಲ್ಲಿ ಗ್ರೇನ್ ರೈಸ್ (Grain rice) ಎಂಬುದು ಬಹಳ ಪ್ರಖ್ಯಾತವಾಗಿದೆ.

೪೦. ಕ್ರಿ.ಪೂ. ಮೂರನೆ ಶತಮಾನದ್ದೆನ್ನಬಹುದಾದ ವಿಶ್ವದ ಅತ್ಯಂತ ಪುರಾತನ ಗ್ರಂಥಾಲಯವನ್ನು ಸೈಬೀರಿಯಾದ ಸಮೀಪದ ಇರಾಕಿನ ಬಗ್ದಾದ ಬಳಿ ಪ್ರಾಚ್ಯ ಸಂಶೋಧಕರು ಪತ್ತೆ ಹಚ್ಚಿದ್ದಾರೆ. ಇಲ್ಲಿ ಮಣ್ಣಿನ ಫಲಕಗಳ ಮೇಲೆ ಮಿಸ್ ಮಾರ್ಕ (Mismark) ಲಿಪಿಯಲ್ಲಿ ಬರೆದ ಸುಮಾರು ಎರಡು ಸಾವಿರದಷ್ಟು ಮಣ್ಣಿನ ಫಲಕಗಳು ದೊರೆತಿವೆ (Wisdom September 2006)

೪೧. ಪರಮೋಚ್ಚ ಗ್ರೀಕ್ ದೇವತೆ ಸ್ಯೂಸನ್ನೇ ಎದುರು ಹಾಕಿಕೊಂಡರೂ ಮಾನವರನ್ನು ಮೇಲೆತ್ತುವ ಮಹೋದ್ಯಮದಲ್ಲಿ ಅಂಜದೆ ಅಳುಕದೆ ಶ್ರಮಿಸಿದ ಮಹಾ ವ್ಯಕ್ತಿ ಪ್ರಮೀತ್ಯೂಸ್, ಕುಂಬಾರ ಕುಲದ ಪೋಷಕ ದೇವತೆ.

೪೨. ರಾಮಕೃಷ್ಣ ಪರಮಹಂಸರ (೧೮೮೩-೧೮೮೯) ಪವಿತ್ರ ಅಸ್ಥಿಯನ್ನು ಮಡಕೆಯಲ್ಲಿ ಇರಿಸಿ ಫೆಬ್ರವರಿ ೧೭-೧೮೯೮ರಿಂದ ''ಸ್ರಿಜ'' ಎಂಬುದಾಗಿ ಪೂಜಿಸಲಾಗುತ್ತಿದೆ.

**ಆಧಾರ ಕುಂಭಕಲೆ ಕ್ವಿಜ್ ರೂಪಕ**

**ಬಸವರಾಜ ಕುಂಚೂರು**

## ೧೫. ಕುಂಬಾರಕೆ ಕುರಿತಾದ ಗಾದೆಗಳು

ಕಾಶೀಗೆ ಹೋದ್ರು ದೋಷ ಬಿಡಲಿಕ್ಕಿಲ್ಲ, ಕುಂಬಾರ ಕೊಟ್ಟ ಮಾತು ತಪ್ಪಿಸಲ್ಕಿಕಿಲ್ಲ.

ಕುಂಬಾರ ಕೂತ್ರೆ ಕುಂಭ ಬಡಿಯೋರು ಯಾರು?

ಕೆಲಸವಿಲ್ಲದ ಕುಂಬಾರ ಮಡಕೆಯ ತಳತಟ್ಟಿದನಂತೆ

ಕುಂಬಾರನ ಮುಂದೆ ಮಡಕೆ ಒಡಿಬಾರ್ದು

ಮೂಕನ ಮುಂದೆ ಮೂಗು ತುರಿಸಬಾರ್ದು

ಕುಂಬಾರನಿಗೆ ಮಣ್ಣಿನ ಚಿಂತೆ, ಕುರುಬನಿಗೆ ಕುರಿಯ ಚಿಂತೆ

ಕರಿಯಾಕೆ ಎಮ್ಮೆ ತಂದು ಕರೆಯುವಗಡಿಗೆಗ ಹೇಗೆ ಅನ್ನೋದೆ?

ಇಟ್ಟಿಲ್ಲದಿದ್ರ ಅವ್ವ ತತ್ತಾಳೆ

ಮಡಕೆ ಒಡದ್ರ ಅಪ್ಪ ತತ್ತಾನೆ

ಆಸತ್ತು ಬೇಸತ್ತು ಅಕ್ಕನ ಮನಿಗೆ ಹೋದ್ರ ಖಾಲಿ ಬಿಂದ್ಗಿ ಹಗ್ಗ ಕೊಟ್ಲಂತೆ

ಅತ್ತೆ ಸೊಸೆಗೆ ಮುಚ್ಚಳದಲ್ಲಿ ಉಣಸ್ತೀನಿ ಅಂದ್ಲಂತೆ, ಅತ್ತೆ "ನಾನು ನಿನಗೆ ಮಗೇಲೆ ಕೊಡ್ತೀನಿ ಅಂದ್ಲಂತೆ"

ಅಡಿ ಸತ್ತ ಮಡಕೆಗೆ ಒಲೆಗುಂಡ ಹೂಡಬಾರದು.

ಗಡ್ಗಿ ಒಡಿಯಾಕ ಬಡಗಿ ಬೇಕೆ?

ಭಿನ್ನವಾದ ಗಡಿಗೆ ಹೊನ್ನ ಕೊಟ್ಟರ ಸಮನಾದೀತೆ?

ದೊಡ್ಡವರ ಮನೇಲಿ ದೊಡ್ಡ ಗುಡಾಣ, ಬಗ್ಗಿ ನೋಡಿದ್ರೆ ಬರಿಗುಡಾಣ

ಧನಿಮನೀಗೆ ದೌಲತ್ ಬಂದ್ರೆ, ತೊತ್ತಿಗೆ ಮೂರ ಕೊಡಜಾಸ್ತಿ

ತುಪ್ಪದಗಡ್ಗಿ ತಾ ಅನ್ನೋ ಹೊತ್ಗ ಉಪ್ಪಿನಗಡ್ಗಿ ತಂದ್ಲು

ತಲಿ ಮೇಲಿನ ಕೊಡ ಒಡಿಬಾರ್ದು, ಒಲಿ ಮ್ಯಾಲಿನ ಗಡ್ಗಿ ಒಡಿಬಾರ್ದು

ತುಂಬಿದ ಕೊಡ ತುಳುಕುವುದಿಲ್ಲ

ಗಡಗಡ ಅಂದಾವ್ರು ಗಡ್ಗಿ ನುಂಗಿದ್ರು.

# ೧೬. ಕುಂಬಾರಿಕೆ ಶಬ್ಧಕೋಶದ ಕನ್ನಡದ ಮೊದಲ ಬರಹ "ಕುಂಬಾರಿಕೆಯ ಪದಕೋಶ" - ೧೯೯೪

ಯಂತ್ರ ನಾಗರಿಕತೆಯ ಹೆಚ್ಚಳದಿಂದ ಗ್ರಾಮೀಣ ಕೈಗಾರಿಕೆಗಳೆಲ್ಲ ಕ್ಷೀಣಿಸತೊಡಗಿವೆ. ಕೆಲವಂತು ನಿರ್ನಾಮದ ಅಂಚನ್ನೂ ತಲುಪಿವೆ. ಆಧುನಿಕ ನಾಗರಿಕತೆಯ ದೊಡ್ಡ ದುರಂತವೆಂದರೆ ಒಂದನ್ನ ಇನ್ನೊಂದು ಕಬಳಿಸುವದು. ಅಲ್ಯೂಮಿನಿಯಂ ಮತ್ತು ಪ್ಲ್ಯಾಸ್ಟಿಕ್ ಕುಂಬಾರಿಕೆಯನ್ನು ಕಬಳಿಸಿದ ಹಾಗೆ ಮಿಲ್ ಬಟ್ಟೆ ಕೈಮಗ್ಗವನ್ನೂ ನುಂಗಿದ ಹಾಗೆ.

ಸಾಮಾನ್ಯವಾಗಿ ಎಲ್ಲಾ ಗ್ರಾಮೀಣ ಕಸಬುದಾರರು ತಮ್ಮ ತಮ್ಮ ಕಸಬಿಗೆ ತನ್ನದೇ ಆದ ವಿಶಿಷ್ಟ ಉಪಕರಣಗಳನ್ನು ಹೊಂದಿರುತ್ತಾರೆ. ಅವೆಲ್ಲಾ ಸ್ಥಳೀಯ ಸಾಮಗ್ರಿಗಳಿಂದ ಮಾಡಿದ ಉಪಕರಣಗಳು. ಉದಾಹರಣೆಗೆ, ಕುಂಬಾರನ ತಿಗುರಿ, ಕಮ್ಮಾರನ ಕುಲಮೆ, ನೇಕಾರನ ಮಗ್ಗ ಇತ್ಯಾದಿ. ಪ್ರತಿಯೊಂದು ಕಸಬಿನವರು ತಾವು ಮಾಡುವ ಕೆಲಸದಲ್ಲಿ ಅನೇಕ ವಿಧದ ಜನಪದ ಮೂಲದ ವಿಶಿಷ್ಟ ಶಬ್ದಗಳನ್ನು ಬಳಸುತ್ತಾರೆ. ಈಗೀಗ ಗ್ರಾಮೀಣ ಕೈಗಾರಿಕೆಗಳೆಲ್ಲ ಅವಸಾನವಾಗತೊಡಗಿದಂತೆ, ಆ ವೃತ್ತಿಯ ಉಪಕರಣಗಳು ಹೇಳ ಹೆಸರಿಲ್ಲದಂತಾಗಿವೆ. ಅವರು ಬಳಸುತ್ತಿದ್ದ ಪದಗಳು ಆ ವೃತ್ತಿಯ ಜನರಿಂದಲೇ ದೂರವಾಗತೊಡಗಿವೆ.

ತಲೆಮಾರುಗಳಿಂದ ಬಳವಳಿಯಾಗಿ ಬಂದ ಈ ಜನಪದರ ಸಂಪತ್ತು ನಮ್ಮಿಂದ ದೂರವಾಗುವ ಮುನ್ನ ಗ್ರಂಥಸ್ಥ ಮಾಡುವ ಜರೂರು ಕಾರ್ಯ ನಮ್ಮ ಮೇಲಿದೆ. ಈ ದಿಶೆಯಲ್ಲಿ "ಕುಂಬಾರಿಕೆಯ ಪದಕೋಶ" ಈ ಕಿರುಲೇಖನ ಒಂದು ಪುಟ್ಟ ಹೆಜ್ಜೆ. ವೃತ್ತಿ ಪದಕೋಶದ ಬಗ್ಗೆ ಸಮಗ್ರವಾಗಿ ಚಿಂತನೆ ಮಾಡುವ ಕಾಲ ಒದಗಿಬಂದಿದೆ.

**ಆವಿಗೆ (ನಾ)** ಮಡಿಕೆ ಸುಡುವ ಗೂಡು, ಒಲೆ

**ಕವಳಿ (ನಾ)** ಮಡಿಕೆ ಮಾಡುವಾಗ ಕೈಗೆ ಹತ್ತಿದ ಮಣ್ಣು೨೦೦ು ಜ್ದಿ, ಅದನ್ನು ಆಗಾಗ್ಗೆ ಕೈಯಿಂದ ತೆಗೆದು ಮಡಕೆಗೆ ಹಾಕುತ್ತಾರೆ. ಅದೆ ಕವಳಿಮಣ್ಣು.

**ಕಂಠ ಹಚ್ಚುವದು (ಕ್ರಿ)** ಹೆಣ್ಣುಮಕ್ಕಳು (ಕುಂಬಾರಗಿತ್ತಿ) ಮೊದಲು ಮಣ್ಣಿನ ಬೋಸಿ ತೀಡಿ ಅದು ಸ್ವಲ್ಪ ಆರಿದ ನಂತರ ಮಾಡುವ ಕ್ರಿಯೆ.

| | |
|---|---|
| ಕುಂಭ (ನಾ) | ನೀರಿನ ಗಡಿಗೆ, ಕೊಡ |
| ಕುಂಡ (ನಾ) | ಮಣ್ಣಿನ ಪಾತ್ರೆ, ಮಣ್ಣು ತುಂಬಿ ಸಣ್ಣ ಸಸಿಗಳನ್ನು ಬೆಳೆಸುವ ಪಾತ್ರೆ. |
| ಕುಂಬಾರ (ನಾ) | ಕುಲಾಲ, ಕುಂಭಕಾರ, ಕುಮ್ಮರ ಕುಂಬಿಗ, ಚಕ್ರಸಾಲಿ, ವ್ಹೋಡಾರಿ (ತುಳು) ಮೂಲ್ಯ (ತುಳು, ಗುನಗ (ಉ.ಕ.) |
| ಕುಶವನ (ನಾ) | ಕುಂಬಾರ<br>''ಕುಂಬಾರನಿಗೆ ವರುಷ ದೊಣ್ಣೆಗೆ ನಿಮಿಷ'' (ಗಾದೆ) |
| ಕುಂಬಾರ ಬೂದಿ (ನಾ) | ಕುಂಬಾರನ ಆವಿಗೆಯಲ್ಲಿ ಮಡಿಕೆಯನ್ನು ಸುಟ್ಟ ಬೂದಿ |
| ಕುಡಿಕೆ (ನಾ) | ಮಣ್ಣಿನಿಂದ ಮಾಡಿದ ಚಿಕ್ಕ ಪಾತ್ರ, ಗಿಂಡಿ, ತುಪ್ಪದ ಕುಡಿಕೆ, ಮೊಸರಿನ ಕುಡಿಕೆ, ಅಜ್ಜಿ ಕುಡಿಕೆ.<br>''ಕೂತು ಉಂಡರೆ ಕುಡಿಕೆ ಹಣ ಸಾಲದು'' (ಗಾದೆ) |
| ಕೇಲು (ನಾ) | ಐರಾಣಿ, ಮದುವೆಗೆ ಕುಂಬಾರ ಮನೆಯಿಂದ ಕೊಂಡು ಹೋಗುವ ಮಣ್ಣಿನ ಪಾತ್ರೆಗಳು. |
| ಕೊಡ (ನಾ) | ಕೊಡಪಾನ, ನೀರು ತರುವ ಪಾತ್ರೆ, ''ತುಂಬಿದ ಕೊಡ ತುಳುಕುವದಿಲ್ಲ'' (ಗಾದೆ) |
| ಕೊಣಬಗಿ (ನಾ) | ರೊಟ್ಟಿ ಮಾಡುವ ಮಣ್ಣಿನ ಅಗಲವಾದ ತಾಟು. |
| ಕೊಯ್ಯುವುದು (ಕ್ರಿ) | ತಿಗುರಿ ಮೇಲಿನ ಮಡಿಕೆಯನ್ನು (ನೆಲ)ದಾರದಿಂದ ಕೊಯ್ಯುವುದು. ಗಂಡಸರು ತಿಗುರಿ ಮೇಲೆ ಕುಂಭಗಳನ್ನು ಮಾಡುವ ಕ್ರಿಯೆ. |
| ಕುದಮು (ಕ್ರಿ) | ಗೇಯ್ದ ಮಣ್ಣಿನ ನೆಲಗಳನ್ನು ಸ್ವಲ್ಪ ಆರಿದ ಮೇಲೆ ಸೊಳ ಮತ್ತು ಕಲ್ಲಿನಿಂದ ತಟ್ಟುವದು. ತಟ್ಟುವದರಲ್ಲಿ ಇದು ಮೊದಲ ಹಂತ |
| ಕವಳಿ ಅರಬಿ (ನಾ) | ಕವಳಿ ಚಟಿಗೆಯಲ್ಲಿ ಬೋಸಿಯನ್ನು ತೀಡಲು ಇಟ್ಟಿರುವ ತುಂಡು ಬಟ್ಟೆ. ಹೆಣ್ಣು ಮಕ್ಕಳು ಮಡಿಕೆ ಮಾಡುವಾಗ ಉಪಯೋಗಿಸುತ್ತಾರೆ. |

| | |
|---|---|
| **ಕವಳಿದಾರ (ನಾ)** | ನೆಲವನ್ನು ಕೊಯ್ಯುವ ದಾರ |
| **ಕವೆಗೋಲು (ನಾ)** | ಆವಿಗೆಯಲ್ಲಿ ಗಡಿಗೆಯನ್ನು ಸುಡುವಾಗ ಬೆಂಕಿ ಚಾಚಲು ಮುಂಭಾಗ ಇಂಗ್ಲಿಷ್ ಅಕ್ಷರ ''ವೈ''ಯಂತೆ ಟಿಸಿಲೊಡೆದ ಕೋಲು ಅಥವಾ ಕಬ್ಬಿಣದ ಉದ್ದನೆಯ ಸರಳು. |
| **ಗಡಿಗೆ (ನಾ)** | ಮಡಿಕೆ, ಸ್ವಾರಿ |
| **ಗಟ್ಟಗಡಿಗೆ (ನಾ)** | ಗ್ರಾಮದೇವತೆಯ ಹಬ್ಬಕ್ಕೆ ಕುಂಬಾರ ಮನೆಯಿಂದ ಒಯ್ಯುವ ಮಡಿಕೆ |
| **ಗೂಟ (ನಾ)** | ಶೂಲ, ತಿಗುರಿ ಇದರ ಮೇಲೆ ತಿರುಗುತ್ತದೆ. |
| **ಗುಬ್ಬಿಕಲ್ಲು (ನಾ)** | ತಿಗುರಿಯ ಹಣೆಯ ಮೇಲಿರುವ ಕಲ್ಲು. |
| **ಗೊಬ್ಬಿ (ನಾ)** | ಈಚಲ ಮರಕ್ಕೆ ಹೆಂಡವನ್ನು ಇಳುವಲು ಕಟ್ಟುವ ಗಡಿಗೆ |
| **ಗುಗ್ಗಳ ಕೊಡ (ನಾ)** | ವೀರಭದ್ರ ದೇವರ ಭಕ್ತರು ಗುಗ್ಗಳ ಮಾಡುವಾಗ ಬೆಂಕಿಯನ್ನು ಹಾಕುವ ಪವಿತ್ರವಾದ ಪಾತ್ರೆ. |
| **ಗುಡಾಣ (ನಾ)** | ನೀರಿನ ಹರವಿ, ಪಡಗ |
| **ಗಟ್ಟಿಸುವದು (ಕ್ರಿ)** | ಕುದಮ ಮಾಡಿದ ನಂತರ ಗಡಿಗೆಯನ್ನು ಇಲಕಿಯಲ್ಲಿಟ್ಟು ಆರಿಸುತ್ತಾರೆ, ನಂತರ ಗಟ್ಟಿಸುವರು. |
| **ಪಣತಿ (ನಾ)** | ದೀಪದ ಪ್ರಣತಿ |
| **ಪಲ್ಟಿ (ನಾ)** | ಚಿಪ್ಪು, ಮಣ್ಣಿನ ಚಿಕ್ಕ ದಬರಿ, ಕಠೋರಿ, ಉಪ್ಪಿನ ಪಲ್ಟಿ ಹಿಂಡಿ ಪಲ್ಟಿ |
| **ಬಾದಾಳ (ನಾ)** | ಬೆಳಕಿಂಡಿ |
| **ಬೋಕಿ (ನಾ)** | ಒಡದ ಗಡಿಗೆಯ ತುಂಡು, ಹಂಚು, ನಿನ್ನ ಕೈಯಾಗ ಬೋಕಿ (ವಾಕ್ ರೂಢಿ) ಹಣಕಾಸಿನ ಕನಿಷ್ಟ ಸ್ಥಿತಿಯನ್ನು ಹೇಳಲು ಬಳಸುವ ಗ್ರಾಮ್ಯ ವಾಕ್ ರೂಢಿ. |
| **ಪಚೇಲಿ (ನಾ)** | ಗಡಿಗೆ, ನೀರಿನ ಪಚೇಲಿ ''ಆಚಾರ ಹೇಳೋದು ಪಚೇಲ್ಯಾಗ ಉಚ್ಚಿ ಹೊಯ್ಯೋದು'' (ಗಾದೆ) |

| | |
|---|---|
| ಬಾನಿ (ನಾ) | ಮಣ್ಣಿನ ಅಗಲವಾದ ಪಾತ್ರೆ, ನೀರಿನ ಬಾನಿ, ಮುಸರಿ ಬಾನಿ, ಚರ್ಮವನ್ನು ಹದಮಾಡಲು ಚಮ್ಮಾರರು ಬಳಸುವ ಕರಿಬಾನಿ. |
| ಬಿಂದಿಗೆ (ನಾ) | ನೀರನ್ನು ತರುವ ಚಿಕ್ಕ ಕೊಡಪಾನ. |
| ತೀಡುವದು (ಕ್ರಿ) | ಹೆಣ್ಣು ಮಕ್ಕಳು ಮಡಿಕೆ ಮಾಡುವದಕ್ಕೆ ತೀಡುವುದು ಎನ್ನುವರು. |
| ತಿಗುರಿಕೋಲು (ನಾ) | ತಿಗುರಿಯನ್ನು ತಿರುಗಿಸಲು ಕುಂಬಾರನು ಬಳಸುವ ಬೆತ್ತದ ಸಪುರವಾದ ಕೋಲು |
| ತಿಗುರಿ (ನಾ) | ಕುಂಬಾರನ ಚಕ್ರ, ತಿರುಗುಣಿ |
| ಮಗಿ (ನಾ) | ತಂಬಿಗೆ, ಹಾಲಿನ ಮಗಿ, ಎಣ್ಣೆ ಮಗಿ |
| ದರಗ (ನಾ) | ಗಂಡಸರು ಮಡಕೆ ತಟ್ಟಲು, ಒಂದು ಕಡೆ ದಪ್ಪ ಮಾಡಿ ಹಾಕಿಕೊಳ್ಳುವ ನಾರೀನ ಚೀಲ |
| ತತ್ರಾಣಿ (ನಾ) | ಚಿಕ್ಕ ಬಾಯಿಯ ಎರಡು ಕಡೆ ಹೊಟ್ಟೆಯ ಮಣ್ಣಿನ ಪಾತ್ರೆ, ಇದರಲ್ಲಿ ಹಾಕಿದ ನೀರು ಬಹಳ ತಣ್ಣಗಿರುತ್ತದೆ. |
| ಸಬಸರಿಬಿ (ನಾ) | ನೀರಿನ ಅರಿಬಿ, ಮಡಿಕೆ ತಟ್ಟುವಾಗ ಬಳಸುತ್ತಾರೆ. |
| ಸೊಳ-ಕಲ್ಲು (ನಾ) | ಕುಂಬಾರನು ಮಡಕೆ ಮಾಡಲು ಬಳಸುವ ಉಪಕರಣ ಗಳಲ್ಲಿ ಸೊಳ ಕಲ್ಲು ಮುಖ್ಯವಾದವುಗಳು, ಮಡಿಕೆ ತಟ್ಟಲು ಬಳಸುತ್ತಾರೆ. |
| ಜಜ್ಜುವಕಲ್ಲು (ನಾ) | ಹೆಣ್ಣು ಮಕ್ಕಳು ಬೋಸಿ ಮಾಡಲು ಮಣ್ಣಿನ ಹಲ್ಲೆ ತಟ್ಟಲು ಜಜ್ಜುವ ಕಲ್ಲು ಬಳಸುತ್ತಾರೆ. |
| ನೆಲ (ನಾ) | ತಿಗುರಿಯಿಂದ ಕೊಯ್ದ ಮಡಕೆ. |
| ಹೂಜಿ (ನಾ) | ನೀರನ್ನು ತುಂಬಿಡುವ ಪಾತ್ರೆ. |
| ಮುಚುಳ (ನಾ) | ಪ್ಲೇಟು, ಸ್ವಾರಿ ಮುಚ್ಚುವ ಪ್ಲೇಟು |
| ಹೆಂಚು (ನಾ) | ಮಾಳಿಗೆಗೆ ಹೊದಿಸುವ ಹಂಚು |

| | |
|---|---|
| ಹೊಮ್ಮಣ್ಣು (ನಾ) | ಹಸಿ ಮಡಿಕೆಗಳನ್ನು ಹೊಳಪು ಬರಲು ಹೊಮ್ಮಣ್ಣಿನಿಂದ ತಿಕ್ಕುವರು, ಧಾರವಾಡ ಜಿಲ್ಲೆಯ ಇಟಗಿಯ ಬಳಿ ಈ ಮಣ್ಣು ಸಿಗುತ್ತದೆ. |
| ದಬ್ಬಿಗಡಿಗೆ (ನಾ) | ದೇವರ ಕಾಣಿಕೆಯ ಚಿಕ್ಕಗಡಿಗಿ |
| ಚಟಿಗಿ (ನಾ) | ಮಣ್ಣಿನ ಚಿಕ್ಕ ಪಾತ್ರೆ, ಪಲ್ಯ, ಚಟಿಗಿ |
| ಅಡಕಲಗಡಿಗಿ (ನಾ) | ಕಾಳು ಕಡಿ ತುಂಬಿಡುವ ಗಡಿಗಿ |
| ಇಲಕಿ (ನಾ) | ತಟ್ಟಿದ ಮಡಿಕೆಗಳನ್ನು ಇರಿಸಲು, ಅರ್ಧ ಒಡೆದ ಪಡಗ, ಕೊಡ ಮೊದಲಾದವುಗಳು |
| ಮರಗಲು (ನಾ) | ಆವಿಗೆ ಕಟ್ಟಲು ಬಳಸುವ ಸ್ವಾರಿ – ಗಡಿಗೆ |
| ಹರಿನಾಳಿಗೆ (ನಾ) | ಮಾಳಿಗೆ ಮೇಲಿನ ಮಳೆ ನೀರು ಹೋಗುವ ನಳಿಗೆ |

**ಲೇಖಕರು: ಬಸವರಾಜ ಕುಂಬೂರ**
**ಕೃಪೆ: "ಕುಂಭಕಲೆ" ಸ್ಮರಣ ಸಂಚಿಕೆ –**
**ಕುಂಬಾರರ ಸಮ್ಮೇಳನ ಹರಿಹರ, ೧೯೯೪**

# ೧೭. ಕರ್ನಾಟಕದ ಪ್ರಮುಖ ಸೆರಾಮಿಕ್ ಉದ್ದಿಮೆಗಳು
# (Ceramaic Industries in Karnataka)

| | | | |
|---|---|---|---|
| 1. | Mysore Cements Limited | - | Ammasandra |
| 2. | Wheel and Axil Plant | - | Yalahanka |
| 3. | Bell Ceramic Limited | - | Hoskote |
| 4. | Khody Glass Factory | - | Avalahalli |
| 5. | National Aeros Pace Ltd | - | Murucesh palya |
| 6. | Victor Glass Ind Ltd | - | Sommasandra |
| 7. | Grind Well Norton Ltd. | - | Devanahalli |
| 8. | M.C.O. | - | Adugodia Nagnath Apuram |
| 9. | Graphite India Ltd. | - | Mahadevapura |
| 10. | H & R Johnson India Ltd | - | Kunigal |
| 11. | SISI Glass and Ceramics Dopt | - | Rajajinagar |
| 12. | Electro-therm Furnaces | - | Peenya |
| 13. | BELL EPD | - | Malleswarh |
| 14. | The standard Bricks & Tiles | - | Yalhanka |
| 15. | Bangalore Enemals | - | Peenya |
| 16. | Bhouruka Steel Ltd. | - | Mahadevapura |
| 17. | Mysore Stoneware Pipe Ltd | - | Soldevanahalli |
| 18. | Bharath Electronics Ltd | - | Jalahalli |
| 19. | Sir Visweswariah Iron and Steel Ltd | - | Bhadravthi |

| | | | |
|---|---|---|---|
| 20. | Stivem Refractories | - | Dharwad |
| 21. | Sujirkers Tile works | - | Mangalore |
| 22. | Associated Electro Ceramics | - | Peenya |
| 23. | Carbo Ceramics Ltd | - | Mysore |
| 24. | Geo Stonework Pvt. Ltd | - | Hoskote |
| 25. | Mysore Mineral Ltd | - | Bageshpur |
| 26. | Mysore Stonework Pipes and Potteries | - | Soldevanahalli |
| 27. | Materials Technology Lab - CPRI | - | Bangalore |
| 28. | Century Abrasives Pvt. Ltd. | - | Peenya III Stage |
| 29. | Naveen Murudeshwara Wall Tiles | - | Hubli |

ಒದಗಿಸಿದವರು: ಎನ್. ಅಶ್ವಥಯ್ಯ, ಸೆರಾಮಿಕ್ ವಿಭಾಗಾಧಿಕಾರಿಗಳು,
ಜಯಚಾಮರಾಜೇಂದ್ರ ಪಾಲಿಟೆಕ್ನಿಕ್, ಬೆಂಗಳೂರು

## ೧೮. ಗ್ರಂಥ ಋಣ


೧. ವಿಜ್ಞಾನ ಬರವಣಿಗೆಯ ಕೆಲವು ಸಮಸ್ಯೆಗಳು - ಸಂಪಾದಕರು - ಜೆ.ಆರ್. ಲಕ್ಷ್ಮಣರಾವ್

೨. ನಿಘಂಟು ರಚನಾ ವಿಜ್ಞಾನ - ಡಾ. ವಿಲಿಯಂ ಮಾಡ್ತಾ, ಆರ್. ವೈ. ಕುಲಕರ್ಣಿ

೩. ಗ್ರಾಮೀಣ ಗೃಹ ವಸ್ತುಗಳು - ದಿವಂಗತ ಪಿ.ಆರ್. ತಿಪ್ಪೇಸ್ವಾಮಿ

೪. ಗ್ರಾಮೀಣ ಸಂಸ್ಕೃತಿ ಮಾಲೆ - ೧

ಗ್ರಾಮೀಣ ವೃತ್ತಿಗಳು - ಸಂಪಾದಕರು ಡಾ. ದೇವೇಂದ್ರ ಕುಮಾರ ಹಕಾರಿ, ಡಾ. ಕೆ.ಆರ್. ಸಂಧ್ಯಾರೆಡ್ಡಿ

೫. ಕುಂಬಾರ ವೃತ್ತಿ ಪದಕೋಶ - ಡಾ. ಎಸ್.ಎಸ್. ಅಂಗಡಿ

೬. ಕುಂಬಾರ ಜನಾಂಗ - ಬಸವರಾಜ ಕುಂಚೂರು

೭. ಕುಂಭಕಲೆ - ಮಣ್ಣಿನಲ್ಲಿ ಅರಳಿದ ಕಾವ್ಯ ! ಬಸವರಾಜ ಕುಂಚೂರು

೮. ಕಿಟೆಲ್ ಕೋಶ ಕಿಟೆಲ್ (ಒಂದರಿಂದ ನಾಲ್ಕು ಸಂಪುಟಗಳು) ಎಂ. ಮರಿಯಪ್ಪಭಟ್ಟ ೧೯೭೧

೯. ಬೀದರ್ ಜಿಲ್ಲೆಯ ಕುಂಬಾರರ ಕುರಿತಾಗಿ ಎಂ.ಫಿಲ್ ಪದವಿಗೆ ಗುಲ್ಬರ್ಗ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ ಪ್ರಬಂಧ - ಶಂಕರ್.ವ್ಹಿ. ಕುಂಬಾರ್

೧೦. ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟು - ಸಾಹಿತ್ಯ ಪರಿಷತ್ತು ಬೆಂಗಳೂರು.

೧೧. ತುಳು ನಿಘಂಟು ಭಾಗ ೧ ಮತ್ತು ೨

೧೨. ಇಂಗ್ಲಿಷ್ ಕನ್ನಡ ನಿಘಂಟು - ಮೈಸೂರು ವಿಶ್ವವಿದ್ಯಾನಿಲಯ

೧೩. ಕಸ್ತೂರಿ ಕೋಶ - ಪಂಡಿತ ಕವಲಿ


೧೪. ಕುಂಬಾರ ದರ್ಶನ - ರಾಮಗಿರಿ, ಕರಿಸಿದ್ದಪ್ಪ ಕುಂಬಾರ್

೧೫. ಚಿಗಟೇರಿ ಪದಕೋಶ - ಮುದೇನೂರು ಸಂಗಣ್ಣ

ಇಂಗ್ಲಿಷ್ :


1. The new ceramics trends traditions – by Peterdurmer
2. Introduction to Ceramics – by Graham Flight
3. Modern Cermaics – by Geoffry Beard
4. Chambers Twentieth century dictionary – Edited by A.M. Macdonald obeba
5. Rogets International Thesaurus
6. The Oxford Dictionary of English proverbs – Wilson

ಶ್ರೀ ಬಸವರಾಜ ಕುಂಚೂರು



ವೃತ್ತಿಯಿಂದ ಇಂಜನಿಯರಾದ ಬಸವರಾಜ ಕುಂಚೂರವರು ಕುಂಭಕಲಾ ಸಾಹಿತ್ಯಕ್ಕೆ ಈಗಾಗಲೇ ಮೂರು ಕೃತಿಗಳನ್ನು ನೀಡಿದ್ದಾರೆ. ಅವರು ಬರೆದ 'ಕುಂಬಾರ ಜನಾಂಗ' ಕುಂಭಕಲೆ ಮತ್ತು ಜನಾಂಗೀಯ ಅಧ್ಯಯನ ಕುರಿತಂತೆ ಒಂದು ಮಹತ್ತರವಾದ ಕೃತಿ. ಎರಡು ಪ್ರಶಸ್ತಿಗಳನ್ನು ಪಡೆದು ಎರಡನೆ ಮುದ್ರಣ ಕಂಡಿದೆ.

ವಂಶಪಾರಂಪರ್ಯವಾಗಿ ಬೆಳೆದು ಬಂದ ಗ್ರಾಮೀಣ ಕುಲವೃತ್ತಿ ಗಳು ಆಧುನಿಕ ತಂತ್ರಜ್ಞಾನ ಹಾಗೂ ಜಾಗತೀಕರಣದ ಒತ್ತಡಕ್ಕೆ ಸಿಲುಕಿ ತಮ್ಮ ಅಸ್ಥಿತ್ವವನ್ನೇ ಕಳೆದುಕೊಳ್ಳುತ್ತಿವೆ. ಕುಲಕಸುಬನ್ನು ಅವಲಂಬಿಸಿ ನೆಮ್ಮದಿಯಿಂದ ಬದುಕನ್ನು ಸಾಗಿಸುತ್ತಿದ್ದ ಕರಕುಶಲ ವೃತ್ತಿ ಜೀವಿಗಳ ಬದುಕು ನಂದಿ ಹೋಗಿರುವುದು ಮರೆಯಲಾಗದ ಕಹಿ ಇತಿಹಾಸ. ಅವರ ಬದುಕಿನ ಪರಧಿಯ ಸುತ್ತ ಉಪಭಾಷೆ ಗಳಂತೆ ಬೆಳೆದು ಬಂದ ವೃತ್ತಿಪದಗಳು ಕೂಡ ಹೇಳ ಹೆಸರಿಲ್ಲ ದಂತಾಗುತ್ತಿವೆ. ಭಾಷಾಶಾಸ್ತ್ರಕ್ಕೆ ಇದೊಂದು ದೊಡ್ಡ ಆಘಾತ! ಈ ಸಂದರ್ಭದಲ್ಲಿ ಬಸವರಾಜ ಕುಂಚೂರವರು ರಚಿಸಿದ 'ಕುಂಬಾರಿಕೆ ವೃತ್ತಿ ಪದಕೋಶ' ವೃತ್ತಿ ಪದಕೋಶ ರಚನಾಕಾರರಿಗೆ ಉಪಯುಕ್ತ ಗ್ರಂಥವಾಗಬಲ್ಲದು.